ಪಂಚಮ

ಮೀಸಲಾತಿ ವಿಶೇಷ ಸಂಚಿಕೆ

ಬೆಲೆ : 5 ರೂ.



...ಪಾನ್ ದಾಸ್, ಕುಲದೀ... ತೇಜಗೌ... ಅಂಕೇಶ್, ಅನಂತ...
...ಇಂದ್ರಧರೆ ಹೆ... ಪ್ರಾಣೇಶರಾವ್, ...
ಗೋವಿಂದ...

ಮೊದಲನೆಯದಾಗಿ..........

ನಾನು ಕೆ. ಎಂ. ಜಯರಾಮಯ್ಯ. ನಾನು ಅಲೆಮಾರಿ ಬುಡುಬುಡಿಕೆ ಜನಾಂಗಕ್ಕೆ ಸೇರಿದ್ದೇನೆ. ನನ್ನ ಜನಾಂಗದಲ್ಲಿ ಬೆರಳುಗಳಲ್ಲಿ ಎಣಿಸುವಷ್ಟು ಏನೋ ಆಕಸ್ಮಿಕವಾಗಿ ಪದವೀಧರರು ಇರಬಹುದು. ಅದರಲ್ಲಿ ನಾನೂ ಒಬ್ಬನು.

ನಾನು ಸಸ್ಯಶಾಸ್ತ್ರ ಎಂ.ಎಸ್.ಸಿ. ಓದುವಾಗ ವಿಭಾಗದ ಮುಖ್ಯಸ್ಥರು ನನ್ನನ್ನು ಜಾತಿ ಹೆಸರು ಹಿಡಿದು ಗೇಲಿ ಮಾಡುತ್ತಿದ್ದರು. ಇಂಥದರ ನಡುವೆಯೂ ನಾನು ಎರಡನೆ ದರ್ಜೆಯಲ್ಲಿ ಉತ್ತೀರ್ಣನಾದೆ. ಮೈಸೂರು ವಿಶ್ವವಿದ್ಯಾನಿಲಯದ under graduate ಯುವರಾಜ ಕಾಲೇಜಿನಲ್ಲಿ ಹಂಗಾಮಿ ಅಧ್ಯಾಪಕನಾದೆ. ಅದರ ಮುಂದಿನ ವರ್ಷವೇ ಮಾನಸ ಗಂಗೋತ್ರಿಯ Post graduate ಗೆ ಹಂಗಾಮಿ ಅಧ್ಯಾಪಕನಾದೆ. ಇದು ನಮ್ಮ ವಿಭಾಗದ ಮುಖ್ಯಸ್ಥರಿಗೆ ಸಹಿಸಲಾಗದ ತುತ್ತಾಗಿತ್ತು. ಅವರು ಕಷ್ಟಪಟ್ಟು ೨ ವರ್ಷ ಸಹಿಸಿದಮೇಲೆ ಇನ್ನೂ ತಾಳಲಾರದೆ Post graduate ಗೆ ನಾನು ಪಾಠ ಮಾಡಲು ಅನರ್ಹ ಎಂಬ ರಿಮಾರ್ಕ್ ಮಾಡಿ ಪುನಃ ಯುವರಾಜ ಕಾಲೇಜಿಗೆ ವರ್ಗ ಮಾಡಿದರು. ನಾನು ಅವಾಕ್ಕಾದೆ. ನಾನು ಬುಡುಬುಡಿಕೆ ಜನಾಂಗದವನಲ್ಲ ಎಂದು ಚಾಲೆಂಜ್ ಮಾಡಲಾರೆ. ಆದರೆ ಉತ್ತಮ ಮಟ್ಟದ ಅಧ್ಯಾಪಕ ಎಂದು ರುಜುವಾತು ಮಾಡುವ ವಿಶ್ವಾಸ ನನಗಿತ್ತು. ನನ್ನ ಎದೆಗೆ ಚೂರಿ ಇಟ್ಟಂಥ ನೋವಾದ್ದು ಅನರ್ಹ ರಿಮಾರ್ಕ್ಸ್‌ನಿಂದಾಗಿ. ಇದಿಲ್ಲದೆ ಎಲ್ಲೇ ಕೆಲಸ ಕೊಟ್ಟಿದ್ದರೂ ನನ್ನ ಆಭ್ಯಂತರವೇನೂ ಇರಲಿಲ್ಲ. ನಾನು ಅನರ್ಹ ಹೇಗಾದೆ ಹೇಗಾದೆ ಎಂದು ಪ್ರಶ್ನೆಯಾದೆ. ಈ ರಿಮಾರ್ಕ್ಸ್ ಮಾಡಿದ ಮುಖ್ಯಸ್ಥರು ನನ್ನ ಪಾಠ ಕೇಳಿರಲಿಲ್ಲ. ನನ್ನ ಪಾಠ ಕೇಳಿದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿರುವುದು ದಾಖಲೆಯಾಗಿತ್ತು. ಕೆಲಸಕ್ಕೆ ರಜಾ ಹಾಕಿ ಪ್ರತಿಭಟಿಸಿದೆ. ಇದನ್ನು ರುಜುವಾತು ಪಡಿಸಲಾಗದ್ದಕ್ಕೆ ಕಾರಣಕರ್ತರು ನನ್ನ ಮೇಲೆ ಹತ್ತಾರು ಕಥೆಗಳನ್ನು ಕಟ್ಟಿ ಅದನ್ನೂ ರುಜುವಾತು ಪಡಿಸಲಾಗದೆ ವಿಫಲರಾದರು. ದಲಿತ ವಿದ್ಯಾರ್ಥಿ ಒಕ್ಕೂಟವು ಮೂರು ತಿಂಗಳ ಕಾಲ ಧರಣಿ ನಡೆಸಿತು. ರಾಜ್ಯಪಾಲರು ವಿಚಾರಣೆ ನಡೆಸುವುದಾಗೂ ಸೂಕ್ತಕಾಲದಲ್ಲಿ ನ್ಯಾಯ ಕೊಡುವುದಾಗೂ ಮಾತು ಕೊಟ್ಟರು. ಈಗ ಸುಮಾರು ಮೂರು ವರ್ಷಗಳಾಗುತ್ತಿದೆ. ಈಗ ನಾನು ಅಲೆಮಾರಿ ಜನಾಂಗದವನು, ಅಲೆಮಾರಿಯಾಗಿ ಕೆಲಸವಿಲ್ಲದೆ ಅಲೆಯುವಂತಾಗಿದೆ.

ಕೃತಜ್ಞತೆಗಳು.

೧೮ ಏಪ್ರಿಲ್, ೮೧ ಕೆ. ಎಂ. ಜಯರಾಮಯ್ಯ

ಪಂಚಮ

ಮೀಸಲಾತಿ ವಿಶೇಷ ಸಂಚಿಕೆ

ಸಂಪುಟ : 5, ಸಂಚಿಕೆ : 8, 9

ಜೂನ್ 1981

ಸಂಪಾದಕ :

ಬಾಮುದೇವ ರಾಕೆ

ಪ್ರಕಾಶಕ :

ಎಚ್. ಗೋವಿಂದಯ್ಯ

ವ್ಯವಸ್ಥಾಪಕ :

ದೇವಯ್ಯ ಹರವೆ

ಸಂಪಾದಕ ಮಂಡಲಿ :

ದೇವನೂರ ಮಹಾದೇವ, ಸಿದ್ದಲಿಂಗಯ್ಯ, ಇಂದೂಧರ ಹೊನ್ನಾಪುರ, ಬೋಳುವಾರು ಮಹಮದ್ ಕುಂಞ, ಶ್ರೀಧರ ಕಲಿವೀರ, ಶಿವಾಜಿ ಗಣೇಶನ್, ಜಂಬಣ್ಣ ಅಮರಚಿಂತ, ಕೆ.ಬಿ.ಸಿದ್ದಯ್ಯ, ಕೆ. ರಾಮಯ್ಯ, ರಂಜಾನ್ ದರ್ಗಾ, ಗುರುರಾಜ ಬೇಡೇಕರ್

ಚಂದಾ ವಿವರ :

ವಾರ್ಷಿಕ ಚಂದಾ 10 ರೂ.

ಆಜೀವ ಚಂದಾ 200 ರೂ.

ಜಾಹೀರಾತು ವಿವರ :

ಹೊರ ರಕ್ಷಾ ಪುಟ 1500 ರೂ.

ಒಳ ರಕ್ಷಾ ಪುಟ : 1000 ರೂ.

ಪೂರ್ತಿ ಪುಟ : 400 ರೂ.

ಅರ್ಧ ಪುಟ : 200 ರೂ.

ಕಾಲಂ ಪುಟ ; 100 ರೂ.

ವಿಳಾಸ

'ಮಹಾಸ್ತ್ರಗುಡಿ, ಎರಡನೇ ಕ್ರಾಸ್

ಅಶೋಕಪುರಂ, ಮೈಸೂರು–8

ನಮ್ಮ ಮಾತು

ಹಿಂದೆ, ಒಂದಾನೊಂದು ಕಾಲದಲ್ಲಿ, ಅನುಭವಕ್ಕೂ-ಬುದ್ಧಿಗೂ ನೇರ ಸಂಪರ್ಕ ವಿದ್ದಾಗ, ಭಾರತೀಯ ಪ್ರತಿಭೆ ಪ್ರಥಮ ದರ್ಜೆಯದಾಗಿತ್ತು. ಜಾತಿ ಮತಗಳ ಮೀರಿ ಎಲ್ಲರ ನಡುವೆ ಚಿಂತಕರು, ಋಷಿಗಳು, ಕವಿಗಳು, ಶೂರರೂ ಮೂಡಿದ್ದರು. ಆದರೆ ಅಸ್ಪೃಶ್ಯರ, ಹಿಂದುಳಿದವರ ದಟ್ಟ ಅನುಭವ- ಚೇತನಾ ಸಾಮರ್ಥ್ಯ ಕಂಡು ಬೆಚ್ಚಿದ ಮೇಲ್ಜಾತಿ ಮಿದುಳಿನ ಜನ "ಹಿಂದೂ ಕುತಂತ್ರ" ನಡೆಸಿ ಅಸ್ಪೃಶ್ಯರಿಗೆ, ಹಿಂದುಳಿದವರಿಗೆ ಸಾರ್ವಜನಿಕ ಅವಕಾಶಗಳನ್ನೇ ವಂಚಿಸತೊಡಗಿದರು. ಹಾಗಾಗಿ ಬೌದ್ಧಿಕತೆ ಅನುಭವಗಳಿಂದ ದೂರ ಸರಿಯುತ್ತಾ ಭಾರತೀಯ ಪ್ರತಿಭೆ ಕೆಳಕ್ಕಿಳಿಯತೊಡಗಿತು. ಸ್ವಂತಿಕೆ, ಸೃಷ್ಟ್ಯಾತ್ಮಕತೆ ಕಳಕೊಂಡ ಪ್ರತಿಭೆ ಪಾಶ್ಚಿಮಾತ್ಯರ ಕಾಲು ನೆಕ್ಕತೊಡಗಿತು; ಅನುಕರಣವಾಯಿತು.

ಹೊಟ್ಟೆಯಲ್ಲಿ ಅಸ್ಪೃಶ್ಯತೆ ಇಟ್ಟುಕೊಂಡ ಭಾರತ ಪ್ರಪಂಚದ ಕಣ್ಣಲ್ಲಿ ಅಸ್ಪೃಶ್ಯವಾಯಿತು. ಈ ನೆಲದ ಅನುಭವದಾರರಾದ ಅಸ್ಪೃಶ್ಯರು ಮತ್ತು ಹಿಂದುಳಿದವರ ಮನಸ್ಸುಗಳ ಚಿಂತನೆ ನಿಂತು. ಬರಿಯ ಕೈಕಾಲು ಗಳಲ್ಲಿ ಮಾತ್ರ ಉಸಿರಾಡತೊಡಗಿದರು. ಭಾರತೀಯ ಪ್ರತಿಭೆ ಕೂಪಕ್ಕೆ ಇಳಿಯಿತು. ಇಷ್ಟಾದರೂ, ಈ ಕಳಪೆ ಪ್ರತಿಭೆಯನ್ನೇ ಪ್ರಥಮದರ್ಜೆ ಪ್ರತಿಭೆ ಎಂದು ನಂಬಿಸುವುದರಲ್ಲಿ ಪಟ್ಟಭದ್ರ ಹಿಂದೂಗಳು ಹೆಣಗುತ್ತಿದ್ದಾರೆ. ಮೀಸಲಾತಿಯಿಂದ 'ಪ್ರತಿಭೆ' ಹಾಳಾಗುತ್ತಿದೆ ಎಂದು ಹೇಳಿ ಅರೆ ತೆರೆದ ಬಾಗಿಲುಗಳನ್ನೂ ಮುಚ್ಚಿಬಿಡಲು ಹವಣಿಸುತ್ತಿದ್ದಾರೆ. ಪ್ರತಿಭೆಯನ್ನು ಮತ್ತಷ್ಟು ಕತ್ತಲೆಗೆ ನೂಕುತ್ತಿದ್ದಾರೆ. ಇದಾಗಬಾರದು. ಈ ನೆಲದ ಅನುಭವದಾರರೆಲ್ಲ ಸಾರ್ವಜನಿಕ ಜೀವನದಲ್ಲಿ ಸಮಾನವಾಗಿ ಭಾಗ ವಹಿಸುವಂತಾಗಬೇಕು ಅವರ ದಟ್ಟ ಅನುಭವಗಳಿಗೆ ಚಿಂತನೆಯ ಮಾತುಗಳು ಕೂಡಿಕೊಂಡು ಭಾರತೀಯರೆಲ್ಲ ಸಮಾನವಾಗಿ ಉಸಿರಾಡುವಂತಾಗಬೇಕು ಎಲ್ಲ ಕೈಗಳೂ ರಾಷ್ಟ್ರವನ್ನು ಕಟ್ಟುವಂತಾಗಬೇಕು. ಆಗ ಮಾತ್ರ ಭಾರತದ ಪ್ರತಿಭೆಯನ್ನು ಪ್ರಥಮ ದರ್ಜೆಗೆ ಎತ್ತಬಹುದು.

ಆದರೆ ಜಾತಿ ಗೋಡೆ ಹಿಂದೂ ಮನಸ್ಸೂ ಇದಕ್ಕೆ ತಡೆಯಾಗಿದೆ. ಒಂದು ಸಣ್ಣ ಉದಾಹರಣೆ: ನಮ್ಮ ಬೆಂಗಳೂರು ಹೈಕೋರ್ಟಿನ ನ್ಯಾಯಾಧೀಶ ಚಂದ್ರಶೇಖರ್- ಲಿಂಗಾಯಿತರು, ಇತ್ತೀಚೆಗೆ ನೀಡಿದ ಕೋರ್ಟಿನ ಉದ್ಯೋಗಗಳಲ್ಲಿ ಸಂದರ್ಶನಕೂಡ ಮಾಡದೆ ಕುತಂತ್ರ ಮಾಡಿ ಮುಕ್ಕಾಲಕ್ಕೂ ಹೆಚ್ಚು ಜನ ಲಿಂಗಾಯಿತರನ್ನೇ ನೇಮಿಸಿಕೊಂಡು ಜಾತಿ ನಿಷ್ಠೆ ತೋರಿದ್ದಾರೆ. ನ್ಯಾಯಾಲಯದಲ್ಲೂ ಇದಾಗಿದೆ! ಮೀಸಲಾತಿ ಇದ್ದೂ ಇದಾಗಿದೆ! ಇಲ್ಲದಿದ್ದಲ್ಲಿ ಏನಾಗುತ್ತಿತ್ತು? ಊಹೆಗೂ ನಿಲುಕದಾಗಿದೆ! ಇಂಥ ಅನ್ಯಾಯ ಹಿಂದೂರಕ್ತದಲ್ಲಿ ಹರಿದುಬಂದಿದೆಯೆ?

ಇಂದು, ಎಲ್ಲರೊಂದಿಗೆ ಅಸ್ಪೃಶ್ಯರ, ಹಿಂದುಳಿದವರ ಒಡನಾಟವಾಗಿ ಜಾತಿ ಸಡಿಲವಾಗದೆ, ನೂರೆಂಟು ರೋಗದ ಭಾರತಮಾತೆಗೆ ಮದ್ದಿಲ್ಲ ಎಂದು ಮನಗಂಡು ಏಪ್ರಿಲ್ 18, 19, 1981ರಂದು ಬೆಂಗಳೂರಲ್ಲಿ 'ಮೀಸಲಾತಿ' ವಿಚಾರಸಂಕಿರಣ ನಡೆಸಲಾಯಿತು. ಇದರಲ್ಲಿ ಭಾಗಿಗಳಾದವರು, ಬೆಂಬಲಿಸಿದವರಿಗೆಲ್ಲ ಕೃತಜ್ಞತೆಗಳು. ಹಾಗೂ ಭಾಷಣಗಳ ಅನುವಾದಕರಿಗೂ ಮತ್ತು ಶ್ರಮದ ಟ್ರಾನ್ಸ್‌ಕ್ರೈಬ್ ಮಾಡಿ ಸಹಕರಿಸಿದ ಶಂಕರ್ ದೇವನೂರ್,ವಸಂತ ಪುಣೇಕರ್, ಜಿ.ನಂಜುಂಡಯ್ಯ,ಮೋಹನ್, ಪರಮೇಶಾದಿ ಗೆಳೆಯರಿಗೆ, ನಮ್ಮ ಕಿರುಕುಳಗಳನ್ನು ಸಹಿಸಿ, ಸುಂದರ ಪುಸ್ತಕವಾಗಿಸಿದ ಮುದ್ರಕರಿಗೆ ಕೃತಜ್ಞತೆಗಳು.

— ಸಂಪಾದಕರು

ಒಳಗೆ....

ಪಂಚಮ ಚಂದಾದಾರರಿಗೆ ಸೂಚನೆ

ಈ ಹಿಂದೆ, 5 ರೂಪಾಯಿ ನೀಡಿ ಚಂದಾದಾರರಾಗಿರುವ ಎಲ್ಲಾ ಚಂದಾದಾರರ ಚಂದಾ ಹಣವೂ ಮುಗಿದಿದೆ! ಪತ್ರಿಕೆ ಮುಂದುವರಿಸಲು ಇಂದೇ 10 ರೂಪಾಯಿ ಕಳಿಸುವ ಮೂಲಕ ಪುನಃ ಚಂದಾದಾರರಾಗಿರಿ ಎಂದು ವಿನಂತಿಸುವೆವು —ಸಂ.

ನಮ್ಮ ಇಂದೂಧರ ಗುಜರಾತಿನ ಕತ್ತಲಿಗೆ ಹೋಗಿಬಂದರು. ಅಲ್ಲಿ ಕಂಡ ಕರಾಳತೆಯನ್ನು ಕಣ್ಣಿಗೆ ಕಟ್ಟುವಂತೆ ನಮ್ಮ ಮುಂದಿಟ್ಟಿದ್ದಾರೆ. ಗಾಂಧಿ ಹುಟ್ಟಿದ ನಾಡಿನ ರಕ್ತದ ಕ್ರೂರತೆಗೆ ಬೆಚ್ಚಿದ್ದಾರೆ. ರಾಜಕೀಯ ಪಕ್ಷಗಳ ರಂಗಿನ ಆಟಕ್ಕೆ ರೋಸಿದ್ದಾರೆ. ಹಿಂದೂಗಳ ಅನಾಗರಿಕ ಮನಸ್ಸಿಗ ಖಿನ್ನರಾಗಿದ್ದಾರೆ ದಲಿತರ ಅಸಹಾಯಕ ಅನಿವಾರ್ಯ ಹೋರಾಟವನ್ನು ನೋವಿನೊಡನೆ ಅಭಿನಂದಿಸಿದ್ದಾರೆ. ಇದೆಲ್ಲವನ್ನು ನಮ್ಮ ಓದುಗರೊಡನೆ ಹಂಚಿಕೊಳ್ಳುವ ಪ್ರಯತ್ನ ಇಲ್ಲಿದೆ, ಹೀಗಿದೆ:

ಇಂದೂಧರ ಹೊನ್ನಾಪುರ

ಗಾಂಧಿ ಹುಟ್ಟಿದ ನಾಡು, ಜಾತಿಯ ವಿಷ ಜ್ವಾಲೆಯಲ್ಲಿ ಸಿಕ್ಕಿ ದಲಿತರ ಪ್ರಾಣ- ಮಾನಗಳೊಂದಿಗೆ ಚೆಲ್ಲಾಟವಾಡುತ್ತಿದ್ದ ಸುದ್ದಿ ಮಿದುಳು ತಿನ್ನುವ ಸಮಯದಲ್ಲೇ ನಾನು ಅಲ್ಲಿಗೆ ಹೋದೆ. ನಲವತ್ನಾಲ್ಕು ಡಿಗ್ರಿ ಸೆಂಟಿಗ್ರೇಡ್ ಬಿಸಿಲಿನಲ್ಲಿ ಗುಜರಾತ್ ಕುದಿಯುತ್ತಿದ್ದಂತೇನೂ ಅನಿಸಲಿಲ್ಲ. ಎಲ್ಲಾ ಮಾಮೂಲಿನಂತಿತ್ತು. ಶಬರಮತಿ ಪ್ರದೇಶಕ್ಕೆ ಅಂಟಿಕೊಂಡಂತೇ ಇರುವ ವಿಸ್ತಾರ ಪ್ರದೇಶದಲ್ಲಿ ಸ್ವಾಮಿ ನಾರಾಯಣ್ ಎಂಬ ದೇವಮಾನವನೊಬ್ಬನ ವಿಜೃಂಭಣೆಯ ಜಾತ್ರೆ ನಡೆಯುತ್ತಿತ್ತು. ಇಡೀ ಅಹಮದಾಬಾದ್ ನಗರ ಆತನ ಬಗೆಗೇ ಮಾತಾಡುತ್ತಿತ್ತು. ಎಲ್ಲಿ ನೋಡಿದರೂ ಆತನ ಭಾವಚಿತ್ರ ಹೊಂದಿದ ಭಿತ್ತಿ ಪತ್ರಗಳು, ಬ್ಯಾನರ್‌ಗಳು ಕಂಡುಬರುತ್ತಿದ್ದವು. ಹಾಗಾಗಿ ನನ್ನ ಮನಸ್ಸಿನಲ್ಲಿದ್ದ ಭಯ ಕೊಂಚ ಕಡಿಮೆಯಾಯಿತು. ಇಲ್ಲೇ ಇದ್ದ ಅಂಗಡಿಯೊಂದರಲ್ಲಿ ಅಂದಿನ "ಇಂಡಿಯನ್ ಎಕ್ಸ್‌ಪ್ರೆಸ್" ಕೊಂಡೆ. "ನಗರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ" ಅಂತ ನಾಲ್ಕು ಕಾಲಂಗಳ ತಲೆ ಬರಹ ಮುಖಪುಟದಲ್ಲೇ ಎದ್ದು ಕಾಣುತ್ತಿತ್ತು.

ಪರಿಚಿತರಾರೂ ಇಲ್ಲದ ಕಾರಣ, ಮೊದಲ ದಿನ ರೈಲು ನಿಲ್ದಾಣಕ್ಕೆ ಹತ್ತಿರವಿರುವ ಹೋಟೆಲ್‌ನಲ್ಲಿ ಇಳಿದುಕೊಂಡೆ. ಬೆಳಗ್ಗೆ ಎಂಟು ಗಂಟೆಗೇ ತಡೆಯಲಾರದಷ್ಟು ಸೆಖೆ. ರೂಂ ಸ್ವಚ್ಛ ಮಾಡಲು ಬಂದ ಹುಡುಗ ತನಗೆ ಬಾರದ ತಮಿಳಿನಲ್ಲಿ ನನ್ನನ್ನು ಮಾತಾಡಿಸಿದ. ನನಗೂ ಅದೇ ಸ್ಥಿತಿ. ಅನುಸರಿಸಿಕೊಂಡು ಏನು ಇಲ್ಲಿ ಗಲಾಟೆ ಅಂತ ಕೇಳಿದೆ. "ಏನೂ ಇಲ್ಲ. ಎಲ್ಲಾ ಕೆಲವು ದಿನ ಇತ್ತು. ಈಗ ಎಲ್ಲಾ ಸರಿಯಾಗಿದೆ" ಅಂದ. ಆತ ಮತ್ತೂ ಏನೋ ಹೇಳಿಹೋದ, ಗೊತ್ತಾಗಲಿಲ್ಲ. ಅವನಿಗೂ ಕಷ್ಟವಾಗಿ ಸುಮ್ಮನಾದ. ನಾನು ಹೋಗಬೇಕಾಗಿದ್ದ ಕೆಲವು ಪ್ರದೇಶಗಳ ಬಗ್ಗೆ ಮಾಹಿತಿ ಪಡೆದುಕೊಂಡು ಹೊರಗೆ ಹೊರಟೆ. ರಸ್ತೆಗಿಳಿಯುತ್ತಿದ್ದಂತೆ ಬಿಸಿಲಿನ ಝಳ ಮುಖಕ್ಕೆ

ಅಪ್ಪಳಿಸಿತು. ಅಹಮದಾಬಾದ್‌ನ ದಾರಿ ಸವೆಸುತ್ತಿದ್ದುದೆಲ್ಲ ಆಗಿಹೋದ ಅನಾಹುತಗಳು ಒಂದೊಂದಾಗಿ ಬಿಚ್ಚಿಕೊಳ್ಳತೊಡಗಿದವು. ಹಿಂದೂ ಮನಸ್ಸಿನ ವಿಷ ಜ್ವಾಲೆ ನನ್ನನ್ನು ಇಡಿಯಾಗಿ ನಡುಗಿಸಿತು.

ಅತ್ಯಂತ ಸಿರಿವಂತ ರಾಜ್ಯಗಳಲ್ಲೊಂದಾದ ಗುಜರಾತ್ (ರಾಷ್ಟ್ರದ ಅತ್ಯಂತ ಹೆಚ್ಚು ಕೈಗಾರಿಕೀಕರಣಗೊಂಡ ರಾಜ್ಯಗಳ ಪಟ್ಟಿಯಲ್ಲಿ ಅದು ಎರಡನೇ ಸ್ಥಾನದಲ್ಲಿದೆ) ಅನೇಕ ರಾಜಕೀಯ ಹೋರಾಟಗಳಿಗೆ ಕಾರಣವಾದುದನ್ನು ಓದಿ ತಿಳಿದು ಕೊಂಡಿದ್ದೆ. ೧೯೭೪ರಲ್ಲಿ ಇಲ್ಲಿನ ವಿದ್ಯಾರ್ಥಿ- ಯುವ ಜನರು ಆರಂಭಿಸಿದ ಚಳುವಳಿ ಇಡೀ ದೇಶದಾದ್ಯಂತ ಹಬ್ಬಿ ಅನೇಕ ಐತಿಹಾಸಿಕ ಬದಲಾವಣೆಗೆ ಕಾರಣವಾಗಿತ್ತು. ಶೇಕಡ ೬೫ ರಷ್ಟು ದಲಿತರಿರುವ ಇಲ್ಲಿನ ಇಡೀ ವ್ಯವಸ್ಥೆ ಸವರ್ಣೀಯರ ಕೈಯಲ್ಲಿದೆ. ಬನಿಯಾ, ಪಟೇಲ್, ರಜಪೂತ್, ಬ್ರಾಹ್ಮಣ ಹಾಗೂ ಜೈನರು ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ತುಂಬಿ ಹೋಗಿದ್ದಾರೆ. ಅತ್ಯಧಿಕ ಪ್ರಮಾಣದ ಬಟ್ಟೆಗಿರಣಿಗಳನ್ನು ಹೊಂದಿರುವ ಗುಜರಾತ್ ಈಗಲೂ ಊಳಿಗಮಾನ್ಯ ಪದ್ಧತಿಯ ಹಿಡಿತದಿಂದ ಕೊಂಚ ಕೂಡ ದೂರ ಸರಿದಿಲ್ಲ. ಆಫ್ರಿಕಾದಲ್ಲಿ ನಡೆಯುತ್ತಿರುವಂಥ ಗುಲಾಮಗಿರಿಯನ್ನು ಈಗಲೂ ಇಲ್ಲಿ ನೋಡಬಹುದಾಗಿದೆ.

ಗುಜರಾತ್‌ನ ಬಹುತೇಕ ಜನ ತೀರಾ ಮಡಿವಂತರು. ಹಿಂದೂ ಊಳಿಗಮಾನ್ಯ ವ್ಯವಸ್ಥೆಗೆ ಬದ್ಧರಾದವರು. ಬಹುಮಟ್ಟಿಗೆ ಸಸ್ಯಾಹಾರಿಗಳಾದ ಅವರು ಹಿಂದೂ ವರ್ಣ ವ್ಯವಸ್ಥೆಯನ್ನು– ಸನಾತನ ಧರ್ಮಸೂತ್ರಗಳನ್ನು ಬಹಿರಂಗವಾಗಿಯೇ ಮುಂದುವರೆಸಿ ಕೊಂಡು ಬಂದಿದ್ದಾರೆ. ಹಿಂದುಳಿದ ಯಾವುದೇ ಜಾತಿ ಮುಂದೆ ಬರುವುದನ್ನು ಸಹಿಸದ ಬನಿಯಾಗಳು, ಬ್ರಾಹ್ಮಣರು ಹಾಗೂ ತಮ್ಮ ಅಡಿಯಾಳುಗಳಾಗಿ ಜೀತ ಮಾಡಿಕೊಂಡೇ ಜೀವನ ಸಾಗಿಸುವ ದಲಿತರು ತಲೆ ಎತ್ತುವುದನ್ನೂ ಸಹಿಸದ ಭೂಮಾಲೀಕ ಪಟೇಲರು ರಜಪೂತರು ಒಂದಾಗಿ ಮೀಸಲು ವಿರೋಧಿ ಚಳವಳಿ ಹೆಸರಿನಲ್ಲಿ ಜಾತಿ ಹೋರಾಟಕ್ಕೆ ಧುಮುಕಿದ್ದಾರೆ. ಯಾವುದೇ ಪ್ರಗತಿಪರ ಚಿಂತನೆಯೂ ಇವರತ್ತ ಸುಳಿದಿಲ್ಲ. ದುಡಿಯುವ ವರ್ಗದ ಹಿತಾಸಕ್ತಿಯನ್ನು ಕಾಪಾಡುವ, ಅವರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆದ ಯಾವ ಕುರುಹೂ ಅಲ್ಲಿಲ್ಲ.

ಗುಜರಾತಿನಲ್ಲಿ ಈಗ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಬಿಟ್ಟರೆ ಪ್ರಬಲವಾದ ಪಕ್ಷ ಬಿ.ಜೆ.ಪಿ. ಮಾತ್ರ. ಪೂರ್ಣ ಆರೆಸ್ಸೆಸ್ ಕೈವಾಡ ಇರುವ ಈ ಪಕ್ಷದಲ್ಲಿ ಆಶ್ಚರ್ಯವೆಂಬಂತೆ ಮುಸ್ಲಿಮರು, ದಲಿತರೂ ಸೇರಿದ್ದಾರೆ. ಬಿ.ಜೆ.ಪಿ. ಬಿಟ್ಟರೆ ಜನತಾ ಪಕ್ಷ ಸ್ವಲ್ಪ ಮಟ್ಟಿಗೆ ಇದೆ. ಲೋಕದಳದ ಅವಶೇಷ ಕೂಡ ಅಲ್ಲಿ ಉಳಿದಿದೆ. ಮಾಜಿ ಮುಖ್ಯಮಂತ್ರಿ ಚಿಮನ್‌ಭಾಯ್ ಪಟೇಲ್ ಈಗಿರುವ ಲೋಕದಳದ ಏಕೈಕ ಶಾಸಕ. ಉಳಿದಂತೆ ರಾಜಕೀಯ ಪಕ್ಷಗಳ ಅಸ್ತಿತ್ವ ಅಲ್ಲಿ ಕಾಣ ಬರುವುದಿಲ್ಲ. ಸಮಾಜವಾದಿಗಳು ಗಣನೀಯ ಸಂಖ್ಯೆಯಲ್ಲಿ ಇದ್ದರೂ ಅವರು ಒಂದು ಶಕ್ತಿಯಾಗುವಲ್ಲಿ ವಿಫಲಗೊಂಡಿದ್ದಾರೆ. ಸಿ.ಪಿ.ಐ ; ಸಿ.ಪಿ.ಎಂ.ಗಳ ಹೆಸರು ಮಾತ್ರ ಅಲ್ಲಿದೆ. ಒಂದು ರಾಜಕೀಯ

ಪಕ್ಷವಾಗಿ ಇಲ್ಲವೇ ಇಲ್ಲ ಅನ್ನಬಹುದಾದಂತಹ ಸ್ಥಿತಿ ಅವುಗಳದ್ದು. ಇನ್ನು ಉಳಿದ ಏಕೈಕ ಪ್ರಬಲ ಶಕ್ತಿ ಅಂದರೆ ದಲಿತ ಪ್ಯಾಂಥರ್ಸ್. ಎಲ್ಲಾ ರಾಜಕೀಯ ಪಕ್ಷಗಳನ್ನು ಹೊರಗಿಟ್ಟು, ತನ್ನದೇ ಆದ ಧ್ಯೇಯಧೋರಣೆಗಳೊಂದಿಗೆ ಪ್ಯಾಂಥರ್ಸ್ ಸಂಘಟನೆ ಬೆಳೆದಿದೆ.

"ಕ್ಯಾರಿ ಫಾರ್ವರ್ಡ್" ಅನ್ನು ವಿರೋಧಿಸಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಪ್ರಾರಂಭಿಸಿದ ಹೋರಾಟ ಮೀಸಲಾತಿಯನ್ನು ಕಿತ್ತುಹಾಕಬೇಕೆಂಬ ಮಟ್ಟ ಮುಟ್ಟಿ ಕಡೆಗೆ ಜಾತಿ ಹೋರಾಟವಾಗಿ ಮಾರ್ಪಾಟಾದ ಹಿನ್ನೆಲೆಯಲ್ಲಿ ನಾನು ಗುಜರಾತ್‌ನಲ್ಲಿದ್ದ ಒಂದು ವಾರದ ಅವಧಿಯಲ್ಲಿ ಹಲವರನ್ನು ಭೇಟಿ ಮಾಡಿದೆ. ಜಾತಿ ವಿಷಜ್ವಾಲೆಗೆ ತುತ್ತಾದ ಹತ್ತಾರು ಪ್ರದೇಶಗಳಿಗೆ ಭೇಟಿ ನೀಡಿದೆ. ಬಿ.ಜೆ.ಪಿ. ಜನತಾಗಳನ್ನು ದೂಷಿಸುವ ಕಾಂಗ್ರೆ, ಕಾಂಗ್ರೆಸವರ ಕಿತ್ತಾಟದಿಂದಾಗಿಯೇ ಎಲ್ಲಾ ಆಯಿತು ಎಂದು ಹೇಳಿ ಮೀಸಲಾತಿ ಹೋಗಬೇಕೆಂಬ ಅಭಿಮತಕ್ಕೆ ಇಳಿಯುವ ಬಿ.ಜೆ.ಪಿ ಹಾಗೂ ಜನತಾದ ಜನರನ್ನೂ ಕಂಡೆ, ಕೆಕ್ಕರಿಸಿದ ಮುಖಗಳಲ್ಲಿ ಮೀಸಲಾತಿಯಿಂದ ನಮ್ಮ ಇಡೀ ದೇಶ ಅವನತಿಯ ಹಾದಿ ಹಿಡಿಯುತ್ತಿದೆ ಎಂದು ದೂರಿದ ವೈದ್ಯರು, ಪ್ರೊಫೆಸರುಗಳನ್ನು ಮಾತಾಡಿಸಿದೆ. ಮೀಸಲಾತಿಯಿಂದಾಗಿ ರಾಷ್ಟ್ರದಲ್ಲಿ ನಿರುದ್ಯೋಗ ಅತಿಯಾಗಿದೆ. ಎಲ್ಲ ಕಡೆ ದಲಿತರೇ ತುಂಬಿ ನಮಗೆ ಅನ್ಯಾಯವಾಗುತ್ತಿದೆ ಎನ್ನುವ ಹಲವಾರು ಮಂದಿ ಸರ್ಕಾರಿ ನೌಕರರು ಹಾಗೂ ಇತರೆ ಜನರನ್ನೂ ಕಂಡು ಮಾತಾಡಿಸಿದೆ. ವಿಕೃತ ಸುದ್ದಿಗಳನ್ನು ಪ್ರಕಟಿಸುವ ಮೂಲಕ ಜಾತಿಯ ವಿಷಜ್ವಾಲೆಗೆ ಎಣ್ಣೆ ಸುರಿದ ಗುಜರಾತ್‌ನ ಪತ್ರಕರ್ತರನ್ನೂ ಮಾತಾಡಿಸಿದೆ.

ಇಷ್ಟೆಲ್ಲಾ ಆಗುವಷ್ಟರಲ್ಲಿ ಮೀಸಲಾತಿ ವಿರೋಧಿ ಹೋರಾಟದ ಹಿಂದಿದ್ದ ಶಕ್ತಿಗಳ ಅರಿವಾಗಿತ್ತು. ಹಿಂದೂ ಮನಸ್ಸಿನ ಅಮಾನುಷ ಜೀವ ವಿರೋಧಿ ಧೋರಣೆ ಸ್ಪಷ್ಟ ರೂಪುಪಡೆದು ಗುಜರಾತ್‌ನಲ್ಲಿ ನಗ್ನ ನೃತ್ಯ ಮಾಡುತ್ತಿರುವುದರ ಅರಿವು ನನಗಾಯಿತು. ದಲಿತರ ಮನೆಗಳಲ್ಲಿ ಮುಖಗಳಲ್ಲಿ ಹುದುಗಿದ್ದ ಯಾತನೆ-ನೋವು- ಭಯ ಆಗತಾನೆ ಚೂರು ಚೂರೇ ಕರಗ ತೊಡಗಿದ್ದು ನನ್ನ ಗಮನಕ್ಕೆ ಬಂತು. ಸ್ವಾಭಿಮಾನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ, ಮಾಡದ ತಪ್ಪಿಗಾಗಿ ಜೈಲು ಸೇರಿದ, ಪೋಲೀಸರು ಹಿಂದೂ ರಾಕ್ಷಸರ ವಕ್ರ ದೃಷ್ಟಿಗೆ ಬಿದ್ದು ಕಂಗಾಲಾದ-ಆಸ್ತಿ-ಪ್ರಾಣ- ಮಾನ ಕಳೆದುಕೊಂಡ ನನ್ನವರ ಕತೆ ಕೇಳಿ ನನಗರಿವಿಲ್ಲದಂತೆಯೇ ನನ್ನ ಕಣ್ಣುಗಳು ಒದ್ದೆಯಾಗಿದ್ದವು. ಸುಟ್ಟ ಕರಕಲು ಮನೆ, ಸ್ಮಶಾನದಂತೆ ಕಾಣುವ ದಲಿತರ ಕೇರಿಗಳು, ಸಾವು ತನ್ನ ಮುದ್ರೆ ಒತ್ತಿ ಹೋದ ದೀನ ಮುಖಗಳು ನನ್ನ ಮಾತುಗಳನ್ನು ಕಿತ್ತು ಕೊಂಡಿದ್ದವು.

೨

ಎಲ್ಲಾ ಆರಂಭವಾದುದು ಹೀಗೆ: ೧೯೮೦ರ ಡಿಸೆಂಬರ್ ೩೧ ಅಹಮದಾಬಾದ್ ಬಿ.ಜೆ. ಮೆಡಿಕಲ್ ಕಾಲೇಜಿನ ಮೇಲ್ಜಾತಿಯ ವಿದ್ಯಾರ್ಥಿಗಳು ತಮ್ಮ ಸಹಪಾಠಿಯೊಬ್ಬನಿಗೆ ಪೆಥಾಲಜಿ ವಿಭಾಗದಲ್ಲಿ ಸೀಟು ಸಿಗದ ಕಾರಣ ಮುಷ್ಕರ ಹೂಡಿದರು. ಸೀಟನ್ನು

ಹರಿಜನ ಅಭ್ಯರ್ಥಿಗೆ ಮೀಸಲಿಟ್ಟಿದ್ದ ಕಾರಣ ಆತನಿಗೆ ಸಿಕ್ಕಿರಲಿಲ್ಲ. ಅಂಗವಿಕಲನಾದ ಆತ ಪ್ರತಿಭಾವಂತ ಅನ್ನುವುದು ಮೇಲ್ಜಾತಿ ವಿದ್ಯಾರ್ಥಿಗಳ ಹೇಳಿಕೆ. ಅಂಗವಿಕಲನಾಗಿ ಪ್ರತಿಭಾವಂತನಾಗಿದ್ದರೂ ಅವನಿಗೆ ಸೀಟು ಕೊಡದೆ ಹೋದುದು ವಿದ್ಯಾರ್ಥಿಗಳ ಮನಸ್ಸನ್ನು ಕೆರಳಿಸಿತ್ತು. ಸರ್ಕಾರ ವಿದ್ಯಾರ್ಥಿಗಳ ಕೋಪಕ್ಕೆ ಮೌನವನ್ನೇ ಉತ್ತರವನ್ನಾಗಿಸಿತು. ಇದರಿಂದ ಮತ್ತಷ್ಟು ಕೆರಳಿದ ವಿದ್ಯಾರ್ಥಿಗಳು ೧೯೮೧ರ ಜನವರಿ ೫ರಂದು "ಕ್ಯಾರಿ ಫಾರ್ವರ್ಡ್" ಪದ್ಧತಿಯ ವಿರುದ್ಧ ಪ್ರತಿಭಟಿಸಿ ಶಿಕ್ಷಣ ನಿರ್ದೇಶಕರ ಕಛೇರಿ ಮೇಲೆ ದಾಳಿ ನಡೆಸಿ- ಲೂಟಿ ಮಾಡಿದರು. ಈ ಘಟನೆಗೆ ಸಂಬಂಧಿಸಿದಂತೆ ಪೋಲೀಸರು ೬೦ ಮಂದಿ ವಿದ್ಯಾರ್ಥಿಗಳನ್ನು ಬಂಧಿಸಿದರು.

ಮಾರನೆ ದಿನ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು. ಬಿ.ಜೆ. ಮೆಡಿಕಲ್ ಕಾಲೇಜಿನ ಮೇಲ್ಜಾತಿ ವಿದ್ಯಾರ್ಥಿಗಳು ಬರೋಡ, ಸೂರತ್ ಮತ್ತು ಜಾಮ್‌ನಗರದ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳನ್ನು ತಮ್ಮ ಹೋರಾಟದಲ್ಲಿ ಸೇರಿಸಿಕೊಂಡರು. ಮೇಲ್ಜಾತಿಯಲ್ಲಿ ಹುಟ್ಟಿದ ಕಾರಣ ನಮ್ಮ ಸಹಪಾಠಿಗೆ ಸೀಟು ಸಿಗಲಿಲ್ಲ. ಹೀಗೇ ಬಿಟ್ಟರೆ ಇಡೀ ವೈದ್ಯಕೀಯ ಕ್ಷೇತ್ರ ಹರಿಜನರದ್ದಾಗುತ್ತದೆ ಎನ್ನುವ ಸುಳ್ಳು ವದಂತಿಗಳನ್ನು ವ್ಯಾಪಕವಾಗಿ ಹಬ್ಬಿಸಿದರು. ಯುವ ಜನಾಂಗದ ಮನಸ್ಸನ್ನು ಕೆರಳಿಸಿದರು. ವಿದ್ಯಾರ್ಥಿಗಳ ಬೇಡಿಕೆ ಕುರಿತು ಆರೋಗ್ಯ ಸಚಿವ ಮನೋಹರ್ ಸಿನ್ಹ ಜಡೇಜಾ ಅವರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಆದರೆ ಆರೋಗ್ಯ ಖಾತೆ ಸ್ಟೇಟ್ ಸಚಿವೆ ಶ್ರೀಮತಿ ಕೋಕಿಲಾಬೆನ್ ವ್ಯಾಸ್ ಅವರು ಇದಕ್ಕೆ ಪರಿಹಾರ ಕಂಡು ಹಿಡಿಯುವ ಭರವಸೆ ನೀಡಿದರು. ವಿದ್ಯಾರ್ಥಿಗಳು ಇದರಿಂದ ತೃಪ್ತರಾಗಲಿಲ್ಲ.

ಜನವರಿ ೯ ರೊಳಗಾಗಿ ಒಂದು ತೀರ್ಮಾನಕ್ಕೆ ಬರುವಂತೆ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಯಿತು. ಈ ಎಚ್ಚರಿಕೆ ಹಿನ್ನಲೆಯಲ್ಲಿ ಕ್ಯಾರಿ ಫಾರ್ವರ್ಡ್ ಪದ್ಧತಿಯನ್ನು ರದ್ದುಪಡಿಸಿರುವುದಾಗಿ ಜನವರಿ ೮ ರಂದು ಸರ್ಕಾರ ಘೋಷಿಸಿತು. ಇದರಿಂದ ವಿದ್ಯಾರ್ಥಿಗಳಿಗೆ ಸಮಾಧಾನವಾಗಲಿಲ್ಲ. ಎಲ್ಲಾ ಕ್ಷೇತ್ರಗಳಿಂದಲೂ ಮೀಸಲಾತಿ ಹೋಗಬೇಕು ಎಂದು ಅವರು ತಮ್ಮ ಚಳವಳಿಯನ್ನು ತೀವ್ರಗೊಳಿಸಲು ಯತ್ನಿಸಿದರು. ಇದರ ಅಂಗವಾಗಿ ೧೧ ರಂದು ಸಾಂಕೇತಿಕ ಮುಷ್ಕರಕ್ಕೆ ನೀಡಲಾದ ಕರೆ ವಿಫಲವಾಯಿತು. ಅದೇ ಸಮಯದಲ್ಲಿ ನಗರಸಭೆ ಚುನಾವಣೆ ಬಂತು. ಶ್ರೀಮತಿ ಗಾಂಧಿ ಅಹಮದಾಬಾದ್‌ಗೆ ಭೇಟಿಕೊಟ್ಟರು. ವಿದ್ಯಾರ್ಥಿಗಳ ಉದ್ವೇಗಕ್ಕೆ ಇದು ಕೊಂಚ ಕಡಿವಾಣ ಹಾಕಿತು. ಆದರೆ ಒಂದೆರಡು ದಿನಗಳಲ್ಲೇ ಮತ್ತೆ ವಿದ್ಯಾರ್ಥಿಗಳು ಬೀದಿಗಿಳಿದರು. ಪರಿಸ್ಥಿತಿ ಅಂಕೆ ಮೀರಿತು. ಮೆಡಿಕಲ್ ವಿದ್ಯಾರ್ಥಿಗಳೊಂದಿಗೆ ಸಮಾಜ ವಿರೋಧಿ ಶಕ್ತಿಗಳು ಅಷ್ಟರಲ್ಲಾಗಲೇ ಸೇರಿಕೊಂಡಿದ್ದವು. ರಾಜಕಾರಣಿಗಳು, ಹಿಂದೂ ಧರ್ಮದ ಗುತ್ತೇದಾರರು ವಿದ್ಯಾರ್ಥಿಗಳನ್ನು ದುರುಪಯೋಗಪಡಿಸಿಕೊಳ್ಳಲು ಆರಂಭಿಸಿದರು. ಗುಜರಾತ್‌ನ ಮಾಜಿ ಮುಖ್ಯಮಂತ್ರಿ ಚಿಮನ್ ಭಾಯ್ ಪಟೇಲ್ ಹಾಗೂ ಬಿ.ಜೆ.ಪಿ. ಶಾಸಕ ವಲ್ಲಭಭಾಯಿ ಪಟೇಲ್ ಅವರು ತಾವು ಮೀಸಲಾತಿ ವಿರೋಧಿಯೆಂದು ಘೋಷಿಸಿಕೊಂಡು ವಿದ್ಯಾರ್ಥಿಗಳ ಚಳವಳಿಗೆ

ಬೆಂಬಲವಾಗಿ ನಿಂತರು. ಕಾಂಗ್ರೆಸ್ (ಐ) ಪಕ್ಷದ ಕೆಲವರೂ ಸೇರಿದಂತೆ ಉಳಿದೆಲ್ಲಾ ಪಕ್ಷಗಳ ಜನ ವಿದ್ಯಾರ್ಥಿಗಳನ್ನು ಪರೋಕ್ಷವಾಗಿ ಬೆಂಬಲಿಸ ತೊಡಗಿದರು. ಬಿ. ಜೆ. ಮೆಡಿಕಲ್ ಕಾಲೇಜಿನ ಡೀನ್ ಡಾ|| ಸಿ. ಪಿ. ರಘೂಲ ಅವರು ಮೇಲ್ಜಾತಿ ವಿದ್ಯಾರ್ಥಿಗಳಿಗೆ ಕುಮ್ಮಕ್ಕು ಕೊಟ್ಟು ಚಳವಳಿ ತೀವ್ರವಾಗಿ ಹಬ್ಬಲು ನೆರವಾದರು.

ಜನವರಿ ೨೩ ರಂದು ಮೇಲ್ಜಾತಿ ವಿದ್ಯಾರ್ಥಿಗಳು ನಾಲ್ಕು ಸಿಟಿ ಬಸ್ಸುಗಳಲ್ಲಿ ಕಾಲೇಜಿನ ಪಕ್ಕದಲ್ಲೇ ಇದ್ದ ದಲಿತ ಕೇರಿಗೆ ನುಗ್ಗಿ ಧಾಂದಲೆ ನಡೆಸಿದರು. ಸಿಟ್ಟಿಗೆದ್ದ ದಲಿತರು ಬಸ್ಸುಗಳ ಮೇಲೆ ಕಲ್ಲು ತೂರಿದ್ದೇ ಅಲ್ಲದೆ ತಮಗೆ ಅವಮಾನ ಮಾಡಲು ಪ್ರಯತ್ನಿಸಿದ ಮೇಲ್ಜಾತಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದರು. ಮಾರನೆಯ ದಿನ ಕಾಲೇಜಿನಲ್ಲಿ ದಲಿತ ವಿದ್ಯಾರ್ಥಿಗಳಿಗೂ ಮೇಲ್ಜಾತಿ ವಿದ್ಯಾರ್ಥಿಗಳಿಗೂ ಮಾರಾ ಮಾರಿ ಆರಂಭ. ಇವರು ಅವರಿಗೆ ಅವರು ಇವರಿಗೆ ಮನಸ್ಸಿಗೆ ಬಂದಂತೆ ಥಳಿಸಿದರು. ಈ ಬೀದಿ ಯುದ್ಧ ಕೆಲವು ದಿನಗಳವರೆಗೆ ಮುಂದುವರೆಯಿತು. ಅಧಿಕ ಸಂಖ್ಯೆಯಲ್ಲಿದ್ದ ಮೇಲ್ಜಾತಿ ವಿದ್ಯಾರ್ಥಿಗಳು ಹರಿಜನ ವಿದ್ಯಾರ್ಥಿಗಳನ್ನು ಅಟ್ಟಿಸಿಕೊಂಡು ಹೋಗಿ ಹೊಡೆಯುತ್ತಿದ್ದರು. ಇಷ್ಟೆಲ್ಲಾ ಹೊಡೆದಾಟ ಬಡಿದಾಟಗಳ ನಡುವೆಯೂ ದಲಿತ ವಿದ್ಯಾರ್ಥಿಗಳು ಗುಜರಾತ್ ದಲಿತ ಪ್ಯಾಂಥರ್ಸ್‌ಗಳ ಬೆಂಬಲ ಪಡೆದು ಸಭೆ, ಮೆರವಣಿಗೆ, ಪ್ರದರ್ಶನ ಮುಂತಾದುವನ್ನು ಸಂಘಟಿಸಿದರು.

ಇಷ್ಟರಲ್ಲಿ ವಿದ್ಯಾರ್ಥಿಗಳಲ್ಲದ ಸವರ್ಣೀಯರೂ ಚಳವಳಿಯ ಹೆಸರಲ್ಲಿ ಹರಿಜನರ ಮೇಲೆ ಹಲ್ಲೆ ನಡೆಸ ತೊಡಗಿದರು. ೧೯೮೧ರ ೨೫ ರಂದು ಅಹಮದಾಬಾದ್ ಪಕ್ಕದಲ್ಲಿರುವ ಜತಲ್‌ಪುರದಲ್ಲಿ ನಡೆದ ಹರಿಜನ ಯುವಕನ ಕೊಲೆ ಸಂಬಂಧದಲ್ಲಿ ದಲಿತ ಪ್ಯಾಂಥರ್ಸ್‌ಗಳು ಮಾಡಿದ್ದ ಚಳವಳಿ, ಪ್ರತಿಭಟನೆಯ ಸೇಡು ತೀರಿಸಿಕೊಳ್ಳಲು ಅವರು ಕಾದಿದ್ದರು. ಮೀಸಲು ವಿರೋಧಿ ಚಳವಳಿ ಅದೇ ಸಮಯದಲ್ಲಿ ಆರಂಭವಾದದ್ದೂ ಅವರಿಗೆ ಸಕಾಲವಾಯಿತು. ಲೂಟಿ, ದೊಂಬಿ, ಬೆಂಕಿ ಹಚ್ಚುವುದು, ಮೊದಲಾದ ಕೆಲಸಗಳನ್ನು ಅವರು ಆರಂಭಿಸಿದರು. ಚಾಕು–ಚೂರಿ–ಹರಿತವಾದ ಆಯುಧಗಳು– ಆಸಿಡ್ ಮೊದಲಾದುವುಗಳನ್ನು ಬಳಸಿ ದಲಿತರನ್ನು ಸದೆಬಡಿಯಲು ಆರಂಭಿಸಿದರು.

ಪರಿಸ್ಥಿತಿ ಮಿತಿಮೀರುವ ಸೂಚನೆ ಇತ್ತು. ಕೇಂದ್ರ ಗೃಹ ಖಾತೆ ಸ್ಟೇಟ್ ಸಚಿವ ಯೋಗೇಂದ್ರ ಮಕ್ವಾನ, ರಾಜ್ಯ ಗೃಹ ಸಚಿವ ಪ್ರಬೋಧರಾಮ್ ಹಾಗೂ ಅಹಮದಾಬಾದ್ ಪೋಲೀಸ್ ಕಮೀಷನರ್ ಮನ್‌ಮೋಹನ್ ಸಿಂಗ್ ಎರಡೂ ಕಡೆಯವರ ಸಭೆ ಕರೆದು ಸಮಾಧಾನ ಪಡಿಸಲು ಯತ್ನಿಸಿದರು. ಪೂರ್ಣರಕ್ಷಣೆ ನೀಡುವುದಾದರೆ ತಾವು ಹೋರಾಟದಿಂದ ಹಿಂದೆ ಸರಿಯುವುದಾಗಿ ದಲಿತರು ಒಪ್ಪಿಕೊಂಡರು. ಆದರೆ ಸವರ್ಣೀಯರು ಇದಕ್ಕೆ ಸಿದ್ಧರಿರಲಿಲ್ಲ. ಅವರು ತಮ್ಮ ಎಲ್ಲಾ ಬಗೆಯ ವಿಧ್ವಂಸಕ ಕೃತ್ಯಗಳನ್ನು ಮತ್ತೆ ಆರಂಭಿಸಿದರು.

ಇಷ್ಟರಲ್ಲಿ–ಜನವರಿ ೩೦ರಂದು–ಗುಜರಾತಿನ ಎಲ್ಲಾ ಮೆಡಿಕಲ್ ಕಾಲೇಜುಗಳನ್ನು ಆರು ತಿಂಗಳು ಮುಚ್ಚುವ ತೀರ್ಮಾನವನ್ನು ಸರ್ಕಾರ ಪ್ರಕಟಿಸಿತು. ಇದನ್ನು ಪ್ರತಿಭಟಿಸಿ

ಸವರ್ಣೀಯ ವಿದ್ಯಾರ್ಥಿಗಳು ನ್ಯಾಯಾಲಯದ ಮೊರೆ ಹೊಕ್ಕರು. ಅವರ ಮೊರೆಗೆ ಓಗೊಡದ ನ್ಯಾಯಾಧೀಶರು ಚಳವಳಿ ನಿಲ್ಲಿಸುವಂತೆ ವಿದ್ಯಾರ್ಥಿಗಳಿಗೆ ಮನವಿ ಮಾಡಿ ಕೊಂಡರು. "ರಾಷ್ಟ್ರದ ಹಿತಕ್ಕೆ ಧಕ್ಕೆ ಉಂಟು ಮಾಡುವ ಮೀಸಲು ವಿರೋಧಿ ಚಳವಳಿ ಯನ್ನು ನಿಲ್ಲಿಸಿ ವೈದ್ಯರುಗಳು ಸಮಾಜದ ಲೋಪದೋಷಗಳನ್ನು ಸರಿಪಡಿಸಬೇಕೆ ವಿನಃ ಅವುಗಳನ್ನು ಮತ್ತಷ್ಟು ಹೆಚ್ಚಿಸಬಾರದು" ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವೈದ್ಯಕೀಯ ಕಾಲೇಜುಗಳನ್ನು ಮುಚ್ಚುವ ನಿರ್ಧಾರದೊಂದಿಗೆ ಸರ್ಕಾರ ಚಳವಳಿ ಯಲ್ಲಿ ಭಾಗವಹಿಸಿದ ಆರು ನೂರು ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಷೋಕಾಸ್ ನೋಟಿಸ್ ನೀಡಿತು. ಆರೋಗ್ಯ ಸಚಿವ ಜಡಿಜಾ ಅವರು ಚಳವಳಿಯ ಹಿಂದೆ ರಾಜ ಕೀಯ ಶಕ್ತಿ ಇರುವುದನ್ನು ಗುರುತಿಸಿದರು. ಇದು ವಿದ್ಯಾರ್ಥಿಗಳನ್ನು ಕೆರಳಿಸಿತು. ವಿದ್ಯಾರ್ಥಿಗಳು ಸರ್ಕಾರದ ಯಾವ ಮಾತನ್ನೂ ಕೇಳದೆ ಹೋರಾಟವನ್ನು ತೀವ್ರಗೊಳಿ ಸಲು ಯತ್ನಿಸಿದರು. ಬರೋಡ, ಸೂರತ್‌ಗಳ ವಿದ್ಯಾರ್ಥಿಗಳೂ ಚಳವಳಿ ಪ್ರಾರಂಭಿಸಿ ದರು. ಪತ್ರಿಕೆಗಳು ಚಳವಳಿಗೆ ಬೆಂಬಲ ಕೊಡತೊಡಗಿದವು. ವಿದ್ಯಾರ್ಥಿಗಳು ವ್ಯಾಪಕ ಹುಚ್ಚೆದ್ದ ಹೊಳೆಯಂತೆ ಕುಣಿಯತೊಡಗಿದರು.

ಜನವರಿ ೩೦ ರಂದು ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳು ಚಳವಳಿಗೆ ಧುಮುಕಿ ದರು. ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳ ಚಳವಳಿ ಹೆಸರಿಗಷ್ಟೆ ಸೀಮಿತವಾಯಿತು ನಿಜವಾದ ಜಾತಿ ಹೋರಾಟ ಆರಂಭವಾಯಿತು. ಗ್ರಾಮಾಂತರ ಪ್ರದೇಶವೂ ಸೇರಿದಂತೆ. ಅಹಮದಾಬಾದ್, ಸೂರತ್, ಬರೋಡ, ಆನಂದ್, ಮೆಹಸಾಣ, ಖೇಡ, ನದಿಯಾಡ್ ಮುಂತಾದ ಕಡೆ ವ್ಯಾಪಕ ಹಿಂಸಾಚಾರ ಆರಂಭವಾಯಿತು. ಅದೇ ಸಂದರ್ಭದಲ್ಲಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಯೋಗೇಂದ್ರ ಮಕ್ವಾನ ಅವರು ವಿದ್ಯಾರ್ಥಿಗಳನ್ನು ಬಿ.ಜೆ.ಪಿ ಜನ ಎತ್ತಿ ಕಟ್ಟುತ್ತಿದ್ದಾರೆಂದು ಹೇಳಿದರು. ಬಿ.ಜೆ.ಪಿ. ಹಾಗೂ ಜನತಾ ಪಕ್ಷದ ಬೆಂಬಲ ದಿಂದಲೇ ಈ ಜನ ವಿರೋಧಿ ಚಳವಳಿ ಹೂಡಿದ್ದ ವಿದ್ಯಾರ್ಥಿಗಳು ಹಾಗೂ ಸಮಾಜ ವಿರೋಧಿ ಶಕ್ತಿಗಳು ವಿಧ್ವಂಸಕ ಕೃತ್ಯಗಳನ್ನು ಮತ್ತಷ್ಟು ಹೆಚ್ಚಿಸಿದರು.

ಜನವರಿ ೩೧ ರಂದು ಅಹಮದಾಬಾದ್ ಮತ್ತು ಬರೋಡಗಳಲ್ಲಿ ವ್ಯಾಪಕ ಹಿಂಸಾ ಚಾರಕ್ಕೆ ಮೀಸಲು ವಿರೋಧಿಗಳು ಇಳಿದರು. ಅಹಮದಾಬಾದ್‌ನ ಗೋಮತಿಪುರ ಪ್ರದೇಶದಲ್ಲಿ ಪರಸ್ಪರ ಹೋರಾಟದಲ್ಲಿ ತೊಡಗಿದ್ದ ಗುಂಪಿನ ಮೇಲೆ ಪೊಲೀಸರು ಗುಂಡು ಹಾರಿಸಿದರು. ಪೊಲಿಸರ ಗುಂಡಿಗೆ ಒಬ್ಬ ಬಲಿಯಾದ. ಜಾಮ್‌ನಗರ ಮತ್ತು ರಾಜ್ ಕೋಟೆ ಪ್ರದೇಶಗಳಲ್ಲಿ ಗಲಭೆ ಆರಂಭವಾಯಿತು. ಅಂಗಡಿ, ಮನೆ, ಬಸ್ಸು ಹೀಗೆ ಸಿಕ್ಕಿದ್ದ ಕ್ಕೆಲ್ಲಾ ಚಳವಳಿಗಾರರು ಬೆಂಕಿ ಇಟ್ಟರು. ಪೋಲೀಸರಿಗೆ ನೆರವಾಗಲು ಸಿದ್ಧವಿರುವಂತೆ ಸೇನೆಗೆ ಸರ್ಕಾರ ತಿಳಿಸಿತು ಗಡಿ ಭದ್ರತಾ ಪಡೆ ಹಾಗೂ ಹೊರ ರಾಜ್ಯಗಳಿಂದ ಪೋಲೀ ಸರನ್ನು ಕರೆಸಿ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಪ್ರಯತ್ನಿಸಿತು. ಕಾಲೇಜು ಮುಚ್ಚಿ ದ್ದರಿಂದ ಹಾಸ್ಟೆಲ್‌ಗಳಲ್ಲಿದ್ದ ವಿದ್ಯಾರ್ಥಿಗಳನ್ನು ಪೋಲೀಸರು ಬಲತ್ಕಾರವಾಗಿ ಹೊರ

ಹಾಕಿದರು. ಗಲಭೆ ಪೀಡಿತ ಪ್ರದೇಶಗಳಲ್ಲೆಲ್ಲಾ ಕರ್ಫ್ಯೂ ವಿಧಿಸಲಾಯಿತು.

ಕರ್ಫ್ಯೂ ಇದ್ದ ವೇಳೆಯಲ್ಲಿ ಸಹ ವ್ಯಾಪಕ ಗಲಭೆ, ಹಿಂಸೆ, ಬೆಂಕಿ ಹಚ್ಚುವುದು ಪರಸ್ಪರ ಇರಿದು ಕೊಲ್ಲುವುದು ಇವೇ ಮೊದಲಾದ ಘಟನೆಗಳು ನಡೆದವು. ಫೆಬ್ರುವರಿ ೫ ರಂದು ರೈಲು ನಿಲ್ದಾಣದ ಬಳಿಯ ಸಾರಂಗಪುರದಲ್ಲಿರುವ ಡಾ.ಅಂಬೇಡ್ಕರ್ ಅವರ ಪ್ರತಿಮೆಯನ್ನು ಕೆಡವಲು ಸವರ್ಣೀಯರು ಪ್ರಯತ್ನಿಸಿ ವಿಫಲರಾದರು. ಪ್ರತಿಮೆ ಸ್ವಲ್ಪ ಜಖಂ ಆಯಿತು. ಕನ್ನಡಕವನ್ನು ಕಿತ್ತು ಹಾಕಲಾಯಿತು. ಗಲಭೆಯನ್ನು ಹತ್ತಿಕ್ಕಿ ದಲಿತರಿಗೆ ರಕ್ಷಣೆ ಕೊಡುವಲ್ಲಿ ಸರ್ಕಾರ ವಿಫಲವಾಯಿತು. ಗಲಭೆ ಪೀಡಿತ ಪ್ರದೇಶಗಳಲ್ಲಿ ಜನಜೀವನ ಪೂರ್ಣ ಅಸ್ತವ್ಯಸ್ತಗೊಂಡಿತು. ಅದೇ ಸಮಯದಲ್ಲಿ ಸರ್ಕಾರ ಅಶಿಸ್ತಿನಿಂದ ವರ್ತಿಸಿದ ಆಪಾದನೆ ಮೇಲೆ ಇನ್ನೂರು ಮಂದಿ ಮೆಡಿಕೋಗಳನ್ನು ಸಿವಿಲ್ ಆಸ್ಪತ್ರೆಯಿಂದ ವಜಾ ಮಾಡಿತು. ಈ ಸುದ್ದಿ ಹರಡುತ್ತಿದ್ದಂತೆ ಹೊಸದಾಗಿ ಗಲಭೆಗಳು ಆರಂಭಗೊಂಡವು. ಗಾಯಗೊಂಡವರ-ನೊಂದವರ ಸಂಖ್ಯೆ ಆಸ್ಪತ್ರೆಗಳಲ್ಲಿ ಅಧಿಕವಾಗುತ್ತ ಹೋಯಿತು. ಚಳವಳಿಗಾರರು, ವೈದ್ಯರುಗಳನ್ನು ತಡೆಯುತ್ತಿದ್ದುದರಿಂದ ಅವರೆಲ್ಲಾ ಚಿಕಿತ್ಸೆ ಇಲ್ಲದೆ ನರಳ ಬೇಕಾಯಿತು. ಫೆಬ್ರುವರಿ ೮ರ ಹೊತ್ತಿಗೆ ಹತ್ತು ಮಂದಿ ಸತ್ತಿದ್ದರು. ಈ ನಡುವೆ ಮುಖ್ಯಮಂತ್ರಿ ಸೋಲಂಕಿ ಅವರು ದಲಿತ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ನೀವು ಪ್ರತಿ ಚಳವಳಿ ಮಾಡದಿದ್ದರೆ ಕಷ್ಟವಾಗುತ್ತದೆ ಎಂದು ಎಚ್ಚರಿಸಿದರು. ಅದರಂತೆ ದಲಿತ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಸರದಿ ನಿರಶನ ಆರಂಭಿಸಿದರು.

ಚಳವಳಿಯನ್ನು ಹತ್ತಿಕ್ಕುವಲ್ಲಿ ವಿಫಲಗೊಂಡ ಸರ್ಕಾರ ಫೆಬ್ರುವರಿ ಹತ್ತರಂದು ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಜಾರಿಗೊಳಿಸಿ ಎರಡೂ ಕಡೆಯ ಮುಖಂಡರನ್ನು ಬಂಧಿಸಿತು. ಆದರೆ ನ್ಯಾಯಾಲಯ ಬಂಧನದಿಂದ ಅವರನ್ನು ವಿಮುಕ್ತರನ್ನಾಗಿ ಮಾಡಿತು. ದೀರ್ಘಕಾಲದ ಈ ಗಲಭೆಯಿಂದ ಗುಜರಾತ್‌ನ ಟೆಕ್ಸ್‌ಟೈಲ್ ಮಿಲ್‌ಗಳು ತುಂಬಾ ಹಾನಿಗೊಳಗಾಗಿದ್ದವು. ಕಾರ್ಮಿಕರಲ್ಲೂ ಜಾತಿ ತನ್ನ ವಿಷವನ್ನು ಪುಟಿಸಿತು. ಅವರವರಲ್ಲೇ ಘರ್ಷಣೆ ಆರಂಭವಾಗಿದ್ದವು. ಕಾರ್ಮಿಕ ಸಂಘದಲ್ಲಿ ಈ ಬಗ್ಗೆ ಒಡಕುಂಟಾಯಿತು. ಶೇಕಡ ೮೦ಕ್ಕೂ ಹೆಚ್ಚಿರುವ ದಲಿತ ಕಾರ್ಮಿಕರು ಎರಡು ದಿನಗಳ ಮುಷ್ಕರ ಹೂಡಿ ಟೆಕ್ಸ್‌ಟೈಲ್ ಮಿಲ್‌ಗಳನ್ನು ಸ್ತಬ್ಧಗೊಳಿಸಿದರು. ಈ ಸಮಯದಲ್ಲಿ ಉಂಟಾದ ಗಲಭೆಯಲ್ಲಿ ಪೊಲೀಸರ ಗೋಲಿಬಾರ್‌ಗೆ ಮೂವರು ಕಾರ್ಮಿಕರು ಬಲಿಯಾದರು. ಫೆಬ್ರುವರಿ ೨೩ ರಂದು ಮತ್ತೆ ಚಳವಳಿಯ ಮುಖಂಡಗನ್ನು ಬಂಧಿಸಲಾಯಿತು. ಸೈನಿಕರನ್ನು ಕರೆಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರ ಯತ್ನಿಸಿತು. ಭಾರತೀಯ ವೈದ್ಯಕೀಯ ಸಂಘದ ಗುಜರಾತ್ ಶಾಖೆ ಎರಡು ದಿನಗಳ ಸಾಂಕೇತಿಕ ಮುಷ್ಕರ ಹೂಡಿ ಚಳವಳಿಗಾರರಿಗೆ ಬೆಂಬಲ ನೀಡಬೇಕೆಂದು ವೈದ್ಯರುಗಳಿಗೆ ಕರೆನೀಡಿತು. ೨೬ ರಂದು ಆಚರಿಸಲಾದ ಗುಜರಾತ್ ಬಂದ್‌ನಲ್ಲಿ ವ್ಯಾಪಕ ಹಿಂಸಾಚಾರ ನಡೆದು ಪೋಲೀಸರ ಗುಂಡಿಗೆ ಆರು ಮಂದಿ ಬಲಿಯಾದರು. ಹಲವಾರು ಕಡೆ ರೈಲು, ಬಸ್ಸು, ಅಂಗಡಿ ಹಾಗೂ ಬ್ಯಾಂಕುಗಳಿಗೆ ಬೆಂಕಿ ಇಡಲಾಯಿತು.

ಮಾರ್ಚ್ ಐದರಂದು ಮೀಸಲಾತಿ ವಿರೋಧಿ ಚಳವಳಿಕಾರರೊಂದಿಗೆ ಸಂಧಾನ

ಮಾತುಕತೆಗಾಗಿ ಪಂಜಾಬಿನ ರಾಜ್ಯಪಾಲ ಹಾಥಿ ಅವರು ಬಂದರು. ಅವರ ಮಾತುಕತೆಯಿಂದ ಪ್ರಯೋಜನವೇನೂ ಆಗಲಿಲ್ಲ. ಚಳವಳಿಗೆ ಬೆಂಬಲವೇನೂ ಆಗಲಿಲ್ಲ. ಚಳವಳಿಗೆ ಬೆಂಬಲ ನೀಡುತ್ತಿದ್ದ ಸರ್ಕಾರಿ, ಖಾಸಗಿ ಹಾಗೂ ಬ್ಯಾಂಕ್ ನೌಕರರೊಂದಿಗೂ ಹಾಥಿ ಮಾತುಕತೆ ನಡೆಸಿ ವಿಫಲರಾದರು. ಅಷ್ಟರಲ್ಲಾಗಲೇ ಕೋಟ್ಯಾಂತರ ರೂಪಾಯಿ ಬೆಲೆಯ ಆಸ್ತಿ ಪಾಸ್ತಿಗೆ ಹಾನಿ ಸಂಭವಿಸಿತ್ತು. ಸತ್ತವರ ಸಂಖ್ಯೆ ೩೦ ಮೀರಿತ್ತು.

ಈ ನಡುವೆ ಮಾರ್ಚಿ ೧೮ ರಂದು ಲೋಕಸಭೆ ಒಕ್ಕೊರಲಿನಿಂದ ಮೀಸಲಾತಿ ನೀತಿಯನ್ನು ಸಮರ್ಥಿಸಿತು. ಈ ಸಂಬಂಧದ ನಿರ್ಣಯವನ್ನು ಲೋಕಸಭೆಯ ಎಲ್ಲಾ ಸದಸ್ಯರೂ ಎದ್ದು ನಿಂತು ಅನುಮೋದಿಸಿದರು. ಮಾರನೆ ದಿನ ಗುಜರಾತ್ ವಿಧಾನ ಸಭೆಯಲ್ಲೂ ಮೀಸಲಾತಿಯನ್ನು ಸಮರ್ಥಿಸಿ ನಿರ್ಣಯ ಅಂಗೀಕರಿಸಲಾಯಿತು. ಅದೇ ಸಮಯದಲ್ಲಿ ಮೀಸಲಾತಿ ವಿರೋಧಿ ಚಳವಳಿಯ ಮುಖಂಡರನ್ನು ಮಾತುಕತೆಗಾಗಿ ಪ್ರಧಾನಿ ಶ್ರೀಮತಿ ಗಾಂಧಿ ಅವರು ದೆಹಲಿಗೆ ಆಹ್ವಾನಿಸಿದರು. ದೆಹಲಿ ಮಾತುಕತೆ ನಂತರ ಮೀಸಲಾತಿಯ ಪೂರ್ಣ ನಿಷೇಧ ಬೇಡಿಕೆಯನ್ನು ಅವರು ಹಿಂತೆಗೆದುಕೊಂಡರು.

ಆದರೆ ಮುಖ್ಯಮಂತ್ರಿ ಸೋಲಂಕಿ ಅವರು ಮುಂದಿಟ್ಟ ನಾಲ್ಕು ಅಂಶಗಳ ಬೇಡಿಕೆ ಚಳವಳಿಗಾರರಿಗೆ ಹಿಡಿಸಲಿಲ್ಲ. ಮತ್ತೆ ಚಳವಳಿ ತೀವ್ರವಾಯಿತು. ಗುಜರಾತ್ ನಾದ್ಯಂತ ಹಿಂಸೆ ನಿತ್ಯದ ಕೆಲಸವಾಯಿತು. ಹಲವಾರು ಹಳ್ಳಿಗಳಲ್ಲಿ ದಲಿತರ ಮೇಲೆ ಹೇಯ ದೌರ್ಜನ್ಯ ನಡೆಸಲಾಯಿತು. ಮಹಿಳೆಯರ ಮಾನಭಂಗ ಮಾಡಲಾಯಿತು ಮನೆಗಳನ್ನು ಸುಟ್ಟು ದಲಿತ ಕೇರಿಗಳಿಗೇ ಬೆಂಕಿ ಇಟ್ಟು ಅವರನ್ನು ಹೊರಗೋಡಿಸಲಾಯಿತು. ೨೭ ರಂದು ಗಾಂಧಿನಗರ ಜಿಲ್ಲೆಯ ಧೋಲ್ಕಿ ಟೌನ್‌ನಲ್ಲಿ ನಡೆದ ಘರ್ಷಣೆಯಲ್ಲಿ ನಾಲ್ವರು ಸತ್ತರು.

ಕ್ರಮೇಣ ಚಳವಳಿ ತನ್ನ ತೀವ್ರತೆಯನ್ನು ಕಳೆದುಕೊಳ್ಳತೊಡಗಿತು. ನಿತ್ಯ ಹಿಂಸೆಯ ವಾತಾವರಣದಿಂದ ಜನರು ಬೇಸತ್ತು ಹೋಗಿದ್ದರು. ಏಪ್ರಿಲ್ ೩ ರಂದು ಜಾಮ್‌ನಗರ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಚಳವಳಿಯನ್ನು ಬಿಟ್ಟುಕೊಟ್ಟು ಕಾಲೇಜ್ ಪುನರಾರಂಭಕ್ಕೆ ನೆರವಾದರು. ಇದರಿಂದ ಕೆಲವು ಕಡೆ ಗಲಭೆ ಆರಂಭಗೊಂಡಿತಾದರೂ ಅದು ತಣ್ಣಗಾಯಿತು. ಇಡೀ ಗುಜರಾತ್‌ನಲ್ಲಿ ಆರೋಗ್ಯಕರ ವಾತಾವರಣ ಮೂಡಲು ಆರಂಭವಾಯಿತು. ಇದನ್ನು ಸಹಿಸದ ಕೆಲವು ಆಸಕ್ತ ಹಿತಗಳು ಚಳವಳಿಯನ್ನು ಬೇರೆ ರೂಪದಲ್ಲಿ ಮುಂದುವರೆಸಿಕೊಂಡು ಹೋಗಲು ಪ್ರಯತ್ನಿಸಿದವು. ವೈದ್ಯೇತರ ವಿದ್ಯಾರ್ಥಿಗಳ ಮುಖಂಡ ಭಾಸ್ಕರ್ ಭಟ್ ಮೀಸಲಾತಿ ರದ್ದುಗೊಳಿಸುವವರೆಗೂ ಉಪವಾಸ ಹೂಡುವುದಾಗಿ ಘೋಷಿಸಿ ಸತ್ಯಾಗ್ರಹ ಆರಂಭಿಸಿದರು. ಅದರ ಪರಿಣಾಮ ವಿದ್ಯಾರ್ಥಿಗಳ ಮೇಲೆ ಆದುತೇನೂ ಕಂಡು ಬರಲಿಲ್ಲ. ಅದೇ ಸಮಯದಲ್ಲಿ ಅಹಮದಾಬಾದ್‌ನಲ್ಲಿ ಆರಂಭಗೊಂಡ ಸ್ವಾಮಿ ನಾರಾಯಣರ ಮಹೋತ್ಸವ ಚಳವಳಿಯನ್ನು ತಗ್ಗಿಸಲು ನೆರವಾಯಿತು. ಅಷ್ಟರಲ್ಲಾಗಲೇ ಸತ್ತವರ ಸಂಖ್ಯೆ ೪೪ಕ್ಕೆ ಏರಿತ್ತು.

ಆದರೆ ಏಪ್ರಿಲ್ ೧೦ ರಂದು ಗಾಂಧಿನಗರದಲ್ಲಿ ರಾಜ್ಯ ಸರ್ಕಾರಿ ನೌಕರರು ಬಡ್ತಿ

ಯಲ್ಲಿ ಮೀಸಲಾತಿ ವಿರೋಧಿಸಿ ಚಳವಳಿ ಆರಂಭಿಸಿದರು. ಮೊದಲ ದಿನವೇ ಪೋಲೀಸರು ಮುನ್ನೂರು ಮಂದಿ ನೌಕರರನ್ನು ಬಂಧಿಸಿದರು. ಚಳವಳಿ ಮುಂದುವರಿಯಲಿಲ್ಲ. ರಾಷ್ಟ್ರ ವಿರೋಧಿಯಾದ ಚಳವಳಿಯಲ್ಲಿ ಭಾಗವಹಿಸುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಬೆದರಿಕೆ ಹಾಕಿದೊಡನೆಯೇ ಎಲ್ಲ ಪೂರ್ಣ ಸ್ತಬ್ಧವಾಯಿತು (ಈಗ ಮತ್ತೆ ಅವರು ಚಳವಳಿ ಆರಂಭಿಸಿದ್ದಾರೆ) ವೈದ್ಯರುಗಳು ಕೆಲಸಕ್ಕೆ ಹಾಜರಾಗದಿದ್ದರೆ ಅವರನ್ನು ವಜಾ ಮಾಡಿ ಹೊಸದಾಗಿ ಇನ್ನೂರು ಮಂದಿ ವೈದ್ಯರನ್ನು ನೇಮಿಸಿಕೊಳ್ಳುವುದಾಗಿ ಸರ್ಕಾರ ಪ್ರಕಟಿಸಿತು. ಆದರೆ ಏಪ್ರಿಲ್ ೧೩ರ ರಾತ್ರಿ ಬಹಳ ಹೊತ್ತಿನವರೆಗೆ ನಡೆದ ಮಾತುಕತೆಯಲ್ಲಿ ಮೆಡಿಕೋಗಳು ಮೀಸಲಾತಿ ವಿರೋಧಿ ಚಳವಳಿಯನ್ನು ಹಿಂತೆಗೆದುಕೊಳ್ಳಲು ಒಪ್ಪಿದರು. ಏಪ್ರಿಲ್ ೧೪ರ ಡಾ॥ ಅಂಬೇಡ್ಕರ್ ಜಯಂತಿಯಂದು ಮೀಸಲು ವಿರೋಧಿ ಚಳವಳಿಯಿಂದ ಮೆಡಿಕೋಗಳು ಹಿಂದೆ ಸರಿದಿರುವುದನ್ನು ಪ್ರಕಟಿಸಲಾಯಿತು. ಇದರಿಂದ ಕುಪಿತಗೊಂಡ ಸಮಾಜ ವಿರೋಧಿ ಶಕ್ತಿಗಳು ಮೆಡಿಕೋಗಳ ಮುಖಂಡರಾದ ರಮೇಶ್ ಗಾಂಧಿ ಹಾಗೂ ಮೃಗೇಶ್ ವೈಷ್ಣವ್ ಅವರ ಮೇಲೆ ಹಲ್ಲೆ ನಡೆಸಿದರು. ನಂತರ ನಡೆದ ಕೆಲವು ಗಲಭೆ-ಘರ್ಷಣೆಗಳಲ್ಲಿ ಮತ್ತೆ ಕೆಲವರು ಸತ್ತರು.

ಕ್ಯಾರಿ ಫಾರ್ವರ್ಡ್ ಪದ್ಧತಿ ರದ್ದುಪಡಿಸುವಂತೆ ಒತ್ತಾಯಿಸಿ ಮೆಡಿಕೋಗಳು ಆರಂಭಿಸಿದ ಚಳವಳಿ ಮೀಸಲಾತಿ ವಿರೋಧಿ ಚಳವಳಿಯಾಗಿ ನಂತರ ಜಾತಿ ಹೋರಾಟವಾಗಿ ಮಾರ್ಪಟ್ಟು ಇಡೀ ಗುಜರಾತ್ ಅನ್ನು ಜಾತೀಯ ವಿಷಜ್ವಾಲೆಗೆ ತಳ್ಳುವಲ್ಲಿ ಹಿಂದೂ ಧರ್ಮದ ಆಸಕ್ತಹಿತಗಳ ಕೈವಾಡ ಪೂರ್ಣವಾಗಿ ಕೆಲಸ ಮಾಡಿದ್ದು, ಎಲ್ಲ ಹಂತಗಳಲ್ಲೂ ಕಂಡುಬರುತ್ತದೆ. ೧೦೨ ದಿನಗಳಷ್ಟು ದೀರ್ಘ ಕಾಲದ ಈ ಜಾತಿ ಹೋರಾಟವನ್ನು ಮಹಾರಾಷ್ಟ್ರ ಹಾಗೂ ರಾಜಸ್ಥಾನಗಳಿಗೂ ಹಬ್ಬಿಸಲು ಇವೇ ಆಸಕ್ತಹಿತಗಳು ತೀವ್ರ ಕೆಲಸ ಮಾಡಿದ್ದವು. ಹೊರಗೆ ಚಳವಳಿಯ ಸುಳಿವು ಕಾಣಿಸಿತಾದರೂ ಅದು ಹಬ್ಬಲಿಲ್ಲ. ಜಾತಿ ಹೋರಾಟದಲ್ಲಿ ಗುಜರಾತ್‌ನ ಸವರ್ಣೀಯರು ಈಗ ಪೂರ್ಣ ಸೋತಿದ್ದಾರೆ. ಆದರೆ, ಪ್ರೀತಿಯನ್ನೇ ಮರೆತ ಹಿಂದೂ ಮನಸ್ಸು ಎಂದಾದರೂ ಕೆರಳಬಹುದು. ಯಾವುದೇ ಅಮಾನವೀಯ ಕೃತ್ಯಕ್ಕೆ ಇಳಿಯಬಹುದು.

೩

ಗುಜರಾತ್ ದೊಡ್ಡ ರಾಜ್ಯವೇನಲ್ಲ. ಹೆಚ್ಚು ವಿಕೇಂದ್ರೀಕರಣಗೊಂಡು ಹತ್ತೊಂಬತ್ತು ಜಿಲ್ಲೆಗಳಾಗಿರುವ ಈ ಕೈಗಾರಿಕಾ ರಾಜ್ಯದಲ್ಲಿ ಒಟ್ಟು ಹದಿನೆಂಟು ಸಾವಿರ ಹಳ್ಳಿಗಳಿವೆ. ಎಲ್ಲಾ ಹಳ್ಳಿಗಳಲ್ಲೂ ಕೂಡ ಗುತ್ತೇದಾರಿ ಭೂಮಾಲೀಕರು ದಲಿತರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಾರೆ. ಸ್ವಾಭಿಮಾನ ಸ್ವಾತಂತ್ರ್ಯವನ್ನು ಕನಸಿನಲ್ಲಿ ಮಾತ್ರ ಕಾಣಬೇಕಾಗಿರುವ ಈ ಹಳ್ಳಿಗಳ ದಲಿತರು ಕೂಲಿ ಕೇಳುವಂತಿಲ್ಲ. ವಿಶ್ರಾಂತಿ ಬೇಡುವಂತಿಲ್ಲ. ಒಡೆಯ ಕೊಟ್ಟಷ್ಟನ್ನು ತಿಂದು ತೆಪ್ಪಗಿರಬೇಕು. ಉಸಿರೆತ್ತಿದರೆ ಉಸಿರೇ ಇಲ್ಲದಂತಾಗುವ ಪ್ರಕರಣಗಳನ್ನು ನೆನೆದು ಯಾರೊಬ್ಬರೂ ಎದುರು ಮಾತಾಡುವ ಸಾಹಸ

ತೋರುವುದಿಲ್ಲ. ತಲೆ ತಲಾಂತರದಿಂದ ಭೂಮಾಲೀಕ, ಪಟೇಲರುಗಳು ಹೊಲಗದ್ದೆಗಳಲ್ಲಿ ದುಡಿದು–ದಣಿದು ಸುಣ್ಣವಾಗಿರುವ ದಲಿತರಲ್ಲಿ ಭೂಮಿ ಹೊಂದಿದ ಒಬ್ಬನನ್ನೂ ಕಾಣುವುದು ಕಷ್ಟ. ಅಧಿಕಾರದಲ್ಲಿ ಸಮಪಾಲು ಹೊಂದಿರುವ ಪಟೇಲರು ಗುಜರಾತಿನ ಇಡೀ ಭೂಮಿಯನ್ನು ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಭೂ ಸುಧಾರಣೆಯ ಗಾಳಿ ಕೂಡ ಇಲ್ಲಿ ಸುಳಿದಿಲ್ಲ. ಭೂಮಿತಿ ಶಾಸನದ ಬಗ್ಗೆ ಕೇಳಿದರೆ ಜನ ನಕ್ಕುಬಿಡುತ್ತಾರೆ.

ಇಲ್ಲಿನ ಹಳ್ಳಿಗಳ ಬಗ್ಗೆ ಹೆಚ್ಚು ಅಭ್ಯಾಸ ಮಾಡಲು ನನಗೆ ಸಾಧ್ಯವಾಗಲಿಲ್ಲ. ಭಾಷೆಯ ಸಮಸ್ಯೆ ನನ್ನನ್ನು ಬಹುವಾಗಿ ಕಾಡಿಸಿ ಅಡಚಣೆ ಉಂಟುಮಾಡಿತು. ಗುಜರಾತಿ ಒಂದನ್ನು ಬಿಟ್ಟು ಉಳಿದ ಭಾಷೆಗಳನ್ನು ಸವತಿಯಂತೆ ಗುಜರಾತಿಗಳು ಕಾಣುತ್ತಾರೆ. ಇಂಗ್ಲೀಷ್ ಮಾತಾಡುವವರನ್ನು ಕಂಡರೆ ಗೇಲಿ ಮಾಡುತ್ತಾರೆ. ಜತೆಗೆ ನನ್ನೊಂದಿಗಿದ್ದ ದಲಿತ ಮಿತ್ರ ಕೂಡ ಅಂಥವನೇ. ಹಾಗಾಗಿ ಈಗಲೇ ಪತ್ರಿಕೆಗಳಲ್ಲಿ ಪ್ರಚಾರಪಡೆದುಕೊಂಡಿದ್ದ– ಅಹಮದಾಬಾದ್‌ಗೆ ಹತ್ತಿರವೇ ಇರುವ ಎರಡು ಹಳ್ಳಿಗಳಿಗೆ ಮಾತ್ರ ಭೇಟಿ ನೀಡಲು ನನಗೆ ಸಾಧ್ಯವಾಯಿತು.

ಅಹಮದಾಬಾದ್‌ನಿಂದ ಕೇವಲ ೧೪ ಕಿಲೋ ಮೀಟರ್ ದೂರ ಇರುವ ಜತಲ್‌ಪುರಕ್ಕೆ ನಾವು ಹೊರಟಾಗ ನನ್ನ ಗುಂಡಿಗೆ ನಡುಗುತ್ತಲೇ ಇತ್ತು. ಆ ಮೊದಲೇ ಅಲ್ಲಿ ನಡೆದ ನರಹತ್ಯೆ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದ ನನ್ನ ಮನಸ್ಸು ಹಿಂಜರಿಯುತ್ತ ಇರುವಾಗಲೇ ಜತಲ್‌ಪುರ ಗ್ರಾಮದ ಎದುರಿನ ವರ್ಣರಂಜಿತ ದೇವಾಲಯದ ಎದುರು ನಾವು ನಿಂತಿದ್ದೆವು. ಘಟನೆ ನಡೆದ ಮೂರೂವರೆ ತಿಂಗಳ ನಂತರ ಕೂಡ ಜತಲ್‌ಪುರದಲ್ಲಿ ಜೀವ ಇದ್ದಂತೆ ಕಾಣಲಿಲ್ಲ. ಸುಮಾರು ನಾಲ್ಕು ಸಾವಿರ ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ಐನೂರು ಪಟೇಲರ ಮನೆಗಳು, ನೂರೈವತ್ತಕ್ಕೂ ಹೆಚ್ಚು ಠಾಕೂರರ ಮನೆಗಳು (ದರ್ಬಾರ್ ಅಂತಲೂ ಠಾಕೂರರಿಗೆ ಕರೆಯುತ್ತಾರೆ) ಮತ್ತು ಸುಮಾರು ನೂರು ಹರಿಜನರ ಮನೆಗಳು ಇವೆ. ಹರಿಜನರ ಕೇರಿಯನ್ನು ಊರಿನಿಂದ ಬೇರ್ಪಡಿಸುವಂತೆ ಶಿಥಿಲಗೊಳ್ಳುತ್ತಿರುವ ಚರ್ಚ್ ಒಂದು ನಿಂತಿದೆ. ಕಂಡೊಡನೆ ದಲಿತರ ಕೇರಿ ಎಂದು ಗುರುತಿಸಬಹುದಾದ ಈ ಪ್ರದೇಶದಲ್ಲಿ ದಾರಿದ್ರ್ಯಕ್ಕಾಗಿ ಹುಡುಕಬೇಕಿಲ್ಲ. ಪ್ರತಿಯೊಂದು ಗುಡಿಸಲಿನ ಸೂರುಮಾಡುಗಳು ತಮ್ಮ ಜೀವಿತದ ಕಥೆ ಹೇಳುತ್ತವೆ. ಒಂದು ಗುಡಿಸಲಂತೂ ನಾನು ಒರಗಿ ನಿಂತಾಗ ಬಿದ್ದೇ ಹೋಗುವಂತಾಯಿತು. ಮೂಳೆ–ಚಕ್ಕಳಗಳ, ಕಪ್ಪು- ಕಂದುಬಣ್ಣದ ಒಂದೊಂದೇ ದೇಹಗಳನ್ನು ನೋಡುತ್ತಾ ಹೋದಂತೆಲ್ಲಾ ನನಗೆ ತಲೆ ಸುತ್ತಲು ಆರಂಭಿಸಿತ್ತು.

ಊರಿನ ಪಟೇಲರು ಹಾಗೂ ದರಬಾರ್ ಜನಾಂಗದವರ ಭೂಮಿಯಲ್ಲಿ ದುಡಿಯುವ ಇವರಾರಿಗೂ ತುಂಡು ನೆಲ ಇಲ್ಲ. ಮೈಮುಚ್ಚುವಷ್ಟು ಅರಿವೆ ಇಲ್ಲ. ಹೆಂಗಸರು–ಮಕ್ಕಳೆನ್ನದೆ ಹಗಲು ರಾತ್ರಿ ದುಡಿಯಬೇಕು. ಒಮ್ಮೆ ತಪ್ಪಿದರೂ ಒದೆತ ಅಥವಾ ನೇಣು ತಪ್ಪಿದ್ದಲ್ಲ. ನಾಗರಿಕತೆಯ ಎಲ್ಲ ಸೌಲಭ್ಯಗಳಿಂದಲೂ ವಂಚಿತರಾದ ಇವರು ಊರಿನ ಜಮೀನ್ದಾರರ ಮುಂದೆ ಕೈಕಟ್ಟಿ ನಿಲ್ಲಬೇಕು. ಕ್ಷೌರಿಕರ ಬಳಿ ಕ್ಷೌರ ಮಾಡಿಸಿ

ಕೊಳ್ಳುವಂತಿಲ್ಲ. ಹೆಬ್ಬಾಗಿಲಿನಲ್ಲಿರುವ ಸ್ವಾಮಿ ನಾರಾಯಣ ದೇವಾಲಯದ ಹತ್ತಿರ ಸುಳಿಯುವಂತಿಲ್ಲ. ಊರಿನಲ್ಲಿರುವ ಸರ್ಕಾರಿ ಶಾಲೆಗೆ ಹರಿಜನರ ಮಕ್ಕಳು ಕಾಲು ಹಾಕುವಂತಿಲ್ಲ. ಇಂಥ ಅವಮಾನವೀಯ ಹಿನ್ನೆಲೆಯಲ್ಲಿ ಮೀಸಲು ವಿರೋಧಿ ಚಳವಳಿಯನ್ನು ದುರುಪಯೋಗಪಡಿಸಿಕೊಂಡು ಜಾತಿ ಹೋರಾಟವನ್ನಾಗಿ ಪರಿವರ್ತಿಸಿದ ಹಿಂದೂ ಮನಸ್ಸಿನ ಹಿಂದೆ ಗುಂಯ್‌ಗುಡುತ್ತಿತ್ತೆನ್ನಲಾದ ಜತಲ್‌ಪುರ ಪ್ರಕರಣ ಹೃದಯವನ್ನು ಹಿಂಡುವಂಥದು. ೨೪ರ ಹರೆಯದ ಸಕರ್ ಬಾಯ್, ಪಟೇಲ್ ಯುವಕರ ಚೆಲ್ಲಾಟಕ್ಕೆ ತುತ್ತಾದ ಘಟನೆ ಇದು. ಇಡೀ ಹಳ್ಳಿಯಲ್ಲಿ ತುಂಬ ಒಳ್ಳೆ ಹಾಡುಗಾರನಾಗಿದ್ದ ಆತನನ್ನು ಸುಳ್ಳು ಅಪಾದನೆ ಮೇಲೆ ೫೦ ಮಂದಿ ಪಟೇಲ್ ಯುವಕರು ಡಿಸೆಂಬರ್ ೨೫ರ ರಾತ್ರಿ ಹಿಡಿದು ಹೊಡೆದದ್ದೇ ಅಲ್ಲದೆ ೨೫ರ ಬೆಳಗಿನ ಜಾವ ಗ್ರಾಮ ಪಂಚಾಯಿತಿ ಕಚೇರಿಯಲ್ಲಿಟ್ಟು ಜೀವಂತವಾಗಿ ಸುಟ್ಟು ಕೊಂದರು. ಈ ಎಲ್ಲವನ್ನು ನೋಡಿಕೊಂಡು ಬಾಯಿ ಮುಚ್ಚಿಕೊಂಡಿದ್ದ ಸಕರ್ ಭಾಯಿ'ನ ಅಣ್ಣ ರಮಣ ಭಾಯ್ ಏನು ಮಾಡಬೇಕೆಂದು ತೋಚದೆ ಈಗ ಒದ್ದಾಡುತ್ತಿದ್ದಾನೆ. ತನ್ನ ಅಸಹಾಯಕತೆಗಾಗಿ ಆತ ನೊಂದು ಜೀವಂತ ಶವವಾಗಿದ್ದಾನೆ.

ಇದು ಮೀಸಲು ವಿರೋಧಿ ಚಳವಳಿ ಆರಂಭವಾಗುವುದಕ್ಕೆ ಮುಂಚೆ ನಡೆದ ಘಟನೆ. ಈ ಘಟನೆ ತಿಳಿದ ದಲಿತ ಪ್ಯಾಂಥರ್‌ಗಳು ಕೂಡಲೇ ಆ ಹಳ್ಳಿಗೆ ಧಾವಿಸಿದರು. ಸಮರ ಸನ್ನದ್ಧರಾಗಿ ಅಹಮದಾಬಾದ್‌ನಿಂದ ಹೋಗಿದ್ದ ನೂರಾರು ಮಂದಿ ದಲಿತ ಪ್ಯಾಂಥರ್‌ಗಳು ಜತಲ್‌ಪುರದ ಪಟೇಲರಿಗೆ ಅಂದು ಚೆನ್ನಾಗಿಯೇ ಬುದ್ಧಿ ಕಲಿಸಿದರು. ಸತ್ತ ಸಕರ್ ಭಾಯಿ'ನ ಶವವನ್ನು ಮೆರವಣಿಗೆ ಮಾಡಿ ಜನತೆಯ ಬೆಂಬಲ ಪಡೆದರು. ಈ ಕಾರ್ಯದಲ್ಲಿ ಬಿ. ಜೆ. ಮೆಡಿಕಲ್ ಕಾಲೇಜಿನ ದಲಿತ ವಿದ್ಯಾರ್ಥಿಗಳು ಕ್ರಿಯಾತ್ಮಕವಾಗಿ ಪಾಲ್ಗೊಂಡಿದ್ದರು. ಬಹಿರಂಗವಾಗಿ ಪಟೇಲ್ ಜಾತಿಯನ್ನು ಹಾಗೂ ಹಿಂದೂಗಳನ್ನು ಖಂಡಿಸಿದ್ದರು. ಈ ಅಪಮಾನದ ಸೇಡು ತೀರಿಸಿಕೊಳ್ಳಲು ಕಾದಿದ್ದ ಸವರ್ಣೀಯರು ಮೀಸಲು ವಿರೋಧಿ ಚಳವಳಿಯನ್ನು ಚೆನ್ನಾಗಿಯೇ ಬಳಸಿಕೊಂಡರು.

ಕುಸಿದ ಗೋಡೆಗಳು, ಚೆಲ್ಲಿದ ಬೂದಿ, ಕರಕಲು ಮನೆಗಳು, ಬಿಕೋ ಅನ್ನುವ ಬೀದಿ--ಹತ್ತು ಸಾವಿರ ಜನಸಂಖ್ಯೆ ಉಳ್ಳ ದೆತ್ರೋಜ್ ಗ್ರಾಮಕ್ಕೆ ಹೋದಾಗ ಕಂಡು ಬಂದದ್ದು ಇದು. ಹರಿಜನ ಕೇರಿಯನ್ನು ಪೂರ್ಣ ಧ್ವಂಸ ಮಾಡಿರುವ ಸವರ್ಣೀಯರಿಗೆ ಕಾರಣ ಏನೂ ಇಲ್ಲ. ಇದ್ದದ್ದರಲ್ಲಿ ಸ್ವಲ್ಪ ಉತ್ತಮ ಅನ್ನಬಹುದಾದ ಸ್ಥಿತಿಯಲ್ಲಿದ್ದ ದಲಿತರ ಮೇಲೆ ಸವರ್ಣೀಯರಿಗೆ ಹಿಂದಿನ ಸೇಡೇನೂ ಇರಲಿಲ್ಲ. ಆದರೆ ಮೀಸಲಾತಿ ವಿರೋಧಿ ಚಳವಳಿ ಹಿನ್ನೆಲೆಯಲ್ಲಿ ಆರಂಭವಾದ ಜಾತಿ ಹೋರಾಟ ಅವರಲ್ಲಿದ್ದ ರಾಕ್ಷಸೀ ಮನಸ್ಸನ್ನು ಕೆರಳಿಸಿತ್ತು. ಫೆಬ್ರುವರಿ ೧೬ರಂದು ಅಲ್ಲಿ ನಡೆಯಬೇಕಾಗಿದ್ದ ಹರಿಜನರ ಎರಡು ಮದುವೆ ಕೂಟಗಳ ಮೇಲೆ ಊರಿನ ಪಟೇಲರು, ಠಾಕೂರರು ಒಂದಾಗಿ ಧಾಳಿ ನಡೆಸಿ, ಎಲ್ಲವನ್ನು ಧ್ವಂಸಗೊಳಿಸಿದರು. ಅಷ್ಟರಿಂದಲೇ ತೃಪ್ತರಾಗದೆ ಮಾರನೆ ದಿನ ಇಡೀ ದಲಿತ ಕೇರಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದರು. ದಲಿತ ಮಹಿಳೆಯೊಬ್ಬ

ಟನ್ನು ಬೆತ್ತಲೆ ಮಾಡಿ ಆನಂದಿಸಿ ಅಟ್ಟಿಹಾಕಿದ್ದರು. ಹೆದರಿ ಓಡಿದ ದಲಿತರು ಮತ್ತೆ ಬರಲಿಲ್ಲ. ಬಂದರೆ ಸಿಗುವುದಾದರೂ ಏನು?

ಖೇಡಾ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಇದೇ ರೀತಿಯ ದೌರ್ಜನ್ಯ ದಲಿತರ ಮೇಲೆ ನಡೆಯುವ ವಿಷಯ ನನಗೆ ಗೊತ್ತಾಯಿತು. ನದಿಯಾಡ್, ಮೆಹಸಾಣ, ಆನಂದ, ಭಾವನಗರ ಜಿಲ್ಲೆಗಳ ನೂರಾರು ಹಳ್ಳಿಗಳು ಸವರ್ಣೀಯ ಭೂಮಾಲೀಕರ ದಾಳಿಗೆ ತುತ್ತಾಗಿವೆ. ಹಳ್ಳಿ ಹಳ್ಳಿಗಳಲ್ಲಿ ಪೋಲೀಸರು ಗೋಲಿಬಾರ್ ಮಾಡಿದ್ದಾರೆ. ಮೆಹಸಾಣ ಜಿಲ್ಲೆಯ ಬಿಲಿಯಾ ಗ್ರಾಮದಲ್ಲಿ ಮಾರ್ಚ್ ೨೧ರಂದು ನಡೆದ ಪೋಲೀಸರ ದಾಳಿಯಲ್ಲಿ ದಲಿತ ಸಹೋದರರಿಬ್ಬರು ಸತ್ತರು. ದಲಿತ ಕಾರ್ಮಿಕರ ಮೇಲೆ ಇತರೆ ಸವರ್ಣೀಯರು ಹಲ್ಲೆ ನಡೆಸುತ್ತಿದ್ದಾಗ ಪೋಲೀಸರು ಗುಂಡು ಹಾರಿಸಿದರು. ಹೀಗೆ ದಾಳಿಗೆ ತುತ್ತಾಗಿ ಸೂಕ್ತ ರಕ್ಷಣೆ ಸಿಗದೆ ದಲಿತರು ಬೀದಿ ಪಾಲಾಗಿದ್ದಾರೆ. ದಾಳಿ ಕಾಲದಲ್ಲಿ ಗಾಯಗೊಂಡವರಿಗೆ ಇನ್ನೂ ಸರಿಯಾಗಿ ಚಿಕಿತ್ಸೆ ದೊರೆತಿಲ್ಲ. ದಲಿತ ಪ್ಯಾಂಥರ್ಸ್ ಕೆಲವು ಕಡೆ ನಿರಾಶ್ರಿತರು, ಗಾಯಾಳುಗಳ ಕ್ಯಾಂಪ್ ಮಾಡುವ ಮೂಲಕ ಕೆಲವರಿಗೆ ನೀಡಿದ ಚಿಕಿತ್ಸೆ-ಸಹಾಯ ಬಿಟ್ಟರೆ ಇವರಿಗೆ ಬೇರೆ ಸಹಾಯ ಈವರೆಗೂ ದೊರೆತಿಲ್ಲ. ಮೀಸಲಾತಿ ಸೌಲಭ್ಯದಲ್ಲಿ ಕಿರುಪಾಲನ್ನೂ ಪಡೆಯದ ಹಳ್ಳಿಗಾಡಿನ ದಲಿತರು ಸವರ್ಣೀಯರ ಕೋಪಕ್ಕೆ ತುತ್ತಾದುದು ಹಿಂದೂ ವರ್ಣ ವ್ಯವಸ್ಥೆಯ ಕ್ರೌರ್ಯಕ್ಕೆ ಹಿಡಿದ ಕನ್ನಡಿಯಲ್ಲದೆ ಮತ್ತೇನಾಗಿರಲು ಸಾಧ್ಯ?

ಹಳ್ಳಿಗಳ ದಲಿತರ ಸ್ಥಿತಿ ಹೀಗಾದರೆ ಪಟ್ಟಣಿಗರ ಗತಿ ಮತ್ತೊಂದು ಹಿಂಸೆಯ ಪರ್ವವಾಗಿತ್ತು. ಹೆಚ್ಚು ದೌರ್ಜನ್ಯಕ್ಕೆ ಒಳಗಾದವರೆಂದರೆ ಅಹಮದಾಬಾದ್‌ನ ದಲಿತರು. ಪ್ರಮುಖ ವ್ಯಾಪಾರ ಹಾಗೂ ಕೈಗಾರಿಕಾ ಕೇಂದ್ರವಾದ ಅಹಮದಾಬಾದ್‌ನಲ್ಲಿರುವ ೭೦ಕ್ಕೂ ಹೆಚ್ಚು ಬಟ್ಟೆ ಗಿರಣಿಗಳಲ್ಲಿ ಶೇಕಡ ೮೦ರಷ್ಟಿರುವ ದಲಿತ ಕಾರ್ಮಿಕರು ಸವರ್ಣೀಯರನ್ನು ತತ್ತರಿಸುವಂತೆ ಮಾಡಿದರು. ಎರಡು ದಿನ ಮುಷ್ಕರ ಹೂಡಿ ಇಡೀ ಬಟ್ಟೆ ಗಿರಣಿಯ ವಹಿವಾಟನ್ನು ನಿಲ್ಲಿಸಿ ಹಣವಂತರ ಸೊಕ್ಕಿಗೆ ಸವಾಲು ಹಾಕಿದ ಅವರು ಹೊರಗೆ ಮಾತ್ರ ಹಿಂದೂಗಳ ಕ್ರೌರ್ಯಕ್ಕೆ ಬಲಿಯಾಗಬೇಕಾಯಿತು. ಅಹಮದಾಬಾದ್‌ನಲ್ಲಿರುವ ದಲಿತರು ಆರ್ಥಿಕವಾಗಿ ಅಷ್ಟೇನು ಒಳ್ಳೆಯ ಸ್ಥಿತಿಯಲ್ಲಿಲ್ಲದಿದ್ದರೂ ಸಣ್ಣಪುಟ್ಟ ನೌಕರಿ ಹಿಡಿದಿರುವುದರಿಂದ ಎರಡು ಹೊತ್ತಿನ ಅನ್ನಕ್ಕೇನೂ ಪರದಾಡಬೇಕಾಗಿಲ್ಲ. ಸ್ವಾಭಿಮಾನ—ಸ್ವಾತಂತ್ರ್ಯ ಮುಕ್ತವಾಗಿ ಮಾತಾಡುವ ಅವರು ಹಿಂದೂ ಧರ್ಮದ ಆಚರಣೆಗೆ ತಿಲಾಂಜಲಿ ಇಡುತ್ತಿದ್ದಾರೆ. ಕ್ರಮೇಣ ಹಿಂದೂತನದಿಂದ ದೂರವಾಗುತ್ತಿರುವ ಅವರು ಬೌದ್ಧ ಮತದತ್ತ ವಾಲುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಎಲ್ಲರೂ ಮನೆಯಲ್ಲಿ ಬುದ್ಧ ಹಾಗೂ ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಇಟ್ಟುಕೊಂಡಿದ್ದಾರೆ.

ಬರೋಡ ಮತ್ತು ಸೂರತ್‌ಗಳಲ್ಲಿ ಬೇರೆಯದೇ ಚಿತ್ರವನ್ನು ನಾನು ಕಂಡೆ. ಸಾಮಾನ್ಯವಾಗಿ ಮಧ್ಯಮ ವರ್ಗದವರೆನ್ನಬಹುದಾದ ರೀತಿಯಲ್ಲಿ ಕಂಡು ಬರುವ ದಲಿತ

ದವು ಒಂದು ಗುಂಪಾದರೆ, ಅತ್ಯಂತ ಹೀನಾಯವಾದ ಸ್ಥಿತಿಯಲ್ಲಿರುವ ಬಡ ಕಾರ್ಮಿಕರ ಮತ್ತೊಂದು ಗುಂಪು ಅಲ್ಲಿ ನನ್ನ ಗಮನಕ್ಕೆ ಬಂತು. ಅಮಾನವೀಯ ಸ್ಥಿತಿಯಲ್ಲಿ ಬದುಕುತ್ತಿರುವ ಸಾವಿರಾರು ಮಂದಿ ದಲಿತರಿಗೆ—ಮಿಲ್ ಕೆಲಸಗಾರರಿಗೆ, ಭೂತಾಯಿ ಹಾಸಿಗೆ-ಆಕಾಶ ಹೊದಿಕೆ ಅನ್ನುವ ಪರಿಸ್ಥಿತಿ. ಅವರಲ್ಲಿ ಭೇಟಿ ಮಾಡಿದ ಕೆಲವರು ಹೇಳಿದ್ದು; "ಈಗಲೂ ನಮಗೆ ಕನಿಷ್ಟ ಕೂಲಿ ಸಹ ಕೊಡುತ್ತಿಲ್ಲ: ದಿನ ಬೆಳಗಾದರೆ ಬಟ್ಟೆ ಗಿರಣಿಗಳಲ್ಲಿ ಅತ್ಯಂತ ಅಪಾಯಕರ ಕೆಲಸ ಮಾಡಬೇಕು. ರೋಗದ ತವರೂರಾದ ಈ ಗಿರಣಿಗಳ ಮಾಲೀಕರು ನಮಗೆ ಯಾವ ವೈದ್ಯಕೀಯ ಸೌಲಭ್ಯವನ್ನು ನೀಡುವುದಿಲ್ಲ. ಹೆಸರಿಗೆ ಮಾತ್ರ ಇರುವ ಕಾರ್ಮಿಕ ಸಂಘದಲ್ಲೂ ಜಾತಿ ತಲೆ ಹಾಕಿದ್ದು, ಆದರಿಂದ ನಾವೀಗ ದೂರವೇ ಉಳಿಯಬೇಕಾದ ಪರಿಸ್ಥಿತಿ ಬಂದಿದೆ". ಚಳವಳಿ ಸಮಯದಲ್ಲಿ ತಾವು ಕಳೆದುಕೊಳ್ಳಬೇಕಾದ್ದೇನೂ ಇರಲಿಲ್ಲವಾದ ಕಾರಣ ಸಾಕಷ್ಟು ಪ್ರಬಲರಾಗಿಯೇ ಹೋರಾಡಿದ್ದಾಗಿ ಕುರುಚಲು ಗಡ್ಡದ ಮಧ್ಯ ವಯಸ್ಕನೊಬ್ಬ ಹೇಳಿದ. ಬರೋಡ ಮತ್ತು ಸೂರತ್‌ಗಳು ತೀವ್ರ ಹಿಂಸಾಚಾರಕ್ಕೆ ಒಳಗಾದ ಪ್ರದೇಶಗಳಾಗಿದ್ದವು.

ದಲಿತ ಪ್ಯಾಂಥರ್ಸ್ ಪ್ರಭಾವಕ್ಕೊಳಗಾಗಿರುವ ಇಲ್ಲಿನ ದಲಿತರಲ್ಲಿ ಬಡ ಮತ್ತು ಮಧ್ಯ ವರ್ಗದ ದಲಿತರಲ್ಲಿ—ಅಷ್ಟೇನು ಒಗ್ಗಟ್ಟು ಇದ್ದಂತೆ ಕಂಡು ಬರಲಿಲ್ಲ. ಗುಡಿಸಲು ವಾಸಿ ಸೋನಾ ಬಾಯ್ ಪರಮಾರ್, "ಅವರು ನಮ್ಮನ್ನು ಮಾತಾಡಿಸಲೂ ಹಿಂಜರಿಯುತ್ತಾರೆ. ಹಬ್ಬ ಹರಿದಿನಗಳಲ್ಲಿ ನಮ್ಮೊಂದಿಗೆ ಸೇರುವುದಿಲ್ಲ. ನಮ್ಮನ್ನು ಆದಷ್ಟು ದೂರ ವಿಡಲು ಅವರು ಪ್ರಯತ್ನಿಸುತ್ತಾರೆ" ಎಂದು ಮಧ್ಯಮ ವರ್ಗದ ದಲಿತರನು ದೂರಿದ. ಸೂರತ್‌ನ ಶಾಲಾ ಶಿಕ್ಷಕನೊಬ್ಬನ ಮಾತಿನಿಂದ ಸೋನಾಬಾಯ್ ಹೇಳಿದ್ದು ಸತ್ಯ ಅನ್ನುವ ಅಂಶ ನನ್ನ ಗಮನಕ್ಕೆ ಬಂತು.

ಅತಿ ಹೆಚ್ಚು ಹಿಂಸೆಗೆ ಒಳಗಾಗಿ ಸಾವು ನೋವುಗಳನ್ನು ಕಂಡ ನಗರ ಅಹಮದಾಬಾದ್. ಹಳೇ ನಗರ—ಹೊಸ ನಗರವೆಂದು ಅಹಮದಾಬಾದನ್ನು ಶಬರಮತಿ ನದಿ ಇಬ್ಭಾಗ ಮಾಡಿದೆ. ಈ ಬಡಕಲು ನದಿಗೆ ಅಹಮದಾಬಾದ್ ನಗರ ವ್ಯಾಪ್ತಿಯಲ್ಲೇ ಹತ್ತಾರು ಸೇತುವೆಗಳಿವೆ. ಬನಿಯಾಗಳ ವ್ಯಾಪಾರಿ ಬುದ್ಧಿಗೆ ಹಿಡಿದ ಕನ್ನಡಿಯಂತಿರುವ ಅಹಮದಾಬಾದ್ ಅಪರಾಧಗಳೇ ಇಲ್ಲದ ನಗರ ಅನ್ನುವುದನ್ನು ಪೋಲೀಸರು ಅಂಕಿ ಅಂಶಗಳ ಮೂಲಕ ಸಾಬೀತುಗೊಳಿಸುತ್ತಾರೆ. ಹಿರಿಯ ಪೋಲೀಸ್ ಅಧಿಕಾರಿಯೊಬ್ಬರ ಮಾತಿನಲ್ಲಿ ಹೇಳುವುದಾದರೆ "ಈ ಜನ ಹಣಕ್ಕಾಗಿ ಬದುಕುತ್ತಾರೆ. ಅದಕ್ಕಾಗಿ ಹುಟ್ಟುತ್ತಾರೆ, ಸಾಯುತ್ತಾರೆ ಕೂಡ." ಗಲಭೆ ವೇಳೆಯಲ್ಲಿ ಹೆಚ್ಚು ಹಾನಿಗೆ ಒಳಗಾದ ಪ್ರದೇಶಗಳೆಂದರೆ ದಲಿತ ಕಾರ್ಮಿಕರು ಹಾಗೂ ನೌಕರರು ವಾಸಿಸುತ್ತಿದ್ದ ಸ್ಥಳಗಳು ಮಾತ್ರ. ಮೆರವಣಿಗೆ, ಪ್ರದರ್ಶನದ ವೇಳೆಯಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟ ಉಂಟಾದರೂ ಒಟ್ಟಾರೆ ದೃಷ್ಟಿಯಿಂದ ಹೆಚ್ಚು ಹಾನಿಗೀಡಾದವರು ದಲಿತರೇ. ದಲಿತ ಕೇರಿಗಳು ಸ್ಮಶಾನಗಳಂತೆ ಕಂಡು ಬರುತ್ತಿದ್ದವೆಂಬ ಅಭಿಪ್ರಾಯವನ್ನು "ಟೈಂಸ್ ಆಫ್ ಇಂಡಿಯಾ"ದ ವರದಿಗಾರನೊಬ್ಬ ನನಗೆ ತಿಳಿಸಿದ.

ಅಹಮದಾಬಾದಿನ ಸುಮಾರು ೨೦ಕ್ಕೂ ಹೆಚ್ಚು ಪ್ರದೇಶಗಳಲ್ಲಿ ದಲಿತರು ವಾಸಿಸುತ್ತಾರೆ. ಇವರೆಲ್ಲ ಹೆಚ್ಚಾಗಿ ಮಿಲ್ಲಿನ ಕಾರ್ಮಿಕರು. ಕೆಲವರು ಸರ್ಕಾರಿ ಹುದ್ದೆಗಳಲ್ಲಿರುವವರು. ಬೆರಳೆಣಿಕೆಯಷ್ಟು ಮಂದಿ ವೈದ್ಯರು — ವಕೀಲರೂ ಇದ್ದಾರೆ. ಆರ್ಥಿಕವಾಗಿ ಸ್ವಲ್ಪ ಬಲವಾಗಿರುವವರೆಲ್ಲಾ "ಹೌಸಿಂಗ್ ಸೊಸೈಟಿ" ಮೂಲಕ ಒಳ್ಳೆ ಮನೆಗಳನ್ನು ಮಾಡಿಕೊಂಡಿದ್ದಾರೆ. ನಮ್ಮಲ್ಲಿನ ಕೇರಿಗಳು ಅಲ್ಲಿ "ಸೊಸೈಟಿ" ಹೆಸರಿನಲ್ಲಿ ಇರುತ್ತವೆ. ಒಂದೊಂದು ಸೊಸೈಟಿಯಲ್ಲಿ ಹತ್ತರಿಂದ — ಐವತ್ತು ಮನೆಗಳು: ಆ ಸೊಸೈಟಿಗೆ ಸುತ್ತ ಕೋಟೆ ರೀತಿಯಲ್ಲಿ ಗೋಡೆಯನ್ನು ನಿರ್ಮಿಸಿರುತ್ತಾರೆ. ಸಾಮಾನ್ಯವಾಗಿ ಹೊರಗಿನವರು ಒಳಗೆ ಹೋಗುವುದು ಕಷ್ಟ. ಗಲಭೆ ಸಮಯದಲ್ಲಿ ಪೋಲೀಸರು ಹಾಗೂ ಸವರ್ಣೀಯರು ಇಂಥ ಪ್ರದೇಶಗಳ ಮೇಲೆ ತೀವ್ರವಾದ ದಾಳಿ ನಡೆಸಿದ್ದಾರೆ. ಅಶ್ರುವಾಯು ಸೆಲ್‌ಗಳು ಪ್ರತಿ ದಿನ ಮನೆಯೊಳಗೆ ಸಿಕ್ಕುತ್ತಿದ್ದವೆಂಬ ಮಾತನ್ನು ನಾನು ಕೇಳಿದೆ. ನಾಲ್ಕಾರು ಮನೆಗಳಲ್ಲಿ ಗುಂಡಿನ ಗುರುತು ಬಿದ್ದಿರುವುದನ್ನೂ ಕಂಡೆ.

ಸರಸಪುರ, ರಾಜಪುರ, ಬೆಹರಾಂಪುರ, ಗೀತಾ ಮಂದಿರ, ದಾಣಿ ಲಿಮ್ಡಾ, ವಾಡಜ, ಮೇಘಾಣಿ ನಗರ, ಸಯುಜಪುರ ಭೊಕಾ, ಅಂಬಾವಾಡಿ, ಚಮನಪುರ, ಪ್ರೀತಂಪುರ, ಗಿರಿಧರ ನಗರ, ದರಿಯಾಪುರ, ಜಮಾಲ ಪುರ, ಷಹಾಪುರ, ಬಖಿಯಾವ, ಬಾಪುನಗರ — ವ್ಯಾಪಕ ಹಿಂಸೆ ಹಾಗೂ ದಾಳಿಗೆ ತುತ್ತಾದ ದಲಿತ ಕೇರಿಗಳು ಇವು. ಜನವರಿ ಐದರಂದು ಆರಂಭವಾದ ಹಿಂಸಾಚಾರ ಜಾತಿ ಜ್ವಾಲೆಯಿಂದ ಮತ್ತಷ್ಟು ವ್ಯಾಪಕವಾಗಿ ಹಬ್ಬಿ ದಲಿತರು ವಾಸಿಸುವ ಪ್ರದೇಶಗಳ ಮೇಲೆ ನಿತ್ಯ ಹಲ್ಲೆ ಆರಂಭವಾಯಿತು. ಪ್ರತಿ ದಿನ—ಪ್ರತಿ ಕ್ಷಣ ಹಿಂಸೆ — ಕೊಲೆ — ಬೆಂಕಿ — ಮಾನಭಂಗಗಳು ನಡೆದವು. ಈ ಎಲ್ಲವನ್ನು ನಿರೀಕ್ಷಿಸಿದ್ದ ದಲಿತ ಪ್ಯಾಂಥರ್ಸ್ ಅಷ್ಟೇ ಪ್ರಬಲವಾದ ಪ್ರತಿ ಹಿಂಸೆಯನ್ನು ಆರಂಭಿಸಿದರು. ಪ್ರಾರಂಭದಲ್ಲಿ ಪೋಲೀಸರ ದಬ್ಬಾಳಿಕೆ ದಲಿತರ ಮೇಲೆ ಹೆಚ್ಚಾಗಿತ್ತಾದರೂ ಕ್ರಮೇಣ ಅದು ಕಡಿಮೆಯಾಯಿತು. ಇದಕ್ಕೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಮಕ್ವಾನ ಅವರು ಹರಿಜನರಾಗಿದ್ದೇ ಕಾರಣ ಎಂಬ ವದಂತಿ ಹಬ್ಬಿತು. ಪ್ಯಾಂಥರುಗಳು ತಮ್ಮ ಹೋರಾಟವನ್ನು ತೀವ್ರಗೊಳಿಸಿದಾಗ ಸವರ್ಣೀಯರು ದಂಗಾದರು. ಪೋಲೀಸರ ಲಾಠಿ—ಗುಂಡುಗಳು ದಲಿತರ ಎದುರು ನಡೆಯದಾದವು. ಸವರ್ಣೀಯರ ಆಯುಧಗಳು, ಕೆಲವು ದಲಿತರ ಜೀವಗಳನ್ನು ಬಲಿ ತೆಗೆದುಕೊಂಡವಾದರೂ, ದಲಿತರು ಅಷ್ಟೇ ಪ್ರಮಾಣದ ಪ್ರತಿ ಹಿಂಸೆ ಮೂಲಕ ಅವರಿಗೆ ಚುರುಕು ಮುಟ್ಟಿಸಿದರು.

ಇಡೀ ಗಲಭೆ-ಹಿಂಸಾಚಾರದಲ್ಲಿ ಆದ ಒಟ್ಟಾರೆ ಪ್ರಾಣ ಹಾನಿ ಹಾಗೂ ಆಸ್ತಿ-ಪಾಸ್ತಿ ಹಾನಿ ವಿವರಗಳು ನನಗೆ ಸಿಗಲಿಲ್ಲ. ಅಹಮದಾಬಾದಿನ ಪೊಲೀಸು ಕಮೀಷನರ್ ಮನಮೋಹನ್‌ಸಿಂಗ್ ಅಂಶಗಳು ನಿಖರವಾಗಿಲ್ಲದ ಕಾರಣ ಕೊಡಲು ನಿರಾಕರಿಸಿದರು. ಆದರೆ ದಲಿತ ಪ್ಯಾಂಥರ್ಸ್ ಮುಖಂಡ ರಮೇಶ್. ಚಂದ್ರ ಪರಮಾರ್ ಇತರರು ತಮ್ಮ ಬಂಧುಗಳಿಗೆ ಆದ ಹಿಂಸೆ ಬಗೆಗೆ ವಿವರ ಸಂಗ್ರಹಿಸಿದ್ದರು. ದಲಿತರ ಅವರ ಅಂಕಿ ಅಂಶಗಳ ಪ್ರಕಾರ ಅಹಮದಾಬಾದ್ ಹಾಗೂ ಇತರ ಕಡೆ ಕೊಲೆಗೀಡಾದ ವಿವರ ಈ ರೀತಿ ಇದೆ.

ಸವರ್ಣೀಯರ ಹಲ್ಲೆಯಿಂದ ಕೊಲೆಗೀಡಾದವರು

ಕ್ರಮಸಂಖ್ಯೆ	ಹೆಸರು	ದಿನಾಂಕ	ಪ್ರದೇಶ
೧	ಸೋಂ ಚಂದ್‌ಭಾಯ್ ಮಗನ್ ಭಾಯ್ (೪೫)	೫-೨-೮೧	ಸರಸ್‌ಪುರ (ಶಾರದಾ ಬಾಯಿ ಆಸ್ಪತ್ರೆಯಲ್ಲಿ ವಿದ್ಯಾರ್ಥಿಯೊಬ್ಬನ ಇರಿತಕ್ಕೆ ಬಲಿ)
೨	ವಲ್ಲೂರಾಂ ಮಹಾರಾಜ್ (೫೦)	೩-೩-೮೧	ಗೋಮ್ತಿಪುರ್ ಗೇಟ್ (ಈತ ಸತ್ತಾಗ ದಲಿತರು ಹಿಂದೂವನ್ನು ಕೊಂದರು ಅಂತ ಪತ್ರಿಕೆಗಳು ಬರೆದವು ವಿಪರೀತ ಗಲಾಟೆ ಆಯಿತು).
೩	ಕರಸ್‌ಸನ್‌ಭಾಯ್ ಮುಖದಂ ಚಾಕುವಿ (೫೬)	೨೦-೨-೮೧	ರಾಜ್‌ಪುರ್ (ರೇಜರ್ ಹೊಡೆತಕ್ಕೆ ಬಲಿಯಾಗಿ ಸತ್ತ)
೪	ಶಂಕರಬಾಯಿ ನೆಲ್ವಾ (೨೨)	೨೨-೨ ೮೧	ಸರಸಪುರ (ಬಿ.ಜೆ.ಪಿ. ಕಾರ್ಯಕರ್ತನಾದ ಈತನನ್ನು ಅದೇ ಪಕ್ಷದ ಪಟೇಲ್ ಯುವಕರು ಇರಿದು ಕೊಂದರು)
೫	ನರಸಿಬಾಯ್. ಪಿ. ಪರಮಾರ್ (೨೫)	೧೦-೩-೮೧	ಷಹಾಪುರ್ (ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಈತನನ್ನು ಹಿಂದಿನಿಂದ ಇರಿದು ಕೊಲ್ಲಲಾಯಿತು)
೬	ವಸಂತ್‌ಭಾಯ್ ಭಾಯ್‌ಚಂದ್ ಭಾಯಿ ಪರಮಾರ(೩೦)	೧೦-೩-೮೧	ಪಾಲನ್ ಗ್ರಾಮದಲ್ಲಿ ಪಟೇಲರ ದಾಳಿಗೆ ಈಡಾಗಿ ಸತ್ತ.
೭	ಗೋಬರ್ ಭಾಯ್ ಕುಬೇರ್‌ಬಾಯ್ ಮಕ್ವಾನ (೨೫)	೪-೩-೮೧	ವಿರಂಗಾಂ ತಾಲ್ಲೂಕಿನ ತುಮವೆತೆ ಗ್ರಾಮದಲ್ಲಿ ಸವರ್ಣೀಯರ ಹಲ್ಲೆಗೆ ಬಲಿಯಾಗಿ ಸತ್ತ.

ಪೋಲೀಸ್ ಗೋಲೀಬಾರ್‌ನಿಂದ ಸತ್ತವರು

೧	ನರಸಿಂಹಭಾಯ್ ಮಫತ್ ಲಾಲ್ ಪೀಸರಿಯಾ (೨೬)	೫-೨-೮೧	ಆಸಾರ್ವ

೨	ಅಮೃತ್ ಬಾಯ್ ಕಾಳಿದಾಸ	೧-೨-೮೧	ರಾಜಪುರ್
೩	ಬೆಚರ್ ಬೈ ಭಗವಾನ್ ಬೈ ಪರಮಾರ (೨೦)	೨೨-೨-೮೧	ಗೀತಾ ಮಂದಿರ
೪	ಅಮೃತ್ ಭಾಯ್ ಉಕಾಬಾಯಿ ಪರಮಾರ (೧೯)	೨-೨-೮೧	ಸರಸ್‌ಪುರದಲ್ಲಿ ತನ್ನ ಮನೆ ಬಾಗಿಲಲ್ಲಿ ನಿಂತಿದ್ದ ಈತನತ್ತ ಪೋಲೀಸರು ಗುಂಡು ಹಾರಿಸಿ ಕೊಂದರು
೫	ಧಂಜಿ ಬಾಯಿ ನರ್ಸಿ ಬಾಯಿ ಪರಮಾರ್ (೨೫)	೨೨-೨ ೮೧	ನಿರ್ಮಲ್‌ಪುರ್ (ಸರಸ್ ಪುರದ ಒಂದು ಭಾಗ)

(ಇದು ಪೂರ್ಣ ಮಾಹಿತಿಯನ್ನೊಳಗೊಂಡಿಲ್ಲ)

ಸತ್ತವರಲ್ಲದೆ ಅಹಮದಾಬಾದ ನಗರ ಒಂದರಲ್ಲೇ ಪೋಲೀಸರ, ಸಮಾಜ ವಿರೋಧಿ ಶಕ್ತಿಗಳ ಹಾಗೂ ಸವರ್ಣೀಯರ ದಾಳಿಗೆ ತುತ್ತಾಗಿ ಗಾಯಗೊಂಡವರು ಚಿಕಿತ್ಸೆ ಇಲ್ಲದೆ ನರಳಿದವರ ಸಂಖ್ಯೆ ಅಪಾರ. ಕೆಲವು ಕಡೆ ಪೋಲೀಸರೇ ಮನೆಗಳಿಗೆ ಬೆಂಕಿ ಹಚ್ಚಿದ ಘಟನೆಗಳನ್ನು ಪ್ಯಾಂಥರ್ ಮಿತ್ರರು ನನಗೆ ತಿಳಿಸಿದರು. ಗಾಯಗೊಂಡ ಸಾವಿರಾರು ಮಂದಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರೆಯದ ಕಾರಣ ಪ್ಯಾಂಥರ್ ಗಳು ತಾವೇ ಅವರಿಗೆ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸಿ ಅವರನ್ನು ಸಾವಿನ ದವಡೆ ಯಿಂದ ತಪ್ಪಿಸಿದರು. ಪೋಲೀಸ್ ಠಾಣೆಗೆ ಎಳೆದೊಯ್ದು ಚಿತ್ರಹಿಂಸೆ ನೀಡಿದ ಪ್ರಕರಣ ಗಳೇ ನೂರಾರು ನಡೆದಿದ್ದು ಆ ಬಗ್ಗೆ ನಿಖರ ಮಾಹಿತಿಗಳು ಸಿಗಲಿಲ್ಲ. ಆಸಿಡ್, ರೇಜರ್, ಚಾಕು, ಚೂರಿ, ಸೈಕಲ್ ಚೈನ್‌ಗಳಿಂದ ಗಾಯಗೊಂಡ ಕೆಲವರು ಇನ್ನೂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸುಮಾರು ಐವತ್ತಕ್ಕೂ ಹೆಚ್ಚು ಮಂದಿ ಮಹಿಳೆಯರ ಮೇಲೆ ಹಲ್ಲೆ ನಡೆದಿದ್ದು ಕೆಲವರ ಮಾನಭಂಗ ಮಾಡಲಾಗಿದೆ.

ಬೆಂಕಿಗೆ ಆಹುತಿಯಾದ ದಲಿತರ ಮನೆ-ಗುಡಿಸಲುಗಳ ವಿವರ ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ಪ್ರದೇಶಗಳ ಹೆಸರು	ಒಟ್ಟು ಹಾನಿ	ಹಾನಿಗೊಳಗಾದ ಮನೆ, ಅಂಗಡಿ, ಗುಡಿಸಲುಗಳು
೧)	ಜೋಗೇಶ್ವರಿ ಸೊಸೈಟಿ ಅಸಾರ್ವ	೭೫,೦೦೦	೧೫ ಗುಡಿಸಲುಗಳನ್ನು ಸುಡಲಾಯಿತು.
೨)	ತಿರುಪತಿ ಸೊಸೈಟಿ ಶಬರಮತಿ	೨೮,೦೦೦	೧೨ ಮನೆಗಳನ್ನು ಭಾಗಶಃ ಸುಡಲಾಯಿತು.

೩) ಶಿವಾನಂದ ನಗರ ಅಮ್ರಾಹಿ ವಾಡಿ	೪೦,೦೦೦	೨೫ ಹೌಸಿಂಗ್ ಕಾಲನಿಗಳ ಕೊಠಡಿಗಳನ್ನು ಸುಡಲಾಯಿತು.
೪) ನಾಡಿಯಾ ಚಾಲ್	೩೦,೦೦೦	೧೬ ಮನೆಗಳನ್ನು ಭಾಗಶಃ ಸುಟ್ಟರು.
೫) ದತ್ರೋಜ ಗ್ರಾಮ	೧,೨೨,೦೦೦	೪೨ ಮನೆಗಳನ್ನು ಪೂರ್ಣ ಸುಟ್ಟು ಹಾಕಲಾಯಿತು.
೬) ಸಿದ್ಧಾರ್ಥ ಸೊಸೈಟಿ ಕಾಲನಿ	೧,೦೦,೦೦೦	ಇಡೀ ಸೊಸೈಟಿಯನ್ನು ಪೂರ್ಣ ಭಸ್ಮ ಮಾಡಲಾಯಿತು.
೭) ಉತ್ತರ ಸಂಡಾ ಖೇಡಾ ಜಿಲ್ಲೆ	೨,೫೦,೦೦೦	೨೫ ಮನೆಗಳನ್ನು ಪೂರ್ಣ ಭಸ್ಮ ಮಾಡಲಾಯಿತು.
೮) ಪಿಜ್ ಗ್ರಾಮ ನದಿಯಾಡ್	೩೦,೦೦೦	೨೦ ಮನೆ ಸುಟ್ಟರು.
೯) ಸೂರತ್	೬೫,೦೦೦	೬೦ ಗುಡಿಸಲು ಹಾಗೂ ಮೂರು ಅಂಗಡಿಗಳನ್ನು ಸುಡಲಾಯಿತು.
೧೦) ಮೆಹಸಾಣ (ಪಟ್ಟಣ)	೧,೧೯,೫೫೦	ಹರಿಜನ ಸಂಸತ್ ಸದಸ್ಯ ಹಿರೇಲಾಲ್ ಪರಮಾರ್ ಅವರ ಕಚೇರಿ ಹಾಗೂ ಕಾರ್ಖಾನೆಯನ್ನು ಸುಡಲಾಯಿತು.
೧೧) ನದಿಯಾಡ್ ಪಟ್ಟಣ	೪,೦೦೦	ನಾಲ್ಕು ಮನೆ ಸುಟ್ಟರು.
೧೨) ಬದರ್‌ಕಾ ಗ್ರಾಮ ಅಹಮದಾಬಾದ ಜಿಲ್ಲೆ	೪,೦೦೦	ಮೂರು ಮನೆ ಸುಟ್ಟರು.
೧೩) ವೀರಂಗಾಂ ಪಟ್ಟಣ	೩,೦೦೦	ಮೂರು ಅಂಗಡಿ ಸುಡಲಾಯಿತು.
೧೪) ರಾಣಿಪ್ ಗ್ರಾಮ ಸಬರಮತಿ	೩,೫೦೦	ಹದಿಮೂರು ಗುಡಿಸಲುಗಳನ್ನು ಭಸ್ಮ ಮಾಡಲಾಯಿತು.
೧೫) ಸುಖರಾಂ ನಗರ ರಖಿಯಾಲ	೩,೦೦೦	ಹರಿಜನ ಸಬ್ ಇನ್ಸ್‌ಪೆಕ್ಟರ್ ಒಬ್ಬರ ಮನೆಗೆ ಬೆಂಕಿ ಇಡಲಾಯಿತು.
೧೬) ಒಲಿಯಪ ಗ್ರಾಮ ಕಿತ್‌ಪುರ ತಾಲ್ಲೂಕು	೨೨,೦೦೦	ನಾಲ್ಕು ಮನೆಗಳನ್ನು ಸುಡಲಾಯಿತು.

೧೭) ನೀಜರ ಗ್ರಾಮ ಸೂರತ ಜಿಲ್ಲೆ	ನಿಖರ ಹಾನಿ ಗೊತ್ತಿಲ್ಲ	ಹೆಣ್ಣುಮಕ್ಕಳ ಹಾಸ್ಟೆಲ್ ಮೇಲೆ ಸವರ್ಣೀಯರ ಗುಂಪೊಂದು ಧಾಳಿ ಮಾಡಿ ಹಲ್ಲೆ ನಡೆಸಿತು. ಧಾಳಿ ಸಮಯದಲ್ಲಿ ಪೋಲೀಸು ಪೇದೆಯೊಬ್ಬ ಸತ್ತ.
೧೮) ಪ್ರೀತಂಪುರ ಸೊಸೈಟಿ ಗಿರಿಧರ ನಗರ	೪,೦೦೦	ಹರಿಜನರಿಗೆ ಸೇರಿದ ಎರಡು ದಿನಸಿ ಅಂಗಡಿಗಳನ್ನು ಪೋಲೀಸರೇ ಸುಟ್ಟುಹಾಕಿದರು.
೧೯) ತೋರಣಿಯು ಗ್ರಾಮ ತ್ರಾಂತೇಜ ತಾಲ್ಲೂಕು	೫,೦೦೦	ಎರಡು ಮನೆಗಳನ್ನು ಸುಡಲಾಯಿತು.

(ಒಟ್ಟು ಹಾನಿ ಹತ್ತು ಲಕ್ಷ ಮೀರಿದ್ದು, ಪೂರ್ಣ ಮಾಹಿತಿ ಇನ್ನೂ ದೊರೆತಿಲ್ಲ)

ಮೂರು ತಿಂಗಳಿಗೂ ಹೆಚ್ಚು ಕಾಲ ಸತತವಾಗಿ ನಡೆದ ಈ ಜಾತಿ ಹೋರಾಟ ಗುಜರಾತನ್ನು ಆಂತರಿಕ ಕ್ಷೋಭೆಗೆ ಈಡು ಮಾಡಿತ್ತು. ನೂರಾರು ಗ್ರಾಮಗಳಲ್ಲಿ ದಲಿತರಿಗೆ ಸಾಮಾಜಿಕ ಹಾಗೂ ಆರ್ಥಿಕ ಬಹಿಷ್ಕಾರ ಹಾಕಿದ್ದರಿಂದಾಗಿ ಅವರು ತುತ್ತು ಕೂಳಿಗಾಗಿ ಪರಿತಪಿಸಬೇಕಾಯಿತು. ಭೂ ಮಾಲೀಕರು ಕೂಲಿ ನಿರಾಕರಿಸಿದ್ದರಿಂದ ಇದ್ದ ಒಂದೇ ಒಂದು ಅನ್ನದ ಆಧಾರ ಅವರಿಂದ ದೂರವಾಗಿ ಮಕ್ಕಳು ಮರಿಯನ್ನದೆ ಉಪವಾಸವಿರಬೇಕಾಯಿತು. ಗೋಜಾರಿಯಾ, ಜೂಶಾಣ, ಮಾಂಗಣಜ್, ಇಂಜಾಪ್ ನಗರ, ಚಾಣಸ್ಮಾ, ವಾಡೂಲ್, ಕಥಲಾಲ್, ಬಲಿಯಾ, ಸೋಜಿತ್ರಾ, (ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಮಕ್ವಾನ ಅವರ ಹುಟ್ಟೂರು) ಜತಲ್‌ಪುರ್, ಜಾವಲ್ಲಾ ಹಾಗೂ ಇನ್ನಿತರ ಹಲವಾರು ಹಳ್ಳಿಗಳ ದಲಿತರೂ ಈಗಲೂ ಬಹಿಷ್ಕಾರಕ್ಕೊಳಗಾಗಿ ನರಳುತ್ತಿದ್ದಾರೆ. ಕೆಲವರು ಈಗಾಗಲೇ ಆ ಹಳ್ಳಿಗಳನ್ನು ತ್ಯಜಿಸಿ ವಲಸೆ ಹೋಗಿದ್ದಾರೆ.

೪

ಇಡೀ ದೇಶದ ಗಮನವನ್ನು ತನ್ನತ್ತ ಸೆಳೆದುಕೊಂಡ ಗುಜರಾತ್‌ನ ಜಾತಿ ಹೋರಾಟ ಹುಟ್ಟಿದ್ದು ಹಿಂದೂಗಳ ಕರಬುತನದಿಂದ. ಊಳಿಗಮಾನ್ಯ ವ್ಯವಸ್ಥೆಯ ಕಟ್ಟುಗಳು ದಲಿತರ ಜಾಗೃತಿಯಿಂದ ಸಡಿಲಗೊಳ್ಳಲು ಆರಂಭವಾದುದು ಆಳುವವರ –ಪ್ರಬಲರ ಹಾಗೂ ಪ್ರತಿಷ್ಠಿತರ ಒಡಲಲ್ಲಿ ಕಿಚ್ಚನ್ನು ಹಚ್ಚಿರುವುದು ಇದರಿಂದ ವ್ಯಕ್ತವಾಗುತ್ತದೆ. ಮೆಡಿಕೋಗಳ ಸಮಸ್ಯೆಯಾಗಿ ಮೊದಲು ಮೂಡಿ ಬಂದ ಈ ಹೋರಾಟ ಜಾತಿ ಹೋರಾಟವಾಗಿ ವ್ಯಾಪಕಗೊಳ್ಳಲು ಅಲ್ಲಿನ ಎಲ್ಲಾ ಪಕ್ಷಗಳ ರಾಜಕಾರಣಿಗಳ

ಹಾಗೂ ಪತ್ರಕರ್ತರು ತೀವ್ರ ಪ್ರಯತ್ನ ನಡೆಸಿದರು. ಒಂದು ಘಟ್ಟದಲ್ಲಿ ಆ ಪ್ರಯತ್ನ ಗೆಲುವನ್ನು ಸಾಧಿಸಿದಂತೆ ಕಂಡರೂ, ಒಟ್ಟಾರೆ ಅದು ತನ್ನ ದೌರ್ಬಲ್ಯವನ್ನು ಜಗಜ್ಜಾಹೀರು ಮಾಡಿ ಕಡೆಗೆ ಸೋಲನ್ನು ಒಪ್ಪಿಕೊಂಡಂತೆಯೇ ಆಯಿತು. ಮೀಸಲಾತಿಯನ್ನು ಶಾಸನ ಸಭೆ, ಸಂಸತ್‌ಗಳಲ್ಲಿ ಪ್ರಬಲವಾಗಿ ಸಮರ್ಥಿಸಿಕೊಂಡ ರಾಜಕಾರಣಿಗಳು ಪರೋಕ್ಷವಾಗಿ ಜಾತಿ ಹೋರಾಟದ ಬೆನ್ನೆಲುಬಾಗಿ ನಿಂತರು. ಪತ್ರಿಕೆಗಳಂತೂ ಹಿಂದೂ ಮನಸ್ಸಿನ ಎಲ್ಲಾ ಕ್ರೂರ ಆಲೋಚನೆಗಳಿಗೆ ರೂಪು ಕೊಟ್ಟು ದಲಿತರ ಮೇಲೆ "ಛೂ" ಬಿಟ್ಟವು.

ಪ್ರಾರಂಭದಿಂದಲೇ ವಿದ್ಯಾರ್ಥಿಗಳನ್ನು ಎತ್ತಿಕಟ್ಟಿದ ಖ್ಯಾತಿ ಬಿ. ಜೆ. ಮೆಡಿಕಲ್ ಕಾಲೇಜಿನ ಕೆಲವು ಸವರ್ಣೀಯ ಪ್ರೊಫೆಸರ್‌ಗಳಿಗೆ ಸೇರಿದರೆ, ನಂತರದ್ದು ಲೋಕದಳದ ಚಿಮನ್ ಭಾಯ್ ಪಟೇಲ್ ಮತ್ತು ಬಿ. ಜೆ. ಪಿ. ಯ ವಲ್ಲಭ ಭಾಯ್ ಪಟೇಲ್ ಅವರಿಗೆ ಸೇರುತ್ತದೆ. ಗುಜರಾತ್‌ನ ಇಡೀ ಎಣ್ಣೆ ಉದ್ಯಮವನ್ನು ತನ್ನ ಜೇಬಲ್ಲಿ ಇಟ್ಟುಕೊಂಡಿರುವ ಈ "ತೇಲಿಯಾ ರಾಜ" ವಲ್ಲಭಭಾಯ್ ಪಟೇಲ್ ವಿದ್ಯಾರ್ಥಿ ಚಳವಳಿಯನ್ನೂ ಜಾತಿ ಹೋರಾಟವನ್ನಾಗಿ ಪರಿವರ್ತಿಸಿ ಜನರನ್ನು ಎತ್ತಿ ಕಟ್ಟುವಲ್ಲಿ ಯಶಸ್ವಿಯಾದ. ಇವರೊಂದಿಗೆ ಸೋಲಂಕಿ ಮಂತ್ರಿಮಂಡಲದಲ್ಲಿರುವ ಕೆಲವು ಮಂತ್ರಿಗಳು ಹಾಗೂ ಕಾಂಗ್ರೆಸ್ ಶಾಸಕರು ಸೇರಿ ಹೋರಾಟವನ್ನು ತೀವ್ರಗೊಳಿಸಿದರು. ಹಣಕಾಸು ಸಚಿವ ಸನತ್ ಮೆಹ್ತ ಕೂಡ ಚಳವಳಿಯ ಹಿಂದೆ ತಮ್ಮ ಕೈವಾಡ ತೋರಿಸಿದರು. ಶಿಕ್ಷಣ ಖಾತೆ ರಾಜ್ಯ ಸಚಿವೆ ಕೋಕಿಲಾ ವ್ಯಾಸ್ ಅವರ ಗಂಡ ಜಾತಿ ಹೋರಾಟದಲ್ಲಿ ನೇರವಾಗಿ ಭಾಗಿಯಾಗಿದ್ದು ಇನ್ನೊಂದು ಪ್ರಮುಖ ಅಂಶ. ಇಷ್ಟೇ ಅಲ್ಲದೆ ರಾಜ್ಯದ ಗೃಹ ಸಚಿವ ಪ್ರಬೋಧ ರಾವಲ್ ಕೂಡ ಮೀಸಲಾತಿಯನ್ನು ಪರೋಕ್ಷವಾಗಿ ವಿರೋಧಿಸುತ್ತಿದ್ದುದು ಹೋರಾಟದ ಹಾದಿ ಹಿಡಿದಿದ್ದ ಸಮಾಜ ಘಾತುಕ ಶಕ್ತಿಗಳಿಗೆ ಮತ್ತೊಂದು ಪ್ರಬಲ ಶಕ್ತಿಯಾಯಿತು.

ತಮ್ಮ ಜಾತಿಯ ಜನರನ್ನು ಎತ್ತಿಕಟ್ಟಿ ದಲಿತರನ್ನು ಬಗ್ಗು ಬಡಿಯಲು ಈ ಎಲ್ಲಾ ರಾಜಕಾರಣಿಗಳು ತಮ್ಮ ಕೈಲಾದ ಸೇವೆ ಸಲ್ಲಿಸಿದರು. ಅರ್ಥ ಸಚಿವ ಸನತ್ ಮೆಹ್ತ ದಲಿತ ವಿರೋಧಿಗಳನ್ನು ಗುಪ್ತವಾಗಿ ಕಂಡು ಪ್ರಚೋದಿಸಿದ ಪ್ರಕರಣಗಳೂ ನಡೆದವು. ಈ ಬಗ್ಗೆ ಮುಖ್ಯಮಂತ್ರಿ ಮಾಧವ ಸಿಂಗ್ ಸೋಲಂಕಿ ಸೊಲ್ಲೆತ್ತಲಿಲ್ಲ. ಬಹಿರಂಗವಾಗಿ ದಲಿತ ಹಿತೈಷಿಗಳಾದ ಇವರೆಲ್ಲಾ ಒಳಗೊಳಗೆ ವಿಷಜ್ವಾಲೆಗೆ ಅಜ್ಯ ಸುರಿಯುವ ಕೆಲಸವನ್ನು ಚಾಚೂತಪ್ಪದೆ ನಿರ್ವಹಿಸಿ ದಲಿತ ಯಜ್ಞ ಮಾಡಿ ಪುನೀತರಾದರು. ಭಾರತೀಯ, ಜನತಾ ಪಕ್ಷದ ಅಭ್ಯರ್ಥಿಗಳನ್ನು ವಿಧಾನಸಭೆಗೆ ಆರಿಸಿ ಕಳುಹಿಸಿರುವ ರಾಜ್‌ಪುರ್ ಖಾಡಿಯಾ ಮತ್ತು ದಾರಿಯಾ ಪುರಗಳಲ್ಲಿ ಅತಿ ಹೆಚ್ಚು ಹಿಂಸೆ ಲೂಟಿ ಪ್ರಕರಣಗಳು ನಡೆದದ್ದು ಈ ಎಲ್ಲರ ಹಿಂದೆ ಆರೆಸ್ಸೆಸ್‌ನವರ ಕೈವಾಡ ಇರುವುದು ಸುಸ್ಪಷ್ಟ. ಆದರೂ ಉದ್ದಕ್ಕೂ ತಮ್ಮ ಕೈವಾಡವನ್ನು ಬಿ. ಜೆ. ಪಿ. ಮುಖಂಡರು ಅಲ್ಲಗಳೆಯುತ್ತಲೇ ಹೋದರು, ವಾಜಪೇಯಿ ಅವರು ಮೀಸಲಾತಿಯನ್ನು ಸಮರ್ಥಿಸಿಕೊಂಡು ಹೇಳಿಕೆ

ನೀಡಿದರು. ಇವರ ಇಬ್ಬಂದಿತನವನ್ನೂ ನಾಚಿಸುವಂತೆ ಹೇಯ ಕೃತ್ಯ ಇವರ ಅನುಯಾಯಿಗಳ ಕೈಗಳಿಂದ ನಡೆಯತೊಡಗಿತು. ತಮ್ಮೊಂದಿಗೆ ಕೆಲಸ ಮಾಡಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಟ್ಟಿದ್ದ ಶಂಕರ ಬಾಯಿ ತಿಲ್ವಾ (೨೨) ಎಂಬ ದಲಿತ ಯುವಕ ನನ್ನು ಫೆಬ್ರುವರಿ ೨೨ ರಂದು ಬಿ ಜೆ ಪಿ ಯ ಯುವಕರು ಮದುವೆಗೆಂದು ಕರೆ ದೊಯ್ದು ಚೂರಿಯಿಂದ ಇರಿದು ಕೊಂದರು. ಗಾಂಧಿಯನ್ನು ಕೊಂದ ಕೊಲೆಗಡುಕ ಮನಸ್ಸು ಇಂಥ ಕೆಲಸ ಮಾಡದೆ ಬೇರೇನು ತಾನೆ ಮಾಡಲು ಸಾಧ್ಯ?

ಜಾತಿ ಮತ್ತು ಅಧಿಕಾರದ ರಾಜಕಾರಣ ತನ್ನ ಕೆಟ್ಟ ಚಾಳಿಯಿಂದಾಗಿ ದಲಿತರ ಕ್ಷಣಕಾಲದ ನೆಮ್ಮದಿಯನ್ನು ಹಾಳು ಮಾಡಿತ್ತು. ಗುಜರಾತ್‌ನವರೇ ಆದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಹರಿಜನ ಮುಖಂಡ ಯೋಗೇಂದ್ರ ಮಕ್ವಾನ ಮತ್ತು ಮುಖ್ಯ ಮಂತ್ರಿ ಸೋಲಂಕಿ ಅವರ ನಡುವಿನ ತಿಕ್ಕಾಟ ಕೂಡ ಇಲ್ಲಿ ತಲೆ ಹಾಕಿತು. ಮಕ್ವಾನ ಅವರು ಗುಜರಾತ್ ವಿಧಾನ ಸಭೆಯಲ್ಲಿ ಶಾಸಕಿಯಾಗಿರುವ ತಮ್ಮ ಪತ್ನಿ ಶಾಂತಿ ಮಕ್ವಾನ ಅವರಿಗೆ ಸಚಿವ ಪದವಿ ಕೂಡಲು ಸೋಲಂಕಿ ನಿರಾಕರಿಸಿದ ಕಾರಣಕ್ಕಾಗಿ ಅವರ ವಿರುದ್ಧ ಶೀತಲ ಸಮರ ಸಾರಿದರು. "ಅನುಸೂಚಿತ ಜಾತಿ— ಜನ ಜಾತಿ ಪರಿಷತ್" ಎಂಬ ಹೊಸ ಸಂಘಟನೆಯೊಂದನ್ನು ಮಾಡಿಕೊಂಡು ತಮ್ಮ ಬಲ ಪ್ರದರ್ಶನಕ್ಕೆ ಇಳಿದರು. ಜಗಜೀವನರಾಂ ಅವರ ಸ್ಥಾನವನ್ನು ತಾನು ತುಂಬಿರುವುದಾಗಿ ಜಂಬ ಕೊಚ್ಚಿಕೊಳ್ಳುವ ಈ ಮನುಷ್ಯ ಈಗ ಕೂಡ ತಾನು ಇಂದಿರಾ ಗಾಂಧಿಯ ಬಲಗೈ ಅಂತ ತಿಳಿದುಕೊಂಡಿದ್ದಾರೆ. ತಂತ್ರ ನಿಪುಣೆ ಇಂದಿರಾ ದಲಿತರನ್ನು 'ತೃಪ್ತಿ' ಪಡಿಸಲು ಜಗಜೀವನರಾಂಗೆ ಕೊಟ್ಟ ಪ್ರಾಮುಖ್ಯತೆಯನ್ನು ದಲಿತನಿಗೂ ಕೊಟ್ಟು (?) ತಮ್ಮ ದಲಿತ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ.

ಈ ಇಬ್ಬರ ತಿಕ್ಕಾಟದ ನಡುವೆ ಉಳಿದವರು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ದಲಿತರ ಹಿಂದುಳಿದವರ ಹಿತಕಾಯುವ ನೆಪ ಒಡ್ಡಿ ಸೋಲಂಕಿ ದಲಿತರ ಕೃಪೆಗಾಗಿ ಹೆಣಗಾಡುತ್ತಿರುವುದು ರಾಜಕೀಯ ವಲಯಗಳಲ್ಲಿ ನಗೆಪಾಟಲಿಗೆ ಈಡಾಗಿದೆ. ಅಷ್ಟೇ ಮಟ್ಟಿಗೆ ಉಳಿದ ಮೇಲ್ಜಾತಿ ಶಾಸಕರನ್ನೂ ತಮ್ಮ ಹಿಡಿತದಲ್ಲೇ ಇಟ್ಟುಕೊಳ್ಳಲು ಪ್ರಯತ್ನಿಸಿ ಅಲ್ಲಿ–ಇಲ್ಲಿ ಎಲ್ಲಾ ಕಡೆ ಸಲ್ಲುವ ಕೆಲಸ ಮಾಡುತ್ತಾ ಇಬ್ಬಂದಿತನವನ್ನು ತೋರುತ್ತಿದ್ದಾರೆ. ಮೀಸಲು ವಿರೋಧಿ ಚಳವಳಿಗೆ– ಪ್ರತಿಯಾಗಿ ಚಳವಳಿ- ಪ್ರದರ್ಶನ ನಡೆಸುವಂತೆ ದಲಿತರನ್ನು ಎತ್ತಿಕಟ್ಟಿದ ಈ ಮನುಷ್ಯ ನಂತರ ಎಲ್ಲ ಘಟನೆಗಳಿಗೆ ಪರಿಹಾರ –ದಲಿತರಿಗೆ ರಕ್ಷಣೆ ಒದಗಿಸುವಲ್ಲಿ ಪೂರ್ಣ ವಿಫಲರಾದರು. ವಿರೋಧ ಪಕ್ಷಗಳ ಮೇಲೆ ಎಲ್ಲವನ್ನು ಹೊರಿಸಿದರು. "ಸ್ಥಿರತೆ ಇಲ್ಲದ ಸರ್ಕಾರ. ಜನ ವಿರೋಧಿ ಧೋರಣೆಗಳನ್ನೇ ತನ್ನ ಧ್ಯೇಯಗಳೆಂದು ನಂಬಿರುವ ಸರ್ಕಾರದಿಂದ ಬೇರೇನು ತಾನೆ ಮಾಡಲಾದೀತು?" ಎಂಬ ಪ್ಯಾಂಥರ್ ಯುವಕನೊಬ್ಬನ ಮಾತು ಇಲ್ಲಿ ಅತ್ಯಂತ ಸಮಂಜಸವಾದುದು.

ಇನ್ನು ಉಳಿದ ಪ್ರಗತಿಪರ ಶಕ್ತಿಗಳು ಮೊಸಳೆ ಕಣ್ಣೀರನ್ನು ಸುರಿಸಿದವೇ ವಿನಾ ಕ್ರಿಯೆಗೆ ಇಳಿಯಲಿಲ್ಲ. ಸಿ. ಪಿ. ಐ, ಸಿ. ಪಿ. ಎಂ. ಪಕ್ಷಗಳು ಪತ್ರಿಕಾ ಹೇಳಿಕೆ ನೀಡುವುದ

ರಲ್ಲೇ ತೃಪ್ತಿಪಟ್ಟುಕೊಂಡವು. ಒಂದು ಸಮಾಧಾನದ ಸಂಗತಿ ಎಂದರೆ, ಮೀಸಲಾತಿ ವಿರೋಧಿ ಚಳುವಳಿಗೆ ಇವು ಇಳಿಯಲಿಲ್ಲ ಎಂಬುದು. ಯಾಕೆಂದರೆ ಬೆಂಗಳೂರಿನ ಮಾರ್ಕ್ಸ್‌ವಾದಿಯೊಬ್ಬರು ಮೀಸಲಾತಿಯನ್ನು ಪುನರ್ ಪರಿಶೀಲಿಸಬೇಕೆಂದು ಅಳುಕುತ್ತ ಹೇಳಿದ್ದು ನನ್ನ ಕಿವಿಯಲ್ಲಿನ್ನೂ ಗುಂಯ್‌ಗುಡುತ್ತಿದೆ. ಒಡೆದು ಹೋಗಿರುವ ಕೆಲವು ಸಮಾಜವಾದಿಗಳು ಹಾಗೂ ಗುಜರಾತ್ ಐಡಿಯಲ್ ವೆಲ್‌ಫೇರ್ ಅಸೋಸಿಯೇಷನ್‌ನವರು ದಲಿತ ಪ್ಯಾಂಥರ್‌ಗಳೊಂದಿಗೆ ಸೇರಿ ಪ್ರತಿ ಚಳವಳಿಯನ್ನು ಸಮರ್ಥವಾಗಿ ಹೂಡಲು ಸಹಾಯ ಮಾಡಿದರು.

ಚಳವಳಿಯನ್ನು ತೀವ್ರಗೊಳಿಸಲು ಅತ್ಯಂತ ನಾಚಿಕೆಗೇಡಿನ ಕೆಲಸಕ್ಕೆ ಇಳಿದವರೆಂದರೆ ಗುಜರಾತ್‌ನ ಪತ್ರಕರ್ತರು. ಅಹಮದಾಬಾದ್‌ನಿಂದ ಪ್ರಕಟವಾಗುವ ಬಹುತೇಕ ಪತ್ರಿಕೆಗಳು ಹಿಂದೂಗಳನ್ನು ಪ್ರಚೋದಿಸಿ ಹಿಂಸೆಗೆ ತೊಡಗಿಸುವಲ್ಲಿ ಪೂರ್ಣ ಯಶಸ್ಸು ಕಂಡವು. ಅದರಲ್ಲಿ ಗುಜರಾತಿ ಪತ್ರಿಕೆಗಳ ಪಾತ್ರವಂತೂ ಈ ದಿಸೆಯಲ್ಲಿ ಯಾರನ್ನೂ ತಲೆತಗ್ಗಿಸುವಂತೆ ಮಾಡುತ್ತದೆ. ಸಣ್ಣದನ್ನು ದೊಡ್ಡದು ಮಾಡಿ, ಆಗದ್ದನ್ನು ಆಗಿರುವಂತೆ ಮಾಡಿ, ದಲಿತರ ಮೇಲೆ ಇಲ್ಲದ ಅಪಪ್ರಚಾರ ಮಾಡಿ ಈ ಪತ್ರಿಕೆಗಳು ತಮ್ಮ ಪತ್ರಿಕಾ ಧರ್ಮವನ್ನು ತೋರಿಸಿಕೊಂಡವು. ''ಗುಜರಾತ್ ಸಮಾಚಾರ್''ಗೆ ಈ ಪಟ್ಟಿಯಲ್ಲಿ ಪ್ರಥಮ ಸ್ಥಾನ. ಉಳಿದ ''ಸಂದೇಶ್'' ಮತ್ತು ''ಜನಸತ್ತಾ''ಗಳೂ ತಮ್ಮ ಪಾಲಿನ ಕರ್ತವ್ಯವನ್ನು ಸಲ್ಲಿಸಿ ಹಿಂದೂಗಳ ಕೃತಜ್ಞತೆಗೆ ಪಾತ್ರವಾದವು. ಇಂಗ್ಲೀಷ್ ಪತ್ರಿಕೆಗಳಲ್ಲಿ ''ಇಂಡಿಯನ್ ಎಕ್ಸ್‌ಪ್ರೆಸ್'' ಮತ್ತು ''ಟೈಂಸ್ ಆಫ್ ಇಂಡಿಯಾ'' ಕೂಡ ಸ್ವಲ್ಪಮಟ್ಟಿಗೆ ಹಿಂದೂಗಳ ಪರವಾಗಿಯೇ ಕೆಲಸ ಮಾಡಿದವು.

ಅಹಮದಾಬಾದ್‌ನ ಎಲ್ಲ ಪತ್ರಿಕೆಗಳಲ್ಲೂ ಚಳವಳಿ ಕಾಲದಲ್ಲಿ ಮುಖಪುಟದಲ್ಲಿ ತಪ್ಪದೆ ಒಂದು ಸುದ್ದಿ ಪ್ರಕಟವಾಗುತ್ತಿತ್ತು. ಅದು ಹರಿಜನರಿಂದ ಹಿಂದೂಗಳ ಮೇಲೆ ಹಲ್ಲೆ. ಹಿಂದೂ ಮಹಿಳೆಯರ ಮಾನಭಂಗ ಇತ್ಯಾದಿ. ಆದರೆ ಈ ಎಲ್ಲಾ ವರದಿಗಳೂ ಕಟ್ಟು ಕತೆಗಳಾಗಿರುತ್ತಿದ್ದವು. ಇದರಿಂದ ಹಿಂದೂಗಳ ಮನಸ್ಸನ್ನು ಕೆರಳಿಸಿ ಪತ್ರಿಕೆಗಳವರು ತಮ್ಮ ಹಿಂದೂತನವನ್ನು ಪ್ರದರ್ಶಿಸಿದರು. ''ಜೈನ್ ದೇವಾಲಯದ ಮೇಲೆ ಹರಿಜನರ ಹಲ್ಲೆ'' ಎಂಬ ದೊಡ್ಡ ತಲೆ ಬರಹದ ಸುದ್ದಿಯನ್ನು ಒಮ್ಮೆ ''ಗುಜರಾತ್ ಸಮಾಚಾರ್'' ಪ್ರಕಟಿಸಿತು. ಈ ಸುದ್ದಿಗೆ ಯಾವ ಆಧಾರವೂ ಇರಲಿಲ್ಲ. ಜೈನ ದೇವಾಲಯಕ್ಕೆ ಏನೂ ಆಗಿರಲಿಲ್ಲ. ದಲಿತರ ಕೆಲಸ ಕೂಡ ಅದಾಗಿರಲಿಲ್ಲ. ಆದರೆ ಈ ಸುದ್ದಿ ಪ್ರಕಟಿಸುವ ಮೂಲಕ ಪತ್ರಿಕೆ ಜೈನರನ್ನು ದಲಿತರ ಮೇಲೆ ಎತ್ತಿಕಟ್ಟಿ ತನ್ನ ಕೆಲಸ ಪೂರೈಸಿಕೊಂಡಿತು.

ಗುಜರಾತ್‌ನಲ್ಲಿ ಅತಿ ಹೆಚ್ಚು ಪ್ರಸಾರ ಹೊಂದಿರುವ ಈ ಪತ್ರಿಕೆ ಇನ್ನೊಂದು ದಿನ ''ಹರಿಜನರಿಂದ ಮುಸ್ಲಿಂ ಖೋಜಾ ಸೊಸೈಟಿ ಮೇಲೆ ದಾಳಿ'' ಎಂದು ಪ್ರಕಟಿಸಿತು. ಇದರಿಂದಾಗಿ ಮುಸ್ಲಿಮರು ಹರಿಜನರ ವಿರುದ್ಧ ತಿರುಗಿಬಿದ್ದರು. ಇದೂ ಕೂಡ ಸಂಪೂರ್ಣ ಸುಳ್ಳು ಸುದ್ದಿಯಾಗಿತ್ತು. ಇಂಥ ಅಪಪ್ರಚಾರ ಎಡಬಿಡದೆ ಸಾಗಿತು.

"ಸಂದೇಶ್" ಹಾಗೂ "ಜನಸತ್ತ"ಗಳೂ ಇಂಥದೇ ಕೆಲಸ ಮಾಡಿದವು. ಈ ಪತ್ರಿಕೆಗಳು ಮತ್ತೊಂದು ದಿನ ಹಿಂದೂ ಯುವತಿಯೊಬ್ಬಳ ಮೇಲೆ ಮದುವೆ ಸಮಾರಂಭವೊಂದರಲ್ಲಿ ಹರಿಜನ ಯುವಕರು ಸಾಮೂಹಿಕ ಅತ್ಯಾಚಾರ ನಡೆಸಿದರೆಂದು ವರದಿ ಮಾಡಿದವು. ಒಂದೆರಡು ದಿನಗಳ ನಂತರ "ಹತ್ತು ಮಂದಿ ಹಿಂದೂ ಮಹಿಳೆಯರು ಕಾಣೆಯಾಗಿದ್ದಾರೆ. ಹರಿಜನರು ಹೊತ್ತೊಯ್ದಿರಬಹುದೆಂದು ಶಂಕಿಸಲಾಗಿದೆ" ಮುಂತಾದ ವಿಕೃತ ವರದಿಗಳನ್ನು ಪ್ರಕಟಿಸಿ ಹಿಂದೂಗಳನ್ನು ಸತತವಾಗಿ ದಲಿತರ ವಿರುದ್ಧ ಎತ್ತಿಕಟ್ಟಿದವು.

ಮಾರ್ಚಿ ಮೂರರಂದು ಅಹಮದಾಬಾದಿನ ಗೋಮ್ತಿಪುರ್ ಗೇಟ್ ಬಳಿ ಇರಿತಕ್ಕೆ ಬಲಿಯಾಗಿ ಸತ್ತ ವಲ್ಲೂ ರಾಂ ಮಹಾರಾಜ್ ಎಂಬ ೫೦ ವರ್ಷದ ಹರಿಜನ ವ್ಯಕ್ತಿಯನ್ನು, ಹಿಂದೂ ಎಂದು ಕರೆದು ಅವನ ಸತ್ತ ದೇಹದ ಚಿತ್ರದೊಂದಿಗೆ "ಹರಿಜನರಿಂದ ಹಿಂದೂ ಒಬ್ಬನ ಕೊಲೆ" ಎಂದು ಮುಖ ಪುಟದಲ್ಲಿ ದೊಡ್ಡದಾಗಿ ಈ ಪತ್ರಿಕೆಗಳು ಪ್ರಕಟಿಸಿದವು. ಮಾರನೆ ದಿನ ಇಡೀ ಅಹಮದಾಬಾದ್ ಜಾತಿಯ ದಳ್ಳುರಿಯಲ್ಲಿ ಹತ್ತಿ ಉರಿಯಿತು. ಇಡೀ ಚಳವಳಿ ಉದ್ದಕ್ಕೂ ಇದೇ ರೀತಿಯ ಪಾತ್ರವನ್ನು ಗುಜರಾತ ಪತ್ರಿಕೆಗಳು ವಹಿಸಿದವು. ನನಗೆ ಆಶ್ಚರ್ಯ ಹುಟ್ಟಿಸಿದ ಮತ್ತೊಂದು ಸಂಗತಿ ಎಂದರೆ, ಕ್ಯಾಪಿಟೇಷನ್ ಶುಲ್ಕ ರದ್ಧತಿಗಾಗಿ ಒತ್ತಾಯಿಸಿ ಕರ್ನಾಟಕದ ಮೆಡಿಕೋಗಳು ನಡೆಸುತ್ತಿದ್ದ ಚಳವಳಿಗೂ, ಗುಜರಾತನ ಜಾತಿ ಹೋರಾಟಕ್ಕೂ ಸಂಬಂಧ ಕಲ್ಪಿಸಿ ಅಹಮದಾಬಾದಿನ ಇಂಡಿಯನ್ ಎಕ್ಸ್‌ಪ್ರೆಸ್ ಸುದ್ದಿ ಪ್ರಕಟಿಸಿದ್ದು, ಮಾರ್ಚಿ ೧೪ರ ಎಕ್ಸ್‌ಪ್ರೆಸ್‌ನಲ್ಲಿ ಮೀಸಲು ವಿರೋಧಿ ಚಳವಳಿ ನೆರೆ ರಾಜ್ಯಗಳಿಗೆ ಹಬ್ಬಿದ ಸುದ್ದಿಯನ್ನು ಬರೆಯುತ್ತ ಅದರಲ್ಲಿ, ಹುಬ್ಬಳ್ಳಿ ಮೆಡಿಕೋಗಳ ಮೇಲೆ ಪೋಲೀಸರು ಅಶ್ರುವಾಯು ಪ್ರಯೋಗಿಸಿದ ಸುದ್ದಿಯನ್ನೂ ಸೇರಿಸಲಾಗಿದೆ. ಬೇಕಂತಲೇ ಮಾಡಿರುವ ಈ ಕುಕೃತ್ಯ ಪ್ರಾಮಾಣಿಕ ಪತ್ರಕರ್ತರನ್ನು ನಾಚಿಸುವಂತೆ ಮಾಡಿದೆ. ವೃತ್ತಿಯಲ್ಲಿ ಪತ್ರಕರ್ತನಾದ ನನಗೆ ಇದರಿಂದ ಆಶ್ಚರ್ಯ ಹಾಗೂ ಆಘಾತವಾಯಿತು.

ವದಂತಿಗಳನ್ನು ಹಬ್ಬಿಸಿ ಆ ಮೂಲಕ ಗುಜರಾತ ಪತ್ರಿಕೆಗಳು ತಮ್ಮ ಬೇಳೆ ಬೇಯಿಸಿಕೊಂಡವು. ಸಣ್ಣ ಗಲಭೆಯನ್ನು ದೊಡ್ಡದು ಮಾಡಿ ಬರೆದು ಗಲಭೆಕೋರರಿಗೆ ಪ್ರಚೋದನೆ ನೀಡಿದವು. ದಲಿತರ ಸ್ಪಷ್ಟನೆಗಳನ್ನು ಪ್ರಕಟಿಸಲು ನಿರಾಕರಿಸಿದವು. ಈ ಕುರಿತು ನಾನು ಭೇಟಿ ಮಾಡಿದ ಹತ್ತಾರು ಮಂದಿ ಪತ್ರಕರ್ತರು ತಮ್ಮ ಕೃತ್ಯಗಳನ್ನು ತಮ್ಮದೇ ಆದ ರೀತಿಯಲ್ಲಿ ಸಮರ್ಥಿಸಿಕೊಂಡರು. "ಸಂದೇಶ" ಪತ್ರಿಕೆ ಸಂಪಾದಕ ಚಿಮನ ಬಾಯ್ ಪಟೇಲ ಮೀಸಲಾತಿ ವಿರೋಧಿ ಚಳವಳಿಗಾರರಿಗೆ ಸಲಹೆಗಾರರಾಗಿದ್ದರು ಅಂದ ಮೇಲೆ ಬೇರೇನು ತಾನೆ ಅವರಿಂದ ನಿರೀಕ್ಷಿಸಲು ಸಾಧ್ಯ ಆ ಮನುಷ್ಯನನ್ನು ನಾನು ಕಂಡು ಮಾತಾಡಿಸಿದಾಗ, "ಮೀಸಲಾತಿಯನ್ನು ಸರ್ಕಾರ ಕೂಡಲೇ ತೆಗೆದು ಹಾಕದಿದ್ದರೆ ಚಳವಳಿಯನ್ನು ತೀವ್ರಗೊಳಿಸಬೇಕು" ಎಂದು ನೇರವಾಗಿ ಹೇಳಿದರು. ಮೆಡಿಕೋಗಳನ್ನು ಪ್ರಧಾನಿ ಬಳಿ ಕರೆದೊಯ್ದ ಮನುಷ್ಯ ಈತನೇ ಅಂತ ನಂತರ ನನಗೆ ಗೊತ್ತಾಯಿತು.

ಪತ್ರಿಕೆಗಳ ಈ ಜನ ವಿರೋಧಿ ದಲಿತ ವಿರೋಧಿ ನೀತಿಯನ್ನು ಪ್ರತಿಭಟಿಸಿ ದಲಿತ ಪ್ಯಾಂಥರುಗಳು ಒಮ್ಮೆ "ಗುಜರಾತ ಸಮಾಚಾರ" ಕಛೇರಿ ಮೇಲೆ ಹಲ್ಲೆ ನಡೆಸಿದರು. ಪತ್ರಿಕಾ ಮಂಡಲಿಯೂ ಸೇರಿದಂತೆ ಹಲವಾರು ಸಂಘಸಂಸ್ಥೆಗಳಿಗೆ ಪತ್ರಿಕೆಗಳ ಹಗಲುಹಾದರ ಕುರಿತು ಪತ್ರಬರೆದು ಕ್ರಮಕ್ಕಾಗಿ ಒತ್ತಾಯಿಸಿದರು. ಅಖಿಲ ಭಾರತ ಸಂಪಾದಕರ ಕೂಟ ಈಗಾಗಲೇ ಈ ಬಗ್ಗೆ ಮೇಲ್ಮಟ್ಟದ ತನಿಖೆ ನಡೆಸಿ ಗುಜರಾತ ಪತ್ರಿಕೆಗಳ ಹಾದರತನವನ್ನೂ ಬಯಲುಮಾಡಿದೆ.

ರಾಜಕಾರಣಿಗಳ, ಹಿಂದೂ ಧರ್ಮದ ಗುತ್ತೇದಾರರ ಹಾಗೂ ಪತ್ರಿಕೆಗಳ ಹಾದರತನದಿಂದ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ದಲಿತರು ಪ್ರಬಲವಾಗಿಯೇ ಎದುರಿಸಿದರು. ದಲಿತ ಪ್ಯಾಂಥರುಗಳು ಜನ ಜಾಗೃತಿ ಮಾಡುವ ಮೂಲಕ ನೊಂದವರ ಸಹಾಯಕ್ಕೆ ತೆರಳಿದರು. ಗಲಭೆಯಲ್ಲಿ ಗಾಯಗೊಂಡವರಿಗೆ, ಮನೆ-ಮಠ ಕಳೆದುಕೊಂಡವರಿಗೆ ಅಹಮದಾಬಾದಿನಲ್ಲಿ ಮೂರು ಕಡೆ ಶಿಬಿರಗಳನ್ನು ಮಾಡಿ ಅವರಿಗೆ ಚಿಕಿತ್ಸೆ ಹಾಗೂ ರಕ್ಷಣೆ ಒದಗಿಸಿದ್ದರು. ಪ್ಯಾಂಥರ್ಸ್ ಮುಖಂಡ ರಮೇಶ ಚಂದ್ರ ಪರಮಾರ ಈ ಬಗ್ಗೆ ಮಾತನಾಡುತ್ತಾ ಅಂಬೇಡ್ಕರ ಹೇಳಿದ ಮಾತೊಂದನ್ನು ಪುನರುಚ್ಚರಿಸಿದರು. "ಎಲ್ಲಿಯವರೆಗೆ ಭಾರತದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳು ದಲಿತರಿಗೆ ದಕ್ಕುವುದಿಲ್ಲವೋ, ಅಲ್ಲಿಯವರೆಗೆ ಇಲ್ಲಿನ ರಾಜಕಾರಣಕ್ಕೆ, ಪ್ರಜಾ ಪ್ರಭುತ್ವಕ್ಕೆ, ಸ್ವಾತಂತ್ರ್ಯಕ್ಕೆ ಯಾವ ಅರ್ಥಕೂಡ ಬರುವುದಿಲ್ಲ". ಅವರು ಮತ್ತೂ ಹೇಳಿದರು; "ನಮ್ಮನ್ನು ನಾವು ರಕ್ಷಿಸಿಕೊಳ್ಳುತ್ತೇವೆ. ಆ ಶಕ್ತಿಯನ್ನು ನಾವು ಬೆಳೆಸಿಕೊಳ್ಳುತ್ತೇವೆ"

ಪ್ಯಾಂಥರ್ಸ್ ದಲಿತ ಜಾಗೃತಿಗಾಗಿ ದುಡಿಯುತ್ತಿದ್ದು, ದಲಿತರನ್ನು ಎಲ್ಲ ಸಂಕೋಲೆಗಳಿಂದ ಮುಕ್ತರನ್ನಾಗಿಸುವ ಶಕ್ತಿ ಹೊಂದಿರುವ ಬಗ್ಗೆ ಎರಡು ಮಾತಿಲ್ಲ. ಸಂಘಟನೆ ದೃಷ್ಟಿಯಿಂದ ಇನ್ನೂ ಬಹಳ ಕೆಲಸ ಅವರು ಮಾಡಬೇಕಾಗಿದೆ, ಮಹಾರಾಷ್ಟ್ರದಲ್ಲಿನಂತೆ ಬೇರೆ ಬೇರೆ ಬಣಗಳು ಇಲ್ಲಿ ಇಲ್ಲದಿರುವುದು ಆರೋಗ್ಯಕರ ಬೆಳವಣಿಗೆಯೇ ಆಗಿದೆ. ಮತಾಂತರ ಮಾಡುವ ಮೂಲಕ ಹಿಂದೂಗಳಿಗೆ ತೀವ್ರ ಪೆಟ್ಟನ್ನು ಕೊಡಬೇಕೆಂಬ ಆಸೆ ಇವರಿಗೂ ಇರುವುದನ್ನು ನಾನು ಗಮನಿಸಿದೆ. ಹೆಚ್ಚು ಅಪಾಯಕಾರಿಯಾದುದಕ್ಕಿಂತ ಕಡಿಮೆ ಅಪಾಯಕಾರಿಯಾದುದನ್ನು ಆಯ್ಕೆ ಮಾಡಿಕೊಳ್ಳುವುದೇ ಸೂಕ್ತ ಅಲ್ಲವೆ? ಅನ್ನುವ ಅಭಿಪ್ರಾಯ ಅವರದು. ಈ ಜಾತಿ ಹೋರಾಟದಿಂದ ಮತ್ತಷ್ಟು ಗಟ್ಟಿಯಾಗಿರುವ ಪ್ಯಾಂಥರ್ಸ್ ಸಂಘಟನೆ ತೀವ್ರ ವ್ಯಾಪಕ ಹಾಗೂ ಗಟ್ಟಿಯಾಗಿ ತನ್ನೆಲ್ಲಾ ದೌರ್ಬಲ್ಯಗಳನ್ನು ಬದಿಗಿಟ್ಟು ಈಗ ಸಾಗುತ್ತಿದೆ. ಹೋರಾಟದ ಬಿರುಸಿನಲ್ಲಿ ದಲಿತರಲ್ಲಿನ ಎಲ್ಲ ಒಳಪಂಗಡ-ಜಾತಿಗಳು ಒಂದಾಗಿರುವುದು ರಾಜಕಾರಣಿಗಳ ನಿಜ ಬಣ್ಣ ಅರಿತು ಅವರಲ್ಲಿ ವಿಶ್ವಾಸ ಕಳೆದುಕೊಂಡಿರುವುದು, ಚಳವಳಿಯ ತೀವ್ರತೆಗೆ ಸಾಕ್ಷಿಯಾಗಿದೆ,

ಮೀಸಲಾತಿ, ಸಾಮಾಜಿಕ ಕಾರಣಕ್ಕಾಗಿ ಸಮಾನ ಅವಕಾಶಗಳಿಂದ ವಂಚಿತರಾದ ಜನ ಸಮುದಾಯಕ್ಕೆ ನೀಡಲಾದ ಸೌಲಭ್ಯ. ಹುಟ್ಟಿನ ಕಾರಣದಿಂದ ವ್ಯಕ್ತಿಯೊಬ್ಬನನ್ನು ಹೀನ-ನೀಚ-ಅದಕ್ಷ-ಚಾಂಡಾಲ-ಹೊಲೆಯ-ಮಾದಿಗ ಮುಂತಾಗಿ ಕರೆಯುವ ಇಂಡಿಯಾದ ಸಾಮಾಜಿಕ ವ್ಯವಸ್ಥೆಯಲ್ಲಿ "ನೀಚ ಕುಲ"ದಲ್ಲಿ ಹುಟ್ಟಿದ ಜನ ಸಮುದಾಯಕ್ಕೆ ಸೂಕ್ತ ನ್ಯಾಯ ಸಿಕ್ಕಬೇಕಾದರೆ ಕೆಲವು ವಿಶೇಷ ಸವಲತ್ತು-ಸೌಲಭ್ಯಗಳು ಬೇಕಾಗುತ್ತವೆ. ಈ ಹಿನ್ನೆಲೆಯಲ್ಲೇ ಮೀಸಲಾತಿಯನ್ನು ಸಂವಿಧಾನದಲ್ಲಿ ಸೇರಿದ್ದು. ಆದರೆ ಮೀಸಲಾತಿ ಸೌಲಭ್ಯಗಳು ಸ್ವಾತಂತ್ರ್ಯ ಬಂದ 34 ವರ್ಷಗಳ ನಂತರ ಕೂಡ ದುರ್ಬಲ ವರ್ಗದವರಿಗೆ ದಕ್ಕದೆ ಹೋಗಿದ್ದು ಆ ಬಗ್ಗೆ ಅಪಪ್ರಚಾರ ಮಾತ್ರ ಹೆಚ್ಚಾಗಿದೆ. ಶತಮಾನಗಳ ಕಾಲ ತುಳಿತಕ್ಕೊಳಗಾಗಿ ಅಜ್ಞಾನದಲ್ಲೇ ಉಳಿದು ಹೋದ ದಲಿತ ಜನಕೋಟಿಯ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಾಗಿ, ಜಾತಿಯ ಅನಿಷ್ಟತೆಯನ್ನು ತೊಡೆದು ಹಾಕಲು ಮೀಸಲಾತಿ ಸಹಾಯ ಮಾಡುತ್ತದೆ. ಮೀಸಲಾತಿಯನ್ನು ಸಂವಿಧಾನದಲ್ಲಿ ಸೇರಿಸುವ ಮುನ್ನ ಅಂಬೇಡ್ಕರ್ ಒಂದು ಮಾತನ್ನು ಹೇಳಿದ್ದರು. "ರಾಜಕಾರಣದಲ್ಲಿ ನಾವು ಒಬ್ಬನಿಗೆ ಒಂದು ಮತ, ಆ ಮತಕ್ಕೆ ಒಂದು ಮೌಲ್ಯ ಎನ್ನುವ ತತ್ವವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನಮ್ಮ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯನಿಗೆ ಒಂದು ಮೌಲ್ಯ ಎಂಬ ತತ್ವವನ್ನು ತಿರಸ್ಕರಿಸುತ್ತಲೇ ಬಂದಿದ್ದೇವೆ. ಇಂಥ ಅಸಾಂಗತ್ಯದ ಬದುಕನ್ನು ಎಷ್ಟು ಕಾಲ ನಾವು ಮುಂದುವರೆಸಿಕೊಂಡು ಹೋಗಬೇಕು?".

ಜಾತಿ ಕಾರಣದಿಂದ ಶತಮಾನಗಳ ಕಾಲ ವಂಚನೆಗೊಳಗಾದವರ ಏಳಿಗೆಗಾಗಿ ಸಂವಿಧಾನದ ೧೬ (೪) ನೇ ವಿಧಿ ಪ್ರಕಾರ ಹಿಂದುಳಿದ ಜಾತಿ, ವರ್ಗದ ಯಾವನೇ ನಾಗರಿಕನಿಗೆ ಹುದ್ದೆಗಳಲ್ಲಿ ಮೀಸಲಾತಿ ಒದಗಿಸಬೇಕು. ೩೩೦ ಹಾಗೂ ೩೩೪ನೇ ವಿಧಿಗಳಿಗೆ ಅನುಗುಣವಾಗಿ ಶಾಸನಸಭೆ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡಬೇಕು. ಆದರೆ ಸಂವಿಧಾನದ ೩೩೫ನೇ ವಿಧಿ ಪ್ರಕಾರ ಗುಣಮಟ್ಟ ಕಾಪಾಡುವ ದೃಷ್ಟಿಯಿಂದ ಆಡಳಿತ ದಕ್ಷತೆಯನ್ನು ಉಳಿಸಿಕೊಂಡು ಹೋಗುವ ಉದ್ದೇಶಕ್ಕೆ ಸಮರ್ಥವಾಗಿದ್ದರೇ ಮಾತ್ರ ಹುದ್ದೆಗಳಲ್ಲಿ ಮೀಸಲಾತಿ ನೀಡಬೇಕೆಂಬ ಷರತ್ತು ಕೂಡ ಇದೆ. ಇದು ಗುಣಮಟ್ಟ-ದಕ್ಷತೆ ಬಗ್ಗೆ ಮಾತಾಡುವ ಸವರ್ಣೀಯರಿಗೆ ಒಂದು ವರವಾಗಿ ಪರಿಣಮಿಸಿದೆ. ಇದರೊಂದಿಗೆ ಸೂಕ್ತ ಅಭ್ಯರ್ಥಿಗಳಿಲ್ಲದೆ ಉಳಿದು ಹೋಗುವ ಸ್ಥಾನಗಳು ಮುಂದಿನ ವರ್ಷಗಳ ಮೀಸಲಾತಿ ಪಟ್ಟಿಗೆ ಸೇರಿದಾಗ ಅದು ಒಟ್ಟು ಸ್ಥಾನಗಳ ಶೇಕಡ ೫೦ರಷ್ಟನ್ನು ಮೀರಬಾರದೆಂಬ ಸುಪ್ರೀಂ ಕೋರ್ಟಿನ ಆಜ್ಞೆ ಕೂಡ ಇದೆ. ಇದರಿಂದ ಈಗಾಗಲೇ ದಲಿತರಿಗೆ ತೊಂದರೆಯಾಗಲು ಆರಂಭಿಸಿದೆ. ಆದರೆ ಗುಜರಾತ್ ಸಮಸ್ಯೆ ಈ ಪ್ರಮಾಣವನ್ನು ಮುಟ್ಟಿಯೇ ಇರಲಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು.

೧೯೭೪ ಕ್ಕಿಂತ ಹಿಂದೆ ಗುಜರಾತ್ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವೈದ್ಯ ಶಿಕ್ಷಣದಲ್ಲಿ ಮೀಸಲಾತಿ ಇರಲಿಲ್ಲ. ೭೪ರಲ್ಲಿ ರಾಷ್ಟ್ರಪತಿ ಆಡಳಿತ ಇರುವಾಗ ಆಗಿನ ರಾಜ್ಯಪಾಲ ಕೆ. ಕೆ. ವಿಶ್ವನಾಥನ್ ಪ್ರಥಮ ಬಾರಿಗೆ ಮೀಸಲಾತಿಯನ್ನು ಜಾರಿಗೊಳಿಸಿದರು. ಕೂಡಲೇ ಪ್ರತಿಭಟನೆ ಆರಂಭವಾಯಿತು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಮೀಸಲಾತಿಯನ್ನು ಜಾರಿಗೊಳಿಸಲು ತಡೆ ಉಂಟಾಯಿತು. ನಂತರ ಮತ್ತೆ ೧೯೭೫ರಲ್ಲಿ ಅದಕ್ಕೆ ಜೀವ ನೀಡಲಾಯಿತು. ಆದರೆ ಅದು ಜಾರಿಗೆ ಬಂದದ್ದು ೧೯೭೯ರಲ್ಲಿ ಆ ವರೆಗೆ ಏನೂ ಆಗಿರಲಿಲ್ಲ. ಇದರ ಪ್ರಕಾರ ಮೀಸಲಾತಿ ಶೇಕಡ ೨೫ರಷ್ಟು. ಇದರಲ್ಲಿ ಶೇ.೭ ಪರಿಶಿಷ್ಟ ಜಾತಿಗಳವರಿಗೆ, ಶೇ.೧೪ ಪರಿಶಿಷ್ಟ ವರ್ಗ ಹಾಗೂ ಇತರೆ ಅಲೆಮಾರಿ ಜನಾಂಗಗಳಿಗೆ. ಉಳಿದ ಶೇ. ೫ ಭಕ್ಷಿ ಆಯೋಗ ಸೂಚಿಸಿದ ಎಂಭತ್ತೆರಡು ಹಿಂದುಳಿದ ಜಾತಿಗಳವರಿಗೆ. ಇದೂ ಕಳೆದ ಮೂರು ವರ್ಷಗಳಲ್ಲಿ ಸರಿಯಾಗಿ ಜಾರಿಯಾಗಲಿಲ್ಲ. ಸೂಕ್ತ ಅಭ್ಯರ್ಥಿಗಳಿಲ್ಲ ಎನ್ನುವ ಕಾರಣ ಒಡ್ಡಿ ಮುಂದೂಡಲಾಯಿತು. "ಅ" ಪಟ್ಟಿ ನೋಡಿ.

"ಅ" ಪಟ್ಟಿ

ವರ್ಷ : ತಿಂಗಳು	ಒಟ್ಟು ಸ್ಥಾನಗಳು	ಮೀಸಲು ಸ್ಥಾನಗಳು	ತುಂಬಲ್ಪಟ್ಟ ಸ್ಥಾನಗಳು	ಮೀಸಲಿಲ್ಲದ ಸ್ಥಾನಗಳು	ಹಾಗೇ ಉಳಿದ ಮೀಸಲಾತಿ ಸ್ಥಾನಗಳು
ಜನವರಿ ೧೯೭೯	೧೦೦	೨೫	೧೦	೭೫	೧೫
ಜುಲೈ ೧೯೭೯	೧೦೦	೨೫	೫	೭೫	೨೦
ಜನವರಿ ೧೯೮೦	೧೦೦	೨೫	೫	೬೦	೩೫
ಜುಲೈ ೧೯೮೦	೧೦೦	೨೫	೧೦	೫೫	೩೫
ಜನವರಿ ೧೯೮೧	೧೦೦	೨೫	೧೦	೫೫	೩೫

(ಶೇಕಡ ೨೫ ರ ಮೀಸಲು ನೀತಿ ಪ್ರಕಾರ)

ಈ ಪಟ್ಟಿ ಪ್ರಕಾರ ಪ್ರತಿ ಬಾರಿಯೂ ಮೀಸಲು ಸ್ಥಾನಗಳು ಉಳಿಯುತ್ತಲೇ ಹೋಗಿ ಅವು ಮೊದಲಿನ ಸಾಲಿನ ಮೀಸಲಾತಿಗೆ ಸಂಕಲನವಾಗುತ್ತಿದ್ದುದರಿಂದ ಸ್ವಾಭಾವಿಕವಾಗಿಯೇ ಮೀಸಲಾತಿ ಸ್ಥಾನಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗ ತೊಡಗಿದವು. ಇಷ್ಟು ಹೆಚ್ಚಾದರೂ ಸುಪ್ರೀಂ ಕೋರ್ಟ್ ಆಜ್ಞೆಯಂತೆ ಒಟ್ಟು ಸ್ಥಾನಗಳ ಶೇಕಡ ೫೦ ರಷ್ಟನ್ನು ಅದು ಮೀರಿರಲಿಲ್ಲ. ಜತೆಗೆ ತುಂಬಲಾಗದೇ ಉಳಿದ ಮೀಸಲು ಸ್ಥಾನಗಳನ್ನು ಜನರಲ್ ಪಟ್ಟಿಗೆ ಸೇರಿಸಿಕೊಳ್ಳುತ್ತಿದ್ದುದರಿಂದ ಹೆಚ್ಚು ಪ್ರಮಾಣದ ಸ್ಥಾನಗಳ ಉಪಯೋಗವನ್ನು ಮೇಲ್ಜಾತಿ ವಿದ್ಯಾರ್ಥಿಗಳು ಪಡೆದುಕೊಳ್ಳತೊಡಗಿದರು. ಆದರೆ ತುಂಬದೇ ಉಳಿದ ಮೀಸಲು ಸ್ಥಾನಗಳಿಂದಾಗಿ ಪ್ರತಿ ವರ್ಷ

ಮೀಸಲಾತಿ ಸಂಖ್ಯೆ ಏರತೊಡಗಿದಾಗ ಮೇಲ್ಜಾತಿ ವಿದ್ಯಾರ್ಥಿಗಳು ಸಹಿಸದಾದರು. ವೈದ್ಯ ವೃತ್ತಿ, ಗ್ರಾಮೀಣ ಪ್ರದೇಶದ ಪಟೇಲ, ನಗರ ಪ್ರದೇಶದ ಬ್ರಾಹ್ಮಣರು ಹಾಗೂ ಬನಿಯಾ ಜಾತಿಯವರ ಹಿಡಿತದಲ್ಲೇ ಆವರೆಗೆ ಇದ್ದದ್ದೂ ಇದಕ್ಕೆ ಒಂದು ಕಾರಣ ವಾಗಿತ್ತು. ಬೇರೆ ಹಿಂದುಳಿದ ಜಾತಿಯ ಜನ ವೈದ್ಯರಾಗುವುದು ಅವರಿಗೆ ಬೇಕಾಗಿರಲಿಲ್ಲ. ಹಾಗಾಗಿ ಮೀಸಲಾತಿ ಸಂಖ್ಯೆ ಬಗೆಗೆ ಅಪಪ್ರಚಾರ ಮಾಡತೊಡಗಿದರು.

ಕಳೆದ ಐದು ವರ್ಷಗಳಲ್ಲಿ ಗುಜರಾತ್‌ನ ಐದು ಮೆಡಿಕಲ್ ಕಾಲೇಜುಗಳಲ್ಲಿ ಮೀಸಲಿರಿಸಿದ್ದ ಸ್ಥಾನಗಳ ಸಂಖ್ಯೆ ೮೫೭. ಆದರೆ ಇವುಗಳಲ್ಲಿ ದಲಿತರಿಗೆ ದಕ್ಕಿರುವುದು ಕೇವಲ ೩೭, ಅಂದರೆ ಶೇಕಡ ೫ಕ್ಕಿಂತ ಕಡಿಮೆ. ಶೇಕಡ ೨೫ ರಷ್ಟನ್ನು ಸರಿಯಾಗಿ ಅನುಸರಿಸಿದ್ದಾದರೆ, ೧೧೦ ಸ್ಥಾನಗಳು ದಲಿತರಿಗೆ ದಕ್ಕಬೇಕಾಗಿತ್ತು. ಮೆಡಿಕಲ್ ಕಾಲೇಜುಗಳಲ್ಲಿನ ಶಿಕ್ಷಕರ ಸಂಖ್ಯೆ ಮತ್ತಷ್ಟು ಆಶ್ಚರ್ಯ ಹುಟ್ಟಿಸುತ್ತದೆ. ಒಟ್ಟು ಇರುವ ೧೦೬ ಪ್ರೊಫೆಸರ್ ಹುದ್ದೆಗಳಲ್ಲಿ ಒಂದು ಹರಿಜನರಿಗೆ ದಕ್ಕಿದೆ. ೧೨೧ ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗಳಲ್ಲಿ ಒಂದು ಹರಿಜನರಿಗೆ. ೨೯೩ ಮಂದಿ ಅಸಿಸ್ಟೆಂಟ್ ಪ್ರೊಫೆಸರುಗಳಲ್ಲಿ ಐವರು ಮಾತ್ರ ಹರಿಜನರಿದ್ದಾರೆ. ೨೩೭ ಮಂದಿ ಟ್ಯೂಟರುಗಳಲ್ಲಿ ೧೫ ಮಂದಿ ಹರಿಜನರು ಮತ್ತು ಇಬ್ಬರು ಗಿರಿಜನರಿದ್ದಾರೆ. ರಾಜ್ಯಾದ್ಯಂತ ಇರುವ ಐದು ವೈದ್ಯ ಕಾಲೇಜುಗಳ ಒಟ್ಟು ಶಿಕ್ಷಕರ ಸಂಖ್ಯೆ ೭೩೭ ಆದರೆ ಹರಿಜನ-ಗಿರಿಜನರಿರುವುದು ಕೇವಲ ೨೪. ಅಂದರೆ ಕೇವಲ ಶೇಕಡ ೩ ರಷ್ಟು ಮಾತ್ರ.

ನಿಜ ಪರಿಸ್ಥಿತಿ ಹೀಗಿದ್ದರೂ ಎಲ್ಲವೂ ಎಲ್ಲರ ಕಣ್ಣಲ್ಲೂ ವಿಕೃತವಾಗಿಯೇ ಕಾಣತೊಡಗಿದವು. ದಲಿತರು ಇಡೀ ದೇಶದ ಹುದ್ದೆಗಳನ್ನು ಕಬಳಿಸಿಬಿಡುತ್ತಾರೆಂದು ಗುಲ್ಲು ಹಬ್ಬಿತು. ವೈದ್ಯಕೀಯ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರದಲ್ಲಿಯೂ ಹರಿಜನರನ್ನು ಭೂತ ಕನ್ನಡಿ ಹಿಡಿದು ಹುಡುಕಬೇಕಾಗಿದೆ. ೧೯೭೯ ರಲ್ಲಿ ಹರಿಜನ - ಗಿರಿಜನರಿಗೆ ರಾಜ್ಯ ಸರ್ಕಾರ ಮೀಸಲಿಟ್ಟಿದ್ದ ಶೇಕಡ ೨೦ ರಷ್ಟು ಪ್ರಥಮ ದರ್ಜೆ ಹುದ್ದೆಗಳಲ್ಲಿ ದಕ್ಕಿದ್ದು ಕೇವಲ ೧.೪ ರಷ್ಟು ಮಾತ್ರ. ಎರಡನೇ ದರ್ಜೆಗೆ ನೇಮಕಗೊಂಡ ಹರಿಜನ-ಗಿರಿಜನರ ಸಂಖ್ಯೆ ಕೂಡ ಅತೀ ಕಡಿಮೆ. ಕೇವಲ ೩.೪ ರಷ್ಟು. ಆ ಹಿಂದೆಯಂತೂ ಇಷ್ಟು ಪ್ರಮಾಣದ ನೇಮಕಾತಿಯೂ ಆಗಿರಲಿಲ್ಲ. ಇಡೀ ಮೀಸಲಾತಿ ತತ್ವದ ಹಿಂದಿರುವ ಸಾಮಾಜಿಕ ಕಳಕಳಿಯೇ ಇಲ್ಲಿ ನಾಪತ್ತೆಯಾಗಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಈವರೆಗೆ ಸರಿಯಾಗಿ ಜಾರಿಗೊಳಿಸಲಾಗದ ಮೀಸಲಾತಿ ಪ್ರಮಾಣವನ್ನು ಚಾಚೂ ತಪ್ಪದೆ ಜಾರಿಗೊಳಿಸಬೇಕೆಂದು ಒತ್ತಾಯಿಸುವುದು- ಅದಕ್ಕಾಗಿ ಹೋರಾಡುವುದು ಪ್ರಜ್ಞಾವಂತರು ಮಾಡಬೇಕಾಗಿದ್ದ ಕೆಲಸ. ಆದರೆ ಎಲ್ಲ ಪ್ರಜ್ಞಾವಂತರ ಪ್ರಜ್ಞೆಯ ಹಿಂದೆ ಹಿಂದೂ ಧರ್ಮದ ಹೀನಬುದ್ಧಿ ಕೆಲಸ ಮಾಡುತ್ತಿತ್ತು. ಅದಕ್ಕಾಗೇ ಖ್ಯಾತ ಗಾಂಧೀ ವಾದಿಗಳೆಂದು ಹೇಳಿಕೊಳ್ಳುವವರೂ ಸೇರಿದಂತೆ ಗುಜರಾತ್‌ನ ಎಲ್ಲ ಬುದ್ಧಿಜೀವಿಗಳು, ಶಿಕ್ಷಕರು- ಪತ್ರಕರ್ತರು, ವಕೀಲರು, ವೈದ್ಯರು ಜನ ವಿರೋಧಿಯಾದ ಈ ಜಾತಿ ವಿಷಜ್ವಾಲೆಗೆ ಎಣ್ಣೆ ಸುರಿಯುವ ಕೆಲಸ ಮಾಡಿದರು.

ಮೀಸಲಾತಿಯನ್ನು ಪುಸ್ತಕ-ಪತ್ರಿಕೆ-ಭಾಷೆಗಳಲ್ಲೇ ಇರಿಸಿದ ಖ್ಯಾತಿ ಕೇವಲ ಗುಜರಾತ್‌ಗೆ ಮಾತ್ರ ಮೀಸಲಾದುದಲ್ಲ. ಇಡೀ ದೇಶದಲ್ಲಿ ಇದೇ ಪರಿಸ್ಥಿತಿ ಇದೆ. ಎಡ ಪಕ್ಷಗಳು ಆಳುತ್ತಿರುವ ಕೇರಳ- ಪಶ್ಚಿಮ ಬಂಗಾಳಗಳೂ ಸೇರಿದಂತೆ ಯಾವ ರಾಜ್ಯದಲ್ಲೂ ಮೀಸಲಾತಿ ಪ್ರಮಾಣದ ಅರ್ಧದಷ್ಟನ್ನೂ ಎಲ್ಲ ಹಂತಗಳಲ್ಲಿ ತುಂಬಲಾಗಿಲ್ಲ. ಕಳೆದ ಹತ್ತು ವರ್ಷಗಳ ಈ ಪಟ್ಟಿಯನ್ನು ನೋಡಿ. ನಾಲ್ಕನೇ ದರ್ಜೆಯ ಕೆಲಸ ಬಿಟ್ಟರೆ ಬೇರಾವ ಕೆಲಸಕ್ಕೂ ದಲಿತ ಜಾತಿಗಳು ಲಾಯಕ್ಕಲ್ಲ ಅಂತ ಭಾರತ ಸರ್ಕಾರ ತೀರ್ಮಾನಿಸಿರಬಹುದೆಂಬ ಅನುಮಾನ "ಆ" ಪಟ್ಟಿ ನೋಡಿದ ಯಾರಿಗಾದರೂ ಬರಬಹುದು.

ಕಸ ಗುಡಿಸುವ ನಾಲ್ಕನೇ ದರ್ಜೆ ಕೆಲಸಕ್ಕೆ ಮೀಸಲಾತಿ ಪ್ರಮಾಣವನ್ನೂ ಮೀರಿ ಹುದ್ದೆಗಳನ್ನು ಸೃಷ್ಟಿಸಿರುವ ಸರ್ಕಾರ ಒಂದು ಮತ್ತು ಎರಡನೇ ದರ್ಜೆ ಹುದ್ದೆಗಳಲ್ಲಿ ಮೀಸಲಾತಿಯ ಕಾಲು ಭಾಗದಷ್ಟು ಪ್ರಮಾಣವನ್ನೂ ತುಂಬಿಲ್ಲ. ಮೀಸಲಾತಿ ರೂಪಿಸಿದ ನಂತರ ಮೂರನೇ ಬಾರಿಗೆ ೧೯೮೦ ರಲ್ಲಿ ಮತ್ತೆ ಹತ್ತು ವರ್ಷ ಅದನ್ನು ವಿಸ್ತರಿಸಿದ ಹಿನ್ನೆಲೆಯಲ್ಲಿ ನೋಡಿದಾಗ ಇದು ಕೇವಲ ಹರಿ-ಗಿರಿಜನರ ಮತಗಳಿಸುವ ತಂತ್ರ ಎನ್ನುವುದು ನೇರವಾಗಿಯೇ ಗೊತ್ತಾಗುತ್ತದೆ. ಕೇವಲ ಹತ್ತು ವರ್ಷಗಳಿಗಾಗಿ ಮಾತ್ರ ರೂಪಿಸಲಾದ ಮೀಸಲಾತಿಯ ಅವಧಿಯನ್ನು ಹೀಗೆ ವಿಸ್ತರಿಸುತ್ತಾ ಹೋಗುತ್ತಿರುವುದಕ್ಕೆ ಅದನ್ನು ಸರಿಯಾಗಿ ಜಾರಿಗೊಳಿಸದೇ ಇರುವುದು ಒಂದು ಕಾರಣವಾದರೂ ಕಾಂಗ್ರೆಸ್ ಸರ್ಕಾರಗಳ ಓಟಿನ ಬ್ಯಾಂಕ್‌ಗಳಾಗಿರುವ ದಲಿತರನ್ನು ಹದ್ದುಬಸ್ತಿನಲ್ಲಿಡಲು ಹೂಡಿರುವ ಸಂಚು ಕೂಡ ಇದರಲ್ಲಿ ಸೇರಿದೆ.

ಮೆರಿಟ್ ಮೇಲೆ ಮಾತ್ರ ಸ್ಥಾನಗಳನ್ನು ನೀಡಬೇಕು. ಹಾಗೆ ಅರ್ಹತೆ ಆಧಾರದ ಮೇಲೆ ಮಾತ್ರ ಹುದ್ದೆಗಳಲ್ಲಿ ಅವಕಾಶ ನೀಡಬೇಕು ಎನ್ನುವುದು ಮೀಸಲಾತಿಯನ್ನು ವಿರೋಧಿಸುವವರು ಹೇಳುತ್ತಿರುವ ಮಾತು. ಜೊತೆಗೆ ಆರ್ಥಿಕ ಹಿಂದುಳಿದಿರುವಿಕೆ ಆಧಾರದ ಮೇಲೆ ಮೀಸಲಾತಿ ನೀಡಬಹುದೆಂಬ ಅಸಂಗತ ವಾದವನ್ನು ಇವರು ಮಾಡುತ್ತಿದ್ದಾರೆ. ಮೆರಿಟ್– ಅರ್ಹತೆಗಳನ್ನು ಮಾತ್ರ ಅಪೇಕ್ಷಿಸುವ ಈ ಜನ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬಹುದೆಂಬ ಸಲಹೆಯನ್ನು ಯಾವ ತಾತ್ವಿಕ ಕಾರಣಕ್ಕಾಗಿ ಮಾಡುತ್ತಾರೆ ಅನ್ನುವುದೇ ಅರ್ಥವಾಗುವುದಿಲ್ಲ. ಅಲ್ಲದೆ, ಇವರು ಕೇಳುವ ಅರ್ಹತೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕೊಟ್ಟರೆ ಎಲ್ಲಿರುತ್ತದೆ? ಇದು ದಲಿತ ವಿರೋಧಿ ಧೋರಣೆ ಅಲ್ಲದೆ ಬೇರೇನೂ ಅಲ್ಲ.

ಮತ್ತೆ ಈ ಅರ್ಹತೆ, ಮೆರಿಟ್ ಇವುಗಳನ್ನು ಯಾರು ನಿರ್ಧರಿಸುತ್ತಾರೆ ಮತ್ತು ಯಾವುದರ ಆಧಾರದ ಮೇಲೆ ನಿರ್ಧರಿಸುತ್ತಾರೆ ಅನ್ನುವುದು ಮುಖ್ಯ. ಈಗಿನ ಹೊಲಸು ಶಿಕ್ಷಣ, ಅದನ್ನಾಧರಿಸಿ ಜ್ಞಾಪಕ ಶಕ್ತಿಯನ್ನು ಅಳೆಯುವ ಪರೀಕ್ಷೆಗಳು, ಇವುಗಳಲ್ಲಿ ತೆಗೆದ ಅಂಕಗಳನ್ನೇ ಈ ಜನ ಮೆರಿಟ್ ಅನ್ನೋದು. ಇದರಂತ ಮೂರ್ಖತನ ಬೇರೊಂದಿಲ್ಲ. ನಮ್ಮಲ್ಲಿ ಹೆಚ್ಚು ಅಂಕ ಪಡೆಯಬೇಕಾದರೆ ಬೇಕಿರುವುದು ಹಣವೇ ಹೊರತು ಪ್ರತಿಭೆಯಲ್ಲ. ಹಣಕೊಟ್ಟವರು ರ್‍ಯಾಂಕ್ ಪಡೆದ ಉದಾಹರಣೆಗಳು ನಮ್ಮ

"ಆ" ಪಟ್ಟಿ

ವರ್ಷ	ಒಂದನೇ ದರ್ಜೆ		ಎರಡನೇ ದರ್ಜೆ		ಮೂರನೇ ದರ್ಜೆ		ನಾಲ್ಕನೇ ದರ್ಜೆ	
	ಪ. ಜಾತಿ	ಪ. ವರ್ಗ	ಪ. ಜಾತಿ	ಪ. ವರ್ಗ	ಪ. ಜಾತಿ	ಪ. ವರ್ಗ	ಪ. ಜಾತಿ	ಪ. ವರ್ಗ
೧-೧-೭೦	೨.೩೬	೦.೪೦	೩.೮೪	೦.೩೭	೯.೨೭	೧.೪೭	೧೮.೦೯	೩.೫೯
೧-೧-೭೧	೨.೫೮	೦.೪೧	೪.೦೬	೦.೪೩	೯.೮೯	೧.೭೦	೧೮.೩೭	೩.೬೫
೧-೧-೭೨	೨.೯೯	೦.೫೦	೪.೧೩	೦.೪೪	೯.೭೭	೧.೭೨	೧೮.೬೧	೩.೮೨
೧-೧-೭೩	೩.೧೪	೦.೫೦	೪.೫೨	೦.೪೯	೧೦.೦೫	೧.೯೫	೧೮.೩೭	೩.೯೨
೧-೧-೭೪	೩.೨೫	೦.೫೭	೪.೫೯	೦.೪೯	೧೦.೩೩	೨.೧೩	೧೮.೫೩	೩.೮೪
೧-೧-೭೫	೩.೪೫	೦.೬೨	೪.೯೮	೦.೫೯	೧೦.೭೧	೨.೨೭	೧೮.೬೪	೩.೯೯
೧-೧-೭೬	೩.೪೬	೦.೬೮	೫.೪೧	೦.೭೪	೧೧.೩೧	೨.೫೧	೧೮.೭೫	೩.೯೩
೧-೧-೭೭	೪.೧೬	೦.೭೭	೬.೦೭	೦.೭೭	೧೧.೮೪	೨.೭೮	೧೯.೦೭	೪.೩೫
೧-೧-೭೮	೪.೫೦	೦.೮೫	೬.೪೪	೦.೮೮	೧೨.೨೨	೨.೮೬	೧೯.೧೩	೪.೬೬
೧-೧-೭೯	೪.೭೫	೦.೯೪	೭.೩೭	೧.೦೩	೧೨.೫೫	೩.೧೧	೧೯.೩೨	೫.೧೯

ಮುಂದಿವೆ. ಫೇಲ್ ಆದವರು ಪಾಸ್ ಆದ ಘಟನೆಗಳಿವೆ. ಹೀಗಿರುವಾಗ ಮೆರಿಟ್ ಬಗ್ಗೆ ಮಾತಾಡುವ ಜನಕ್ಕೆ ನಾಚಿಕೆ ಆಗಬೇಕು. ಬದುಕಿಗೆ ಬದ್ಧವಲ್ಲದ ಶಿಕ್ಷಣ ಕಲಿತು ಹೆಚ್ಚು ಅಂಕಗಳನ್ನು ಪಡೆಯಬೇಕೆನ್ನುವುದು ಆತ್ಮವಂಚನೆ ಮಾಡಿಕೊಂಡಂತೆಯೇ. ಇದೆಲ್ಲಾ ಯಾಕೆ ಈ ಜನಕ್ಕೆ ಅರ್ಥವಾಗುವುದಿಲ್ಲ?

ಸಾಮಾಜಿಕವಾಗಿ ಆರ್ಥಿಕವಾಗಿ ಮುಂದಿನ ಸಾಲಿನಲ್ಲಿರುವವರೊಂದಿಗೆ ದಲಿತರು ಸ್ಪರ್ಧಿಸಿ, ಅವರಿಗಿಂತ ಮುಂದೆ ಹೋಗಬೇಕೆನ್ನುವುದು ಮತ್ತೊಂದು ಅಚ್ಚರಿಯ ಸಂಗತಿ. ಇದು ಇತಿಹಾಸವನ್ನು ಅರಿಯದವರ ಅಜ್ಞಾನದ ಪರಮಾವಧಿ. ಉತ್ತಮ ಓಟಗಾರನೊಬ್ಬನ ಜತೆ ಹೆಳವನೊಬ್ಬನನ್ನು ನಿಲ್ಲಿಸಿ ಸ್ಪರ್ಧೆ ನಡೆಸುವುದು ಎಷ್ಟು ಸಮಂಜಸವಾಗುತ್ತದೋ ಅಷ್ಟೇ ಮಟ್ಟಿಗೆ ಈ ವಾದ ಕೂಡ. ಅಸ್ಪೃಶ್ಯರು ಆರ್ಥಿಕವಾಗಿ ಮುಂದುವರಿದರೂ ಸಾಮಾಜಿಕವಾಗಿ ಅವರು ಬೇರೆ ಜಾತಿಯವರೊಂದಿಗೆ ಸ್ಪರ್ಧಿಸಿ ಗೆಲ್ಲಲಾರರು. ಗೆಲ್ಲುವುದು ಬಹಳ ಕಷ್ಟ. ಜಗಜೀವನರಾಂ ಅವರು ವಾರಣಾಸಿಯಲ್ಲಿ ಸಂಪೂರ್ಣಾನಂದರ ಪ್ರತಿಮೆ ಅನಾವರಣ ಮಾಡಿದ ನಂತರ ಹಿಂದೂ ರಾಕ್ಷಸರು ಅದನ್ನು ಗಂಗಾಜಲದಿಂದ ತೊಳೆದು ಪವಿತ್ರಗೊಳಿಸಿದ್ದು ಗೊತ್ತಿಲ್ಲವೆ? ಈ ಎಲ್ಲಾ ವಾದಗಳು ದಲಿತರ ಅಭಿವೃದ್ಧಿಯನ್ನು ಬಯಸದ-ಸಹಿಸದ ಜನ, ಅವರನ್ನು ತುಳಿಯುವ ಹೂಡುವ ಸಂಚುಗಳೇ ಹೊರತು ಬೇರೇನೂ ಅಲ್ಲ.

ಮೀಸಲಾತಿ ಹಿಂದಿರುವ ಕುತಂತ್ರವನ್ನು. ಅದನ್ನು ವಿರೋಧಿಸಿ ಚಳವಳಿ ಮಾಡುತ್ತಿರುವವರ ಬಂಡವಾಳ ಅಳಿಯಲು ಇಷ್ಟು ಸಾಕಾಗಬಹುದು. ಗಾಂಧಿ ಹೆಸರಿನಲ್ಲಿ ಅವನ ಕೆಲವು ಪ್ರಗತಿಪರ ತತ್ವಗಳಿಗೂ ಮಸಿ ಬಳಿಯ ಹೊರಟ ಜನ, ದಲಿತ ವಿರೋಧಿ ದಿವಂಗತ ವಲ್ಲಭ ಬಾಯ್ ಪಟೇಲ್ ಅವರ ತತ್ವವನ್ನು ತಮ್ಮ ಬೆನ್ನಿಗಂಟಿಸಿಕೊಂಡು ದಲಿತರ ರಕ್ತದಲ್ಲಿ ಮಿಂದರು. "ಹಿಂದೂ ಧರ್ಮ, ಈ ಪ್ರಪಂಚವನ್ನು ಬದುಕಲು ಯೋಗ್ಯವಾಗಿಸಿ ಕೊಟ್ಟಿರುವ ಒಂದು ಸ್ವರ್ಗ" ಎಂಬ ಹಸೀ ಸುಳ್ಳನ್ನು ಹೇಳಿ ಇಡೀ ದಲಿತ ಸಮುದಾಯವನ್ನು ವಂಚಿಸ ಹೊರಟ ಗಾಂಧಿಯ ಮಾತನ್ನು ಉಳಿಸಲು ಹಿಂದೂ ಗುತ್ತೇದಾರರು ದಲಿತರ ಜೀವಗಳೊಂದಿಗೆ ಚೆಲ್ಲಾಟವಾಡಿದರು. ಇನ್ನೂ ಆಡುತ್ತಲೇ ಇದ್ದಾರೆ. ಸಧ್ಯದಲ್ಲೇ ಗಾಂಧಿಯ ಅಚ್ಚುಮೆಚ್ಚಿನ ಈ ಹಿಂದೂ ಧರ್ಮ ಅವರಿಗೆಲ್ಲಾ ಸ್ವರ್ಗವನ್ನೇ ತಂದು ಕೊಡಬಹುದು.

ದೇಶದ-ಮಾನವ ಜನಾಂಗ ಅಭಿವೃದ್ಧಿಗೆ ಅಡ್ಡಿಯಾಗಿರುವ ಜಾತಿ-ಮತ-ಧರ್ಮಗಳ ಕೆಟ್ಟ ರೀತಿ-ನೀತಿ-ಕಟ್ಟಲೆಗಳು ಸಡಿಲಗೊಳ್ಳಬೇಕಾದರೆ ಹಿಂದುಳಿದ ಜಾತಿಯವರಿಗೆ ಮೀಸಲಾತಿ ನೀಡಲೇ ಬೇಕಾಗುತ್ತದೆ. ಸಾಮಾಜಿಕ ಒಡನಾಟ ಜಾತಿಯ-ಧರ್ಮದ ಕಟ್ಟುಗಳನ್ನು ಸಡಿಲಗೊಳಿಸುವಲ್ಲಿ ಹೆಚ್ಚು ನೆರವಾಗುತ್ತದೆ. ಒಂದು ಜನಾಂಗ ತನ್ನ ಜಾತಿಯ ಹೆಸರು ಹೇಳಿಕೊಂಡು ಹೆಮ್ಮೆ ಪಡುತ್ತಿರುವಾಗ–ಅಟ್ಟಹಾಸದಿಂದ ಮೆರೆಯುತ್ತಿರುವಾಗ, ಉತ್ಪಾದನೆಯ ಇಡೀ ಶಕ್ತಿಯನ್ನು ತನ್ನಲ್ಲಡಗಿಸಿಕೊಂಡ ಒಂದು ಸಮುದಾಯ ತನ್ನ ಜಾತಿಯನ್ನು ಹೇಳಿಕೊಳ್ಳಲು ಹೆದರಬೇಕಾದ-ನಾಚಿಕೆ ಪಡಬೇಕಾದ ಹೇಯ ಪರಿಸರ

ನಮ್ಮನ್ನು ಸುತ್ತುವರೆದಿದೆ. ಅಮಾನವೀಯ ಕ್ಷಣಗಳು, ಪ್ರೀತಿಯನ್ನು ಧಿಕ್ಕರಿಸಿ ನಿಂತ ಸಂಬಂಧಗಳು ಹೆಜ್ಜೆ ಹೆಜ್ಜೆಗೂ ನಮ್ಮನ್ನು ತಿನ್ನುತ್ತಿವೆ. ಮೀಸಲಾತಿಯಿಂದ ದಕ್ಷತೆ ಇಲ್ಲದಂತಾಗುತ್ತದೆ. ಶೈಕ್ಷಣಿಕ ಮಟ್ಟ ಕುಸಿಯುತ್ತದೆ ಅನ್ನುವ ಹಿಂದೂ ಹೇಡಿಗಳು, ದಲಿತರ ಪ್ರಾಮಾಣಿಕ ಹಾಗೂ ನಿಸ್ವಾರ್ಥಪರ ಸೇವೆಯನ್ನು ಶತಮಾನಗಳ ಕಾಲ ಕಡೆಗಣಿಸಿದವರು, ಅವರ ಶ್ರಮವನ್ನು-ಶಕ್ತಿಯನ್ನು ಕಾಲು ಕಸಕ್ಕಿಂತ ಕಡೆಯಾಗಿ ಕಂಡ ನೀಚರು, ಅನ್ನುವುದನ್ನು ದಲಿತ ಜನಾಂಗ ಅರಿತುಕೊಳ್ಳಬೇಕಾಗಿದೆ.

ಮಾನವನನ್ನು ಮಾನವನಾಗಿ ಕಾಣುವ ಕನಿಷ್ಟ ಚಿಂತನೆಯನ್ನು ಅಳವಡಿಸಿಕೊಳ್ಳದ ಹಿಂದೂ ಸಮಾಜ ತನ್ನ ಒಡಲಲ್ಲಿ ಬರೀ ವಂಚನೆಯನ್ನು ತುಂಬಿಕೊಂಡಿದೆ. ಗೀತೆ-ಪುರಾಣ ಉಪನಿಷತ್ತುಗಳು ಮನುಷ್ಯ ಮನುಷ್ಯರ ನಡುವಿನ ಕಂದಕವನ್ನು ಮತ್ತಷ್ಟು ವಿಸ್ತಾರಗೊಳಿಸುತ್ತಿವೆ. ಅವರಲ್ಲಿ ದ್ವೇಷ-ಅಸೂಯೆಗಳನ್ನು ಹುಟ್ಟಿಹಾಕುತ್ತಿವೆ. ವರ್ಣಾಶ್ರಮ ಪದ್ಧತಿಯಂತ ಜನವಿರೋಧಿ ತತ್ವ ಜನರ ನಡುವೆ ಬೆಳೆಯಬೇಕಾಗಿದ್ದ ಸಮಾನತೆಯನ್ನು ಕಿತ್ತುಕೊಂಡಿದೆ. ಸಮ ಬಾಳ್ವೆಯ ಕನಸನ್ನು ಒಡೆದಿದೆ. ಬಲವಂತವಾಗಿ ಸಹಜೀವನ ನಡೆಸಬೇಕಾದ ವಾತಾವರಣವನ್ನು ಅದು ಸೃಷ್ಟಿಸಿದೆ. ಅಂಬೇಡ್ಕರ್ ಒಮ್ಮೆ ಹೇಳಿದ್ದರು: ''ಇಂದಿನ ಹಿಂದೂ ಧರ್ಮಕ್ಕೆ ದೇವರು-ನೀತಿ ಎರಡೂ ಇಲ್ಲ. ಇಂತಹ ಪರಿಸ್ಥಿತಿ ಕೇವಲ ಮಾನವನ ಬೌದ್ಧಿಕ ಅಧಃಪತನಕ್ಕೆ ಹಾದಿ ಮಾಡಿಕೊಡುತ್ತದೆ. ಹಿಂದೂ ಧರ್ಮ ಹಾಗೂ ಅದಕ್ಕೆ ಸಂಬಂಧಿಸಿದ ಶಾಸ್ತ್ರಗಳು ನ್ಯಾಯವನ್ನು ಶಾಶ್ವತವಾಗಿ ಸಮಾಧಿ ಮಾಡಿವೆ''.

ದಲಿತರ ಸಮಸ್ಯೆಗಳು ಅವರವೇ. ಬೇರೆ ಯಾರೂ ಅವರನ್ನು ದಾಸ್ಯದಿಂದ-ವಂಚನೆಯಿಂದ ಪಾರು ಮಾಡಲು ಮುಂದೆ ಬರಲಾರರು. ನಮ್ಮ ಬಿಡುಗಡೆಗಾಗಿ-ಸ್ವಾತಂತ್ರ್ಯ-ಸಮಾನತೆ-ಸ್ವಾಭಿಮಾನಕ್ಕಾಗಿ ಅಂತಿಮ ಹೋರಾಟ ಮಾಡಬೇಕಾದವರು ನಾವೇ. ದುರಂತವನ್ನು ಎದುರಿಟ್ಟುಕೊಂಡು ಸುಮ್ಮನೆ ಕೂರುವ-ಆನಂದಕ್ಕಾಗಿ ಹಂಬಲಿಸುವ ಕ್ಷಣಗಳು ನಮ್ಮಿಂದ ಈಗ ಗೂರಾಗುತ್ತಿವೆ. ಎಲ್ಲಾ ಅಮಾನವೀಯ ಶಕ್ತಿಗಳ ವಿರುದ್ಧ ಸಮರ ಸಾರಬೇಕಾದ ಕಾಲ ಹತ್ತಿರವಾಗುತ್ತಿದೆ.

ಗುಜರಾತ್ ದಲಿತರು ತಮ್ಮನ್ನು ಮೂರು 'ಪಿ' ಗಳಿಂದ ರಕ್ಷಿಸಬೇಕೆಂದು ಮೊರೆ ಇಟ್ಟಿರು. ಒಂದನೆ 'ಪಿ' ಪೊಲಿಟಿಕಲ್ ಪಾರ್ಟೀಸ್ ಅಂದರೆ ರಾಜಕೀಯ ಪಕ್ಷಗಳು. ಎರಡನೆ 'ಪಿ' ಪ್ರೆಸ್ ಅಂದರೆ ಪತ್ರಿಕೆ ಸುದ್ದಿಸಂಸ್ಥೆಗಳು ಮೂರನೆಯ 'ಪಿ' ಪೋಲೀಸ್ ಅಂದರೆ ಆರಕ್ಷಕರು. ಮೇಲ್ಕಂಡ ಮೂರು 'ಪಿ' ಗಳು ಒಟ್ಟಿಗೆ ಸೇರಿ ಗುಜರಾತ್ ದಲಿತರ ದಮನ ಮಾಡುತ್ತಿದ್ದು ದಲಿತರು ಅಸಹಾಯಕರಾಗಿದ್ದರು.

ಗೋವಿಂದರಾವ್ ದೇಶಪಾಂಡೆ

ನಾನು ಸುಮಾರು ಮೂರು ವಾರಗಳ ಕಾಲ ಗುಜರಾತಿನಲ್ಲಿದ್ದು ಅಲ್ಲಿ ಎದ್ದಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಒಂದು ಪರಿಹಾರ ನೀಡಲು ಯತ್ನಿಸಿದೆ. ನನ್ನ ಪ್ರಿಯ ಸ್ನೇಹಿತರೆ, ನಿಮಗೆ ಇಡೀ ಮೀಸಲಾತಿ ಸಮಸ್ಯೆಯನ್ನು, ಸಂವಿಧಾನದ ದೃಷ್ಟಿಕೋನದಿಂದ, ರಾಜಕೀಯ ಪಕ್ಷಗಳ ದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆಯ ದೃಷ್ಟಿಯಿಂದ ವಿವೇಚಿಸಲೆತ್ನಿಸುತ್ತೇನೆ. ಮೊತ್ತ ಮೊದಲಿಗೆ ವೈಯಕ್ತಿಕವಾಗಿ ನಾನು ಪೂರ್ಣವಾಗಿ ಮೀಸಲಾತಿಯ ಪರ ಇದ್ದೇನೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಆದರೆ ಮೀಸಲಾತಿ ಎನ್ನುವುದು ಈಗ ಇರುವ ಹಾಗೆ ಅಲ್ಲ. ಕೆಲವು ಮಾರ್ಪಾಡುಗಳೊಂದಿಗೆ; ನನ್ನ ಪ್ರಕಾರ ಮೊದಲನೆಯದಾಗಿ, ಈಗಿರುವ ಮೀಸಲಾತಿ ಸಾಕಾಗುವುದಿಲ್ಲ; ಎರಡನೆಯದಾಗಿ ಅದನ್ನು ಸರಿಯಾಗಿ ಜಾರಿಗೆ ತಂದಿಲ್ಲ; ಮೂರನೆಯದಾಗಿ ಈ ಮೀಸಲಾತಿ ಯೋಜನೆಯಲ್ಲಿಯೇ ಅವ್ಯವಸ್ಥೆ ದೋಷಗಳು, ಮತ್ತು ಕೊರತೆಗಳು ಇವೆ.

ಇದು ಮೀಸಲಾತಿ ಬಗ್ಗೆ ನನ್ನ ವೈಯಕ್ತಿಕ ನಿಲುವು. ಈ ಪ್ರಶ್ನೆಗಳನ್ನು ನಾನು ಗುಜರಾತಿನ ನನ್ನ ಸ್ನೇಹಿತರಿಗೆ ಹಾಕಿದರೆ ಅವರಿಗೆ ನನ್ನ ಮಾತು ಕೇಳಿ ಆಶ್ಚರ್ಯಗೊಂಡರು. ಏಕೆಂದರೆ ಸಾಮಾನ್ಯವಾಗಿ ಮೇಲ್ವರ್ಗಕ್ಕೆ ಸೇರಿದವರೆಲ್ಲಾ ಮೀಸಲಾತಿಯ ವಿರುದ್ಧ ಎಂಬ ಅಭಿಪ್ರಾಯ ಅವರಿಗಿತ್ತು. ಗುಜರಾತಿನಲ್ಲಿ ಮೇಲ್ವರ್ಗದವರೆಲ್ಲ ಮೀಸಲಾತಿಯ ಬಲಿಪಶುಗಳು ಎಂಬ ಅಭಿಪ್ರಾಯ ಬೆಳೆದಿದೆ. ಹಾಗಾಗಿ ಮೇಲ್ಜಾತಿಯಲ್ಲಿ ಜನಿಸಿದವರೆಲ್ಲ ಮೀಸಲಾತಿಯ ವಿರುದ್ಧ ಇರಬೇಕೆಂಬುದು ಅವರ ಅನಿಸಿಕೆ. ಕೆಲವರು ನನ್ನನ್ನು ಈ ಮೀಸಲಾತಿ ಯಾವಾಗ ಹೋಗುತ್ತದೆ? ಎಂದು ಕೇಳಿದಾಗ ನನಗೆ ನೋವಾಯಿತು. ಅದಕ್ಕೆ ನನ್ನ ಉತ್ತರ, ಮೀಸಲಾತಿ ಬೇಗ ಹೋಗುತ್ತದೆ. ಆದರೆ ಮೀಸಲಾತಿಯ ಉಳಿವಿಗೆ ಇರುವ ಕಾರಣಗಳು ಎಂದು ಸಮಾಜದಿಂದ ನಿಶ್ಶೇಷವಾಗಿ ಹೋಗುತ್ತವೋ ಅಂದು ಮಾತ್ರ ಅದು ಹೋಗಲು ಸಾಧ್ಯ, ಎಂದೆ.

ಉದ್ಘಾಟನಾ ಭಾಷಣ

ಮೀಸಲಾತಿಗೆ ಕಾರಣ ಸಮಾಜದಲ್ಲಿರುವ ಜಾತಿವ್ಯವಸ್ಥೆ. ಮೇಲ್ಜಾತಿ ಕೀಳ್ಜಾತಿ ಎಂಬ ಭೇದ ಕಳೆಯುವ ಹೊರತು ಮೀಸಲಾತಿ ಇದ್ದೇ ಇರುತ್ತದೆ. ಅದು ಅಲ್ಲಿರುವುದರಿಂದಲೇ ಅದನ್ನು ಸರಿಯಾಗಿ ಜಾರಿಗೆ ತರಬೇಕಾಗುತ್ತದೆ. ಅದರಲ್ಲೇನಾದರೂ ಅವ್ಯವಸ್ಥೆ ಇದ್ದರೆ ಅದನ್ನು ಪರಿಹರಿಸಬೇಕು. ಅವ್ಯವಸ್ಥೆ ಇದೆಯೋ ಎಂಬುದನ್ನು ಕುರಿತು ಚರ್ಚಿಸಿ ವ್ಯವಸ್ಥಿತಗೊಳಿಸಲು ನಿಯೋಗವೊಂದು ಕುಳಿತು ನಿರ್ಧರಿಸ ಬೇಕು.

ಗುಜರಾತಿನ ಮಾನ್ಯಮುಖ್ಯಮಂತ್ರಿಗಳು ೧೯೭೫ರಿಂದ ಸ್ನಾತಕೋತ್ತರ ತರಗತಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನಿಂದ ಇಬ್ಬರೇ ಇಬ್ಬರು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆಯೆಂದು ನನಗೆ ತಿಳಿಸಿದರು. ಅಲ್ಲಿರುವ ಮೀಸಲಾತಿ ಶೇಕಡಾ ೨೫. ಅದರಲ್ಲಿ ಶೇ ೭ ಹರಿಜನರಿಗೆ, ಶೇ ೧೦ ಪರಿಶಿಷ್ಟ ಬುಡಕಟ್ಟಿಗೆ, ಮತ್ತು ಶೇ ೮ ಬೇ ಬುಡಕಟ್ಟಿನವರಿಗೆ. ಶೇ. ೨೫ ಮೀಸಲಾತಿ ಇದ್ದರೂ ೧೯೭೫ರಿಂದ ಇಬ್ಬರು ವಿದ್ಯಾರ್ಥಿಗಳು ಮಾತ್ರ ಭರ್ತಿ ಮಾಡಲ್ಪಟ್ಟಿದ್ದರು. ಮೀಸಲಾತಿ ಯೋಜನೆ ಎಂಥದು ಎಂದು ಇಲ್ಲಿ ತಿಳಿಯುತ್ತದೆ. ಕಡೆಗೆ ಕೆಲವು ಬದಲಾವಣೆಗಳನ್ನು ಜಾರಿಗೆ ತರಲಾಯಿತು. ಅದರಲ್ಲಿ ಕೆಲವು ರೋಸ್ಟರ್ ವಿಧಾನ, ಕ್ಯಾರಿ ಫಾರ್ವರ್ಡ್ ವಿಧಾನ ಮತ್ತು ವರ್ಗಾವಣೆ. ನಾನು ಅಹಮದಾಬಾದಿನಲ್ಲಿನ ಅತ್ಯಂತ ದೊಡ್ಡ ಆಸ್ಪತ್ರೆಗೆ ಹೋಗಿದ್ದೆ. ಇದು ಇಡೀ ಏಷ್ಯಾದಲ್ಲೇ ಎರಡನೆಯ ದೊಡ್ಡ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾನು ಅಲ್ಲಿನ ಪರಿಶಿಷ್ಟ ಜಾತಿ ಡಾಕ್ಟರುಗಳ ಜೊತೆ ಮಾತನಾಡಿದೆ. ನನ್ನ ಭೇಟಿಯಿಂದ ಅವರು ಆಶ್ಚರ್ಯಚಕಿತರಾದರು. ಏಕೆಂದರೆ ಗುಜರಾತಿನ ಚಳುವಳಿ ಪ್ರಾರಂಭವಾಗಿ ಮೂರು ತಿಂಗಳು ಕಳೆದಿದ್ದರೂ ಯಾರೂ ಈ ಡಾಕ್ಟರುಗಳನ್ನು ಭೇಟಿ ಮಾಡಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ವಿಚಾರಿಸಿರಲಿಲ್ಲ. ಈ ಬದಲಾವಣೆಯಾದರೆ ನಿಮ್ಮ ಭವಿಷ್ಯದ ಮೇಲೇನಾದರೂ ಪರಿಣಾಮವಾಗುತ್ತದೆಯೋ? ಎಂದು. ಈ ಚಳವಳಿ ಅವರ ಮೇಲೆ ಪರಿಣಾಮ ಬೀರಿದೆಯೆ? ಪರಿಣಾಮ ಬೀರಿದ್ದರೆ ಎಷ್ಟು ಮತ್ತು ಯಾವ ಮಟ್ಟದಲ್ಲಿ? ಸುಮಾರು ಒಂದು ಗಂಟೆ ಮಾತನಾಡಬೇಕೆಂದು ಹೋದೆವು. ಆದರೆ ನಮ್ಮ ಮಾತುಕತೆ ಸುಮಾರು ಮೂರು ಗಂಟೆಗಳವರೆಗೆ ನಡೆಯಿತು. ಈ ಚರ್ಚೆಯ ಫಲವಾಗಿ ಹೊರಹೊಮ್ಮಿದ ಕೆಲವು ಸಂಗತಿಗಳು ನಮಗೆ ಶಾಕ್ ಕೊಡುವಂತಿದ್ದವು.

ಉದಾಹರಣೆಗೆ, ಒಬ್ಬ ಡಾಕ್ಟರ್ ಒಂದು ಸಂದರ್ಶನದ ಕಥೆಯನ್ನು ಹೇಳಿದರು. ಸ್ನಾತಕೋತ್ತರ ತರಗತಿಗೆ ಪ್ರವೇಶಕ್ಕಾಗಿ ನಡೆದ ಮೌಖಿಕ ಪರೀಕ್ಷೆಯ ಸಂದರ್ಭ. ಅವರ ಹೆಸರನ್ನೂ ಕರೆಯಲಾಯಿತು. ಆದರೆ ತಪ್ಪಾಗಿ. ಡಾ॥ ರಾಠೋಡ್ ಎಂದು. ಅವರು ಒಳಗೆ ಹೋದಾಗ ಅಲ್ಲಿದ್ದ ಸದಸ್ಯರಲ್ಲೊಬ್ಬರು ನೀವು ಮಿ. ರಾಠೋಡ್ ಏನು? ಎಂದು ಕೇಳಿದರು. ಅದಕ್ಕೆ ಅವರು ಅಲ್ಲ ಸಾರ್, ನಾನು ಮಿ. ಮಕ್ವಾನ ಎಂದರು. ಅದಕ್ಕೆ ಪರೀಕ್ಷಕ ನೀವು ರಾಠೋಡ್ ಆಗಿರಿ ಅಥವಾ ಮಕ್ವಾನ ಆಗಿರಿ, ಅವೆರಡಕ್ಕೂ ಏನೂ ವ್ಯತ್ಯಾಸ ಇಲ್ಲ. ಇದರರ್ಥ ನೀವು ಪರಿಶಿಷ್ಟ ಜಾತಿ/ ಬುಡಕಟ್ಟುಗಳಿಗೆ

ಸೇರಿದವರೆಂಬುದು. ನೀವು ಹೋಗಬಹುದು. ಮೌಖಿಕ ಪರೀಕ್ಷೆ ಈ ಮೂರು ಪ್ರಶ್ನೆಗಳಲ್ಲೇ ಮುಕ್ತಾಯವಾಯಿತು. ಡಾಕ್ಟರ್ ಎದ್ದು ಪ್ರತಿಭಟಿಸಲು ಪ್ರಯತ್ನಿಸಿದಾಗ 'ನೀವು ಏನೂ ಹೇಳಬೇಕಾಗಿಲ್ಲ, ಪರೀಕ್ಷೆ ಮುಗಿಯಿತು' ಎಂಬ ಉತ್ತರ ಬಂತು. ಇದರಿಂದ ನೀವು ಊಹಿಸಿಕೊಳ್ಳಬಹುದು, ಅಷ್ಟೊಂದು ವರ್ಷ ಕಷ್ಟಪಟ್ಟು ಓದಿ ಸ್ನಾತಕೋತ್ತರ ಪದವಿಗೆ ಪ್ರವೇಶ ದೊರಕಿಸಿ ಕೊಳ್ಳುವುದು ಎಷ್ಟು ಕಷ್ಟ ಎಂದು. ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಅಧ್ಯಯನದಲ್ಲಿ ತುಂಬಾ ಚುರುಕಾದಿಂದಿರಬೇಕು. ಅವರು ಒಂದು ದಿನಾನೂ ತರಗತಿಗೆ ಗೈರುಹಾಜರಾಗಕೂಡದು ಮತ್ತು ತಮ್ಮ ಅಧ್ಯಯನವನ್ನು ಬಿಟ್ಟು ಬೇರೆ ವಿಷಯಕ್ಕೆ ತಲೆ ಕೆಡಿಸಿಕೊಳ್ಳಲೂ ಕೂಡದು. ಈ ತರುಣ ಪರಿಶಿಷ್ಟ ಜಾತಿ ವೈದ್ಯಕೀಯ ವಿದ್ಯಾರ್ಥಿಗಳು ಪ್ರಸ್ತುತ ಸಾಮಾಜಿಕ ಸ್ಥಿತಿಯಲ್ಲಿ ತಾವು ಪಡೆಯುತ್ತಿರುವ ವಿದ್ಯಾರ್ಥಿ ವೇತನ ತಮ್ಮ ಜೀವನಕ್ಕೆ ಮಾತ್ರ ಸಾಕಾಗುತ್ತದೆ, ಅವರು ವಿದ್ಯಾರ್ಥಿ ವಸತಿಗೃಹಗಳಲ್ಲಿನ ಕೊಠಡಿಗಳಲ್ಲಿ ಅನುಕೂಲಕರವಾಗಿ ವಾಸಿಸುತ್ತಿರುವಾಗ ಅವರ ತಂದೆತಾಯಿಗಳು ಕೊಳಚೆಪ್ರದೇಶದಲ್ಲಿಯೋ ಹಳ್ಳಿಯ ಮುರುಕು ಗುಡಿಸಿಲಿನಲ್ಲಿಯೋ ವಾಸಿಸುತ್ತಿರುವುದನ್ನು ಹೇಗೆ ಮರೆತಾರು? ಅವರು ಭೋಜನ ಗೃಹಕ್ಕೆ ಹೋದ ತಕ್ಷಣ ಅವರ ತಂದೆಯೋ, ತಾಯಿಯೋ ತಂಗಿಯೋ ಇಂದು ಒಂದು ತುತ್ತು ತಿನ್ನುವುದಕ್ಕಿಲ್ಲದೆ ಸೊರಗುತ್ತಿದ್ದಾರೆ ಎಂಬ ಸತ್ಯ ಕಣ್ಣೆದುರು ಬರುವುದು. ನನ್ನ ತಾಯಿ ಇಂದು ತುತ್ತು ಅನ್ನದಿಂದ ವಂಚಿತಳಾಗಿದ್ದಾಳೆ... ಆದರೆ ನಾನು, ಪ್ರತಿಷ್ಠಿತ ವ್ಯಕ್ತಿ, ವೈದ್ಯಕೀಯ ಕಾಲೇಜಿಗೆ ಸೇರಿದ್ದೇನೆ, ವಿದ್ಯಾರ್ಥಿವೇತನ ದೊರಕುತ್ತಿದೆ. ಕಾಲೇಜುದಿನಗಳು ಆಪ್ಯಾಯಮಾನವಾಗಿ ಕಾಣುತ್ತವೆ. ನನ್ನ ಒಡಹುಟ್ಟಿದವರ ಆ ದಾರುಣ ಸ್ಥಿತಿಯನ್ನು ನೆನಸಿಕೊಂಡಾಗ ನಮ್ಮ ಬಾಯಿಗಿಳಿಯುವ ತುತ್ತು ಸಿಹಿಯಾಗಿರುವುದಿಲ್ಲ, ಕಹಿಯು ಮುದ್ದೆಯಾಗಿರುತ್ತದೆ. ಈ ಎಲ್ಲಾ ನೋವಿನ ಮಧ್ಯದಲ್ಲೂ ಅವರಿಗೆ ಸ್ವಲ್ಪ ಹಣ ಕಳಿಸಬೇಕೆಂದುಕೊಂಡರೆ ಸಾಧ್ಯವಾಗುವುದಿಲ್ಲ. ಹಾಗಾಗಿ ನಾವು ನಮ್ಮ ಅಧ್ಯಯನದಲ್ಲಿ ಕೇಂದ್ರೀಕೃತರಾಗುವುದಕ್ಕಾಗುವುದಿಲ್ಲ. ಆದ್ದರಿಂದ ನಾವು ಪ್ರಥಮ ಪ್ರಯತ್ನದಲ್ಲೇ ತೇರ್ಗಡೆಯಾಗಬೇಕೆಂದು ಹೇಳುವುದರಿಂದ ಪ್ರಯೋಜನವಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಮೇಲ್ಜಾತಿಯ ವಿದ್ಯಾರ್ಥಿಗಳು ಎಲ್ಲಾ ಸುಖ ಸೌಲತ್ತುಗಳ ಮಧ್ಯೆ ಬೆಳೆದಿರುತ್ತಾರೆ, ಅವರಿಗೆ ಶಿಕ್ಷಣ ಪರಿಸರ ಸೃಷ್ಟಿಯಾಗಿರುತ್ತದೆ. ನಮಗೆಲ್ಲಿ ಅಂಥ ಪರಿಸರ? ೧೯೭೭-೭೮ರಲ್ಲಿ ಶೇಕಡಾ ೬೦ ಪರಿಶಿಷ್ಟ ಬುಡಕಟ್ಟು ಶಾಲೆಗಳಿಗೆ ಅಧ್ಯಾಪಕರು ಹಾಜರಾಗುತ್ತಲೇ ಇರಲಿಲ್ಲ. ಅಧ್ಯಾಪಕರೇ ಹೀಗಾದರೆ ವಿದ್ಯಾರ್ಥಿಗಳು? ಹೀಗೆ ಬುಡಕಟ್ಟು ಜನಾಂಗದ ಪರಿಸರದಿಂದ ಬರುವ ವಿದ್ಯಾರ್ಥಿಗಳು ಪ್ರಾಥಮಿಕ ಮಾಧ್ಯಮಿಕ ಶೈಕ್ಷಣಿಕ ವಾತಾವರಣದಿಂದಲೂ ವಂಚಿತರಾಗಿರುತ್ತಾರೆ. ಅದರ ಪರಿಣಾಮವಾಗಿ ಏಕಾಗ್ರತೆ, ಅಧ್ಯಯನ ಗಂಭೀರತೆ ಮೇಲ್ಜಾತಿಯವರಿಗೆ ಹೋಲಿಸಿದಾಗ ಕಡಿಮೆ. ವೈದ್ಯಕೀಯ ಕಾಲೇಜುಗಳಿಗೆ ಅವರು ಸೇರಿದಾಗ ಮೇಲ್ಜಾತಿಯವರ ಜೊತೆ ಸ್ಪರ್ಧಿಸಿ ಅವರ ಮಟ್ಟಕ್ಕೇರುವ ಭೀಮ ಪ್ರಯತ್ನ ಮಾಡಬೇಕಾಗುತ್ತದೆ. ಈ ಪ್ರಯತ್ನದಲ್ಲಿ

ಅವರಿಗೆ ಮೊದಲನೇ ಗಂಡಾಂತರವೆಂದರೆ ಪರೀಕ್ಷೆ, ಎರಡನೆಯದು ಪರೀಕ್ಷಕರು. ಮೀಸಲಾತಿಯ ವಿರುದ್ಧ ಚಳುವಳಿ ಪ್ರಾರಂಭವಾದಾಗ, ಸುಮಾರು ಪರೀಕ್ಷಕರು ಮೇಲ್ಜಾತಿಯುವರಾಗಿದ್ದು ಅವರು ಮೀಸಲಾತಿ ಕೊನೆತುದಿಯಲ್ಲದ ಮಟ್ಟಕ್ಕೇರುತ್ತದೆ, ಅದರಿಂದಾಗಿ ಮೇಲ್ಜಾತಿಯುವರು ವಂಚಿತರಾಗುತ್ತಾರೆಂಬ ಅಭಿಪ್ರಾಯ ತಳೆದರು. ಹಾಗಾಗಿ ಪರೀಕ್ಷೆಗಳು ಮತ್ತು ಪರೀಕ್ಷಕರು ಪೂರ್ವಾಗ್ರಹಪೀಡಿತವಾಗಿರುವುದು ಕಂಡುಬರುತ್ತದೆ.

ಈ ಅನುಭವಗಳನ್ನು ಪಡೆಯಲು ನಾನು ಮತ್ತೊಮ್ಮೆ ವಿದ್ಯಾರ್ಥಿಯಾಗಿ ಬರಬೇಕಿಲ್ಲ, ನನಗೆ ಅರ್ಥವಾಗುತ್ತದೆ. ಗುಜರಾತಿನಲ್ಲಿ ಮಧ್ಯಮ ವರ್ಗದ ವಿದ್ಯಾರ್ಥಿಯಾಗಿ ನಾನಿದ್ದಾಗಿನ ನನ್ನ ರೋಪದ ಅನುಭವಗಳಿಂದ ಅದರ ಮನದಟ್ಟಾಗುತ್ತದೆ. ಪರೀಕ್ಷಕರು ಮೇಲ್ಜಾತಿಯವರ ಪರ ಸಿಲ್ಲದೆ ಬೇರೇನೂ ಮಾಡಲು ಸಾಧ್ಯವೇ ಇಲ್ಲ. ಆ ಮೂಲಕ ಅವರು ಪರಿಶಿಷ್ಟ ಜಾತಿ/ಬುಡಕಟ್ಟು ಮತ್ತು ಮಹರ್‌ಗಳು ಮೌಖಿಕ ಪರೀಕ್ಷೆಯಲ್ಲಿ ತಾವು ಅರ್ಹರಾಗುವುದರಿಂದ ವಂಚಿಸಲು ಪ್ರಯತ್ನಿಸುತ್ತಾರೆ. ಅಸ್ಪೃಶ್ಯರನ್ನು ಮೇಲೇರುವುದಕ್ಕೆ ಬಿಡದೆ ಜಾತಿಯ ಹೆಸರಿಡಿದು ತಂಗಿಸುವುದರಿಂದ ಅದೇ ಸ್ನಾತಕೋತ್ತರ ಕೇಂದ್ರದಲ್ಲಿ ಬೋಧನಾ ವಿಭಾಗಕ್ಕೆ ಸೇರುವುದು ಸಾಧ್ಯವೇ ಇಲ್ಲ, ಇದನ್ನು ಹೇಗಾದರೂ ಮಾಡಿ ಸಾಧಿಸಲೇಬೇಕು ಅದಕ್ಕಾಗಿ ಸ್ನಾತಕೋತ್ತರ ಬೋಧನಾ ವಿಭಾಗದಲ್ಲೂ ಮೀಸಲಾತಿ ಇರಬೇಕು. ಇಲ್ಲವಿದ್ದರೆ ಪರಿಶಿಷ್ಟ ಜಾತಿ/ಬುಡಕಟ್ಟು ಜನಾಂಗದವರಿಗೆ ವೈದ್ಯಕೀಯ ಕಾಲೇಜಿನಲ್ಲಿ ಬೋಧನಾ ವಿಭಾಗಕ್ಕೆ ಸೇರಲು ಸಾಧ್ಯವೇ ಇಲ್ಲ. ಕಡೆ ಪಕ್ಷ ಒಬ್ಬನಾದರೂ ಸೇರದಿದ್ದಲ್ಲಿ ಮುಂದೆ ಬರುವ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆಯಲ್ಲಿನ ತೊಂದರೆಗಳನ್ನು ನಿವಾರಿಸಿಕೊಳ್ಳಲು ಕೀಳರಿಮೆ ತೊರೆಯಲು ಸಹಾಯವಾಗುವುದೇ ಇಲ್ಲ.

ನಿಮ್ಮೆದುರಿಗೆ ನಾನು ಗುಜರಾತ್ ರಾಜಕೀಯ ಪಕ್ಷಗಳ ಮತ್ತು ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಅವುಗಳ ಪಾತ್ರ ಕುರಿತು ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಸಂಯುಕ್ತ ಗುಜರಾತ್ ಪಕ್ಷ ಪ್ರತಿಯೊಂದು ರಾಜಕೀಯ ಪಕ್ಷದ ಮುಂದಾಳುಗಳನ್ನೆಲ್ಲಾ ಸೇರಿಸಿಕೊಂಡಿದೆ. ಆದರೆ ಒಂದೇ ಪಕ್ಷದ ರಾಜ್ಯಮುಖಂಡರು ಮತ್ತು ಜಿಲ್ಲಾ ಮುಖಂಡರು ಮೀಸಲಾತಿಯ ಬಗ್ಗೆ ಒಂದೇ ಅಭಿಪ್ರಾಯವನ್ನಿಟ್ಟುಕೊಂಡಿಲ್ಲ. ಒಂದು ರಾಜಕೀಯ ಪಕ್ಷದ ದೆಹಲಿ ಮುಖಂಡರು ಮೀಸಲಾತಿ ಪರವಾದ ಹೇಳಿಕೆ ನೀಡಿದರೆ, ರಾಜ್ಯದ ಅದೇ ಪಕ್ಷದ ಮುಖಂಡರು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅವರೇನಾದರೂ ಒಪ್ಪಿಕೊಂಡರೆ ಬರೀ ಬಾಯುಪಚಾರದ ಮಾತುಗಳಾಗುತ್ತವೆಯೇ ಹೊರತು ಮೀಸಲಾತಿ ಯೋಜನೆಯನ್ನು ಜಾರಿಗೆ ತರುವುದಕ್ಕಲ್ಲ ಎಂಬುದು ಮುಖ್ಯ. ಗುಜರಾತಿನಲ್ಲಿರುವ ಪ್ರತಿಯೊಂದು ರಾಜಕೀಯ ಪಕ್ಷವೂ ಈ ವಿಷಯದ ಮೇಲೆ ಬೇರೆ ಬೇರೆ ಮನೋಭಿಪ್ರಾಯವನ್ನಿಟ್ಟುಕೊಂಡು ಸಮಾನಾಂತರವಾಗಿ ವಿಭಜನೆಗೊಂಡಿವೆ. ಅವರ ಹೃದಯಾಂತರಾಳದಲ್ಲಿ ಮೀಸಲಾತಿ ಹೋಗಬೇಕೆಂಬುದೇ ಇರುವುದು. ಆದರೆ ಚುನಾವಣಾ ಉದ್ದೇಶಗಳಿಂದಾಗಿ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಹಿಂಜರಿಯು

ತ್ತಾರೆ. ದೆಹಲಿಯ ಲೋಕದಳದ ಮುಖಂಡರು ಮೀಸಲಾತಿ ಮುಂದುವರಿಯುವುದಕ್ಕೆ ತೀವ್ರ ಬೆಂಬಲ ವ್ಯಕ್ತಪಡಿಸಿದರೆ ಗುಜರಾತಿನ ಅಹಮದಾಬಾದ್‌ನ ಲೋಕದಳದ ಮುಖಂಡರು ಮೀಸಲಾತಿ ಮುಂದುವರಿಯುವುದನ್ನು ಅಷ್ಟೇ ಉಗ್ರವಾಗಿ ವಿರೋಧಿಸು ತ್ತಾರೆ. ಈ ವಿಷಯಗಳನ್ನು ಬದಲಾಯಿಸುವುದು ಹೇಗೆ? ನಮ್ಮ ಅನುಭವದ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಬುಡಕಟ್ಟಿನವರ ಮೇಲೆ ಹೆಚ್ಚು ಹಿಂಸೆಗಳು ನಡೆಯುತ್ತವೆ. ಇದು ನಿಲ್ಲಬೇಕು. ಆದರೆ ಹೇಗೆ? ಈ ಎಲ್ಲಾ ಸಂಗತಿಗಳನ್ನು ತಿಳಿದು ಕೊಂಡು ಅದಕ್ಕೆ ಸಂಬಧಂಪಟ್ಟವರನ್ನೆಲ್ಲಾ ಸೇರಿಸಿ ಒಂದು ಸಭೆ ಏರ್ಪಡಿಸಬೇಕೆಂದು ನಿರ್ಧರಿಸಿದೆವು. ಏಕೆಂದರೆ ಈ ರೀತಿಯ ಮಾತುಕತೆಗಳು ನಡೆಯುತ್ತಿರಲಿಲ್ಲ. ನಡೆಯು ತ್ತಿದ್ದುದೇನೆಂದರೆ ಕಲ್ಲು ಎಸೆತ ಒಂದು ಕಡೆಯಿಂದ. ಗೋಳಿಬಾರ್ ಮತ್ತು ಷೆಲ್ ಸಿಡಿತ ಇನ್ನೊಂದು ಕಡೆಯಿಂದ. ಪೋಲೀಸಿನವರು, ಮತ್ತು ಜನಗಳ ಕೈ ಮಿಲಾಯಿಸುವಿಕೆ. ಸವರ್ಣೀಯರು ಒಂದು ಕಡೆ– ಕೆಳಜಾತಿಯವರು ಒಂದು ಕಡೆ. ರಾಜಕೀಯ ಪಕ್ಷಗಳು ವರ್ತಮಾನ ಪತ್ರಿಕೆಗಳು ಮತ್ತು ಪೋಲೀಸ್ ಒಕ್ಕಡೆ ಸೇರಿ ಗುಂಪುಕಟ್ಟಿಕೊಂಡು ಅನಾಮ ಧೇಯರಾಗಿ ಕಣ್ಣಾಮುಚ್ಚಾಲೆಯಂತೆ ಮೀಸಲಾತಿಯನ್ನು ವಿರೋಧಿಸುವುದು.– ಇವರೆಲ್ಲ ರನ್ನು. ಹೇಗಾದರೂ ಶ ತ ಪ್ರ ಯ ತ್ನ ಮಾಡಿ ಒಂದೆಡೆ ಸೇರಿಸಿ ಮಾತುಕತೆ ಪ್ರಾರಂಭಿಸಬೇಕು ಎಂದು ನಿರ್ಧರಿಸಿದೆವು ಅಷ್ಟರಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸರಕಾರದ ಮಧ್ಯೆ ಮಾತುಕತೆ ಪ್ರಾರಂಭವಾಗಿಬಿಟ್ಟಿತು. ಸ ರ ಕಾ ರ ಕೆ ವೈದ್ಯಕೀಯ ವಿದ್ಯಾರ್ಥಿಗಳು ಏನು ಕೇಳುತ್ತಿದ್ದಾರೆ ಎಂಬ ಅರಿವಿಲ್ಲ. ವೈದ್ಯ ಕೀಯ ವಿದ್ಯಾರ್ಥಿಗಳಿಗೆ ಸರಕಾರ ಏನು ನಿರ್ಧರಿಸುತ್ತದೆ ಎಂಬ ತಿಳುವಳಿಕೆ ಇಲ್ಲ. ರಾಜಕೀಯ ಪಕ್ಷಗಳು ಮೀಸಲಾತಿಯ ಕೆಲವು ಸಮಸ್ಯೆಯ ಬಗ್ಗೆ ತಮ್ಮಲ್ಲೇ ಸ್ಪಷ್ಟತೆ ಕಂಡುಕೊಳ್ಳಲು ಯತ್ನಿಸುತ್ತಿದ್ದವು. ನಾವು ಆ ಪಕ್ಷಗಳ ಮುಖಂಡರನ್ನು ಭೇಟಿ ಮಾಡಿದೆವು. ಅವರು ತಾವು ಮೀಸಲಾತಿ ಪರ ಎಂದು ತಿಳಿಸಿದರು. ಆದರೆ ಅವರ ಪಕ್ಷದ ಒಳಗಿದ್ದವರಿಗೆ ಅದು ಒಪ್ಪಿಗೆಯಾಗಿರಲಿಲ್ಲ. ಪಕ್ಷದ ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮುಖಂಡರುಗಳ ಮಧ್ಯೆ ಏಕಾಭಿಪ್ರಾಯವಿರಲಿಲ್ಲ. ಅಲ್ಲದೆ ತಮ್ಮ ಪಕ್ಷದ ಸದಸ್ಯರ ಅಭಿಪ್ರಾಯದ ವಿರುದ್ಧ ನಾವು ಹೋಗಲು ಸಾಧ್ಯವಿಲ್ಲ ಎಂಬುದು ಅವರ ಮತ. ನಾವು ವ್ಯಾಪಾರಿಗಳನ್ನು ಭೇಟಿ ಮಾಡಿದಾಗ ಅವರು ನಾವೇ ತುಂಬಾ ನಷ್ಟ ಕ್ಕೊಳಗಾದವರು. ಏಕೆಂದರೆ ಕಳೆದ ಮೂರುವಾರದಿಂದ ಗುಜರಾತಿನಲ್ಲಿ ವ್ಯಾಪಾರ ಸ್ಥಗಿತಗೊಂಡು ಬಿಟ್ಟಿದೆ ಎಂದರು. ನಾವು ಕಾರ್ಮಿಕ ಮುಖಂಡರನ್ನು ಭೇಟಿಯಾದಾಗ ಅಲ್ಲಿ ನಮಗೆ ಆಶ್ಚರ್ಯವೇ ಕಾದಿತ್ತು. ಗುಜರಾತಿನ ಚರಿತ್ರೆಯಲ್ಲಿಯೇ ಮೊಟ್ಟಮೊದಲ ಬಾರಿ ಕಾರ್ಮಿಕರು ಮತ್ತು ಮಗ್ಗಗಳ ಕೆಲಸಗಾರರು ಐದು ದಿನಗಳ ಕಾಲ ಮುಷ್ಕರ ಹೂಡಿದ್ದರು. ಅದರಲ್ಲಿ ಒಂದು ಗುಂಪು ಮೀಸಲಾತಿ ಪರ ಮೂರು ದಿನಗಳು, ಇನ್ನೊಂದು ಗುಂಪು ಮೀಸಲಾತಿ ವಿರುದ್ಧ ಎರಡು ದಿನ. ಮೂರು ದಿನದ ಮೀಸ ಲಾತಿಯ ಪರದ ಮುಷ್ಕರವನ್ನು ಪರಿಶಿಷ್ಟ ಜಾತಿ/ಬುಡಕಟ್ಟುವರ್ಗದ ಕಾರ್ಮಿಕರು

ಸಂಘಟಿಸಿದ್ದರು. ಇದಕ್ಕೆ ವಿರುದ್ಧವಾಗಿ ಎರಡು ದಿನದ ಮುಷ್ಕರವನ್ನು ಸವರ್ಣೀಯ ಕಾರ್ಮಿಕರು ಸಂಘಟಿಸಿದ್ದರು. ಈ ಎರಡೂ ಸಂದರ್ಭದಲ್ಲಿ ಕಾರ್ಮಿಕರ ತಮ್ಮ ಮುಖಂಡರ ಹತ್ತಿರ ಹೋಗಿ ಇದು ಸಾಮಾಜಿಕ ಸಮಸ್ಯೆಯೆಂದೂ ಟ್ರೇಡ್ ಯೂನಿಯನ್ ಸಮಸ್ಯೆ ಅಲ್ಲವೆಂದೂ ಹೇಳಿದರು. ಆದ್ದರಿಂದ ಯಾವುದೇ ನಿದರ್ಶನಗಳನ್ನು ಅವರು ಕೊಡಕೂಡದೆಂದೂ, ಕೊಟ್ಟರೂ ಅವುಗಳನ್ನು ಪಾಲಿಸುವುದಿಲ್ಲವೆಂದೂ ತಿಳಿಸಿದರು. ಯಾವ ಕೈಮಗ್ಗದ ಕಾರ್ಖಾನೆಯಲ್ಲೂ ಕಾರ್ಮಿಕರು ನೂಲುವುದು, ನೇಯುವುದು ಮಾಡಲೇ ಇಲ್ಲ ಮುಖಂಡರುಗಳು ಏನೂ ಮಾಡದಾದರು. ಯಾಕೆಂದರೆ ತಮ್ಮ ಗುಂಪಿನವರಿಂದಲೇ ಈ ರೀತಿಯ ಪ್ರತಿರೋಧವನ್ನು ಅನುಭವಿಸಿ ಅವರಿಗೆ ಗೊತ್ತಿತ್ತು. ಇದರ ಕಾರಣಗಳನ್ನು ತಿಳಿದುಕೊಳ್ಳಲು ಯತ್ನಿಸಿದಾಗ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡ ಈ ಸುದ್ದಿ ಪೂರ್ಣ ಹುಸಿ ಎಂಬುದು ಗೊತ್ತಾಯಿತು

ಇದಕ್ಕೆ ಇನ್ನೂ ಕೆಲವು ಉದಾಹರಣೆ ಕೊಡುತ್ತೇನೆ. ಒಂದು ಜೈನದೇವಾಲಯದ ಹತ್ತಿರ ಸುಮಾರು ಎರಡು ಅಥವಾ ಮೂರು ಸಾವಿರ ಜನ ಸೇರಿದರು. ಯಾವ ಪೂರ್ವ ಸಿದ್ಧತೆಯೂ ಇಲ್ಲದೇ ಅವರು ಜೈನ ದೇವಾಲಯದ ಹತ್ತಿರ ಸೇರಿದ್ದರು, ಬೀದಿಯ ಒಂದು ಪಕ್ಕದಲ್ಲಿ ಜೈನದೇವಾಲಯವಿತ್ತು. ಇನ್ನೊಂದು ಪಕ್ಕದಲ್ಲಿ ಬಡವರು ವಾಸಿಸುತ್ತಿದ್ದ ಗುಡಿಸಲುಗಳಿದ್ದವು. ಈ ಗುಡಿಸಲುಗಳಲ್ಲಿ ಹರಿಜನರು ಹೆಚ್ಚಾಗಿ ವಾಸಿಸುತ್ತಿದ್ದರು. ಮೇಲ್ಜಾತಿಯ ಜನ ಈ ಬಡವರ ಮೇಲೆ ಆಕ್ರಮಣ ಮಾಡಲು ಹೋಗುತ್ತಾರೆ ಎಂಬ ಗಾಳಿಮಾತು ಹಬ್ಬಿ ಆ ಬಡವರೆಲ್ಲ ಒಂದಾಗಿ ಸೇರಿ ಈ ಆಕ್ರಮಣವನ್ನು ಎದುರಿಸಲು ಗುಂಪಾಗಿ ಜೈನ ದೇವಾಲಯದ ಹತ್ತಿರ ಸಜ್ಜಾಗಿ ನಿಂತರು. ತಕ್ಷಣ ಪೇಟೆಯಲ್ಲೆಲ್ಲಾ 5000 ಮಂದಿ ಪರಿಶಿಷ್ಟ ಜಾತಿಯವರು ಗುಂಪಾಗಿ ಜೈನ ದೇವಾಲಯವನ್ನು ಆಕ್ರಮಣ ಮಾಡುತ್ತಾರೆಂಬ ಇನ್ನೊಂದು ಗಾಳಿಮಾತು ಹರಡಿತು. ಆದಾದ ಇನ್ನೊಂದು ಗಂಟೆಯಲ್ಲಿ ಪರಿಶಿಷ್ಟ ಜಾತಿಯವರು ಜೈನದೇವಾಲಯವನ್ನು ಧ್ವಂಸ ಮಾಡಿದರೆಂದು ಸಾಮಗ್ರಿಗಳನ್ನು, ಮೂರ್ತಿಗಳನ್ನು ಭಗ್ನಗೊಳಿಸಿದರೆಂದೂ ಸುದ್ದಿ ಹಬ್ಬಿಸಲಾಯಿತು. ಕೆಲವು ಮಂದಿ ರಾತ್ರಿಯೆಲ್ಲಾ ಮೇಲ್ಜಾತಿಯವರ ಬಡಾವಣೆಗಳಲ್ಲಿ, ಮಾರುಕಟ್ಟೆ ಪ್ರದೇಶಗಳಲ್ಲಿ, ಮೆಡಿಕಲ್ ಕಾಲೇಜು ಆವರಣದಲ್ಲಿ ಈ ಸುದ್ದಿಯನ್ನು ಪ್ರಚಾರ ಮಾಡಲಾರಂಭಿಸಿದರು. ಎಲ್ಲರೂ ಇದನ್ನು ನಿಜವೆಂದು ನಂಬತೊಡಗಿದರು. ಸುಮಾರು ಬೆಳಿಗ್ಗೆ 11-30ಕ್ಕೆ ಪೋಲೀಸ್ ಅಧಿಕಾರಿಗಳು ಸ್ಥಳೀಯ ವರ್ತಮಾನ ಸಂಸ್ಥೆ ಫೋನ್ ಮೂಲಕ ಹರಿಜನರ ಗುಂಪು ಜೈನದೇವಾಲಯವನ್ನು ಧ್ವಂಸಗೊಳಿಸಿರುವುದಾಗಿ ತಿಳಿಸಿದರು. ಸುದ್ದಿ ಸಂಸ್ಥೆಯವರು ತಾವು ಆ ಪ್ರದೇಶಕ್ಕೆ ಭೇಟಿಕೊಟ್ಟಿದ್ದಾಗಿಯೂ, ಅಲ್ಲಿ ಜೈನದೇವಾಲಯ ಸುರಕ್ಷಿತವಾಗಿದೆಯೆಂದೂ ಜನ ಅಲ್ಲಿ ಸೇರಿದ್ದು ದೇವಾಲಯವನ್ನು ವಿಧ್ವಂಸಗೊಳಿಸಲಲ್ಲವೆಂದೂ, ತಮ್ಮ ಆತ್ಮರಕ್ಷಣೆಗೆಂದೂ, ಕೆಲಕಾಲದ ಮೇಲೆ ಗುಂಪು ಶಾಂತವಾಗಿ ಚದುರಿತೆಂದೂ ತಿಳಿಸಿ, ನಿಮ್ಮ ವರದಿ ಸುಳ್ಳು ಎಂದೂ ಹೇಳಿದರು. ಆದರೆ ಪೋಲೀಸ್ ಅಧಿಕಾರಿ ಅವರ ಮಾತನ್ನು ಕೇಳದೆ ಈ ಸುದ್ದಿ

ಯನ್ನು ಬೇಗನ ಪತ್ರಿಕೆಯಲ್ಲಿ ಬರುವಂತೆ ಪ್ರಕಟಿಸಲು ಒತ್ತಾಯಿಸಿದರು. ಪೋಲೀಸ್ ಅಧಿಕಾರಿಯ ಆಣತಿಯಂತೆ ಸುದ್ದಿ ಪ್ರಕಟವಾಯಿತು. ಅದರಿಂದಾದ ಪರಿಣಾಮವನ್ನು ನೀವೇ ಊಹಿಸಿಕೊಳ್ಳಿ. ಅಹಮದಾಬಾದ್‌ನ ಎಲ್ಲಾ ಪ್ರಮುಖ ವರ್ತಮಾನ ಪತ್ರಿಕೆಗಳೂ ಈ ತಪ್ಪು ಸುದ್ದಿಯನ್ನು ಪ್ರಕಟಿಸಿದವು. ಇದನ್ನು ಓದಿ ಸವರ್ಣೀಯರ ಗುಂಪು ಪ್ರತಿಯೊಂದು ಬೀದಿಯಲ್ಲೂ, ಬೀದಿಯ ತಿರುವಿನಲ್ಲೂ ನಿಂತು ಪರಿಶಿಷ್ಟ ಜಾತಿ/ಬುಡಕಟ್ಟಿನವರನ್ನು ಆಕ್ರಮಣ ಮಾಡಲು ಸಿದ್ಧರಾದರು. ಪೋಲೀಸರು ಮಧ್ಯ ಪ್ರವೇಶಿಸಲು ಯತ್ನಿಸಿದರು. ಆದರೆ ಪೋಲೀಸರು? ಅವರ ಸಂಸ್ಕೃತಿ ಎಂಥದು? ತರಬೇತಿ ಎಂಥದು? ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಎಂಥವು? ಅವರ ಸಾಮಾಜಿಕ ಸ್ಥಾನಮಾನವೇನು? ಅವರು ಪಡುವ ಕಷ್ಟಗಳೇನು? ನಮ್ಮಲ್ಲಿ ಕೆಲವೇ ಜನಗಳಿಗೆ ಅದು ಗೊತ್ತು. ಅದನ್ನು ಅವಶ್ಯವಾಗಿ ತಿಳಿದುಕೊಳ್ಳಲೂ ಬೇಕು. ಏಕೆಂದರೆ ನಾನೇ ಸ್ವಲ್ಪ ಹಿಂದೆ ಪೋಲೀಸರ ಹೊಡೆತಕ್ಕೆ ಬಲಿಯಾಗಿದ್ದೆ. ಅವರು ಅಷ್ಟೊಂದು ಯಾಕೆ ಕೋಪೋದ್ರಿಕ್ತರಾಗಿದ್ದಾರೆಂದು ಕೇಳಿದೆ. ಆಕಸ್ಮಿಕವಾಗಿ ಅಹಮದಾಬಾದಿನಲ್ಲಿ ನಡೆದ ಘಟನೆ ಅವರನ್ನು ಆ ಮಟ್ಟಕ್ಕೆ ಪ್ರೇರೇಪಿಸಿತ್ತು. ಅಲ್ಲಿನ ಜನದಟ್ಟಣೆಯಾದ ಪ್ರದೇಶದಲ್ಲಿ ಪೋಲೀಸರು ಹೋಗುತ್ತಿದ್ದರು. ಯಾರೋ ಒಬ್ಬರು ಒಂದು ಕಲ್ಲನ್ನು ಮೂರನೇ ಅಂತಸ್ತಿನಿಂದ ಕೆಳಗೆ ಎಸೆದರು. ಅದು ಜೀಪಿನಲ್ಲಿ ಹೋಗುತ್ತಿರುವ ಪೋಲೀಸ್ ಪೇದೆಯ ಮೇಲೆ ಬಿತ್ತು, ದುರಾದೃಷ್ಟವಶಾತ್ ಆ ಪೇದೆ ಸ್ಥಳದಲ್ಲಿಯೇ ಮೃತಪಟ್ಟ. ಇದು ಪೋಲೀಸರ ಮೇಲೆ ಪರಿಶಿಷ್ಟ ಜಾತಿಯವರ ವ್ಯವಸ್ಥಿತ ಆಕ್ರಮಣ ಅಲ್ಲ. ಗುಂಪಿನ ಮನೋಸ್ಥಿತಿಗೂ ವೈಯಕ್ತಿಕ ಮನೋಸ್ಥಿತಿಗೂ ಅಂತರವಿರುತ್ತದೆಂದು ಇಲ್ಲಿ ತಿಳಿಯಬೇಕು. ಯಾರೋ ಒಬ್ಬ ವ್ಯಗ್ರನಾದ ತರುಣ ನಡೆಸಿದಂತಹ ಕೃತ್ಯ ಇದು. ಆದರೆ ಪೋಲೀಸು ಪರಿಶಿಷ್ಟ ಜಾತಿಯವರ ಜೊತೆ ನಡೆದುಕೊಂಡ ಧಾಟಿ ಎಂಥದು? ಪೋಲೀಸರು ತಮ್ಮದೇ ಆದ ಶೈಲಿಯಲ್ಲಿ ನಗರದ ಕಾನೂನು ವ್ಯವಸ್ಥೆಯನ್ನು ಆಸ್ತಿಪಾಸ್ತಿಗೆ ರಕ್ಷಣೆಯನ್ನು ನೀಡತೊಡಗಿತು, ಆ ಮೂಲಕ ರೂಕ್ಷವಾಗಿ ವರ್ತಿಸತೊಡಗಿತು, ಪೋಲೀಸರ ರೂಕ್ಷತೆ ಎಂದರೆ ಅದಕ್ಕೆ ತಕ್ಕ ಆಗಸಾಮಗ್ರಿಗಳುಂಟೆ? ಎಲ್ಲಿಗಳುಂಟೆ? ಹರಿಜನರ ಕಾಲೋನಿಯಿಂದ ಪೋಲೀಸರು ಮೇಲ್ಜಾತಿಯವರ ಪ್ರದೇಶಕ್ಕೆ ಹೋದಾಗ ಅಲ್ಲಿನ ಯುವಕರು ಪೋಲೀಸರ ಮೇಲೆ ಕೋಪೋದ್ರಿಕ್ತರಾದರು. ಸರ್ಕಾರ ಇಲ್ಲಿಯವರೆಗೆ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೇ ಇರುವುದರಿಂದ ಅವರು ವೈದ್ಯಕೀಯ ವಿದ್ಯಾರ್ಥಿಗಳನ್ನು ಬೆಂಬಲಿಸಲು ತೀರ್ಮಾನಿಸಿದರು.

ನಾನೇ ಕಣ್ಣಾರೆ 400 ರಿಂದ 500 ಜನ ಯುವಕರು ಪ್ರತಿಯೊಬ್ಬ ಪೋಲೀಸರತ್ತ ಕಲ್ಲು ತೂರುವುದನ್ನು ನೋಡಿದೆ. ರಸ್ತೆಯಲ್ಲಿದ್ದ ಎಲ್ಲಾ ಸರ್ಕಾರಿ ಆಸ್ತಿಪಾಸ್ತಿಗೆ ಧಕ್ಕೆ ಮಾಡಿದರು, ತಾವು ದಿನಾ ಬೆಳಿಗ್ಗೆ ಕೊಂಡೊಯ್ಯುತ್ತಿದ್ದ ಕ್ಷೀರಕೇಂದ್ರಗಳನ್ನು ಧ್ವಂಸಗೊಳಿಸಿದರು. ಎಲ್ಲಾ ಟೆಲಿಫೋನ್ ಕಂಬಗಳನ್ನೂ ವಿದ್ಯುತ್ ಕಂಬಗಳನ್ನು ಕಿತ್ತು

ಹಾಕಿದರು. ಯುವ ಸವರ್ಣೀಯರ ಮತ್ತು ಪೋಲೀಸರ ಮಧ್ಯೆ ಸತತ ಘರ್ಷಣೆ ನಡೆಯುತ್ತೊಡಗಿತು. ಇನ್ನೊಂದು ದಿನ ಅಹಮದಾಬಾದಿನ ಪ್ರಜ್ಞಾವಂತ ನಾಗರೀಕರೆಲ್ಲ ತಲ್ಲಣಗೊಳ್ಳುವಂತೆ ಪೋಲೀಸಿನವರು ಬೆಳಿಗ್ಗೆ ಮತ್ತು ಸಂಜೆ 800 ಟಿಯರ್ ಗ್ಯಾಸ್ ಷೆಲ್‌ಗಳನ್ನು ಸಿಡಿಸಿದರು. ಅಲ್ಲದೆ ಆಗಾಗ್ಗೆ ಪೋಲೀಸರು ಗುಂಡು ಹಾರಿಸುವುದರಲ್ಲಿ ನಿರತರಾದರು. ಗುಜರಾತಿನಲ್ಲಿ ಪೋಲೀಸ್ ಅತಿಕ್ರಮಣದಿಂದ ಇಲ್ಲಿಯುವರೆಗೆ ಆದ ಸಾವು ನೋವುಗಳಿಗೆ ಲೆಕ್ಕವೇ ಇಲ್ಲ. ಇದು ಸತತವಾಗಿ ಕಳೆದ ಮೂರು ತಿಂಗಳಿಂದ ನಡೆಯುತ್ತಲೇ ಇದೆ.

ನಾವು ಪರಿಶಿಷ್ಟ ಜಾತಿಯ ಕಾಲೊನಿಗೆ ಭೇಟಿಕೊಟ್ಟಾಗ ಅಲ್ಲಿಯವರೊಬ್ಬರು ಮೂರು 'ಪಿ'ಗಳಿಂದ ರಕ್ಷಿಸಲು ಕೇಳಿಕೊಂಡರು. ಅವು ಯಾವುವೆಂದರೆ (1) ರಾಜಕೀಯ ಪಕ್ಷ (Political Party) (2) ಸುದ್ದಿ ಸಂಸ್ಥೆ (Press) ಇದು ಸತತವಾಗಿ ಕೆಳ ವರ್ಗದವರ ವಿರುದ್ಧ ಇದೆ. (3) ಪೋಲೀಸ್. ಈ ಮೂರನ್ನೂ ಹಿಂದಕ್ಕೆ ತೆಗೆದುಕೊಂಡರೆ; ನೀವು ಸನ್ನಿವೇಶವನ್ನು ಹೇಗೆ ಎದುರಿಸುತ್ತೀರಿ? ಎಂದು ನಾನು ಕೇಳಿದೆ. ಅವರಲ್ಲಿ ವಿದ್ಯಾವಂತನಾದವನೊಬ್ಬ ಹೇಳಿದ, ಸೈನ್ಯವನ್ನು ಕರೆಸುವುದರ ಮುಖಾಂತರ ಎಂದು. ಸೈನ್ಯವನ್ನು ಕರೆಸುವುದರಿಂದ ಅಹಮದಾಬಾದ್ ಮಾತ್ರ ಹತೋಟಿಗೆ ತರಲು ಸಾಧ್ಯ ಎಂದು ಹೇಳಿದೆ. ಅದಕ್ಕೆ ಅವನು 'ಇಲ್ಲ, ಇಡೀ ಗುಜರಾತನ್ನು ನೋಡಿಕೊಳ್ಳಲು ಸೈನ್ಯದ ಹತೋಟಿಗೆ ಬಿಡಬೇಕು' ಹಾಗಾದರೆ ಮುಖ್ಯಮಂತ್ರಿಗಳಿದ್ದು ಪ್ರಯೋಜನ ವೇನು? ಸಾರ್ವಜನಿಕರಿರುವುದು, ಅಧಿಕಾರಿಗಳಿರುವುದು ಯಾಕೆ? ಅವರೆಲ್ಲಾ ಮಿಲಿಟರಿ ಮುಂದಾಳುಗಳ ಆಜ್ಞೆಯಂತೆ ಕೆಲಸ ನಿರ್ವಹಿಸಬೇಕು. ಇದರ ಪರಿಣಾಮಗಳು ಬಹಳ ಗಂಡಾಂತರಕಾರಿ. ಈ ಸಲಹೆಯನ್ನು ಮಾನ್ಯಮಾಡಿದರೆ ಜನಗಳ ಸ್ವಾತಂತ್ರ್ಯವೆಲ್ಲ ಮೊಟಕಾಗುತ್ತದೆ. ಆದರೆ ಇದು ಕೋಪೋದ್ರಿಕ್ತ ಯುವಕನೊಬ್ಬನ ಅಭಿಪ್ರಾಯವೇ ಹೊರತು ಅಲ್ಲಿಯ ಅಶಾಂತಿಯನ್ನು ಹತ್ತಿಕ್ಕಲು ನೀಡಿದ ಸಲಹೆ ಅಲ್ಲ.

ಪೋಲೀಸರು ಕಾರ್ಯನಿರತರಾಗಿದ್ದರೆ? ಈ ಸಂದರ್ಭದಲ್ಲಿ ನಾವು ಇನ್‌ಸ್ಪೆಕ್ಟರ್ ಜನರಲ್, ಪೋಲೀಸ್ ಕಮೀಷನರ್ ಮತ್ತು ಇನ್ನಿತರ ಉನ್ನತ ಪೋಲೀಸ್ ಅಧಿಕಾರಿಗಳು ಮತ್ತು ಗೃಹಖಾತೆ ಅಧಿಕಾರಿಗಳನ್ನು ಭೇಟಿ ಮಾಡಿ ವಿವಿಧ ಆಯಾಮಗಳ ಬಗ್ಗೆ ಚರ್ಚಿಸಿ ಅಧಿಕಾರಿಗಳ ಅಪ್ಪಣೆ ಇಲ್ಲದೆ ಕೆಲವು ಸಲಹೆಗಳನ್ನು ನೀಡಿದಾಗ ಸರ್ಕಾರ ಅದನ್ನು ಸ್ವೀಕರಿಸಲು ಒಪ್ಪಿಕೊಂಡಿತು. ಆ ಸಲಹೆಗಳಲ್ಲಿ ಒಂದು, ಪೋಲೀಸರು ಕೆಲವು ಪ್ರದೇಶಗಳಿಗೆ ಹೋಗಬಾರದೆಂಬುದು. ಆದರೆ ಉನ್ನತ ಅಧಿಕಾರಿಗಳ ಆಜ್ಞೆಯನ್ನು ಮೀರಿ ಪೋಲೀಸರ ಉಪಟಳ ಮುಂದುವರಿಯಿತು. ನಾನು ಇನ್‌ಸ್ಪೆಕ್ಟರ್ ಜನರಲ್‌ಗೆ ಹೇಳಿದೆ; ಪೋಲೀಸರಿಂದ ಕಡೇಪಕ್ಷ ನೂರಕ್ಕೂ ಹೆಚ್ಚು ಮನೆಗಳಿಗೆ ಜಖಂ ಆಗಿದೆ. ಮನೆಯಲ್ಲಿದ್ದ ಪೀಠೋಪಕರಣಗಳು ಮುರಿದುಹೋಗಿವೆ. ಪಿಂಗಾಣಿ ಮತ್ತು ಇನ್ನಿತರ ಪಾತ್ರೆಗಳು ಚೂರಾಗಿವೆ. ಕುರ್ಚಿಗಳನ್ನು ಮತ್ತು ಇನ್ನಿತರ ಪೀಠೋಪಕರಣಗಳನ್ನು ಮೂರನೇ ಮಹಡಿಯಿಂದ ಕೆಳಕ್ಕೆ ಎಸೆಯಲಾಗಿದೆ. ಇದೆಲ್ಲಾ

ಆಗಿರುವುದು ಸವರ್ಣೀಯರ ಹಿಂದೂಗಳಿಗೆ. ಅವರು ಪೋಲೀಸರ ವಿರುದ್ಧ ದೂರಿತ್ತರು. ನಾನು ಐ. ಜಿ. ಅವರನ್ನು ಭೇಟಿಮಾಡಿ ಆ ಪ್ರದೇಶಕ್ಕೆ ಹೋಗಬೇಡಿ ಎಂದು ತಿಳಿಸಿದ್ದೆ. ಅವರೂ ಹೀಗೇಕಾಯಿತು ಎಂದು ಕೇಳಿದೆ. ಇದಕ್ಕೆ ನಾನು ಊಹಿಸಿದಂತೆ ಮೂರು ಕಾರಣಗಳಿರಬಹುದು. ಐ. ಜಿ. ನಮಗೆ ಸುಳ್ಳು ವಾಗ್ದಾನ ನೀಡಿರಬಹುದು. ಅವರು ಪೋಲೀಸರಿಗೆ ಆಜ್ಞೆ ಕಳಿಸಿರಲಿಕ್ಕಿಲ್ಲ ಅಥವಾ ಆಜ್ಞೆ ಕಳಿಸಿರಬೇಕು. ಅದು ಪೋಲೀಸರಿಗೆ ತಲುಪಿರಲಿಕ್ಕಿಲ್ಲ ಅಥವಾ ಆಜ್ಞೆ ತಲುಪಿರಬೇಕು. ಆದರೆ ಪೋಲೀಸಿನವರು ಪಾಲಿಸಿರಲಿಕ್ಕಿಲ್ಲ. ಐ. ಜಿ. ಗೆ ನಾನು ಹೇಳಿದೆ, ನೀವು ಪ್ರಜ್ಞಾವಂತ ವ್ಯಕ್ತಿಯಾಗಿದ್ದರೆ ಈ ಹೊತ್ತಿಗೆ ರಾಜೀನಾಮೆ ನೀಡಬೇಕಾಗಿತ್ತು, ಎಂದು. ನಿಜ ಹೇಳಬೇಕೆಂದರೆ, ಐ ಜಿ. ಆಜ್ಞೆ ಕಳಿಸಿದ್ದೂ ನಿಜ, ಅದು ಪೋಲೀಸರಿಗೆ ತಲುಪಿದ್ದೂ ನಿಜ, ಆದರೆ ಪೋಲೀಸ್ ಎಷ್ಟೊಂದು ಅಶಿಸ್ತಿನಿಂದ ಕೂಡಿತ್ತೆಂದರೆ ತಮ್ಮ ಹಿರಿಯ ಅಧಿಕಾರಿಗಳ ಆಜ್ಞೆಯನ್ನು ಪಾಲಿಸದಷ್ಟು.

ರಾಜಕೀಯ ಪಕ್ಷಗಳು ವಿಭಜನೆಗೊಂಡಿದ್ದವು. ಪತ್ರಿಕೆಗಳು ನಂಬಲನರ್ಹವಾಗಿದ್ದವು. ಪೋಲೀಸ್ ಅಶಿಸ್ತಿನಿಂದ ಕೂಡಿತ್ತು. ಇಂಥ ಸ್ಥಿತಿಯಲ್ಲಿ ನಮ್ಮ ನಿಮ್ಮಂತಹವರ ಗತಿ ಏನು? ನೋವುಣಿಗಳು ಮಾತ್ರ. ಪೋಲೀಸರ ಅಶಿಸ್ತಿನ ನಡವಳಿಕೆ, ಅವರ ಅಸತ್ಯ ಹೇಳಿಕೆಗಳು, ಪಕ್ಷಗಳ ರಾಜಕುಟಿಲತೆ ಮಧ್ಯೆ ನಾವು ನೋವುಣಿಗಳು. ಇವೆಲ್ಲವುಗಳ ಮಧ್ಯೆ ಹಿಂಸೆಯನ್ನು ಖಂಡಿಸಿ ಮುಂದೊದಗಬಹುದಾದ ಹಿಂಸಾಕಾಂಡವನ್ನು ಹತ್ತಿಕ್ಕಲು ಏಕಪಕ್ಷ ಕಮಿಟಿಯು ಶಾಂತಿಪ್ರತಿಷ್ಠಾನವೊಂದನ್ನು ಸ್ಥಾಪಿಸಿದೆವು. ಐದು ದಿನಗಳಲ್ಲಿ ಸರ್ವಸಮ್ಮತವಾಗುವಂಥ ಸೂತ್ರವೊಂದನ್ನು ರೂಪಿಸುವ ಯೋಜನೆಯಡಿ ಆಡಳಿತ ಪಕ್ಷ, ವಿರೋಧಪಕ್ಷಗಳೆಲ್ಲಾ ಒಂದು ಕಮಿಟಿ ರಚಿಸಿಕೊಂಡವು. ಈ ಕಮಿಟಿಯಲ್ಲಿ ಯಾವ ರಾಜಕೀಯ ಪಕ್ಷದ ಮುಖಂಡನೂ ಈ ಕಮಿಟಿಯ ಪೂರ್ವ ಸಮ್ಮತಿಯಿಲ್ಲದೆ ಗುಜರಾತ್ ಮೀಸಲಾತಿಯ ಬಗ್ಗೆ ಬಹಿರಂಗ ಹೇಳಿಕೆ ಕೊಡದೆಂದು ತೀರ್ಮಾನಿಸಿತು. ಆದರೆ ರಾಜಕಾರಣಿ ಪ್ರತಿ ದಿನಾ ತನ್ನನ್ನು ತಾನು ಪತ್ರಿಕೆಗಳಲ್ಲಿ ಕಂಡುಕೊಳ್ಳದಿದ್ದರೆ ತಾನು ಬದುಕಿಯೇ ಇಲ್ಲವೆಂದು ಭಾವಿಸಿಕೊಳ್ಳುತ್ತಾನೆ. ಪತ್ರಿಕಾ ಕಾಲಂಗಳಲ್ಲಿ ತನ್ನನ್ನು ತಾನು ಕಂಡುಕೊಳ್ಳದೆ ಇರುವುದು ಹೇಗೆ? ಆದ್ದರಿಂದ ಈ ಮುಚ್ಚಳಿಕೆ ಕಾರ್ಯರೂಪಕ್ಕಿಳಿಯಲಿಲ್ಲ. ಹಾಗಾಗಿ ಈ ಕಮಿಟಿ ಮುರಿದುಹೋಯಿತು. ಮಾತುಕತೆಗಳು ನಡೆಯಲು ಸಮಾನ ವೇದಿಕೆ ಇಲ್ಲವಾಯಿತು. ಸರ್ಕಾರ ಸವರ್ಣೀಯರ ಕೆಲವು ಬೇಡಿಕೆಗಳನ್ನು ಮಾನ್ಯ ಮಾಡಿತು. ಆದರೆ ಅದರಲ್ಲಿ ಕೆಲವು ದೋಷಗಳಿದ್ದುದರಿಂದ ಮುಖಂಡರು ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಅದನ್ನು ಒಪ್ಪಿಕೊಳ್ಳಲಿಲ್ಲ. ಅವರಿಗೆ ವೈದ್ಯಕೀಯ ಸೀಟುಗಳ ಮೀಸಲಾತಿಯಲ್ಲಿ ಸಂಖ್ಯೆಯನ್ನು ಇಳಿಸುವುದು ಬೇಕಾಗಿತ್ತು. ಪ್ರಾಥಮಿಕ ಹಂತದಲ್ಲಿ ಚಳುವಳಿ ಸ್ನಾತಕೋತ್ತರ ತರಗತಿಗಳಿಗೆ ಮೀಸಲಾತಿ ಇರುವುದನ್ನು ವಿರೋಧಿಸಿ ಪ್ರಾರಂಭವಾದರೂ ಬರುಬರುತ್ತಾ ಎಲ್ಲಾ ಹಂತದಲ್ಲೂ ಮೀಸಲಾತಿ ಇರುವುದರ ವಿರುದ್ಧ ಬೆಳೆಯತೊಡಗಿತು. ಸರ್ಕಾರಿ ಉದ್ಯೋಗದಲ್ಲೂ ಮೀಸಲಾತಿ ಇರಕೂಡದೆಂದು

ಧ್ವನಿ ಎದ್ದಿತು. ಗುಜರಾತ್ ಸರ್ಕಾರದ ನೌಕರರೂ ಮೀಸಲಾತಿಯನ್ನು ಪೂರ್ಣ ತೆಗೆದು ಹಾಕದಿದ್ದಾಗೆ ಅನಿರ್ದಿಷ್ಟ ಕಾಲ ಮುಷ್ಕರ ಹೂಡುವುದಾಗಿ ನಿರ್ಧರಿಸಿದರು. ಮಾರನೇ ದಿನ ಬ್ಯಾಂಕ್ ನೌಕರರು, ಜೀವವಿಮಾ ಕಾರ್ಪೊರೇಷನ್ ನೌಕರರೂ ಟ್ರೇಡ್ ಯೂನಿಯನ್ ನೌಕರರು ಮತ್ತು ಇನ್ನಿತರ ಬಿಳಿ ಬಟ್ಟೆಯ ಮಂದಿ ಅನಿರ್ದಿಷ್ಟ ಕಾಲ ಅಥವಾ ವಿಳಂಬಗತಿ ಮುಷ್ಕರಕ್ಕೆ ಅಣಿಯಾದರು. ವೈದ್ಯರು ಆಗಲೇ ಮುಷ್ಕರ ಹೂಡಿದ್ದರು. ಸುಮಾರು ೪೫ ದಿನ ಅವರು ಮುಷ್ಕರ ಹೂಡಿದ್ದರು. ಯಾವ ವೈದ್ಯನೂ ಸರ್ಕಾರಿ ಅಥವಾ ಮುನಿಸಿಪಲ್ ಆಸ್ಪತ್ರೆಗಳಿಗೆ ಹಾಜರಾಗಲಿಲ್ಲ. ಪ್ರತಿ ದಿನಾ ಅಹಮದಾಬಾದಿನಲ್ಲಿ ೪೫.೦೦೦ ಜನ ಆಸ್ಪತ್ರೆಗೆ ಬರುತ್ತಿದ್ದರು. ಆದರೆ ಅವರು ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿದ್ದರು. ಅವರಿಗೆ ಚಿಕಿತ್ಸೆ ನಿರಾಕರಿಸಲಾಯಿತು. ಹರಿಜನ ವೈದ್ಯರು ಮಾತ್ರ ಚಿಕಿತ್ಸೆ ನೀಡಿದರು, ಆದರೆ ಅವರ ಸಂಖ್ಯೆ ತುಂಬಾ ಕಡಿಮೆ. ಇದರಿಂದಾಗಿ ಜನಗಳು ಕಷ್ಟಗಳನ್ನನುಭವಿಸಬೇಕಾಯಿತು.

ಇದಕ್ಕೆ ಪೂರಕವಾಗಿ ಅಧ್ಯಾಪಕರುಗಳೂ ಮೀಸಲಾತಿ ವಿರುದ್ಧ ತಮ್ಮ ದನಿ ಎತ್ತಿದರು. ಕಡೆಗೊಂದು ದಿನ ಟ್ರೇಡ್ ಯೂನಿಯನ್, ಬ್ಯಾಂಕ್ ನೌಕರರು, ಜೀವವಿಮಾ ನೌಕರರು, ಅಧ್ಯಾಪಕರು, ಸರ್ಕಾರಿ ನೌಕರರು, ಪಂಚಾಯಿತ್ತಿಗಳು ಮತ್ತು ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಶನ್ ನೌಕರರು ಒಟ್ಟಾಗಿ ಸೇರಿ ಒಂದು ದೊಡ್ಡ ಘಟಕವಾಗಿ ಮೀಸಲಾತಿ ವಿರುದ್ಧ ಮುಷ್ಕರ ಸಾರಲು ನಿರ್ಧಾರವಾಯಿತು ಇವರ ಈ ನಿರ್ಧಾರದಿಂದ ಸರಕಾರಕ್ಕೆ ಬಹು ಪೇಚಿನ ಪರಿಸ್ಥಿತಿಯನ್ನು ಎದುರಿಸುವಂತಾಯಿತು. ಉರಿಯುವ ಗಾಯಕ್ಕೆ ತುಪ್ಪ ಸುರಿದಂತೆ ಸಾರ್ವಜನಿಕ ವಿಭಾಗದ ಪೋಲೀಸರು ಸಹ ಈ ಮುಷ್ಕರದಲ್ಲಿ ಭಾಗವಹಿಸುವುದಾಗಿ ಘೋಷಿಸಿದರು. ಇದು ಸರಕಾರಕ್ಕೆ ತುಂಬಾ ಇಕ್ಕಟ್ಟಿನ ಪರಿಸ್ಥಿತಿಯಾಗಿ ಪರಿಣಮಿಸಿತು. ಬರೀ ಮೀಸಲಾತಿ ಪ್ರಶ್ನೆಯಷ್ಟೇ ಈಗ ಉಳಿಯಲಿಲ್ಲ; ರಾಜ್ಯದ ಕಾನೂನು ವ್ಯವಸ್ಥೆಯ ಪ್ರಶ್ನೆಯೂ ಗಂಭೀರವಾಗತೊಡಗಿತು ಕಾನೂನು ವ್ಯವಸ್ಥೆ ಪೂರ್ಣ ಮುರಿದು ಬಿದ್ದರೆ ರಾಜ್ಯವೇ ಹೊತ್ತಿ ಉರಿದೀತು. ಮೀಸಲಾತಿ ಎಷ್ಟು? ಎಲ್ಲಿಯವರೆಗೆ? ಯಾವ ಹಂತದಲ್ಲಿ? ಎನ್ನುವುದಕ್ಕಿಂತ ಕಾನೂನು ವ್ಯವಸ್ಥೆ ಪ್ರಮುಖ ವಿಷಯವಾಗಿ ಪರಿಣಮಿಸಿತು. ನಾವು ಈ ಇಕ್ಕಟ್ಟಿನ ಪರಿಸ್ಥಿತಿಯನ್ನು ಶಮನಗೊಳಿಸಲು ಶತಪ್ರಯತ್ನ ಮಾಡಿ ಕಡೆಗೂ ಮುಷ್ಕರಗಳು ಪೂರ್ವ ಯೋಜನೆಯಂತೆ ನಡೆಯದಿರುವಂತೆ ಮಾಡಿದೆವು.

ನಾನು ಬೆಂಗಳೂರಿಗೆ ಬರುವ ಹಾದಿಯಲ್ಲಿ ಅಹಮದಾಬಾದಿನಲ್ಲಿ ತಂಗಿದ್ದೆ. ಆಗ ರಾಜ್ಯದ ಗೃಹಮಂತ್ರಿ ಟೆಲಿಫೋನಿನಲ್ಲಿ ಮಾತನಾಡಿ, ಒಪ್ಪಂದವೊಂದಕ್ಕೆ ಎಲ್ಲರೂ ಬಂದಿದ್ದೇವೆ, ಕರಾರು ಪತ್ರಕ್ಕೆ ಎಲ್ಲರೂ ಸಹಿ ಹಾಕಿದ್ದಾರೆ ಎಂದು ತಿಳಿಸಿದರು. ಇದನ್ನು ನಾನು ನನ್ನ ಸ್ನೇಹಿತರೊಬ್ಬರಿಗೆ ತಿಳಿಸಿದಾಗ, ಅವರು ಗೃಹಮಂತ್ರಿಯ ಮಾತನ್ನು ನಂಬಬೇಡಿ' ಸರಕಾರ ಈ ರೀತಿಯ ಒಪ್ಪಂದಕ್ಕೆ ಹಿಂದೆ ಅನೇಕ ಸಾರಿ ಬಂದು ತನ್ನ ಮಾತನ್ನು ಉಳಿಸಿಕೊಂಡಿಲ್ಲ. ಅನೇಕ ಸಾರಿ ಒಂದು ಅಭಿಪ್ರಾಯಕ್ಕೆ ಬಂದು ಮತ್ತೆ ಹಿಮ್ಮುಖಗೊಂಡಿದೆ

ಎಂದರು. ವೈದ್ಯರೂ ಸಹ ಹಿಂದೆ ಒಮ್ಮತಕ್ಕೆ ಬಂದು ಮತ್ತೆ ಅದನ್ನು ಹಿಂತೆಗೆದುಕೊಂಡಿದ್ದರು. ರಾಜಕೀಯ ಪಕ್ಷಗಳು ಒಮ್ಮತಕ್ಕೆ ಬಂದು ಮತ್ತೆ ಬೇರೆಯಾಗಿದ್ದವು. ಮತ್ತೆ ನಾನು ಗೃಹಮಂತ್ರಿಯವರಿಗೆ ಫೋನ್ ಮಾಡಿ ಸ್ಪಷ್ಟೀಕರಣ ಕೇಳಿದೆ. ಅದಕ್ಕೆ ಅವರು ಸೂರತ್, ಬರೋಡ, ಅಹಮದಾಬಾದ್ ಮತ್ತು ಜಾಮ್‌ನಗರದಿಂದ ಸುಮಾರು 40 ಮಂದಿ ವೈದ್ಯಕೀಯ ಕಾಲೇಜು ಪ್ರತಿನಿಧಿಗಳು ಹಾಜರಿದ್ದರು. ಅವರ ಪರವಾಗಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ ಸಹಿ ಹಾಕಿದ್ದಾರೆ ಎಂದು ತಿಳಿಸಿದರು. ಅಂತೂ ಒಂದು ಒಪ್ಪಂದಕ್ಕೆ ಬಂದು ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು. ಅಲ್ಲಿನ ಮೂರ್ತೀಭವಿಸಿದ್ದ ಸಮಸ್ಯೆಗಳು ಪರಿಹಾರಗೊಂಡವು. ಕಾಲೇಜುಗಳು ಬೇಗ ಪುನರಾರಂಭಗೊಳ್ಳಬೇಕು. ಸಮಸ್ಯೆಗಳೇನೇ ಇದ್ದರೂ ಪರಸ್ಪರ ಚರ್ಚೆಯ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಸಮಸ್ಯೆಗಳು ಇತ್ಯರ್ಥವಾಗದಿದ್ದಲ್ಲಿ ಅದನ್ನು ನಿಯೋಗವೊಂದಕ್ಕೆ ವಹಿಸಿಕೊಡಬೇಕು, ಆ ನಿಯೋಗ ನಿಷ್ಪಕ್ಷಪಾತವಾಗಿರಬೇಕು, ತಟಸ್ಥವಾಗಿರಬೇಕು. ಅವರು ಎಲ್ಲಾ ಸಮಸ್ಯೆಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಅದಕ್ಕೆ ತಕ್ಕ ಪರಿಹಾರ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಬೇಕು. ಈ ಸಲಹೆಗಳಿಗೆ ವೈದ್ಯರು ಪೂರ್ವಷರತ್ತಿಲ್ಲದೆ ಒಪ್ಪಿಕೊಂಡು ಚಳುವಳಿ ಹಿಂತೆಗೆದುಕೊಳ್ಳಲು ಒಪ್ಪಿದರು. ಸರಕಾರ ತಕ್ಷಣ ಕಾಲೇಜುಗಳು ಪುನರಾರಂಭಗೊಳ್ಳಬೇಕು, ಆಸ್ಪತ್ರೆಗಳು ಕಾರ್ಯಾರಂಭ ಮಾಡಬೇಕು ಎಂದು ಒತ್ತಾಯಿಸಿತು. ಮೀಸಲಾತಿಯಲ್ಲಿರುವ ಅವ್ಯವಸ್ಥೆಗಳನ್ನು ಪರಿಶೀಲಿಸುವುದಾಗಿ ಸರ್ಕಾರ ಭರವಸೆ ನೀಡಿತು. ಇಲ್ಲಿ ನಾನು ವಿಶೇಷವಾಗಿ ಹೇಳಬೇಕಾಗಿರುವುದೇನೆಂದರೆ ಗುಜರಾತಿನ ಮುಖ್ಯಮಂತ್ರಿಗಳು ಮೀಸಲಾತಿ ಪರ ದೃಢಮನೋಭಾವ ತಳೆದಿದ್ದರೆಂಬುದು. ಆದರೆ ಅವರ ಎಲ್ಲಾ ಸಹೋದ್ಯೋಗಿಗಳು ಮಾತ್ರ ಹಾಗಿರಲಿಲ್ಲ. ಎಷ್ಟೋ ಸರಿ ಮುಖ್ಯಮಂತ್ರಿಗಳು ತಮ್ಮ ಸಹೋದ್ಯೋಗಿಗಳ ಮುಂದೆ ಮುಜುಗರದ ಸಂದರ್ಭವನ್ನು ಎದುರಿಸಬೇಕಾಗುತ್ತಿತ್ತು. ಅವರು ಒಮ್ಮೆ ನನ್ನೊಡನೆ ವೈಯಕ್ತಿಕವಾಗಿ ಮಾತನಾಡುತ್ತಾ, ಮೀಸಲಾತಿಯನ್ನೇನಾದರೂ ತೆಗೆದುಹಾಕಿದರೆ, ನನ್ನ ಸಂಪುಟದಿಂದ ಹೊರಗೆ ನಿರ್ಗಮಿಸುವವರಲ್ಲಿ ನಾನೇ ಮೊದಲಿಗ ಎಂದು ತಿಳಿಸಿದರು. ಇದು ಮೀಸಲಾತಿ ಬಗ್ಗೆ ಪ್ರಸಿಕ್ತ ಅಧಿಕಾರ ರೂಢ ಮುಖಂಡರ ನಿಲುವು.

ನಾನು ಮೀಸಲಾತಿಯ ಅವ್ಯವಸ್ಥೆಯ ಮೂಲದ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸಹಜ ಸ್ಥಿತಿಯಲ್ಲಿ ಮೀಸಲಾತಿ ಎಂಬುದೇ ವಿಕೃತ. ಇದರ ಉಗಮಕ್ಕೆ ಕಾರಣ ಜಾತಿವ್ಯವಸ್ಥೆ ಮತ್ತು ಸಮಾಜವ್ಯವಸ್ಥೆ. ನಾನು ಮತ್ತು ನೀವು ಈ ವ್ಯವಸ್ಥೆಯನ್ನೇ ಪುನರ್‌ನಿರ್ಮಿಸಲು ಪ್ರಯತ್ನಿಸಬೇಕು. ಅದು ಎಂಥ ಪ್ರಯತ್ನವಾಗಬೇಕೆಂದರೆ ಎಂಥದೇ ಸನ್ನಿವೇಶದಲ್ಲಿ ಯಾರಿಗೇ ಆಗಲಿ ಮೀಸಲಾತಿಯ ಅವಶ್ಯಕತೆ ಇರಕೂಡದು. ಮನುಷ್ಯ ಮನುಷ್ಯನಿಗೆ ಆತ್ಮೀಯನಾಗುವುದಕ್ಕೆ ಮೂರು ಅಡಚಣೆಗಳಿವೆ. ಈ ಮೂರು ಅಡಚಣೆಗಳು ಶತಶತಮಾನಗಳಿಂದ ಮನುಷ್ಯನ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿವೆ. ಅದರಲ್ಲಿ ಒಂದು ಸಂಪತ್ತು. ಸಂಪತ್ತು ಉಳ್ಳವನು ಉಳ್ಳದವನಿಂದ

ಬೇರ್ಪಟ್ಟಿರುತ್ತಾನೆ. ಸಂಪತ್ತು ಯಾವಾಗಲೂ ಮನುಷ್ಯ ಮನುಷ್ಯನ ಮಧ್ಯದ ಮಧುರ ಬಾಂಧವ್ಯಕ್ಕೆ ಅಡ್ಡಿಯಾಗಿದೆ. ವಿಶ್ವದಾದ್ಯಂತ ಇಂದು ಸಂಪತ್ತು ಪ್ರಧಾನ ಅಂಶವಾಗಿದೆ. ಹಾಗಾಗಿ ಇದು ಬಂಡವಾಳ ವ್ಯವಸ್ಥೆಯೆಂಬ ಒಂದು ಹೊಸ ವ್ಯವಸ್ಥೆಗೆ ಜನ್ಮ ಕೊಟ್ಟಿದೆ. ಆದ್ದರಿಂದ ಮನುಷ್ಯ ಸಂಪತ್ತಿಗಿಂತ ಶ್ರೇಷ್ಠ ಎಂದಾಗಬೇಕು. ಆದರೆ ಈಗಿರುವುದು ಸಂಪತ್ತು ಮನುಷ್ಯನಿಗಿಂತ ಶ್ರೇಷ್ಠ ಎಂದು. ಎಲ್ಲಿ ಬಂಡವಾಳ ಮನುಷ್ಯನನ್ನು ಆಕ್ರಮಿಸಿಕೊಳ್ಳುವುದಿಲ್ಲವೋ ಅಲ್ಲಿ ಮನುಷ್ಯ ಪ್ರಮುಖನಾಗುತ್ತಾನೆ ಎಲ್ಲಿ ಸಂಪತ್ತು ಪ್ರಧಾನವಾಗುತ್ತದೋ ಅಲ್ಲಿ ಮನುಷ್ಯ ಗೌಣವಾಗುತ್ತಾನೆ. ಈಗ ನಾವು ಹೋಗಬೇಕಾಗಿರುವುದು ಮಾನವ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಹೊರತು ಬಂಡವಾಳಶಾಹಿ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಲ್ಲ ಈ ವ್ಯವಸ್ಥೆ ಮನುಷ್ಯನನ್ನು ನಿಯಂತ್ರಿಸಿ ಸರಕಾರದ ಮೂಲಕ ಮನುಷ್ಯನ ಮಧ್ಯೆ ಬಿರುಕನ್ನುಂಟು ಮಾಡುತ್ತದೆ. ಸರಕಾರ ಎಲ್ಲಾ ಕಡೆಯಲ್ಲೂ ಮನುಷ್ಯ ಮನುಷ್ಯನ ಮಧ್ಯೆ ಬೆಸುಗೆಯುಂಟುಮಾಡಲು ಯತ್ನಿಸುವುದಿಲ್ಲ. ಆದ್ದರಿಂದ ಮನುಷ್ಯ ಪ್ರಭುತ್ವದ ಶಕ್ತಿ ಪೂರ್ಣ ಬೆಳೆಯುಗೊಡದಂತೆ ಸರ್ಕಾರದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಜವಾಬ್ದಾರಿಯನ್ನು ಹೊರುವುದು ಸರ್ಕಾರದ ಹೊಣೆಯೇ ಹೊರತು ಕಾನೂನು ಮನುಷ್ಯನನ್ನು ನಿಯಂತ್ರಿಸುವುದಲ್ಲ. ಪ್ರಭುತ್ವದ ಹೊಸ ವ್ಯವಸ್ಥೆ ರೂಪುಗೊಡು ಸ್ಥಾಪಿತವಾಗಬೇಕು. ಮನುಷ್ಯನನ್ನು ನಿಯಂತ್ರಿಸುವ ಇನ್ನೊಂದು ಪ್ರಭಾವಯುತ ಅಂಶವೆಂದರೆ ಆಯುಧ. ಕೊಲ್ಲುವುದಕ್ಕಿಂದೇ ಅದನ್ನು ಸೃಷ್ಟಿಸಲಾಗಿದೆ. ಇದನ್ನು ಇಲ್ಲಿಯುವರೆಗೆ ಮನುಷ್ಯನನ್ನು ಕೊಲ್ಲುವುದಕ್ಕೆ ಬಿಟ್ಟು ಬೇರೆ ಕಾರ್ಯಗಳಿಗೆ ಯಾರೂ ಬಳಸಿಲ್ಲ. ಯುದ್ಧದಲ್ಲಾಗಲಿ ಅಥವಾ ಹೊರಗಾಗಲಿ ಈ ಸಾಧನವನ್ನು ಮನುಷ್ಯನನ್ನು ಕೊಲ್ಲುವುದಕ್ಕಾಗಿಯೇ ಬಳಸಲಾಗುತ್ತಿದೆ. ಮನುಷ್ಯ ಪ್ರಜ್ಞೆಯಲ್ಲಿ ಸದಾಕಾಲ ಗುಂಯ್ ಗುಡುತ್ತಿರುವ ಈ ಮೂರೂ ಪ್ರಭಾವಶಾಲಿ ಅಂಶಗಳನ್ನು ತೊಡೆದು ಹಾಕುವ ಪ್ರಯತ್ನ ಮಾಡಬೇಕು. ಸಂಪತ್ತು ಮತ್ತು ಮನುಷ್ಯನ ಸಂಬಂಧದಲ್ಲಿ ಮನುಷ್ಯ ಪ್ರಭಾವಶಾಲಿಯಾಗಬೇಕು. ಪ್ರಭುತ್ವದ ಕಾರ್ಯಾಚರಣೆಯಲ್ಲಿ ಜನಗಳು ಪ್ರಧಾನ ಪಾತ್ರವಹಿಸಬೇಕು. ಯುದ್ಧಗಳು ಕಡಿಮೆಯಾಗಿ ಉತ್ಪಾದನೆ ಆದರ ಸ್ಥಾನದಲ್ಲಿ ಪ್ರಭಾವಶಾಲಿಯಾಗಬೇಕು. ಹೊಸ ಸಮಾಜದಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಸಮಾನ ಹಕ್ಕುಗಳಿರಬೇಕು. ನಾನು ಡಾ॥ಅಂಬೇಡ್ಕರ್ ಜನಿಸಿದ ರಾಜ್ಯದಲ್ಲಿ ಜನ್ಮ ತಳೆದಿರುವುದು ಒಂದು ಪ್ರತಿಷ್ಠೆಯೆಂದು ಭಾವಿಸಿದ್ದೇನೆ. ನಾನು ಮಹಾರಾಷ್ಟ್ರದವನು. ಇದೇ ರಾಜ್ಯದಲ್ಲಿ ಡಾ॥ಅಂಬೇಡ್ಕರ್ ಹುಟ್ಟಿ ಬೆಳೆದದ್ದು. ಈ ದಿನ ಬೆಳಿಗ್ಗೆ ನಿಮ್ಮ ಮಧ್ಯದಲ್ಲಿದ್ದು ನಿಮ್ಮ ಮೆದುಳನ್ನು ತಟ್ಟುತ್ತಿರುವ ವಿಷಯದ ಬಗೆಗಿನ ವಿಚಾರ ಸಂಕಿರಣದಲ್ಲಿ ಭಾಗವಹಿಸುತ್ತಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ.

—(ಅನುವಾದ: ಲಿಂಗದೇವರು ಹಳೆಮನೆ)

ಕುಲದೀಪ್ ನಯ್ಯರ್

ಹರಿಜನರನ್ನು ದಾಳಗಳನ್ನಾಗಿ ಉಪಯೋಗಿಸಲಾಗಿದೆ. ಕಾಳಜಿ ಇದೆಯೆಂದು ತೋರಿಸಿಕೊಳ್ಳುವ ರಾಜಕೀಯ ಪಕ್ಷಗಳಿಗೆ ಆಸಕ್ತಿ ಇರುವುದು ಮತಗಳಲ್ಲಿ. ಚುನಾವಣೆ ಮುಗಿದೊಡನೆ ಹರಿಜನರ ಬಗ್ಗೆ ಪಕ್ಷಗಳೂ ಮರೆತುಬಿಡುತ್ತವೆ.

ಅದು ಪರಸ್ಪರ ನಂಬಿಕೆಯ ಮತ್ತು ಒಗ್ಗಟ್ಟನ್ನು ತೋರಿಸುವ ನೋಟವಾಗಿತ್ತು. ಎಲ್ಲಾ ಪಕ್ಷಗಳ ಸದಸ್ಯರೂ ಸಂವಿಧಾನದ ಸೃಷ್ಟಿಕರ್ತರು ಮೂರು ದಶಕಗಳ ಹಿಂದೆ ಮಾಡಿದ ಕಮಿಟ್‌ಮೆಂಟನ್ನು ಅವಿರೋಧವಾಗಿ ಒಪ್ಪಿಕೊಳ್ಳಲು ಎದ್ದು ನಿಂತಿದ್ದರು. ಈ ಕಮಿಟ್‌ಮೆಂಟು ಹರಿಜನರಿಗೆ ಮೀಸಲಾತಿಗೆ ಸಂಬಂಧಪಟ್ಟಿದ್ದು.

ಕೆಲವರು ತಮ್ಮ ಅಂತರಾತ್ಮವನ್ನು ಸುಮ್ಮನಾಗಿಸಲು, ಇನ್ನು ಕೆಲವರು ಆದರ್ಶದಿಂದ ಪ್ರೇರಿತರಾಗಿ, ಮತ್ತೆ ಕೆಲವರು ರಾಜಕೀಯ ಉದ್ದೇಶಗಳಿಗಾಗಿ-ಲೋಕಸಭೆಯ ಎಲ್ಲಾ ಸದಸ್ಯರೂ ಶತಮಾನಗಳಿಂದ ಮೂಕ-ಅಪಮಾನ ಮತ್ತು ಸಾಮಾಜಿಕ ಬಹಿಷ್ಕಾರ ಅನುಭವಿಸಿದ ಹರಿಜನರ ಬಗ್ಗೆ ಮಾತಾಡಲು ಪೈಪೋಟಿ ನಡೆಸಿದ್ದರು.

ಇದರ ಬಗೆಗಿನ ಠರಾವು ತುಂಬಾ ಸೌಮ್ಯ ಸ್ವರೂಪದ್ದು ಅನ್ನಿಸಿತ್ತು. ಠರಾವನ್ನು ಬಲಗೊಳಿಸಲು ಒಂದು ತಿದ್ದುಪಡಿಯನ್ನು ಮಾಡಲಾಯಿತು. ತಿದ್ದುಪಡಿಯೂ ಸೇರಿಕೊಂಡ ಠರಾವು ಹೀಗೆ: "ಮೀಸಲಾತಿ ಬಗ್ಗೆ ಗುಜರಾತಿನಲ್ಲಿರುವ ಈಗಿನ ಪರಿಸ್ಥಿತಿ ಬಗ್ಗೆ ಲೋಕಸಭೆ ತನ್ನ ಕಾಳಜಿಯನ್ನು ಮತ್ತು ಕಳವಳವನ್ನು ವ್ಯಕ್ತಪಡಿಸುತ್ತದೆ. ಮೀಸಲಾತಿ ಬಗ್ಗೆ ಸಂವಿಧಾನದಲ್ಲಿ ಹೇಳಿದ ರಾಷ್ಟ್ರೀಯ ನೀತಿ ಬಗ್ಗೆ ಲೋಕಸಭೆ ತನ್ನ ಕಮಿಟ್‌ಮೆಂಟನ್ನು ಪುನರುಚ್ಚರಿಸುತ್ತದೆ. ಹಿಂದುಳಿದ ಜಾತಿ, ವರ್ಗ ಮತ್ತು ಸಮಾಜದ ಇತರ ದುರ್ಬಲರ ಮೇಲೆ ನಡೆಯಿತೆಂದು ವರದಿಯಾದ ಹಿಂಸೆ, ಅವರ ಆಸ್ತಿಯ ನಾಶ, ಅತ್ಯಾಚಾರ ನಮ್ಮ ಸಂಸ್ಕೃತಿಗೆ ವಿರೋಧವಾದದ್ದು, ರಾಷ್ಟ್ರಪಿತ ಗಾಂಧೀಜಿ ಉಪದೇಶಿಸಿದ ತನ್ನ ಜೀವವನ್ನೇ ತೆತ್ತ ಅಹಿಂಸೆಗೆ ವಿರೋಧವಾದದ್ದು. ನಮ್ಮ ಪರಂಪರೆಯನ್ನು ಎತ್ತಿ ಹಿಡಿಯಲು, ಶಾಂತಿ ಮತ್ತು ಸಹಜತೆಯ ಪುನಸ್ಥಾಪನೆಗೆ ಪ್ರಯತ್ನಿಸುವುದು, ಆದಕ್ಕಾಗಿ ರಾಷ್ಟ್ರಮಟ್ಟದಲ್ಲಿ ಹೆಣಗುವುದು ಪ್ರತಿಯೊಬ್ಬ ನಾಗರಿಕನ ಗುರಿ."

೧೯೬೨ರಲ್ಲಿ ಚೀನೀಯರ ಕೈಯಲ್ಲಿ ಏಟು ತಿಂದಾಗ ಲೋಕಸಭೆ ಮಂಜೂರು ಮಾಡಿದ ಠರಾವನ್ನ ಈ ಠರಾವು ನನಗೆ ನೆನಪಿಸುತ್ತದೆ. ಚೀನೀಯರು ವಶಪಡಿಸಿಕೊಂಡ ೧೪,೦೦೦ ಚದರ ಮೈಲು ಭಾಗವನ್ನು ಮರಳಿ ವಶಪಡಿಸಿಕೊಳ್ಳುವವರೆಗೆ ದೇಶ ವಿಶ್ರಾಂತಿ ಪಡೆಯುವುದಿಲ್ಲವೆಂದು ಆಗ ಹೇಳಲಾಗಿತ್ತು. ಅದು ೨೦ ವರ್ಷಗಳ ಹಿಂದೆ. ಅನಂತರ

ಮೀಸಲಾತಿ ಮತ್ತು ರಾಜಕೀಯ ಪಕ್ಷಗಳು

ಇದುವರೆಗೂ ಈ ಕುರಿತು ಏನೂ ಆಗಿಲ್ಲ. ಶಾಂತಿಯುತ ಒಪ್ಪಂದದ ಸಾಧ್ಯತೆಗಳನ್ನು ನಾನು ಅಲ್ಲಗಳೆಯುತ್ತಿಲ್ಲ. ನಾನು ಒಂದು ಕಾಲದ ಸಾರ್ವಜನಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಆಮೇಲೆ ಆಫೀಸಿನ ದಫ್ತರಗಳಲ್ಲಿ ಧೂಳು ತಿನ್ನುತ್ತಾ ಕೂರುವ ಠರಾವುಗಳ ವಿಧಿ ಬಗ್ಗೆ ಹೇಳುತ್ತಿದ್ದೇನೆ.

ಹರಿಜನರ ಮೇಲಿನ ಠರಾವಿಗೂ ಈ ಗತಿ ಬರುವುದಿಲ್ಲವೆಂದು ಆಶಿಸೋಣ. ರಾಜಕೀಯ ಪಕ್ಷಗಳು ಒತ್ತಡವಿದ್ದಾಗ ಕೆಲವು ಕೆಲಸಗಳನ್ನು ಮಾಡುತ್ತವೆ; ಒತ್ತಡ ಸಡಿಲಗೊಳ್ಳುತ್ತಲೇ ಮತ್ತೆ ತಮ್ಮ ಹಳೆಯ ಉದಾಸೀನ ಧೋರಣೆ ತಾಳುತ್ತವೆ. ಇದನ್ನು ಒತ್ತುಕೊಟ್ಟು ಹೇಳಬೇಕಾಗಿದೆ ಏಕೆಂದರೆ ಹಿಂದುಳಿದ ಜಾತಿಯ ಕಮಿಶನರ್‌ರ ವರದಿಗಳ ಪ್ರಕಾರ ಮೇಲ್ಜಾತಿಯವರ ಸಂಘಟಿತ ಹಿಂಸೆ ಕಮ್ಮಿಯಾಗಿಲ್ಲ, ಮತ್ತು ಇದು ಬರೀ ಜಾತಿದ್ವೇಷಕ್ಕಿಂತ ಹೆಚ್ಚು ವರ್ಗಸಮರವನ್ನೂ ಸೂಚಿಸುತ್ತದೆ ಒಂದು ವರದಿ ಪ್ರಕಾರ, ಈಗಿನ ಜನಸಂಖ್ಯೆಯ ಶೇಕಡಾ ಐವತ್ತಕ್ಕಿಂತ ಹೆಚ್ಚು ಜನ ಬಡತನದ ರೇಖೆಗಿಂತ ಕೆಳಗಿದೆ. ಇವರಲ್ಲಿ ಬಹುಪಾಲು ಹಿಂದುಳಿದ ಜಾತಿ, ವರ್ಗಗಳವರು. ಹಿಂದುಳಿದ ಜಾತಿಯ ಕೃಷಿಕರಲ್ಲಿ ಬಹುಪಾಲು (ಶೇ. ೫೧) ಕಮ್ಮಿ ಕೃಷಿಭೂಮಿ ಹೊಂದಿದವರು-ಸುಮಾರು ಎರಡೂವರೆ ಎಕ್ರೆಗಿಂತಲೂ ಕಮ್ಮಿ.

ಯೋಜನಾ ಆಯೋಗ ಆರನೇ ಪಂಚವಾರ್ಷಿಕ ಯೋಜನೆಯ ಕರಡಲ್ಲಿ ಹೀಗೆಂದು ಒಪ್ಪಿಕೊಂಡಿದೆ: ''ಅನೇಕ ವರ್ಷಗಳಿಂದ ಅಸಮಾನತೆ ಮತ್ತು ಬಡತನ ಹಾಗೇ ಇದೆ ಎನ್ನುವುದನ್ನು ಎರಡು ಅನುಕೂಲಗಳಿಲ್ಲದ ಪಂಗಡಗಳ-ಹಿಂದುಳಿದ ಜಾತಿ ಮತ್ತು ವರ್ಗಗಳ-ಪರಿಸ್ಥಿತಿ ಪರಿಶೀಲಿಸುವುದರ ಮೂಲಕ ತಿಳಿಯಬಹುದು.''

ಹರಿಜನರನ್ನು ದಾಳಗಳನ್ನಾಗಿ ಉಪಯೋಗಿಸಲಾಗಿದೆ. ಕಾಳಜಿ ಇದೆಯೆಂದು ತೋರಿಸಿಕೊಳ್ಳುವ ರಾಜಕೀಯ ಪಕ್ಷಗಳಿಗೆ ಆಸಕ್ತಿಯಿರುವುದು ಮತಗಳಲ್ಲಿ, ಚುನಾವಣೆ ಮುಗಿದೊಡನೆ ಹರಿಜನರ ಬಗ್ಗೆ ಪಕ್ಷಗಳೂ ಮರೆತು ಬಿಡುತ್ತವೆ.

ದಶಕಗಳ ಹಳೆಯ ರಾಜಕೀಯ ಪಕ್ಷಗಳಿಗೂ ಹರಿಜನನೊಬ್ಬ ಅಧ್ಯಕ್ಷನಾಗಿದ್ದದ್ದು ಅಪರೂಪ. ಆಂಧ್ರಪ್ರದೇಶದ ಸಂಜೀವಯ್ಯ ಒಬ್ಬರೇ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಹರಿಜನ; ಅದೂ ನೆಹರೂ ಕೃಪಾಛತ್ರದಿಂದಾಗಿ. ಸಮಾಜವಾದಿಗಳೂ ಹರಿಜನನೊಬ್ಬನನ್ನ ದಶಕಗಳ ಹಿಂದೆ ಅಧ್ಯಕ್ಷನಾಗಿ ಆರಿಸಿದ್ದರು. ಇವೆರಡೂ ಉದಾಹರಣೆಗಳು ಹರಿಜನರಿಗೆ ಮುಖ್ಯಹುದ್ದೆ ಸಿಕ್ಕುವುದು ಅಪರೂಪಕ್ಕೊಮ್ಮೆ ಎಂದಷ್ಟೇ ಶ್ರುತಪಡಿಸುತ್ತವೆ. ಕಾಂಗ್ರೆಸ್ ಪಕ್ಷದಲ್ಲಿ ಪ್ರಾಮುಖ್ಯತೆ ಪಡೆದ ಇನ್ನೊಬ್ಬ ವ್ಯಕ್ತಿಯೆಂದರೆ ಜಗಜೀವನರಾಮ್. ಆದರೆ ಜಗಜೀವನರಾಮ್ ತಿಳುವಳಿಕೆ ಮತ್ತು ಸಾಮಾನ್ಯಜ್ಞಾನ-ಎರಡೂ ಒಟ್ಟಿಗೆ ಸೇರಿಕೊಂಡ ಅಪರೂಪದ ವ್ಯಕ್ತಿ. ಅವರನ್ನು ನಿರ್ಲಕ್ಷಿಸುವುದು ಸಾಧ್ಯವಿರಲಿಲ್ಲ. ರಾಜಕೀಯ ಪಕ್ಷಗಳ ಅಧ್ಯಕ್ಷಗಿರಿಯೊಂದರಿಂದ ಮಾತ್ರವೇ ಹರಿಜನರನ್ನು ದೂರವಿಟ್ಟಿದ್ದಲ್ಲ. ಆಡಳಿತ ಮೆಂಬರಾಗಿಯೂ ಪಕ್ಷಗಳಲ್ಲಿ ಹರಿಜನರಿರುವುದು ಅಪರೂಪ. ಅಂಥಾ ಸ್ಥಾನಕ್ಕೆ ಯಾವ ಹರಿಜನನೂ ಚುನಾಯಿತನಾಗಿಲ್ಲ. ನಾಮಕರಣ ಮಾಡುವ

ವಿಧಾನವೇನೋ ಇದೆ. ರಾಜಕೀಯ ಪಕ್ಷಗಳ ಆಡಳಿತ ಕಮಿಟಿಯಲ್ಲೂ ಹರಿಜನರಿಗೆ ಇಂತಿಷ್ಟು ಸೀಟುಗಳೆಂದು ನಿಗದಿ ಮಾಡುವ ಅಗತ್ಯವಿದೆ.

ಎಗಾಲಿಟೇರಿಯನಿಸಂ ಬಗ್ಗೆ ಮಾತಾಡುವ ಕಮ್ಯೂನಿಸ್ಟ್ ಪಕ್ಷದಲ್ಲೂ ಮುಖ್ಯ ಹುದ್ದೆಯಲ್ಲಿ ಹರಿಜನನೊಬ್ಬ ಇದ್ದದ್ದಿಲ್ಲ. ಪಾಲಿಟ್‌ಬ್ಯೂರೋಗಳಿಗೆ ಪ್ರಾದೇಶಿಕ ಪ್ರತಿನಿಧಿಗಳಿದ್ದಾರೆ; ಹರಿಜನ ಪ್ರತಿನಿಧಿಗಳಿಲ್ಲ. ದೃಷ್ಟಿಕೋನ ಆಶ್ರಯದಾತನದ್ದು; ಇಲ್ಲಿ ಸಂವಿಧಾನದ ಪ್ರಕಾರದ್ದು. ಮೂಲಭೂತ ವಿಷಯಗಳಿಗೆ ಹೋಗುವ ಪ್ರಯತ್ನ ಇಲ್ಲ. ಸಮಸ್ಯೆ ಸಹಾನುಭೂತಿಯದ್ದು ಅಥವಾ ನೌಕರಿಯದ್ದಲ್ಲ. ಅದಕ್ಕೂ ಮೂಲಭೂತವಾದದ್ದು. ಹಿಂದೂಗಳಲ್ಲಿ ಒಂದು ವರ್ಗವನ್ನು ಕೆಳಸ್ಥಾನಕ್ಕೆ ತಳ್ಳಲಾಗಿದೆ. ಅಲ್ಲಿಂದ ಪಾರಾಗುವ ವಿಧಾನ ಅದಕ್ಕೆ ಗೊತ್ತಿಲ್ಲ. ಪಾರಾಗಲು ಬೇಕಾದ ಉಪಕರಣಗಳೂ ಅದರ ಹತ್ತಿರ ಇಲ್ಲ.

ಹರಿಜನರ ಹಿತ ಕಾಯುವ ಕಾನೂನುಗಳಿವೆ, ನಿಜ. ಭಾರತದ ಸಾಮಾಜಿಕ ಕೆಡುಕುಗಳನ್ನು ತೊಡೆದು ಹಾಕಲೂ ನಿರ್ಧರಿಸಲಾಗಿದೆ. ಸಂವಿಧಾನದ ಸೃಷ್ಟಿಕರ್ತರು ಅಸ್ಪೃಶ್ಯತೆಯನ್ನೂ ಬಹಿಷ್ಕರಿಸಿದ್ದಾರೆ. ಅಸ್ಪೃಶ್ಯತೆಯ ಕಾರಣಕ್ಕಾಗಿ ಮಾಡುವ ಯಾವ ಅಪರಾಧವನ್ನೂ ಕಾನೂನು ಪ್ರಕಾರ ಶಿಕ್ಷಾರ್ಹವೆಂದು ಪರಿಗಣಿಸಿದ್ದಾರೆ. ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಜಾತಿ ಪದ್ಧತಿಯನ್ನು ಹೋಗಲಾಡಿಸದೆ ಅಸ್ಪೃಶ್ಯತೆ ಹೋಗಲಾಡಿಸಲು ಸಾಧ್ಯವಿಲ್ಲವೆಂದು ಕೆಲವರು ಪ್ರತಿಭಟಿಸಿದರು. ಅಸ್ಪೃಶ್ಯತೆ ರೋಗವಲ್ಲ; ಆದರೆ ರೋಗದ ಸೂಚನೆ ಎಂದು ಅವರೆಂದರು. ಇಲ್ಲಿ ರೋಗವೆಂದರೆ ಜಾತಿಪದ್ಧತಿ. ಜೊತೆಗೆ, ಈ ಪದವನ್ನು ಅಸ್ಪಷ್ಟವೆಂದೂ ಹೇಳಲಾಯಿತು. ಒಬ್ಬ ಮೆಂಬರ ಪ್ರಕಾರ "ಅಸ್ಪೃಶ್ಯತೆಯನ್ನು ನಿರ್ವಚಿಸದೆ ಅದನ್ನು ಅಪರಾಧವೆಂದು ಪರಿಗಣಿಸಲಾಗುವುದಿಲ್ಲ." ಅಸೆಂಬ್ಲಿಯಲ್ಲಿ ಪದವನ್ನು ನಿರ್ವಚಿಸಲು ಪ್ರಯತ್ನಿಸಲಾಯಿತು. ಯಾವ ನಿರ್ವಚನೆಯೂ ಎಲ್ಲರಿಗೂ ಒಪ್ಪಿಗೆಯಾಗಲಿಲ್ಲ.

ಸಂವಿಧಾನ ರಚಿಸುವಲ್ಲಿ ಜವಾಬ್ದಾರರಾದ ಡಾ.ಅಂಬೇಡ್ಕರ್ ಕಾನೂನೊಂದರಿಂದಲೇ ಹರಿಜನರ ಮೇಲಿನ ಭೇದ ನೀಗುವುದಿಲ್ಲವೆಂಬು ಕಂಡುಕೊಂಡರು. ಅವರು ಮೇಲ್ಜಾತಿಯವರು ಪ್ರಜಾಪ್ರಭುತ್ವ ರೀತಿ ವರ್ತಿಸುವುದರ ಮೇಲೆ ಒತ್ತುಕೊಟ್ಟರು. ಅವರು ಸರಿಯಾಗಿಯೇ ಹೇಳಿದರು: ಪ್ರಜಾಪ್ರಭುತ್ವವೆಂದರೆ "ಸಮಾನತೆ, ಸ್ವಾತಂತ್ರ್ಯ, ಸಹೋದರತೆ ಮುಖ್ಯಜೀವನ ಸೂತ್ರವೆಂದು ಕಾಣುವ ಒಂದು ಜೀವನ ವಿಧಾನ. ಈ ತತ್ವಗಳನ್ನು, ಸೂತ್ರಗಳನ್ನು ಪ್ರತ್ಯೇಕವಾಗಿ ನೋಡುವಂತಿಲ್ಲ, ಒಂದರಿಂದ ಇನ್ನೊಂದನ್ನು ಬೇರ್ಪಡಿಸಿದರೆ ಪ್ರಜಾಪ್ರಭುತ್ವದ ಉದ್ದೇಶಕ್ಕೇ ಮಾರಕ.

......ಸ್ವಾತಂತ್ರ್ಯವನ್ನು ಸಹೋದರತೆಯಿಂದ ಬೇರ್ಪಡಿಸಲಾಗದು. ಸಮಾನತೆಯಿಲ್ಲದ ಸ್ವಾತಂತ್ರ್ಯ ಅನೇಕರು ಕೆಲವರಿಗಿಂತ ಮೇಲಾಗುವಂತೆ ಮಾಡಬಲ್ಲದು. ಸ್ವಾತಂತ್ರ್ಯವಿಲ್ಲದ ಸಮಾನತೆ ವ್ಯಕ್ತಿಗತ ಮುನ್ನುಗ್ಗುವಿಕೆಯನ್ನು ಸಾಯಿಸುತ್ತದೆ. ಸೋದರತ್ವವಿಲ್ಲದ ಸಮಾನತೆ ಮತ್ತು ಸ್ವಾತಂತ್ರ್ಯ ಜೀವನದ ಸಹಜಗತಿಯ ಭಾಗವಾಗಲಾರವು."

ಈ ಭಾವನೆಗಳನ್ನು ಕಾರ್ಯಗತಗೊಳಿಸುವ ಬದಲು ಹಿಂದೂಸಮಾಜ ತನ್ನ ಪಾಪಗಳನ್ನು ಅಸ್ಪೃಶ್ಯರಿಗೆ ಹರಿಜನ ಎಂಬ ಹೆಸರು ಕೊಡುವುದರ ಮೂಲಕ ತೊಳೆದುಕೊಳ್ಳಲು ಪ್ರಯತ್ನಿಸಿತ್ತು. ಈ ನಾಮಕರಣಗಳ ಹಿಂದೆ ವಸ್ತುಸ್ಥಿತಿಯನ್ನು ಎದುರಿಸಲಾಗದ ಮನೋಧರ್ಮವಿದೆ.

ನಾನು ಸೂಚಿಸುತ್ತಿರುವುದು ಗಟ್ಟಿಯಾದ ಕಾರ್ಯಕ್ರಮಗಳೇನೂ ಆಗಿಲ್ಲವೆಂದು. ಮೀಸಲಾತಿ ತೆಗೆದುಕೊಳ್ಳಿ. ಇತ್ತೀಚೆಗೆ ಲೋಕಸಭೆಯ ಸ್ಪೀಕರ್, ಕಾಂಗ್ರೆಸ್ಸಿನ ಕೆಲವು ಎಂ.ಪಿ.ಗಳು ಮತ್ತು ವಿರೋಧ ಪಕ್ಷ ಯಾವುದೋ ವಿಷಯ ಚರ್ಚಿಸಲು ಸೇರಿದರು. ಗುಜರಾತಿನ "ಜಾತಿಯುದ್ಧ" ದ ಬಗ್ಗೆ ಅವರೆಷ್ಟು ಕಾಳಜಿ ಹೊಂದಿದ್ದರೆಂದರೆ ಹೆಚ್ಚು ಸಮಯ ಹರಿಜನರಿಗೆ ಮತ್ತು ಗಿರಿಜನರಿಗೆ ಮೀಸಲಾತಿ ಚರ್ಚಿಸುವುದರಲ್ಲೇ ಕಳೆಯಿತು. 1980 ರಲ್ಲಿ ಇನ್ನೂ ಹತ್ತು ವರ್ಷಕ್ಕೆ ಮುಂದುವರಿಸಲಾದ ಸಂವಿಧಾನ ಸೂಚಿತ ಜವಾಬ್ದಾರಿ ಬಗ್ಗೆ ಯಾರೂ ಚರ್ಚಿಸಲಿಲ್ಲ. ಆದರೆ ಅನೇಕ ಧ್ವನಿಗಳು ಉಚ್ಚ ಮಟ್ಟದ ನೌಕರಿ ಮತ್ತು ವಿದ್ಯಾ ಇಲಾಖೆಗಳಲ್ಲಿ ಮೀಸಲಾತಿಯನ್ನು ಸಡಿಲಗೊಳಿಸುವುದರ ಬಗ್ಗೆ ಇದ್ದವು. ಅವರ ಮನಸ್ಸಲ್ಲಿದ್ದದ್ದು ಸ್ನಾತಕೋತ್ತರ ವೈದ್ಯ ತರಬೇತಿಯಲ್ಲಿ ಮೀಸಲಾತಿ. ಗುಜರಾತಿನ ಚಳುವಳಿಯ ಮೂಲವೂ ಇದೇ.

ವಿಷಯವನ್ನ ಅಲ್ಲಿಗೆ ಬಿಡಲಾಯಿತು. ಪಕ್ಷಗಳ ಮಟ್ಟದಲ್ಲಿ ಮತ್ತೆ ಎತ್ತಿಕೊಳ್ಳಬೇಕಾದ ವಿಷಯ ಇದು. ಮೀಸಲಾತಿಯ ಪರ-ವಿರುದ್ಧ ಬಿಸಿ ಚರ್ಚೆ ದೇಶದುದ್ದಕ್ಕೂ ಸಾಕಷ್ಟು ನಡೆಯುತ್ತಿದೆ. ಇನ್ನೂ ಹೆಚ್ಚಬಹುದು. ಕಾಂಗ್ರೆ ಮಾಡುವಂತೆ ಬಿ.ಜೆ.ಪಿ. ಯನ್ನು ಮಾತ್ರ ಜವಾಬ್ದಾರ ಮಾಡುವುದರಿಂದ ಉಪಯೋಗವಿಲ್ಲ. ಸನ್ನಿವೇಶ ಅದಕ್ಕಿಂತ ಗಂಭೀರದ್ದು. ರಾಜಕೀಯ ಪಕ್ಷಗಳು ಈ ಬಗ್ಗೆ ಒಪ್ಪಂದಕ್ಕೆ ಬರಬೇಕಾಗಿದೆ. ಶ್ರೀಮತಿ ಗಾಂಧಿ ಓಟು ಗಿಟ್ಟಿಸುವುದರ ಬಗ್ಗೆ ಮಾತ್ರ ಯೋಚಿಸುವುದಿಲ್ಲವೆಂದು ಆಶಿಸಬೇಕಾಗಿದೆ.

ಸಂವಿಧಾನದಲ್ಲಿ ಹರಿಜನ-ಗಿರಿಜನರಿಗೆ ಎರಡು ಮುಖ್ಯ ರಿಯಾಯಿತಿಗಳನ್ನು ಕೊಡಲಾಗಿದೆ. ವಿಧಿ 16 (4) ರಾಜ್ಯಸರಕಾರಗಳು "ಯಾವುದೇ ಹಿಂದುಳಿದ ವರ್ಗದ ನಾಗರಿಕನಿಗೆ" ನೌಕರಿ ಮೀಸಲಾತಿ ನೀಡಲು ಅವಕಾಶ ಕೊಡುತ್ತದೆ; ಮತ್ತು ವಿಧಿ 330 ಪರಿಶಿಷ್ಟ ಜಾತಿ ವರ್ಗಗಳಿಗೆ ಲೋಕಸಭೆಯಲ್ಲಿ ಅತಿ ಹೆಚ್ಚು ಸಂಖ್ಯೆಯ ಸೀಟುಗಳ ಭರವಸೆ ಕೊಡುತ್ತದೆ. ವಿಧಿ 330 ಬಗ್ಗೆ ಯಾರೂ ವಿರೋಧ ಎತ್ತಿಲ್ಲ. ಅದನ್ನು ಇಷ್ಟಪಡದೇ ಇದ್ದಿರಬಹುದು. ಆದರೆ ಅದು ದೊಡ್ಡ ಗಲಭೆಗೆ ಕಾರಣವಾಗಿಲ್ಲ.

ವಿಧಿ 16 (4) ವಿರುದ್ಧವೇ ಬಹುಜನಕ್ಕೆ ಸಿಟ್ಟಿರುವುದು. ಮೊದಲನೆಯದಾಗಿ ಮೀಸಲಾತಿ ವಿರುದ್ಧ ಎರಡನೆಯದಾಗಿ ಕಾಲದಿಂದ ಕಾಲಕ್ಕೆ ಇದರ ಸಂಖ್ಯೆ ಹೆಚ್ಚುತ್ತಿರುವುದರ ವಿರುದ್ಧ. ಕೆಲವು ರಾಜ್ಯಗಳಲ್ಲಿ ಮೀಸಲಾತಿ ಶೇ 50 ರಷ್ಟು ಹೆಚ್ಚಿದೆ. ಹಿಂದುಳಿದ ಜನಾಂಗದ ಪಟ್ಟಿಯೂ ದೊಡ್ಡದಾಗಿದೆ. ಇದು ಹರಿಜನರ ಮೇಲೂ ಪರಿಣಾಮ ಬೀರಿದೆ. ಯಾಕೆಂದರೆ ಈಗ ಅವರಿಗೆ ತಲುಪುತ್ತಿರುವುದು ಒಂದು ತಟಕಿನಷ್ಟು ಮಾತ್ರ. ಉಳಿದ ಹಿಂದೂ ಸಮಾಜಕ್ಕೆ ಇನ್ನೂ ಹೊಡೆತ ಬಿದ್ದಿದೆ. ಯಾಕೆಂದರೆ ಅದರ ಕ್ಷೇತ್ರ

ಮತ್ರಪಷ್ಟು ಚಿಕ್ಕದಾಗಿದೆ. ಆರ್ಥಿಕ ಬೆಳವಣಿಗೆ ಸಾಕಷ್ಟಾಗಿದ್ದರೆ ಪ್ರತಿಯೊಬ್ಬನಿಗೂ ಬೇಕಾಗುವಷ್ಟು ಇರುತ್ತಿತ್ತು. ಆದರೆ ಸರಕಾರದ ತಪ್ಪು ನೀತಿಯಿಂದಾಗಿ ಆರ್ಥಿಕ ಪ್ರಗತಿ ಆಗಿಲ್ಲ. ಹೀಗಾಗಿಯೇ ಈ ಒತ್ತಡಗಳು.

ರಾಜಕೀಯ ಪಕ್ಷಗಳು ಚರ್ಚಿಸಬೇಕಾದ್ದು ಮೀಸಲಾತಿಯೊಂದನ್ನೇ ಅಲ್ಲ. ಹಾಗೆ ಮಾಡುವುದು ತಪ್ಪು. ಹರಿಜನ ಗಿರಿಜನರಿಗೆ ಮಾಡಿದ ಅನ್ಯಾಯ ಎಷ್ಟು ತೀವ್ರ ವಾದ್ದೆಂದರೆ ಹಿಂದಿನ ಭೇದನೀತಿಯನ್ನು ಸರಿಪಡಿಸಲು ಅವರು ಪ್ರಯತ್ನಿಸಬೇಕು. ಪ್ರಜಾಪ್ರಭುತ್ವ ಕೆಲಸ ಮಾಡಬೇಕಾದರೆ ಅತ್ಯಂತ ಹಿಂದುಳಿದ ಸಾಮಾಜಿಕ ಮತ್ತು ಆರ್ಥಿಕ ವ್ಯಕ್ತಿತ್ವ ಪುನಃ ಅರಳಲು ಅವಕಾಶ ಸಿಗಬೇಕು. ಹರಿಜನ ಕಾನೂನು ಮಂತ್ರಿ ಯಾಗಿದ್ದ, ಸಂವಿಧಾನ ರೂಪಿಸುತ್ತಿದ್ದ ಡಾ. ಅಂಬೇಡ್ಕರ್ ಸಂವಿಧಾನ ಸಭೆಗೆ ತಮ್ಮ ಕೊನೆಯ ಭಾಷಣದಲ್ಲಿ ಹೇಳಿದ ಮಾತು ಸರಿ: "ರಾಜಕೀಯದಲ್ಲಿ ಒಬ್ಬನಿಗೆ ಒಂದು ಓಟು, ಒಂದು ಓಟಿಗೆ ಒಂದು ಮೌಲ್ಯ ಎಂದು ನಾವು ಗುರುತಿಸಲಿದ್ದೇವೆ. ನಮ್ಮ ಸಾಮಾ ಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯನಿಗೆ ಒಂದು ಮೌಲ್ಯವೆಂಬ ತತ್ವವನ್ನು ತಿರಸ್ಕರಿಸುತ್ತಲೇ ಬಂದಿದ್ದೇವೆ. ಎಷ್ಟುಕಾಲ ನಾವು ಈ ವಿರೋಧಾಭಾಸದ ಜೀವನ ಬದುಕುವುದು?"

ನಿಜ, ಹಿಂದುಳಿದಿರುವಿಕೆಯನ್ನು ಅಳೆಯಲು ಜಾತಿ ಮಾನದಂಡಕ್ಕಿಂತ ಆರ್ಥಿಕ ಮಾನದಂಡ ಇರಬೇಕೆಂದು ಹೇಳುವ ವಾದ ಬೆಲೆಯುಳ್ಳದ್ದೇ ಇಂದು ಒಬ್ಬ ಬ್ರಾಹ್ಮಣ ಕ್ಷತ್ರಿಯ ಅಥವಾ ವೈಶ್ಯ ಆ ಹಳ್ಳಿಯ ಹರಿಜನನಿ ಗಿಂತ ಬಡವನಿರಬಹುದು; ಹರಿಜನರಿಗೆ ಸೌಲಭ್ಯ ಕೊಟ್ಟಾಗ ಆತನಿಗೆ ನೋವಾಗಲೂ ಬಹುದು. ಆದರೆ ಹರಿಜನ ಈಗಲೂ ಸಮಾಜದ ಹೊರ ಕಕ್ಷೆಯಲ್ಲಿಯೇ ಇರುವ ವನು. ಆತ ಈಗಲೂ ಭೇದ ನೀತಿಯ ಗುರಿಯೇ. ಮೀಸಲಾತಿ ಈ ಕಲೆಯನ್ನು ತೊಡೆದು ಹಾಕಿಲ್ಲ. 1950ರಷ್ಟು ಹಿಂದೆಯೇ ಸ್ನಾತಕೋತ್ತರ ಅಭ್ಯಾಸದಲ್ಲಿ ಶುರು ಮಾಡಿದ ಮೀಸಲು ವ್ಯವಸ್ಥೆ ಮೀಸಲಿರಿಸಿದ ಸ್ಥಾನಗಳ ಶೇ 5 ರಷ್ಟನ್ನು ಮಾತ್ರ ಗಳಿಸಿಕೊಟ್ಟಿದೆ. ಸರಕಾರೀ ಆಫೀಸುಗಳಲ್ಲಿ ಮತ್ತು ಪಬ್ಲಿಕ್ ಸೆಕ್ಟರುಗಳಲ್ಲಿ ಮೀಸಲು ಹುದ್ದೆಗಳು ಅನೇಕ ಕಾಲ ಖಾಲಿಯಾಗಿಯೇ ಉಳಿದಿದ್ದವು. ಟಿ. ದೇವದಾಸನ್ ಹಾಗೂ ಭಾರತ ಸರಕಾರದ ಮಧ್ಯೆ ನಡೆದ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟು ಕೊಟ್ಟ "ಮೀಸಲು ನಿಗದಿ ಒಂದು ವರ್ಷದಲ್ಲಿ ಖಾಲಿ ಇರುವ ಹುದ್ದೆಗಳ ಶೇ. 50ಕ್ಕಿಂತ ಹೆಚ್ಚಿರ ಬಾರದು" ಎಂಬ ನಿರ್ಣಯದಿಂದ ಹರಿಜನ ಗಿರಿಜನರು ಈಗಾಗಲೇ ಏಟು ತಿಂದಿದ್ದಾರೆ. ಜೊತೆಗೆ ಸಾಮಾಜಿಕ ವಿಕೃತಿಗೊಳಿಸುವಿಕೆಯೂ ದೊಡ್ಡದಾಗಿಯೇ ನಡೆಯುತ್ತಿದೆ. ಇನ್ನೂ ಸ್ವಲ್ಪಕಾಲ ಸಮಾಜದ ಈ ವರ್ಗಕ್ಕೆ ವಿಶೇಷ ಗಮನ ಕೊಡುವುದರ ಹೊರತು ಬೇರೆ ಮಾರ್ಗವಿಲ್ಲ. ಮಹಾತ್ಮ ಗಾಂಧಿ ಸ್ವಾತಂತ್ರ್ಯ ಸಮರದಷ್ಟೇ ಪ್ರಾಮುಖ್ಯವನ್ನು ಈ ವಿಷಯಕ್ಕೂ ಕೊಟ್ಟಿದ್ದರು.

ಕಾಂಗ್ರೆಸ್ಸನ್ನೂ ಸೇರಿಸಿಕೊಂಡು ಎಲ್ಲಾ ರಾಜಕೀಯ ಪಕ್ಷಗಳಿಗೆ ಇರುವ ಮುಖ್ಯ ವಿಷಯವೆಂದರೆ ಮೀಸಲಾತಿ ಯಾವ ಯಾವ ಕ್ಷೇತ್ರಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ಭೇದ

ನೀತಿಯನ್ನು ಉಂಟು ಮಾಡುತ್ತಿದೆ ಎಂದು ತಿಳಿಯುವುದು; ಮತ್ತು ಮೀಸಲಾತಿ ಅಗತ್ಯ ವಿಲ್ಲದ ಹರಿಜನರಿಂದ ಅದನ್ನು ವಾಪಾಸು ಪಡೆಯುವುದು ಹೇಗೆಂದು ಯೋಚಿಸುವುದು. ಈ ವಿಷಯ ಸಂವಿಧಾನದ ಸೃಷ್ಟಿಕರ್ತರ ಮನಸ್ಸಿನಲ್ಲೂ ಇತ್ತೆಂದು ಕಾಣುತ್ತದೆ.

ಹರಿಜನರಲ್ಲೂ ಕೆಳ ಮತ್ತು ಮೇಲ್ಜಾತಿಯವರ ಮಧ್ಯೆ ವ್ಯತ್ಯಾಸ ಮಾಡ ಬೇಕಾಗಿದೆ. ಹೆಚ್ಚಿನ ಅವಕಾಶಗಳನ್ನು ವಾಲ್ಮೀಕಿ ಮಹರ್ ಇತ್ಯಾದಿ ಪಂಗಡದವರು ಪಡೆ ಯುತ್ತಿದ್ದಾರೆ. ಮಲಹೊರುವ ಇನ್ನೂ ಕೆಳಗಿನವರು ಹಾಗೆಯೇ ಉಳಿದಿದ್ದಾರೆ. ಒಳ್ಳೆಯ ಹುದ್ದೆಯಲ್ಲಿರುವ ಹರಿಜನರು ರಿಯಾಯಿತಿ, ಮೀಸಲಾತಿ ಪಡೆಯಲು ಮುಂದಾಗಬಾರದು ಮೂರು ಜನಾಂಗಗಳಿಂದ ಈ ಅವಕಾಶ ಪಡೆಯುತ್ತಿರುವವರಿಗೆ ಸೌಲಭ್ಯಗಳನ್ನೇ ಮನ್ನಾ ಮಾಡಬೇಕು.

ಸಂವಿಧಾನ ಸಭೆಯಲ್ಲಿ ಕರಡು ಸಮಿತಿ "ಹಿಂದುಳಿದ"ಪದದ ಬಗ್ಗೆ ವಿರೋಧ ವೆತ್ತಿತ್ತು. ನಿರ್ವಚನೆಯಿಲ್ಲದ ಈ ಪದ ಗೊಂದಲವೆಬ್ಬಿಸಬಹುದೆಂದು ಭಾವಿಸಲಾಗಿತ್ತು. ಇದರ ಬದಲು ವಂಚಿತ (ಡಿಪ್ರೆಸ್ಡ್) ವರ್ಗ ಅಥವಾ ಪರಿಶಿಷ್ಟ ವರ್ಗ ಎಂಬ ಪದವನ್ನು ಬಳಸಲೂ ಯೋಚಿಸಲಾಗಿತ್ತು.

ಸಾರ್ವಜನಿಕ ಉದ್ಯೋಗಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಡುವ ತತ್ವವನ್ನು ತಪ್ಪು ಮತ್ತು ಅನಗತ್ಯವೆಂದು ಕೆಲವರು ಸಂವಿಧಾನ ಸಮಿತಿಯ ಸದಸ್ಯರು ಟೀಕಿಸಿದರು. ಈ ತತ್ವವನ್ನು, ಎಚ್.ಕೆ. ಕುನ್ಸು ಪ್ರಕಾರ, ಅದರ ತಾರ್ಕಿಕ ಕೊನೆಗೆ ಮುಟ್ಟಿಸಿದಾಗ ಈ ದೇಶ ಉಳಿಯಲು ಅಗತ್ಯವಾದ ಬೇರೆ ಬೇರೆ ಜನಾಂಗಗಳ ಒಗ್ಗಟ್ಟಿಗೆ ಧಕ್ಕೆ ಉಂಟಾಗುತ್ತದೆ. ಆದರೆ ತಮ್ಮ ಕಾಲ ಮೇಲೇ ತಾವು ನಿಲ್ಲಲಾರದ ಪಂಗಡಗಳಿಗೆ ರಿಯಾಯಿತಿ, ಮೀಸಲಾತಿ ಕೊಡುವುದನ್ನ ಅವರು ವಿರೋಧಿಸಲಿಲ್ಲ. ಸೇವೆಗಳಲ್ಲಿ ಮೀಸ ಲಾತಿ ಬೇಕಾಗಿದ್ದರೆ ಸಮಯ ನಿಗದಿ ಪಡಿಸುವುದು ಒಳ್ಳೆಯದೆಂದು ಅವರು ಹೇಳಿದರು ಇದು ಹತ್ತು ವರ್ಷವಿರಬಹುದು. ಅವಧಿ ಕಳೆದ ಮೇಲೆ ಆಗಿನ ಸಾಧನೆಗಳನ್ನು ಪುನರ್ ಪರಿಶೀಲಿಸಬೇಕು. ಡಾ.ಅಂಬೇಡ್ಕರ್ ಇದನ್ನು ಒಪ್ಪಲಿಲ್ಲ. ಎಲ್ಲವನ್ನೂ ಪರಿಶೀಲಿಸಿದ ಮೇಲೆ ಹತ್ತನೇ ವಿಧಿಯ ೩ನೇ ನಿಯಮಕ್ಕಿಂತ ಒಳ್ಳೆಯ ಫಾರ್ಮುಲಾ ಕರಡು ಸಮಿ ತಿಗೆ ಸಿಗಲಿಲ್ಲ. ಇದೇ ಮುಂದೆ ಸಂವಿಧಾನದ ೧೬ನೇ ವಿಧಿಯ ೪ನೇ ನಿಯಮವಾಯಿತು.

ದೇಶದ ಪರಿಸ್ಥಿತಿಯು ಕಠಿಣವಾಗಿದೆ. ಜಾತೀಯ ಹಿಂದುಗಳಲ್ಲಿ ಕಹಿಭಾವನೆ ಇದೆ. ಹರಿಜನರಲ್ಲಿ ನಿರೀಕ್ಷೆಯ ಭಾವನೆ ಇದೆ. ಜಾತಿಯೇ ವರ್ಗವೂ ಆಗುತ್ತದೆ ಎಂದು ಹೇಳಿ ದವನ ಮಾತು ತಪ್ಪಲ್ಲ. ಈ ದೇಶದಲ್ಲಿ ಜಾತಿಯುದ್ಧ ವರ್ಗಯುದ್ಧವಾಗಬಹುದು.

ಆದರೆ ರಾಜಕೀಯ ಪಕ್ಷಗಳು ಪ್ರತಿಷ್ಠೆಗೇ ಜೋತು ಬಿದ್ದಿವೆ. ಅವರ ದೃಷ್ಟಿಯೂ ಅರೆಬರೆಯದ್ದು. ಸಾಮಾಜಿಕ, ಆರ್ಥಿಕ ಆಯಾಮವಿರುವ ಈ ಸಮಸ್ಯೆ ಬಿಡಿಸಲು ಎಲ್ಲರ ಪ್ರಯತ್ನ ಅಗತ್ಯ. ಒಗ್ಗಟ್ಟು ಬೇಡುವ ಸಮಸ್ಯೆ ಇದು. ರಾಜಕೀಯ ಲಾಭ ಕ್ಕಾಗಿಯೇ ಇದನ್ನು ಪರಿಗಣಿಸುತ್ತಿರುವುದು ಒಂದು ದುರಂತ.

—(ಅನುವಾದ : ರಾಮಚಂದ್ರ ದೇವ)

ಬಿ.ಆರ್.ಪ್ರಾಣೇಶರಾವ್

ಮೀಸಲಾತಿ ವಿರುದ್ಧ ಗುಜರಾತಿನಲ್ಲಿ ನಡೆದ ಚಳುವಳಿ ಅತ್ಯಂತ ದುರದೃಷ್ಟಕರ, ಖಂಡನೀಯವೂ ಹೌದು. ಈ ಚಳುವಳಿಯ ದುಷ್ಟ ಪ್ರವೃತ್ತಿ ವಿಷಾದಕರ. ಈ ಪ್ರವೃತ್ತಿ ದೇಶದ ಇನ್ನೂ ಕೆಲವು ಕಡೆಗಳಲ್ಲಿ ಹರಡುವ ಸೂಚನೆ ತೀರಾ ವಿಷಾದಕರ. ಈ ಪ್ರವೃತ್ತಿಯನ್ನು ತಡೆಗಟ್ಟುವುದು ಎಲ್ಲ ವಿಚಾರವಂತರ ಹಾಗೂ ಸಾಮಾಜಿಕ ನ್ಯಾಯವನ್ನು ಬಯಸುವವರ ಆದ್ಯ ಕರ್ತವ್ಯ. ಪರಿಶಿಷ್ಟ ವರ್ಗದವರ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಪ್ರಗತಿ ಬೇರೆ ಎಲ್ಲಾ ಜಾತಿ, ವರ್ಗ, ಪಂಗಡಗಳ ಜನರ ಮಟ್ಟಕ್ಕೆ ಬರುವ ತನಕ ಮೀಸಲಾತಿ ಮುಂದುವರಿಯಲೇ ಬೇಕು.

ಮೀಸಲಾತಿ ವಿರುದ್ಧ ತಲೆದೋರಿರುವ ಚಳುವಳಿ ಕಳೆದ ೫೦, ೬೦ ವರ್ಷಗಳ ಕಾಲದಿಂದ ಸಾಮಾಜಿಕ ನ್ಯಾಯಕ್ಕಾಗಿ ನಡೆದಿರುವ ಹೋರಾಟಕ್ಕೆ ಅಪಚಾರ ಮಾಡುವಂತಹುದು. ಸಂವಿಧಾನ ಕೊಟ್ಟಿರುವ ಅಗತ್ಯ ಸೌಲಭ್ಯಗಳನ್ನು ಕಸಿದು ಕೊಳ್ಳುವ ತಂತ್ರ.

ಕಳೆದ ೩೩ ವರ್ಷಗಳಿಂದ ಹರಿಜನ, ಗಿರಿಜನರಿಗೆ ಕೊಡಲಾಗಿದೆ ಎಂದು ಹೇಳಲಾಗಿರುವ ಸೌಲಭ್ಯಗಳೂ ಅವರಲ್ಲಿ ಬಹುಪಾಲು ಜನರಿಗೆ ಇನ್ನೂ ಲಭ್ಯವಾಗಿಲ್ಲ. ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ತುಂಬಾ ದಾರುಣವಾಗಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಅವರು ಅನೇಕ ಸಾಮಾಜಿಕ ಅನ್ಯಾಯಗಳಿಗೆ ತುತ್ತಾಗಿದ್ದಾರೆ. ಪಟ್ಟಣಗಳಲ್ಲಿನ ಸ್ಥಿತಿಯೂ ಅಷ್ಟಕಷ್ಟೆ.

೧೯೭೧ನೆಯ ಜನಗಣತಿಯ ಪ್ರಕಾರ ಭಾರತದಲ್ಲಿ ೮.೨೫ ಕೋಟಿ ಜನ ಪರಿಶಿಷ್ಟ ವರ್ಗಕ್ಕೆ ಸೇರಿದ್ದರು. ಒಟ್ಟು ಜನಸಂಖ್ಯೆಯಲ್ಲಿ ಅವರದು ೧೫.೦೪ ಆಗಿತ್ತು. ಈಗ ಅವರ ಜನಸಂಖ್ಯೆ ೧೦ ಕೋಟಿಗೆ ಮೀರಿದೆ.

ಪರಿಶಿಷ್ಟವರ್ಗದ ಜನ ದೇಶದ ಯಾವ ಭಾಗದಲ್ಲೂ ಅಧಿಕ ಸಂಖ್ಯಾತರಾಗಿಲ್ಲ. ಸುಮಾರು ೬೬೬ ತಾಲ್ಲೂಕ್‌ಗಳಲ್ಲಿ ಶೇಕಡಾ ೩೦ಕ್ಕಿಂತ ಹೆಚ್ಚಾಗಿ ಅವರ ಸಂಖ್ಯೆಯಿದೆ. ಇನ್ನೂ ಸುಮಾರು ೨೫೦೦ ತಾಲ್ಲೂಕುಗಳಲ್ಲಿ ಅವರು ತೀರಾ ಅಲ್ಪ ಸಂಖ್ಯಾತರಾಗಿದ್ದಾರೆ. ಅವರು ವಾಸಿಸುವ ಕೇರಿಗಳು, ವಸತಿಕೇಂದ್ರಗಳು ಸಾಮಾಜಿಕವಾಗಿ ಬಹುಮಟ್ಟಿಗೆ ಪ್ರತ್ಯೇಕವಾಗಿ ದ್ವೀಪಗಳಂತೆ ಇವೆ. ಇದರಿಂದಾಗಿ ಮಾನಸಿಕವಾಗಿಯೇ ಆಗಲಿ, ಸಾಮಾಜಿಕವಾಗಿಯೇ ಆಗಲಿ ಅವರು ಒಟ್ಟು ಸಮುದಾಯದೊಂದಿಗೆ ಬೆಸೆದುಕೊಳ್ಳಲಾಗಿಲ್ಲ. ವ್ಯಾಪಕವಾದ ಶಿಕ್ಷಣ ಸೌಲಭ್ಯ ಹಾಗೂ ಆರ್ಥಿಕ ಮುನ್ನಡೆ ಅವರನ್ನು ಈ ಪರಿಸ್ಥಿತಿಯಿಂದ ಪಾರು ಮಾಡಲು ಸಾಧ್ಯ. ಮೀಸಲಾತಿ ಇಲ್ಲದೆ ಅವರ ಶೈಕ್ಷಣಿಕ ಹಾಗೂ ಆರ್ಥಿಕ ಪ್ರಗತಿ ಅಸಾಧ್ಯ.

ಮೀಸಲಾತಿ ಮುಂದುವರಿಯಲೇ ಬೇಕು

೧೯೬೧ರಲ್ಲಿ ಪರಿಶಿಷ್ಟ ವರ್ಗದ ಜನರಲ್ಲಿ ಶೇ. ೮೨.೩ರಷ್ಟು ಜನ ವ್ಯವಸಾಯ ಕ್ಷೇತ್ರದಲ್ಲಿ, ಬಹುತೇಕ ಭೂಮಿಹೀನ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ೧೯೬೧ ರಿಂದ ೧೯೭೧ರ ಅವಧಿಯಲ್ಲಿ ಅವರ ಸ್ಥಿತಿ ಇನ್ನೂ ಕಂಗಾಲಾಯಿತು. ೧೯೬೧ರಲ್ಲಿ ಪ್ರತಿ ಒಂದು ಸಹಸ್ರ ಪರಿಶಿಷ್ಟ ಜಾತಿಯ ಕಾರ್ಮಿಕರಲ್ಲಿ ೩೪೫ ಜನ ಭೂಹೀನ ಕಾರ್ಮಿಕರಾಗಿದ್ದರು. ೩೭೮ ಜನ ಭೂಮಿ ಹೊಂದಿದ ಸಾಗುವಳಿದಾರರಾಗಿದ್ದರು. ೧೯೭೧ರಲ್ಲಿ ಪ್ರತಿ ಸಹಸ್ರಕ್ಕೆ ಭೂಹೀನರ ಸಂಖ್ಯೆ ೫೧೮ಕ್ಕೆ ಏರಿತ್ತು. ಭೂಮಿಯುಳ್ಳ ಸಾಗುವಳಿದಾರರ ಸಂಖ್ಯೆ ೨೭೯ಕ್ಕೆ ಇಳಿದಿತ್ತು. ೧೯೭೧ರ ಜನಗಣತಿಯಪ್ರಕಾರ ಪರಿಶಿಷ್ಟ ಜಾತಿಯ ದುಡಿಮೆಗಾರರಲ್ಲಿ ಶೇ. ೫೧ರಷ್ಟು ಮಂದಿ ಭೂಹೀನ ಕಾರ್ಮಿಕರಾಗಿದ್ದರು.

ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಮೀಸಲಾತಿಯ ನಿಯಮವಿದ್ದರೂ ಆ ನಿಯಮಕ್ಕನುಗುಣವಾಗಿ ಪರಿಶಿಷ್ಟವರ್ಗದವರ ನೇಮಕ ಆಗಿಲ್ಲ. ಕೇಂದ್ರ ಸರ್ಕಾರದ ಸೇವೆಯಲ್ಲಿ ಇರುವ ನೌಕರರ ಪೈಕಿ ೧-೧-೧೯೭೬ರಲ್ಲಿ, ಮೊದಲನೇ ವರ್ಗದ ನೌಕರರಲ್ಲಿ ಶೇ. ೩.೪೬ ಜನ ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದರು. ಎರಡನೇ ವರ್ಗದ ನೌಕರರ ಪೈಕಿ ಶೇ. ೫.೪೧ ಜನ ಮಾತ್ರ ಪರಿಶಿಷ್ಟ ಜಾತಿಯವರಿದ್ದರು. ಅದೇ ವರ್ಷದ ಸಾರ್ವಜನಿಕ ಉದ್ಯಮದ ನೌಕರರ ಪೈಕಿ ಒಂದನೇ ವರ್ಗದ ನೌಕರಿಯಲ್ಲಿ ಶೇ. ೧. ೬೮ ಮತ್ತು ಎರಡನೇ ವರ್ಗದ ನೌಕರಿಯಲ್ಲಿ ಶೇ ೩. ೯ ಜನ ಪರಿಶಿಷ್ಟ ಜಾತಿಯವರಿದ್ದರು. ರಾಷ್ಟ್ರೀಕೃತ ಬ್ಯಾಂಕುಗಳ ಅಧಿಕಾರಗಳಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಶೇ. ಒಂದರಷ್ಟಕ್ಕೂ ಕಡಿಮೆ ಇತ್ತು. ನ್ಯಾಯಾಂಗದಲ್ಲಿ ಇಲ್ಲ ಅನ್ನುವಷ್ಟಿದೆ.

ಸರ್ಕಾರಿ ನೌಕರಿಯಲ್ಲಿರುವ ಪರಿಶಿಷ್ಟ ಜಾತಿಯ ನೌಕರರಿಗೆ ಬಡ್ತಿ ಕೊಡುವ ಸಂಬಂಧವಾಗಿ ನ್ಯಾಯಾಲಯಗಳಲ್ಲಿ ವಿವಾದಗಳು ಬಂದಿವೆ. ಬಡ್ತಿ ಕೊಡುವ ಬಗ್ಗೆ ಸರ್ಕಾರದ ನೀತಿಯನ್ನು ಸಮರ್ಥಿಸಿ ಸುಪ್ರೀಂಕೋರ್ಟಿನ ಪ್ರಧಾನ ನ್ಯಾಯಾಧೀಶರಾಗಿದ್ದ ಶ್ರೀ ಎ.ಎನ್. ರೇ ಅವರು ೧೯೭೫ರ ಡಿಸೆಂಬರ್‌ನಲ್ಲಿ ನೀಡಿದ ತೀರ್ಪು ಐತಿಹಾಸಿಕವಾದದ್ದು. ಅವರು ಈ ಸಂಬಂಧವಾಗಿ ತೀರ್ಪಿನಲ್ಲಿ ಹೀಗೆ ಹೇಳಿದ್ದಾರೆ: "Equality of opportunity for unequals can only mean aggravation of inequality. Equality of opportunity admits of discrimination with reason and prohibits discrimination without reason; Discrimination with reason means rational classification for differential treatment having nexus to the constitutionally permissible object".

ಮೀಸಲಾತಿ ಅಸ್ಪೃಶ್ಯರಿಗೆ ಸಲ್ಲಬೇಕಾದ ಒಂದು ಹಕ್ಕು ಅದು. ಅವರನ್ನ ಯಾವ ಸ್ಥಿತಿಯಲ್ಲಿ ಇಟ್ಟಿದ್ದೀವಿ ಅಂದರೆ, ಅವರು ಈವತ್ತು ಗೋಗರಿಬೇಕಾಗಿದೆ. ಇದು ಬಹಳ ದುಃಖಕರವಾದ ಒಂದು ಪರಿಸ್ಥಿತಿ. ಅದು ಒಂದು ಹಕ್ಕು. ಅದನ್ನೆ ಮೀಸಲಾತಿ ಅನ್ನುವುದು ಎಂಥಹದು ?

ಪಿ.ರಾಮಮೂರ್ತಿ

ಇಂದು ಐವರು ಭಾರತೀಯರಲ್ಲಿ ಒಬ್ಬ ಅಸ್ಪೃಶ್ಯ ಇದ್ದಾನೆ. ಇಷ್ಟು ಪ್ರಮಾಣದ ಜನಸಂಖ್ಯೆ ಇರತಕ್ಕಂಥ ಹರಿಜನರ ಸ್ಥಿತಿಗತಿಗಳನ್ನು ನೋಡಿದರೆ ವಿದ್ಯೆಯನ್ನು ಕಲಿತಂಥ ಯಾವ ಮನಷ್ಯನೂ ಈ ಒಂದು ಅಭಿಪ್ರಾಯವನ್ನು ಪಡಬೇಕಾಗುತ್ತದೆ: ಅದೇನೆಂದರೆ ಎರಡನೇ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ಅನ್ನುವವನು ಆಸ್ವಿಟ್ಜ್ ಅನ್ನುವ ಪ್ರದೇಶದಲ್ಲಿ ಯಹೂದಿಗಳನ್ನು Gass chamberಗೆ ಕಳುಹಿಸಿ ಕೊಂದು ನಿರ್ನಾಮ ಮಾಡಿದ. ಇದೊಂದು ಅಮಾನುಷವಾದಂಥ ಅಂಶ ನಮ್ಮ ಚರಿತ್ರೆಯಲ್ಲಿ. ಈ ಮಾತುಗಳನ್ನು ನಿಮ್ಮತ್ರ ಹೇಳಿದೆ ಏತಕ್ಕೆಂದರೆ ಯಾವ ಅಮಾನುಷದ್ದು ಆ ಆಸ್ವಿಟ್ಜ್ ನಲ್ಲಿ ನಡೆಯಿತೊ ಅದಕ್ಕಿಂತಲೂ ಘೋರವಾದಂತಹ ಪಾಶವೀಯವಾದಂಥ ಒಂದು ಅಮಾನುಷತೆ ನಮ್ಮ ದೇಶದಲ್ಲಿ ಮೂರು ಸಾವಿರ ವರ್ಷಗಳಿಂದ ನಡೆದುಕೊಂಡು ಬಂದಿದೆ. ಒಂದು ಜನಾಂಗವನ್ನು ತೊಡೆದು ಹಾಕುವುದು ಒಂದು ಹಿಂಸೆ, ಒಂದು ಜನಾಂಗವನ್ನು ಗುಲಾಮರಾಗಿ ದುಡಿಸಿ ಅವರನ್ನ ಪ್ರಾಣಿಗಳಿಗಿಂತಲೂ ನಿಕೃಷ್ಟವಾಗಿ ಕಾಣುವ ಅಮಾನುಷತೆ ಇನ್ನೂ ಹೆಚ್ಚಿನ ಹಿಂಸೆ.

ಇಂದಿರಾಗಾಂಧಿ ಅವರು ಒಂದು ಪುಸ್ತಕ ಬರೆದಿದ್ದಾರೆ ಎಟರ್ನಲ್ ಇಂಡಿಯಾ ಅಂತ. ಅದರಲ್ಲಿ ಏನು ಹೇಳಿದ್ದಾರೆ ಅಂದರೆ "ಭಾರತೀಯರು ಪ್ರಪಂಚಕ್ಕೆ 'ಶೂನ್ಯ' ಕೊಟ್ಟರು. ಪ್ರಪಂಚಕ್ಕೆ ಶೂನ್ಯವನ್ನು ಕೊಟ್ಟಂಥ ಭಾರತೀಯರು ಒಂದು ವ್ಯವಸ್ಥೆ ಮಾಡಿ ಮನುಷ್ಯನನ್ನ. ಶೂನ್ಯಕ್ಕೆ ತಂದು ನಿಲ್ಲಿಸಿದರು." ಅದನ್ನ ಹೇಳಿ ಮುಂದಿನ ಮಾತನ್ನ ಏನು ಹೇಳುತ್ತಾರೆ ಆಕೆ-ಏನೆಂದರೆ-"ಬೇರೆ ಪ್ರಪಂಚದಲ್ಲಿ ಇಂಥ ವಾತಾವರಣ ಇದ್ದಾಗ ಏನು ಮಾಡುತ್ತಾ ಇದ್ದರು ಅಂದರೆ ಆ ಜನಾಂಗವನ್ನ ನಿರ್ನಾಮ ಮಾಡ್ತಾ ಇದ್ದರು. ಈ ದೇಶದಲ್ಲಿ ನಿರ್ನಾಮ ಮಾಡಿಲ್ಲ. ಅದ್ದರಿಂದ ನಮ್ಮ ದೇಶ ಭವ್ಯವಾದ್ದು". ನಾನು ಹೇಳುವುದೇನೆಂದರೆ–ಒಬ್ಬ ಮನುಷ್ಯ ಕೋಪದಲ್ಲಿ ತಾಪದಲ್ಲಿ ದ್ವೇಷದಲ್ಲಿ ಕೊಂದು ಹಾಕ್ ಬಿಡಬಹುದು, ಅದರಲ್ಲಿ ಕ್ರೌರ್ಯ ಇದೆ. ಆದರೆ ಅವನನ್ನ ಕೊಲ್ಲದೆ ಅವನನ್ನ ದುಡಿಸಿ ಗುಲಾಮನನ್ನಾಗಿ ಮಾಡಿ ಅವನನ್ನ ಮುಟ್ಟದೆ ಕಾಣದೆ ಒಂದು ಮೃಗಕ್ಕಿಂತಲೂ

ನಿಷ್ಕೃಷ್ಟವಾಗಿ ಕಾಣುವ ಒಂದು ಅಮಾನುಷತೆ ಇದೆಯಲ್ಲ ಅದು ಬಹಳ ಘೋರವಾದುದು. ಈ ದೇಶ ಭವ್ಯ ಅನ್ನುವ ಮನುಷ್ಯರಿಗೆ ಕೇಳಬೇಕಾದ ಒಂದು ಪ್ರಶ್ನೆ ಯಾವುದೆಂದರೆ–ಹತ್ತುಕೋಟಿಗಿಂತಲೂ ಅಸ್ಪೃಶ್ಯರು ಹೆಚ್ಚಿರತಕ್ಕಂತಹ ದೇಶ ಎಂಥ ದೇಶ? ಆ ಧರ್ಮ ಎಂಥ ಧರ್ಮ? ಹತ್ತು ಕೋಟಿಗಿಂತಲೂ ಹೆಚ್ಚಿರತಕ್ಕಂತಹವರೇ ಈವತ್ತು ಮೀಸಲಾತಿ ಬಗ್ಗೆ ಡಿಫೆನ್ಸಿವ್ ಆಗಿ ಮಾತನಾಡಬೇಕಾಗಿದೆ. ಈ ದೇಶದ ಸಂಪತ್ತನ್ನ ಮಾಡುವವರು ಅನಾದಿಕಾಲದಿಂದಲೂ ಅಸ್ಪೃಶ್ಯರೆ. ಅವರು ಜೀತದಾಳುಗಳಾಗಿ ಈ ದೇಶದ ಸಂಪತ್ತನ್ನ ಮಾಡುವ ಜನ ಅವರು. ಈಗ ಈ ಮಾತನ್ನ ಡಿಫೆನ್ಸಿವ್ ಆಗಿ ಮಾತಾಡ್ತ ಇದ್ದಾರೆ. ಅವರಿಗೆ ಸಲ್ಲಬೇಕಾದ ಒಂದು ಹಕ್ಕು ಅದು. ಅವರನ್ನ ಯಾವ ಸ್ಥಿತಿಯಲ್ಲಿ ಇಟ್ಟಿದ್ದೀವಿ ಅಂದರೆ, ಅವರು ಈವತ್ತು ಗೋಗರಿ ಬೇಕಾಗಿದೆ. ಇದು ಬಹಳ ದುಃಖಕರವಾದ ಒಂದು ಪರಿಸ್ಥಿತಿ. ಅದು ಒಂದು ಹಕ್ಕು. ಅದನ್ನೆ ಮೀಸಲಾತಿ ಅನ್ನುವುದು ಎಂಥಹದು ?

ಮಾನಸ ಗಂಗೋತ್ರಿಯಲ್ಲಿ ಇರತಕ್ಕಂಥ ಕ್ಯಾಂಟೀನ್‌ನಲ್ಲಿ ಇವತ್ತೂ ಕೂಡ ಹರಿಜನರು ಒಳಗೆ ಕಾಫಿ ಕುಡಿಯುವುದಿಲ್ಲ, ಆ ಕುರ್ಚಿ ಮೇಲೆ ಕೂತ್ಕೊಳ್ಳುವುದಿಲ್ಲ. ನಾವೆಲ್ಲ ವಿದ್ಯಾವಂತರು, ವಿದ್ಯಾರ್ಥಿಗಳೆಲ್ಲ ಇದ್ದಾರೆ! ಒಂದು ವಿದ್ಯಾ ಸಂಸ್ಥೆಯಲ್ಲಿ, ತಿಳಿದವರು ಜ್ಞಾನಿಗಳು ಇರತಕ್ಕಂಥ ಪರಿಸರದಲ್ಲೆ ಇದು ಇರಬೇಕಾದರೆ ಹೊರಗಡೆ ವಾತಾವರಣ ಎಷ್ಟು ಕ್ರೂರ ಭೀಕರ ಇರಬೇಕು ಅನ್ನೋದನ್ನು ಯೋಚನೆ ಮಾಡಿ. ನಾನು ಕೆಲವು ಹಳ್ಳಿಗಳನ್ನ ಪಕ್ಕಪಕ್ಕದಲ್ಲೇ ನೋಡಿದ್ದೇನೆ. ಗಂಗೋತ್ರಿಗೆ ಹತ್ತಿಕೊಂಡೆ ಇರತಕ್ಕಂಥ ಒಂದು ದೇವಸ್ಥಾನಕ್ಕೆ ಹರಿಜನರು ಬರ್ತಾರೆಯೇ ಅಂತಂದರೆ ಅಲ್ಲಿ ಒಬ್ಬನು ಹೇಳುತ್ತಾನೆ–ಇಲ್ಲಿ ಇರತಕ್ಕಂಥ ಹರಿಜನರಿಗೆ ಸ್ವಾಮಿ ಕಂಡರೆ ಭಯ ಭಕ್ತಿ ಇದೆ. ಅವರು ಅಂಗೆಲ್ಲ ದೇವಸ್ಥಾನಕ್ಕೆ ಬರೋದಿಲ್ಲ. ಅವರು ಇಲ್ಲಿ ಮೆಟ್ಟಿಲು ಮೆಟ್ಟೋದಿಲ್ಲ. ಅಂದರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹತ್ತಿಕೊಂಡಿರತಕ್ಕಂಥ ದೇವಸ್ಥಾನದಲ್ಲಿ ಇಂಥ ಒಂದು ಯೋಚನೆ ಇಂಥ ಒಂದು ಪರಿಸ್ಥಿತಿ ಇದೆ. ಇವತ್ತಿಗೂ ಕೂಡ ಹಳ್ಳಿಗಳಲ್ಲಿ ಚಪ್ಪಲಿ ಹಾಕೊಂಡು ಓಡಾಡುವುದಿಲ್ಲ, ಕೊಡೆ ಹಿಡಿದು ಓಡಾಡುವುದಿಲ್ಲ. ಸೈಕಲ್ಲ ಹತ್ತೋದಿಲ್ಲ. ಹಳ್ಳಿನಲ್ಲಿ ಸೈಕಲ್ ಹತ್ತಿದ ಒಬ್ಬ ಹೊಡಿಸಿಕೊಂಡಿದ್ದಾನೆ, ೩೦ ವರ್ಷವಾದರೂನೂ ಕೂಡ.

ಯಾವ ರೀತಿ ಈವತ್ತು ಕೆಲವರು ದಲಿತರು ಎಂದರೆ ಎಲ್ಲರಲ್ಲೂ ಇದ್ದಾರೆ ಅಂತ ಮಾತಾಡುವರು. ಯಾವತ್ತು ಈ ಯೋಚನೆ ಬಂತೂ ಆವತ್ತು ಮರೆತು ಬಿಡಬೇಕಾಗುತ್ತದೆ–ಈ ಹರಿಜನ ಉದ್ಧಾರ ಆಗಲ್ಲ ಅಂತ. ಹರಿಜನ ದಲಿತನಿಗೂ ಬೇರೆ ದಲಿತನಿಗೂ ಇರತಕ್ಕಂತ ವ್ಯತ್ಯಾಸ ಒಂದು ಪ್ರಪಂಚದ ವ್ಯತ್ಯಾಸ. ನನ್ನ ಇಬ್ಬರು ವಿದ್ಯಾರ್ಥಿಗಳು ಒಬ್ಬ ಬ್ರಾಹ್ಮಣ ಒಬ್ಬ

ವೀರಶೈವ ಹೋಟೆಲ್‌ನಲ್ಲಿ ಮಾಣಿ ಕೆಲಸಮಾಡಿ ಈವತ್ತು ಲೆಕ್ಚರರ್‌ಗಳಾಗಿದ್ದಾರೆ. ನಮ್ಮ ದೇಶದಲ್ಲಿ ಯಾವ ಹರಿಜನನಿಗೆ ಈ ಸಾಧ್ಯತೆ ಇದೆ ? ನೀವು ದಲಿತ ಸಂಘರ್ಷ ಸಮಿತಿ ಅಂತ ಹೆಸರಿಟ್ಟಿದ್ದೀರಿ ! ಈ ಹೊತ್ತಿನವರೆಗೂ ಕೂಡ ನನಗೆ ಅರ್ಥವಾಗಿಲ್ಲ. "ಸಂಘರ್ಷ" ಅಂದ್ರೆ ಏನು ಅಂತ? ಸ್ವಲ್ಪ ಅದರ ಉಚ್ಚಾರಣೆ ಮಾಡುವುದು ಕಷ್ಟ ಆಗುತ್ತೆ. ಈ ಕಬ್ಬಿಣದ ಕಡ್ಲೆ ಯಾಕೆ ಬೇಕು? ಆದಿ ಆಂಧ್ರರು ಅಂತ ಹೇಳ್ತೀವಿ. ಆದಿ ದ್ರಾವಿಡರು ಅಂತ ಹೇಳುತ್ತೀವಿ. ಆದಿವಾಸಿಗಳು ಅಂತ ಹೇಳುತ್ತೇವೆ ಅಂದರೇನಾಯಿತು ? ಮೂಲದಲ್ಲಿ ಈ ನೆಲದ ಜನ ಅವ್ರೆ. ಚಾರಿತ್ರಿಕವಾಗಿ ಭಾಷೆಯಲ್ಲಿ ಅದಕ್ಕೆ ಸಾಕ್ಷಿ ಇದೆ. ಈ ನೆಲದ ಜನಾನೇ ಮೀಸಲಾತಿ ಅಂತ ಗೋಗರಿ ಬೇಕಾದರೆ ಅದು ಅತ್ಯಂತ ಕ್ರೂರ ದುಃಖದ ಪರಿಸ್ಥಿತಿ. ಮೀಸಲಾತಿ ತೆಗೆದರೆ ಮೂರು ಸಾವಿರ ವರ್ಷದಿಂದ ಏನಾಗಿತ್ತೊ, ಅದೇ ಆಗ್ತದೆ. ಮತ್ತೇನು ಆಗುವುದಿಲ್ಲ. ಯಾಕೆಂದರೆ ಈ ಹರಿಜನರು ಒಗ್ಗಟ್ಟು ಆಗಿಲ್ಲ. ಅವರಲ್ಲೆ ಅನೇಕ. ಬಲಗೈ ಅಂತ ಎಡಗೈ ಅಂತ. ಯಾವ ಹಳ್ಳಿಗೆ ಹೋಗಿ ಬಲಗೈಯವರ ಬಾವಿಯಲ್ಲಿ ನೀರನ್ನ ಎಡಗೈ ಯವರು ಸೇದಲು ಆಗುವುದಿಲ್ಲ. ಒಡೆದಾಳು ಅನ್ನುವ ಪಾಲಿಸಿ ನಮ್ಮ ಹಿಂದೂ ಧರ್ಮದ ಪಾಲಿಸಿ ....ಅದನ್ನೆ ಪಾಲಿಸಿಕೊಂಡು ಬಂದಿದ್ದೇವೆ. ಆದ್ದರಿಂದ ಅವರನ್ನ ಸಂಘಟಿಸುವುದಕ್ಕೆ ಸದ್ಯದಲ್ಲಿ ಸಾಧ್ಯವಿಲ್ಲ. ಬಹಳ ಕಷ್ಟ. ಅದಕ್ಕೆ ಮುಂಚೆ ವಿದ್ಯೆ ಬೇಕು ತಿಳುವಳಿಕೆ ಬೇಕು. ತಿಳುವಳಿಕೆ ಇಲ್ಲದಿದ್ದರೆ ಸಂಘಟನೆ ಸಾಧ್ಯವಿಲ್ಲ. ಇದು ತಮ್ಮ ಹಕ್ಕು ಅನ್ನುವ ಪ್ರಜ್ಞೆ ಅವರಿಗೆ ಎಲ್ಲಿಯವರೆಗೆ ಬರೊದಿಲ್ಲವೊ, ಎಲ್ಲಿವರೆಗೆ ಮೀಸಲಾತಿಯು ಮೇಲು ಜಾತಿಯವರು ನಮಗೆ ಕೊಡುವ ಕೊಡುಗೆ ಅಂತ ತಿಳಿದುಕೊಳ್ಳುತ್ತಾರೊ ಅಲ್ಲಿವರೆಗೂನೂ ಕೂಡ ಚಿಂತಾಜನಕ ಸ್ಥಿತಿಯೇ ನಮ್ಮ ಸ್ಥಿತಿ.

ಇಂದು ಪ್ರತಿ ದಿವಸವೂ ನಮಗೆ ಅನಿಶ್ಚತೆಯ ವಾ ತಾ ವ ರ ಣ ಆವರಿಸಿಕೊಂಡು ಬರುತ್ತಾ ಇದೆ ಸುತ್ತಲೂನೂ. ಇಂಥ ಸನ್ನಿವೇಶ ದಲ್ಲಿ ನಾವು ನಿಶ್ಚಿಂತೆಯಿಂದ ಹಾ ಯಾಗಿ ಬೇರೆಯವರಿಂದ ದುಡಿಸಿ ಕೊಂಡು ಸುಖ ಪಡಬಹುದು ಅಂತಕ್ಕಂತಹ ಹಗಲುಗನಸನ್ನು ಬಿಡ ಬೇಕು.

ಜೆ.ಬಿಲ್ಲಯ್ಯ

ಮೀಸಲಾತಿ ಯಾರಿಗೆ ಅಂದರೆ, ಸಾಮಾ ಜಿಕವಾಗಿ ಶೈಕ್ಷಣಿಕವಾಗಿ ಸಾವಿರಾರು ವರ್ಷಗಳಿಂದ ಮುಂದುವರೆದ ವರ್ಗಗ ಳಿಗಿಂತ ಹಿಂದೆ ಬಿದ್ದಿದ್ದಾರೆಯೋ ಅವ ರಿಗೆ. ನಾನು ವಿದ್ಯಾರ್ಥಿಯಾಗಿದ್ದಾಗ ಬ್ರಾಹ್ಮಣ ಮತ್ತು ಅಬ್ರಾಹ್ಮಣರ ನಡುವೆ ಘರ್ಷಣೆ ಇತ್ತು. ಒಂದು ಚಳ ವಳಿ ನಡೀತ ಇತ್ತು–ದೇಶದ ಅನೇಕ

ಗಾಯಕ್ಕೆ ಬರೆ ಬೇಡ

ರಾಜ್ಯಗಳಲ್ಲಿ. ಆ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅಬ್ರಾಹ್ಮಣರಲ್ಲಿ ಕೆಲವರು ಒಳ್ಳೊಳ್ಳೆ ಪದವಿಗಳನ್ನು ಗಿಟ್ಟಿಸಿಕೊಂಡರು. ಅಂತಹ ಮಹನೀಯರೇ ಈವಾಗ ಮೀಸಲಾತಿಯನ್ನು ಮುಂದುವರಿಸಿದರೆ ಅರ್ಹತೆಗೆ ಧಕ್ಕೆ ಬರುತ್ತದೆ ಮತ್ತು ದಕ್ಷತೆಗೆ ಧಕ್ಕೆ ಬರುತ್ತದೆ ಅಂತಿದ್ದಾರೆ, ಬಹಳ ಶೋಚನೀಯ. ಹೀಗೆ ಅನ್ನುವವರು ಯಾವರೀತಿ ಸೀಟನ್ನ ಗಿಟ್ಟಿಸಿದರು, ಯಾವ ಮಾರ್ಗದಲ್ಲಿ ಅವರು ಮೊದಲನೆ ಶ್ರೇಣಿಯಲ್ಲಿ ಪ್ಯಾಸ್ ಮಾಡಿದರು, ಅವರು ಜ್ಞಾನ ಮಟ್ಟ ಯಾವುದು ? ಅವರ ಮಾತಿನಲ್ಲಿ ಎಷ್ಟು ಗ್ರಾಮರ್ ಮಿಸ್ಟೇಕುಗಳಿರುತ್ತವೆ, ಇವನ್ನೆಲ್ಲ ನಾವು ಪರಿಶೀಲಿಸಿದಾಗ ನನಗೆ ನಾಚಿಕೆಯಾಗುತ್ತದೆ. ಇಂತಹವರೇನೆ ಈ ರೀತಿಯಾಗಿ ಮಾತಾಡ ಬೇಕಾದರೆ ನಾವು ಅತ್ಯಂತ ಮುಂದುವರಿದ ವರ್ಗದವರನ್ನು ನಿಂದಿಸಿ ಫಲವಿಲ್ಲ. ಈ ಮೀಸಲಾತಿಯಿಂದ ನಮ್ಮನ್ನು ಸರ್ಕಾರಿ ಬ್ರಾಹ್ಮಣರು ಅಂತ ಬೇರೆ ಕರೀತಾರೆ. ಇದು ಮೈಯಲ್ಲಿ ಗಾಯ ಇದ್ದರೆ ಅದಕ್ಕೆ ಪುನಃ ಬರೆ ಹಾಕ್ದಂಗೆ. ಆದ್ದರಿಂದ ಬರೀ ನಿಮ್ಮ ವರ್ಗದವರು ಮತ್ತು ಬುಡಕಟ್ಟು ಜನಾಂಗಕ್ಕೆ ಮಾತ್ರ ಈ ಮೀಸಲಾತಿ ಮೀಸಲಾಗಿರಬೇಕು ಅಂತ ನಾನು ಹೇಳವುದಿಲ್ಲ. ಬೇರೆಯವರು ಯಾವುದೊ ಕಾರಣದಿಂದ ಹಿಂದೆ ಇದ್ದರೂ ಇರಬಹುದು. ಆ ವಿದ್ಯಾಭ್ಯಾಸದ ಪ್ರಜ್ಞೆ ಅವರಿಗೆ ಬಂದಿಲ್ಲದೆ ಇರಬಹುದು. ಅವರಿಗೂ ಲಾಭಬರಲಿ. ಎಲ್ಲಾರೂ ಒಂದು ಮಟ್ಟಕ್ಕೆ ಬರಬೇಕು. ಅದು ಇಲ್ಲದೇನೆ ಯಾರು ಪ್ರಬಲವಾಗಿದ್ದಾರೊ, ಯಾರು ದಬ್ಬಾಳಿಕೆಯನ್ನು ನಡೆಸಬಲ್ಲರೊ ಅವರೆ ಹೆಚ್ಚಿಗೆ ಗಲಾಟೆಮಾಡಿ ಹೆದರಿಸುವರು, ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಮೀಸಲಾತಿ ಎಲ್ಲಿಯವರೆಗೆ ಎಂದರೆ ಈ ಜಾತಿ ಪದ್ಧತಿ ಮತ್ತು ಅದಕ್ಕೆ ಅಂಟಿಕೊಂಡಿರತಕ್ಕಂತಹ ಅಸ್ಪೃಶ್ಯತೆ ಇದೆಲ್ಲ ಎಲ್ಲಿವರೆಗೆ ಇರುತ್ತದೊ ಅಲ್ಲಿವರೆಗೆ.

ಈ ಮುವತ್ತು ವರ್ಷದಲ್ಲಿ ಎಲ್ಲರೂ ಒಮ್ಮನಸ್ಸಿನಿಂದ, ಮುಂದುವರಿದವರು–ಇವರೂ ತಕ್ಕಮಟ್ಟಿಗೆ ನಮ್ಮ ಮಟ್ಟಕ್ಕೆ ಬರಲಿ ಅಂತಕ್ಕಂತಹ ವಿಶಾಲವಾದ ಮನೋಭಾವನೆಯನ್ನು ಇಟ್ಟುಕೊಂಡು ಔದಾರ್ಯದಿಂದ ಕೆಲಸ ಮಾಡಿದ್ದರೆ ಈ ೩೦ ವರ್ಷದಲ್ಲಿ ಎಷ್ಟೋ ಸಾಧನೆಯಾಗ್ತಾ ಇತ್ತು. ನಮ್ಮ ಮಾನಸ ಗಂಗೋತ್ರಿಯಲ್ಲಿ ೩೨ ವಿಭಾಗಗಳಿವೆ. ಅಲ್ಲಿ ಈ ಸಾರಿ ನಾನು ಕೇಳಿದೆ ಒಬ್ಬರನ್ನ, ನಮ್ಮ ಹುಡುಗರು ಯಾವ ರೀತಿಯಲ್ಲಿ ಬಿ. ಎ., ಬಿ.ಎಸ್ಸಿ., ನಲ್ಲಿ ಅಂಕಗಳನ್ನ ಗಳಿಸಿದ್ದಾರೆ ಅಂತ. ಅದಕ್ಕೆ ಅವರು ಹೇಳಿದರು–ನೋಡಿ ಆರೇಳು ವಿಭಾಗಗಳಲ್ಲಿ ಜನರಲ್ ಲಿಸ್ಟ್‌ನಲ್ಲಿ ಇದ್ದಾರೆ. ಆದರೂ ಸಹ ಸಂಬಂಧ ಪಟ್ಟ ವಿಭಾಗದ ಮುಖ್ಯಸ್ಥರುಗಳು ಅಸೂಯೆಯಿಂದ ಅವರಿಗೆ ಮೀಸಲಾತಿ ೧೦೦ಕ್ಕೆ ೧೮ ಸ್ಥಾನ ಇದೆಯಲ್ಲ ಅದರಲ್ಲೆ ಕೊಟ್ಟರಂತೆ. ಅದೆಷ್ಟರ ಮಟ್ಟಿಗೆ ಅವರ ಬುದ್ಧಿ ಚುರುಕಿದೆ ಅನ್ನೋದನ್ನ ನೀವು ಇಲ್ಲೆ ತಿಳಿದುಕೊಳ್ಳಬಹುದು.

ನಮ್ಮಲ್ಲಿ ಅನೇಕ ಪ್ರಾಧ್ಯಾಪಕರುಗಳಿದ್ದಾರೆ. ಬಾಯಿಬಿಟ್ಟರೆ ಬಣ್ಣಗೇಡು. ಅವರು ಬಹು ಸಂಖ್ಯಾತರಾದ್ದರಿಂದ ಅವರೆ ಅರ್ಹತೆ ಕುರಿತು ಮಾತಾಡೋರು. ಅಲ್ಪ ಸಂಖ್ಯಾತರು ಮಾತಾಡಿ ಅವರ ಬಾಯಿ ಮುಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಥರ ಇವೆ. ಜೊತೆಗೆ ನಾವು ಯಾವ ಕೆಲಸ ಮಾಡಿದರೂನೂ, ಇವರು ಮೀಸಲಾತಿ ಇಂದ ಬಂದವರು, ಇವರು ಮೀಸಲಾತಿ ವರ್ಗಕ್ಕೆ ಸೇರಿದವರು ಅಂತ ನಮಗೆ ಹಣೇಗೆ ಪಟ್ಟಿ ಹಾಕಿದ್ದಾರೆ. ಆರೀತಿ ಕರೆಸಿ ಕೊಳ್ಳೋಕ್ಕೆ ನಮ್ಮ ಈ ವರ್ಗಕ್ಕೆ ಇಷ್ಟವಿಲ್ಲ. ಯಾರೋ ನಿನ್ನೆ ಒಬ್ಬರು ಹೇಳಿದರು. ಡಾ|| ಅಂಬೇಡ್ಕರವರು ಈ ಮೀಸಲಾತಿಗೆ ವಿರೋಧವಾಗಿದ್ದರು ಅಂತ, ಅದು ತಪ್ಪು. ಏಕೆಂದರೆ ಈ ರಾಜ್ಯಾಂಗ ರಚನೆಯಾಗುವ ಕಾಲದಲ್ಲಿ ನಾನು ಬೊಂಬಾಯಿನಲ್ಲಿ ವಿದ್ಯಾಭ್ಯಾಸ ಮಾಡ್ತಾ ಇದ್ದೆ. ಡಾ|| ಅಂಬೇಡ್ಕರ್‌ರವರು ಆವಾಗ ಒಂದುಸಾರಿ ಬಂದಿದ್ದರು, ಸಿದ್ಧಾರ್ಥ ಕಾಲೇಜಿಗೆ. ಆವಾಗ ನಾವು ಯುವಕರು ಅವರನ್ನ ಸತ್ಕರಿಸಿದೆವು. ಅಂದರೆ ನಾ ಮಾತಾಡ್ತ ಇರೋದು ೩೦ ವರ್ಷದ ಹಿಂದಿನ ಮಾತು. ಇದೇನು ನಿವೃತ್ತಿ ಹೊಂದಿದ ಮೇಲೆ ತಾವು ಯುವಕರು ಅಂತ ಮಾತಾಡ್ತ ಇವ್ರಾರಲ್ಲ ಮೇಷ್ಟ್ರು ಅನ್ನ ಬೇಡಿ. ಆಗ ೩೦ ವರ್ಷದ ಹಿಂದೆ ನಾನು ಯುವಕನಾಗಿದ್ದೆ! ಅವರಿಗೆ ಟೀ ಪಾರ್ಟಿ ಏರ್ಪಾಡು ಮಾಡಿದ್ದೆವು. ಆವಾಗ ಅವರು ಈ ವಿಷಯವನ್ನು ಪ್ರಸ್ತಾಪವಾಡ್ತ ಇದ್ದರೆ ಕಣ್ಣಿನಲ್ಲಿ ನೀರು ಬಂತು. ಬೇರೆ ಸವರ್ಣೀಯರು ಕಾನ್ಸ್ಟಿಟ್ಯುಎಂಟ್ ಅಸೆಂಬ್ಲಿಯಲ್ಲಿ ನಾಯಕರಾಗಿರತಕ್ಕಂತಹವರು ನಮ್ಮ ಒಬ್ಬ ಮದ್ರಾಸ್ ಹರಿಜನ ಪ್ರತಿನಿಧಿ– ಅವನು ಪೆದ್ದ ಸರಿಯಾದ ಅರ್ಹತೆ ಇರಲಿಲ್ಲ. ತಿಳುವಳಿಕೆ ಮುಟ್ಟ ಇರಲಿಲ್ಲ, ಅಂತಹವನನ್ನು ಹಿಡ್ಕಂಬುಟ್ರು. ಹಿಡಿದುಬಿಟ್ಟು ಒಂದು ಮೂವತ್ತು ನಲವತ್ತು ಹೆಸರುಗಳನ್ನು ನೀನು ಶೇಖರಿಸು, ಮೀಸಲಾತಿ ಹತ್ತುವರ್ಷ ಸಾಕು ಅದಕಿಂತ ಹೆಚ್ಚಿಗೆ ಬೇಡಾ ಅಂತ್ಲೇನೇ ನೀನು ಬರೆದುಬಿಡು, ಸೈನ್ ಮಾಡಿಸಿ ಕೊಡು ಅಂತ ಹೇಳಿಬಿಟ್ಟರು. ಮಾರನೆ ದಿವಸ ೧೧ಗಂಟೆಗೆ ಈ ಕಾನ್ಸ್ಟಿಟ್ಯುಎಂಟ್ ಅಸೆಂಬ್ಲಿ ಶುರುವಾದಾಗ ಡಾ. ರಾಜೆಂದ್ರ ಪ್ರಸಾದ್‌ರವರು ನೂರು ವರ್ಷಕ್ಕೆ ಅಂತ ನೀವು ಕೇಳ್ತಾ ಇದ್ದೀರಿ, ಆದರೆ ಇಲ್ನೋಡಿ ನಿಮ್ಮ ಪ್ರತಿನಿಧಿಗಳಾಗಿರತಕ್ಕಂಥ ಒಂದು ಮೂವತ್ತು ನಲವತ್ತು ಜನ ತಮ್ಮ ರುಜುಹಾಕಿ ನನ್ನಮುಂದೆ ಇಟ್ಟಿದ್ದಾರೆ ಇದಕ್ಕೆ ಏನು ಹೇಳುತ್ತೀರಿ ? ಅಂತ ಹೇಳಿದರು. ಆವಾಗ ಅಂಬೇಡ್ಕರರವರಿಗೆ ದಿಗ್ಭ್ರಮೆಯಾಯ್ತು "ಏನು ಈಥರ ಇಂಥ ಜನ ಇದ್ದಾರಲ್ಲ.ನಮ್ಮಲ್ಲಿ. ೧೦ ವರ್ಷದಲ್ಲಿ ಏನು ಸಾಧಿಸಕ್ಕಾಗುತ್ತದೆ. ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಪಟ್ಟು ಬಹಳ ಹಿಂದುಳಿದಿರತಕ್ಕಂಥ ಜನವನ್ನ ೧೦ ವರ್ಷದಲ್ಲಿ ಯಾರು ತಾನೆ ಮೇಲೆತ್ತೋದಕ್ಕೆ ಸಾಧ್ಯವಾಗುತ್ತದೆ ಅಂತ. ಅಂಬೇಡ್ಕರ್‌ಗೆ ಗಾಬರಿಯಾಯ್ತು.ಆಗ ಮೊದಲನೆ ಕಂತಿನಲ್ಲಿ ೧೦ ವರ್ಷ ಕೊಟ್ಟರು. ಆದರೆ ಯಾವುದೋ ಕಾರಣದಿಂದ ಮುಂದುವರೆದುಕೊಂಡು ಹೋಗ್ತಾ ಇದೆ. ಅಷ್ಟಕೇನೆ ನಾವು ಸಂತೋಷ ಪಡಬಾರದು. ಏಕೆಂದರೆ

ಆರೀತಿ ಸೌಲಭ್ಯಗಳನ್ನು ಎಷ್ಟು ಕರಾರುವಾಕ್ಕಾಗಿ ಕಟ್ಟುನಿಟ್ಟಾಗಿ ಜಾರಿಗೆ ತರ್‍ತಾ ಇದ್ದಾರೆ? ಅದರಿಂದ ಏನು ಸಫಲವಾಗಿದೆ ?

ನೋಡಿದರೆ ಇನ್ನೂ ಬಹಳ ಹಿಂದುಳಿದಿದ್ದೀವಿ ನಾವು. ನಾಲ್ಕನೇ ದರ್ಜೆ ನೌಕರ ವರ್ಗದಲ್ಲೂ ಸಹ ನ್ಯಾಯ ದೊರಕಿಲ್ಲ. ಆಗ ಒಬ್ರು ಕೇಳಿದರು ಒಬ್ಬ ಉಪಕುಲಪತಿಗಳನ್ನ, ಏನು ನಿಮ್ಮ ಅವಧಿ ಯಲ್ಲಿ ನಾಲ್ಕನೇ ವರ್ಗದ ನೌಕರಿಗರಿಗೂ ನೀವು ಯಾವ ಥರಾ ಅರ್ಹತೆಯನ್ನು ನೀರಿಕ್ಷಣೆ ಮಾಡ್ತೀರಿ ಅಂತ. ಅವರು ಬಹಳ ಉಪಾಯದಿಂದ 'ಅಯ್ಯೋ ಇಲ್ಲವಲ್ಲ ನಾವೇನುಅರ್ಹತೆ ಇಟ್ಟುಕೊಂಡಿಲ್ಲ'. 'ಮತ್ತೇನು ಜಾತಿನ್ನೇ ಎಂದಾಗ 'ಅದೂ ಇಲ್ಲವಲ್ಲ','ಮತ್ತೆ ಯಾಕೆ ಅಸ್ಪೃಶ್ಯರನ್ನು ನೀವು ನೇಮಿಸಿಕೊಳ್ತ ಇಲ್ಲವಲ್ಲ ?' ಅಂದಾಗ, 'ಅದು ಮೊದಲೆ ಆಗೋಗಿತ್ತು, ನಾವು ಬರುವುದಕ್ಕೆ ಮೊದಲೇನೆ' ಇನ್ನು ಕೊಡ್ತಿವಿ ಹಾಗೆ ಅಂದ್ರು. ಅದೇ ಮಂತ್ರಿಯವರು ಯಾರಾದರೂ ಒಂದು ಶಿಪಾರಸ್ಸು ಮಾಡಿಕೊಟ್ಟು ಬಿಟ್ರೆ ಅವರನ್ನು ತೃಪ್ತಿ ಮಾಡುವುದಕ್ಕೆ ಒಂದು ಕೊಡಬಹುದು. ಆದರೆ ಔದಾರ್ಯ-ದಿಂದ ಅವರಿಗೇನು ಕೊಡಬೇಕೊ ಅವರೂ ಮನುಷ್ಯರು ಮೇಲೆ ಬರಲಿ ಅಂತಕಂತಹ ಒಂದು ಮನೋಭಾವನೆ ಇಲ್ಲದೆ ಹೋಗಿ ಬಿಟ್ಟರೆ ಯಾರು ಏನೂ ಮಾಡಕ್ಕಾಗಲ್ಲ.

ಮೀಸಲಾತಿ ಇಲ್ಲದಿದ್ದರೆ ಕೆಲವರು ಕ್ರಾಂತಿ ಆಗ್ತ ಇತ್ತು ಅಂತಾರೆ. ಕ್ರಾಂತಿ ಆಗ್ತ ಇರಲಿಲ್ಲ. ಏಕೆಂದರೆ ಈ ಜನರ ಪುರುಷತ್ವವೇ ಜೀತ ಪದ್ಧತಿಯಿಂದ ಹಾಳಾಗಿ ಹೋಗಿದೆ. ಇವರಿಗೆ, ಮನುಷ್ಯರು ನಾವು ಗಂಡಸರು ಅನ್ನತಕ್ಕಂಥ ಒಂದು ಪೌರುಷ ಇದೆಯಲ್ಲ ಆ ಪೌರಷನೇ ಇಲ್ಲ. ಯಾತಕ್ಕೋಸರ ಅಂದರೆ ಆ ಗುಲಾಮ ಗಿರಿಗೆ ಸಿಕ್ಕಿ, ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ. ಬೇರೆಯವರಿಗೆ ಅಡಿಯಾಳಾಗಿ ಇವರು ಕ್ರಾಂತಿಯನ್ನ ಮಾಡ್ತಕಂತಹ ಶಕ್ತಿ ಇಲ್ಲ. ಆದರೆ ಅರಾಜಕತೆ ಆಗುತ್ತಿತ್ತೇನೊ? ಏಕೆ ಅಂದರೆ ಯಾವ ಪಕ್ಷಕ್ಕೂ ಸರಿಯಾಗಿ ಓಟು ಕೊಡುತ್ತಾ ಇರಲಿಲ್ಲವೇನೊ? ಮತ್ತು ಯಾರು ಹೊಂದುಕೊಳ್ತಾ ಇರಲಿಲ್ಲವೇನೊ? ಅನೇಕ ಸಣ್ಣ ಪುಟ್ಟ ಘಟನೆ ಗಳು ನಡೀತಾ ಇದ್ದವು ಅಂತ ಹೇಳೋಣ. ಮುಂದೆ ಇದನ್ನು ತೆಗೆದು ಬಿಟ್ಟರೆ ಏನಾಗಬಹುದು ಅಂದರೆ ಆವಾಗ ಫಲಿತಾಂಶ ಘೋರವಾಗಿರುತ್ತದೆ. ಏತಕ್ಕೋಸ್ಕರ ಅಂದ್ರೆ ನಮ್ಮ ವಿದ್ಯಾವಂತರು ಕಾರ್ಲ್‌ಮಾರ್ಕ್ಸ್‌ನ ಸಾಹಿತ್ಯವನ್ನು ಓದುತ್ತಾ ಇದ್ದಾರೆ. ವರ್ಗ ಸಂಘರ್ಷಣೆ ಯಾಗಬೇಕು. ಬಡವ ಮತ್ತು ಬಲ್ಲಿದನಿಗೆ ಸಂಘರ್ಷಣೆ ಯಾಗಬೇಕು, ಸಮಾಜದಲ್ಲಿ, ಆವಾಗ ರಕ್ತ ಕ್ರಾಂತಿ ಆಗಬಹುದು. ಆದರೂ ಸಹ ಪ್ರತಿಯೊಂದು ಜಾತಿಯೂ ಅಂಥ ಸಂಘಟನೆಗೆ ಅಡ್ಡಿಯಾಗಿ ಬರುತ್ತಿರುವುದರಿಂದ ಉಳ್ಳವರು ಮತ್ತು ಏನೂ ಇಲ್ಲದಿರುವವರು–ಅವೆರಡು ವರ್ಗ ಬೇರೆ ದೇಶದಲ್ಲಿ ಆದ ರೀತಿಯಲ್ಲಿ ಸಲೀಸಾಗಿ ನಮ್ಮ ದೇಶದಲ್ಲಿ ಆಗ್ತಾ ಇಲ್ಲ. ರಷ್ಯಾದಲ್ಲಿ ಆಯ್ತು ಅಲ್ಲಿ ಕ್ರಾಂತಿ ನಡೆಯಿತು, ಫ್ರಾನ್ಸ್‌ನಲ್ಲಿ ಆಯ್ತು ಅಲ್ಲಿ ಕ್ರಾಂತಿ ನಡೆಯಿತು. ಆದರೆ ಇಲ್ಲಿ ಎಷ್ಟು ಬಡತನ ಇದ್ದರೂ ತಮ್ಮ ಜಾತಿಯವರಿಗೆ ಅವರು ಶೋಷಣೆಗೆ ಒಳಗಾಗಿದ್ದ

ರೂನೂ, ತಮ್ಮ ಜಾತಿಯವರೂ ಬದುಕಲಿ ಬೇರೆಯವರಿಗೋಸ್ಕರ ನಾವೇಕೆ ದುಡಿಯು ಬೇಕು ಪ್ರಾಣ ತೆರಬೇಕು ಅಂತ ಮನೋಭಾವನೆ ಇದೆ. ಆದರೆ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಅನೇಕ ಹರಿಜನರು ಈ ಕಾರ್ಲ್‌ಮಾರ್ಕ್ಸ್‌ನ ಸಾಹಿತ್ಯವನ್ನು ಓದಿ ಕ್ರಾಂತಿಕಾರರಾಗಿ ನಕ್ಸಲೈಟ್ಸ್ ಆಗಿದ್ದಾರೆ. ಅವರು ಯಾವುದಕ್ಕು ಹೇಸುವುದಿಲ್ಲ. ಸಾಯುವುದು ಒಂದೇಸಾರಿ, ಆದ್ದರಿಂದ ಹೋರಾಡೇ ಸಾಯೋಣ, ನಮ್ಮ ಹಕ್ಕುಗೋಸ್ಕರ ಹೋರಾಡೇ ಸಾಯೋಣ ಅಂತಕಂತಹ ಒಂದು ದೃಢಮನಸ್ಸನ್ನು ಅವರು ಮಾಡಿದ್ದಾರೆ. ಆದ್ದರಿಂದ ಈಗ ಗಾಂಧೀಜಿಯವರಿಗಿಂತಲೂ ಮತ್ತು ಅಂಬೇಡ್ಕರ್‌ರವರ ಸ್ಫೂರ್ತಿಗಿಂತ ಕಾರ್ಲ್‌ಮಾರ್ಕ್ಸ್‌ನ ಸ್ಫೂರ್ತಿ ಪಡೆಯಬಹುದು ಆ ದಿನಗಳು ಬಹಳ ದೂರ ಇಲ್ಲ.

ಮುಂದುವರೆದ ಜನಾಂಗ ಆಸ್ತಿಯುನ್ನುಳ್ಳಂಥ ವರ್ಗದವರು ಈವಾಗಲೇ ಅರಿತುಕೊಂಡು, ಇಷ್ಟು ಜನಸಂಖ್ಯೆ ಇರತಕ್ಕಂತಹ ದಲಿತರನ್ನ ಕಡೆಗಾಣಿಸದೇನೆ ಅವರಿಗೆ ಪ್ರೋತ್ಸಾಹ ಕೊಟ್ಟು ಕಾನೂನು ಬದ್ಧವಾಗಿ ರಾಜ್ಯಾಂಗ ಬದ್ಧವಾಗಿ ಏನೇನು ಸೌಲಭ್ಯ ಮತ್ತು ಸವಲತ್ತುಗಳನ್ನು ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೊ ಅದು ಅವರಿಗೆ ದೊರೆಯುವ ರೀತಿಯಲ್ಲಿ ಮಾಡಿದರೆ ರಾಷ್ಟ್ರ ಉಳಿಯುತ್ತದೆ. ಇಲ್ಲವೆ ಹೋದರೆ ರಾಷ್ಟ್ರದ ಗತಿ ಏನಾಗುತ್ತದೆ ಅನ್ನುವುದನ್ನ ಹೇಳುವುದಕ್ಕಾಗುವುದಿಲ್ಲ. ಪ್ರತಿ ದಿವಸನೂ ನಮಗೆ ಅನಿಶ್ಚತೆಯ ವಾತಾವರಣ ಆವರಿಸಿಕೊಂಡು ಬರುತ್ತಾ ಇದೆ ಸುತ್ತಲೂನೂ. ಇಂಥ ಸನ್ನಿವೇಶದಲ್ಲಿ ನಾವು ನಿಶ್ಚಿಂತೆಯಿಂದ ಹಾಯಾಗಿ ಬೇರೆಯವರಿಂದ ದುಡಿಸಿಕೊಂಡು ನಾವು ಕಾರಿನಲ್ಲಿಯೊ ಅಥವಾ ಒಳ್ಳೊಳ್ಳೆ ಬಂಗಲೆಗಳಲ್ಲಿ ಇದ್ದು ಸುಖ ಪಡಬಹುದು ಅಂತಕ್ಕಂತಹ ಹಗಲುಕನಸನ್ನ ಮರೆಯ ಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ನಿಮ್ನ ವರ್ಗದ ಬುಡುಕಟ್ಟಿನ—ಈ ಜನಾಂಗದವರಿಗೆ ಮೀಸಲಾತಿ ಇನ್ನೂ ಹಲವಾರು ವರ್ಷಗಳು ದೊರೆಯಬೇಕು. ಅದು ಬರೆ ಕಾಗದದ ಮೇಲೆ ನಮೂದಿಸಿದರೆ ಸಾಲದು. ಆ ಸವಲತ್ತುಗಳು ಮತ್ತು ಅನುಕೂಲಗಳು ಅವರಿಗೆ ಧಕ್ಕಬೇಕು ಆರೀತಿಯಲ್ಲಿ ಆಗುವುದಕ್ಕೆ ಮುಂದುವರೆದ ವರ್ಗದವರು ಸಹಕರಿಸಬೇಕು. ಅದು ಅವರ ಉಳಿವಿಗಾಗಿಯೇ ಹೊರತು ಬೇರೆಯವರ ಉಳಿವಿಗಾಗಿ ಅಲ್ಲ. ಅಸ್ಪೃಶ್ಯನಸೂ ಇಲ್ಲದಿರುವವನು, ಯಾವಾಗಲಾದರೂ ಸಾಯೋಕ್ಕೆ ತಯಾರಾಗಿರುತ್ತಾನೆ. ಹಣ ಇರುವವರಿಗೆ ದುಡ್ಡು ನೋಡದೆ ಸೂಲು ಹೋಗುವುದಿಲ್ಲ. ಒಬ್ಬರು ವೈಶ್ಯರು ಅವರಿಗೆ ಪ್ರಯಸ್ಸಾಗುತ್ತಾ ಬಂತು. ಕಾಯಿಲೆಯಾಗಿ ಹಾಸಿಗೆ ಹಿಡಿದರು. ತಕ್ಷಣ ಸೂಲು ಹೋಗ್ಲೆ ಇಲ್ಲ. ಕೊನೆಗೆ ಏನು ಮಾಡಿದರು ಅಂದ್ರೆ, ಆ ಚಿನ್ನ ಈ ಬೆಳ್ಳಿ ರೂಪಾಯಿಸಿನ ನಾಣ್ಯ ತರಿಸಿ ಝಣ ಝಣ ಶಬ್ದಮಾಡಿಸಿದ ಮೇಲೆ ಕಣ್ಣು ಮುಚ್ಚಿದರು. ಅಲ್ಲಿವರೆಗೂ ಹೋಗ್ಲೆ ಇಲ್ಲ ಸೂಲು. ಈ ಸನ್ನಿವೇಶಗಳು ಅನೇಕ

ಹಣವಂತರಿಗೆ ಉದ್ಭವಿಸಬಹುದು. ಇದನ್ನು ಮೀಸಲಾತಿ ವಿರೋಧಿಸುವವರು ಗಮನಿಸ ಬೇಕು, ಈ ಮೀಸಲಾತಿ ಮುಂದುವರೆಯಬೇಕು ಮತ್ತು ಮೀಸಲಾತಿ ಇಲ್ಲದೆ ಇದ್ದರೆ ಪಲಿತಾಂಶ ಇನ್ನು ಮುಂದೆ ಘೋರವಾಗ ಬಹುದು ಏಕೆಂದರೆ ಈ ಹಿಂದುಳಿದ ಮತ್ತು ನಿಮ್ನ ವರ್ಗಗಳಲ್ಲೂ ಸಹ ತಿಳುವಳಿಕೆ ಬಂದಿದೆ.

ನಿಮ್ನ ಈ ಚಳುವಳಿ ಚೌಕಟ್ಟು ಕೇವಲ ಹರಿಜನ ಗಿರಿಜನರಿಗೆ ಸೀಮಿತವಾಗಿರಬಾರದು. ಮಡಿವಾಳರು, ಕ್ಷೌರಿಕರು, ಕುಂಬಾರರು, ಕಾಡುಕುರುಬರು, ಕುರುಬರು, ಜೇನುಕುರುಬರು, ಲಂಬಾಣಿಗರು ಎಲ್ಲರನ್ನು ಆವರಿಸಿಕೊಂಡು ಮುಂದು ಹೋಗಬೇಕಾಗುತ್ತದೆ.

ರಘುರಾಮ ಶೆಟ್ಟಿ

ಈ ವಿಷಯದಲ್ಲಿ ಚರ್ಚೆಮಾಡುವಾಗ ನಾವು ಒಂದು ತಪ್ಪನ್ನ ಮಾಡಿದಂತೆ ನನಗೆ ಅನ್ನಿಸುತ್ತದೆ. ಮೀಸಲಾತಿಯು ದಲಿತರು, ಹರಿಜನರು, ಗಿರಿಜನರು ಇವರಿಗೆ ಬಹಳ ಅವಶ್ಯಕವಾದ ವಿಷಯ. ಇದಿಲ್ಲದಿದ್ದರೆ ಅವರಿಗೆಲ್ಲ ನಾಳೆ ಉಸಿರು ಕಟ್ಟಿಬಿಡಬಹುದು. ಮೀಸಲಾತಿಯ ಅವಶ್ಯಕತೆ ಹರಿಜನ ಗಿರಿಜನ ಸಮೂಹಕ್ಕೆ ಇತರರಿಗಿಂತ ಒಂದು ತೂಕ ಹೆಚ್ಚಿಗೆ ಬೇಕಾಗಬಹುದು.ನಮ್ಮ ಈ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಸೂಕ್ಷ್ಮವಾಗಿ ಅವಲೋಕನೆ ಮಾಡಿದರೆ, ಸಾಮಾಜಿಕ ತುಳಿತ, ಆರ್ಥಿಕ ಶೋಷಣೆಗೆ ಒಳಗಾಗಿ ಕೆಲವರು ಐದು ಸಾವಿರ ವರ್ಷ ಅಂತಾರೆ, ಕೆಲವರು ಮೂರು ಸಾವಿರ ಅಂತಾರೆ, ಇದನ್ನ ನಾವು ಬಹಳ ಧಾರಾಳವಾಗಿ ಬಳಸಿಕೊಂಡು ಹೋಗ್ತಾ ಇದ್ದೇವೆ. ಈ ದೇಶದ ಬ್ರಾಹ್ಮಣಿಕೆ—ನಾನು ಬ್ರಾಹ್ಮಣ ಅಂತ ಕರೆಯೋದಿಲ್ಲ, ಬ್ರಾಹ್ಮಣಿಕೆ ಅಂತೀನಿ. ನನ್ನ ದೃಷ್ಟಿಯಲ್ಲಿ ಬ್ರಾಹ್ಮಣಿಕೆ ಸಾಮಾಜಿಕ ಅಪರಾಧ. ಇದೊಂದು ಮನೋಧರ್ಮ. ಈ ಬ್ರಾಹ್ಮಣಿಕೆ ಕೇವಲ ಬ್ರಾಹ್ಮಣ ಸಮೂಹಕ್ಕೆ ಸೇರಿದ್ದಲ್ಲ. ನಾವು ಇದನ್ನ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಈ ಬ್ರಾಹ್ಮಣಿಕೆ ಬೇರೆ ಬೇರೆ ಸಾಮಾಜಿಕ ಹಂತಸ್ತುಗಳಲ್ಲಿ ಹರಡಿಕೊಂಡಿದೆ, ತನ್ನ ಪ್ರಭಾವವನ್ನ ಬೀರುತ್ತಾ ಇದೆ. ಈ ವಿಷ ಸರ್ಪಗಳಿಗೆ ರಕ್ಷಣೆ ಕೊಡುವ ಮಾನಸಿಕ ಹುತ್ತಗಳ ನಿರ್ಮಾಣವಾಗುತ್ತ ಇವೆ. ನಾವು ಇದರ ಬಗ್ಗೆ ಕೂಡ ಎಚ್ಚರಿಕೆ ಇಟ್ಟುಕೊಳ್ಳಬೇಕು. ಹರಿಜನರು, ಗಿರಿಜನರು, ಅಲೆಮಾರಿಜನರು, ಕಾಡುಕುರುಬರು, ಜೇನು ಕುರುಬರು, ಲಂಬಾಣಿಗರು, ಅಗಸರು,ಕ್ಷೌರಿಕರು, ಕುಂಬಾರರು, ಬಡಗಿ ನೇಯ್ಗಾರರು– ಇವರೆಲ್ಲ ಸಾಮಾಜಿಕ ತುಳಿತಕ್ಕೆ, ಆರ್ಥಿಕ ತುಳಿತಕ್ಕೆ ಒಳಗಾದವರು. ರಾಷ್ಟ್ರ ಜೀವನದಲ್ಲಿ ಸಕ್ರಿಯ ಪಾಲುಗೊಳ್ಳುವ ಈ ರಾಷ್ಟ್ರದ ಆರ್ಥಿಕ

ಸಣ್ಣ ಪುಟ್ಟ ಜಾತಿಗಳೂ ಸೇರಲಿ

ಉನ್ನತಿಯಲ್ಲಿ ಸಾಮಾಜಿಕ ಮುನ್ನಡೆಯಲ್ಲಿ ಪಾಲುಗೊಳ್ಳುವ ಎಲ್ಲಾ ಅವಕಾಶಗಳಿಗೆ ಹೊರತಾಗಿ ಉಳಿದಂಥ ಜನವರ್ಗ ಇಷ್ಟಿದೆ. ಸಾಮಾಜಿಕ ಪ್ರತಿಷ್ಠಿತ ವರ್ಗ ಈ ಮೀಸಲಾತಿ ಸಿದ್ಧಾಂತವನ್ನ ಒಂದಲ್ಲ ಒಂದು ರೀತಿಯಲ್ಲಿ ಕೆಡವಿ ಅದನ್ನ ಕೆಡಿಸಿ ಅದನ್ನ ವಿಕೃತಗೊಳಿಸಿ ಈ ದೇಶದ ದಲಿತ ವರ್ಗವನ್ನ ತನ್ನ ಹಿಡಿತದಲ್ಲಿಟ್ಟುಕೊಳ್ಳ ಬೇಕು ಅಂತ ಬೇರೆ ಬೇರೆ ಕ್ಷೇತ್ರಗಳಲ್ಲಿ ಯುಕ್ತಿ ಪೂರ್ವಕವಾಗಿ ದಶಕಗಳಿಂದಲೇ ಕೆಲಸಮಾಡಿಕೊಂಡು ಬಂದಿದೆ. ಅಂಥ ಒಂದು ಸನ್ನಿವೇಶದಲ್ಲಿ ಈ ಮೀಸಲಾತಿ ಸಿದ್ಧಾಂತಕ್ಕೆ ಒಂದು ಹೊಸ ತಾತ್ವಿಕ ತಿರುಳನ್ನ ಕೊಟ್ಟು ಚೌಕಟ್ಟನ್ನ ನಿರ್ಮಾಣ ಮಾಡಿ ದೇಶದ ಮುಂದೆ ಮೊದಲು ಇಟ್ಟವರು ಎಲ್.ಜಿ. ಹಾವನೂರ್‌ರವರು.

ನಿಮ್ಮಲ್ಲಿ ಯುವಕರಿದ್ದೀರಿ. ಇಲ್ಲಿ ಸೇರಿರುವವರು ನಿಷ್ಠುರವಾದ ವಿಚಾರಗಳನ್ನ ಸ್ಪಷ್ಟ ಮಾತುಗಳಲ್ಲಿ ಮುಂದಿಡುವಂತಹ ಒಂದು ಕೆಚ್ಚನ್ನ ನೀವು ಬೆಳೆಸಿಕೊಳ್ಳದಿದ್ದರೆ ಈ ಮೀಸಲಾತಿ ಸೌಲಭ್ಯವನ್ನ ರಕ್ಷಣೆ ಮಾಡಿಕೊಳ್ಳಕ್ಕೆ ಸಾಧ್ಯವಿಲ್ಲ. ಆಗೋದಿಲ್ಲ. ನಿಮ್ಮ ಕೋಟೆಯನ್ನು ಹೊಡೆಯಲಿಕ್ಕೆ ಹೊರಟಿದ್ದಾರೆ, ಬಲಿಷ್ಠರು ಹೊರಟಿದ್ದಾರೆ. ಬುದ್ಧಿ ಪೂರ್ವಕವಾಗಿ ಸಂಚು ನಡೆಸಲು ಹೊರಟಿದ್ದಾರೆ. ಆದ್ದರಿಂದ ನಿಮ್ಮ ಈ ಚಳುವಳಿ ಚೌಕಟ್ಟು ಕೇವಲ ಹರಿಜನ ಗಿರಿಜನರಿಗೆ ಸೀಮಿತವಾಗಿರಬಾರದು. ಮಡಿ ವಾಳರು, ಕ್ಷೌರಿಕರು, ಕುಂಬಾರರು, ಕಾಡುಕುರುಬರು, ಕುರುಬರು, ಜೇನುಕುರು ಬರು, ಲಂಬಾಣಿಗರು ಎಲ್ಲರನ್ನು ಆವರಿಸಿಕೊಂಡು ಮುಂದು ಹೋಗಬೇಕಾ ಗುತ್ತದೆ. ಒಂದು ಕ್ರಾಂತಿಕಾರಿ ಶಕ್ತಿಯಾಗಿ ಬೆಳೆಯಬೇಕಾಗಿದೆ. ಆವಾಗ ಮಾತ್ರ ಈ ತತ್ವವನ್ನು ನೀವು ರಕ್ಷಣೆ ಮಾಡಿಕೊಳ್ಳಲಿಕ್ಕೆ ಸಾಧ್ಯ.

ಮೀಸಲಾತಿ ಎಲ್ಲಿಯವರೆಗೆ ಅಂದರೆ ನಾನು ಇದಕ್ಕೆ ಒಂದು ನಿಶ್ಚಿತವಾದ ಗಡುವು ಕೊಡುವ ಸಾಹಸಕ್ಕೆ ಹೋಗುವುದಿಲ್ಲ. ಏಕೆಂದರೆ ಮೂರು ಸಾವಿರ ವರ್ಷ ಗಳಿಂದ ಆದಂಥ ಒಂದು ಸಾಮಾಜಿಕ ಅನ್ಯಾಯವನ್ನು ೩೦ ವರ್ಷಗಳಲ್ಲಿ ಪರಿಹರಿ ಸುತ್ತೇನೆ ಅಂತ ಯಾರಾದರೂ ಭ್ರಮಿಸಿದ್ದೆಯಾದರೆ ಅದು ಆತ್ಮವಂಚನೆ ಕೆಲಸ ಆಗ್ತದೆ. ಇನ್ನೂ ನಾಲ್ಕು ತಲೆಮಾರುಗಳವರೆಗಾದರೂ ಈ ಸೌಲಭ್ಯ ಬೇಕು. ಈ ಸೌಲಭ್ಯದ ಲಾಭದಿಂದ ಯಾವತ್ತಿಗೂ ಮೀಸಲಾತಿಯ ಅವಶ್ಯಕತೆ ಹೋಗಲೇ ಬೇಕು. ಈ ದಲಿತ ವರ್ಗ ಒಂದು ತತ್ವ ನಿಷ್ಠೆಯುಳ್ಳ ರಾಜಕೀಯ ಶಕ್ತಿಯಾಗಿ ಬೆಳೆದು ಈ ದೇಶದ ಭವಿಷ್ಯವನ್ನು ರೂಪಿಸುವ ಸ್ಥಾನಮಾನಕ್ಕೆ ಬರಬೇಕು.

ನೆನಪಿಡಿ ಸ್ನೇಹಿತರೆ, Non political movement ಅನ್ನೊದು ಮಹಾ ಮೋಸ, ಈದೇಶದಲ್ಲಿ. There is nothing like non political. Every thing will have to be political. Every thing must have a political objective. Unless you have prepare to build yourself as mighty political force of the

dipressed, the supressed and exploited by what ever a name you call it. ಸಮಾನತೆ ತರಲು ಆಗದ ಮಾತು. ಇದರ ಬಗ್ಗೆ ನನಗೆ ಸಂಶಯವಿಲ್ಲ. ನೀವು ತಾತ್ವಿಕ ನೆಲೆಯನ್ನ ಇಟ್ಟುಕೊಂಡು ಒಂದು ರಾಜಕೀಯ ಶಕ್ತಿಯಾಗಿ ಬೆಳೆದು ಈ ದೇಶದ ಆಡಳಿತ ಸೂತ್ರವನ್ನ ನಿಮ್ಮ ಕೈಗೆ ತೆಗೆದುಕೊಳ್ಳಲೇ ಬೇಕು. ಅದಕ್ಕೆ ನಾವು ಕ್ರಾಂತಿ ಅಂತ ಕರೆಯುತ್ತೇವೆ. ಮೀಸಲಾತಿ ಇಲ್ಲದಿದ್ದಲ್ಲಿ ಮುಂದೇನಾಗುತ್ತಿತ್ತು? ಇದಕ್ಕೆ ನನ್ನದೊಂದು ಸರಳವಾದ ಉತ್ತರ ಇದೆ. ಈ ದೇಶ ದಲ್ಲಿ ಈ ಹೊತ್ತಿನವರೆಗೆ ರಕ್ತದ ಹೊಳೆ ಹರಿದು ಕ್ರಾಂತಿಯ ಕಹಳೆ ಊದಿ ಒಂದು ಹೊಸ ಶಕ್ತಿ ಉದಯವಾಗುತ್ತ ಇತ್ತು. ಮೇಲ್ಜಾತಿಯ ಜನರು ಸ್ಥಾಪಿತ ಹಿತಾಶಕ್ತರೆಲ್ಲ ಕೊಚ್ಚಿ ಕೊಚ್ಚಿ ಹೋಗ್ತ ಇದ್ದರು. ಕ್ರಾಂತಿ ಆಗ್ತ ಇತ್ತು. ಕ್ರಾಂತಿ ಆಗುವ ಒಂದು ಅವಕಾಶ ತಪ್ಪಿಹೋಯ್ತು. ಅದು ರಕ್ತಮಯ ಕ್ರಾಂತಿ ಆಗ್ತ ಇತ್ತು.

ಈಗ ನೀವೆಲ್ಲ ವಿದ್ಯಾವಂತರಾಗಿದ್ದೀರಿ. ಮೀಸಲಾತಿ ಸೌಲಭ್ಯ ಪಡೆದು ಬುದ್ಧಿ ಬೆಳೆಸಿಕೊಂಡಿದ್ದೀರಿ. ಬುದ್ಧಿಶಕ್ತಿಯಲ್ಲಿ ಯಾವನಿಗೂ ನೀವು ಕಡಿಮೆಯವರಲ್ಲ. ಈಗ, ಬುದ್ಧಿಶಕ್ತಿಯಿಂದ ಒಂದು ಹೊಸ ರಾಜಕೀಯ ಶಕ್ತಿಯನ್ನು ರೂಪಿಸುವಂತಹ ವೈಚಾರಿಕ ಕ್ರಾಂತಿಯನ್ನು ಮಾಡುವಂತಹ ಒಂದು ಸಾಮರ್ಥ್ಯವನ್ನು ಗಳಿಸಿದ್ದೀರಿ. ಆದ್ದರಿಂದ ಮೀಸಲಾತಿ ಇಲ್ಲದಿದ್ದಲ್ಲಿ ಯಾರೂ ಗುಹೆ ವಾಸಿಗಳಾಗಿ ಹೋಗುತ್ತಿರಲಿಲ್ಲ. ಹರಿಜನರು ದಲಿತರು ದೀನರು ತಮ್ಮ ಹಕ್ಕುಗಳಿಗಾಗಿ ಹೋರಾಡ್ತ ಇದ್ದರು. ಕ್ರಾಂತಿ ಆಗ್ತ ಇತ್ತು. ಬಹಳ ಬೇಗ ಆಗ್ತ ಇತ್ತು. ಆದ್ದರಿಂದ ಮೀಸಲಾತಿ ಇಲ್ಲದಿದ್ದಲ್ಲಿ ಗುಹಾವಾಸಿಗಳಾಗಿ, ವನವಾಸಿಗಳಾಗಿ ಎಲ್ಲಾ ಅರ ಬೆತ್ತಲೆಯಲ್ಲಿ ತಿರುಗ್ತಾ ಇದ್ದರು ಅನ್ನುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ನಿಮಗೆ ಬುದ್ಧಿಯನ್ನ ಬೆಳೆಸಿಕೊಳ್ಳಬೇಕು ಅನ್ನುವ ಹಂಬಲ ಇದೆ, ಮುಂದು ವರಿಯ ಬೇಕು ಅನ್ನುವ ಕೆಚ್ಚು ಇದೆ, ತಾನೂ ಒಳ್ಳೆಯ ರೀತಿಯಲ್ಲಿ ಬದುಕಬೇಕೆಂಬ ಆಸೆ ಇದೆ. ಈ ಆಸೆ ಇದ್ದ ಜನರ ಮುನ್ನಡೆಯನ್ನ ಯಾವ ಯುಕ್ತಿಯೂ ಯಾವ ಕಾಲಕ್ಕೂ ಅಡ್ಡಗಟ್ಟುವದಕ್ಕೆ ಸಾಧ್ಯವಾಗೋದಿಲ್ಲ.

ಇನ್ನೊಂದು ಪ್ರಶ್ನೆ ಮೀಸಲಾತಿ ನಿಂತಲ್ಲಿ ಮುಂದೇನು? ಈ ಮೀಸಲಾತಿ ಸಾಮಾಜಿಕ ನ್ಯಾಯವನ್ನ ಕಿತ್ತುಕೊಳ್ಳಲಿಕ್ಕೆ ಪಿತೂರಿ ನಡೆಸುತ್ತಿರುವ ಮುಂದುವ ರಿದ ಜನಾಂಗ ಒಂದು ನೋಟೀಸ್ ತೆಗೆದುಕೊಳ್ಳಬೇಕು–'ಫಿಲ್ಲಿಸಿ ಆಮೇಲೆ ನೋಡಿ'.

ದೇವರ ವಿಷಯ ಬಂದಾಗ ಹಿಂದೂಗಳು ಬಹಳ ಶುದ್ಧವಾಗಿರುವುದಕ್ಕೆ ನೋಡುತ್ತಾರೆ. ಆದರೆ ಪರರ ಗಂಟು ಮುನಿಸಿಪಾಲಿಟಿಕಲ್ಲು ಇಂಥ ಪ್ರಶ್ನೆ ಬಂದಾಗ ನಾವು ಯಾರು ನೈತಿಕರು ಅಲ್ಲೇಅಲ್ಲ.

ಯು.ಆರ್. ಅನಂತಮೂರ್ತಿ

ಮೊದಲನೆಯ ಪ್ರಶ್ನೆ ಮೀಸಲಾತಿ ಯಾರಿಗೆ? ಇದಕ್ಕೆ ಎರಡು ಉತ್ತರಗಳನ್ನು ಕೊಡಬಹುದು. ಜಾತಿ ಯಾರಿಗೆ ಅವಮಾನಕರವೊ ಅವರಿಗೆ ಮೀಸಲಾತಿ. ನಿನ್ನ ಜಾತಿ ಯಾವುದು ಅಂತ ಕೇಳಿದರೆ, ತನ್ನ ಜಾತಿ ಯಾವುದು ಅಂತ ಹೇಳಿಕೊಳ್ಳುವುದಕ್ಕೆ ಯಾರ್‍ಯಾರು ಸಾರ್ವಜನಿಕವಾಗಿ ಅವಮಾನವನ್ನ ಪಡುತ್ತಾರೊ ಅಂಥವರಿಗೆ ಮೀಸಲಾತಿ ಅಗತ್ಯ. ಅಂದರೆ ಖಂಡಿತ ಹರಿಜನರನ್ನ ಯಾವ ಹೆಸರಿನಲ್ಲಿ ಕರೀಬೇಕು ಅನ್ನುವುದು ನಮಗೆ ಎಲ್ಲರಿಗೂನೂ ಅನೇಕ ಸಾರಿ ಮುಜಗರದ ಪ್ರಶ್ನೆ. ಹರಿಜನ ಅನ್ನುವ ಶಬ್ದ ಉಪಯೋಗಿಸುವುದಕ್ಕೆ ನಾಚಿಕೆಯಾಗುತ್ತದೆ. ಈಗ ಇರೊ ಸ್ಥಿತಿಗಿಂತ ಉತ್ತಮ ಸ್ಥಿತಿಯಲ್ಲಿ ಹೇಳಿದಂತಾಗುತ್ತದೆ. ಹೊಲೆಯ ಅಂದರೆ ಅದು ಬೈಗುಳ ಶಬ್ದ ಅನ್ನಿಸುತ್ತದೆ. ಎಷ್ಟೊ ಜನರು ನನ್ನ ಹತ್ತಿರ ಬಂದ ಹರಿಜನರು ನೀವು ಯಾರು ಅಂದರೆ ಎಸ್.ಸಿ. ಸಾರ್ ಅಂತಾರೆ. ಇಂಗ್ಲಿಷ್ ಶಬ್ದ ಉಪಯೋಗಿಸುತ್ತಾರೆ. ಯಾರಿಗೆ ಜಾತಿ ಅವಮಾನಕರವಾಗಿದೆಯೋ ಅವರಿಗೆ ಮೀಸಲಾತಿ ಅಗತ್ಯ. ಎರಡನೆಯದು ಇದು ಒಂದು ಪ್ಯಾರಡಾಕ್ಸ್. ಇದನ್ನ ಹೇಗೆ ಹೇಳಬಹುದು ಅಂದರೆ ಯಾವ ಜಾತಿಗಳಿಗೆ ಕೆಲವು ರೀತಿಯ ನೌಕರಿಗಳು ನೂರಕ್ಕೆ ನೂರು ಮೀಸಲಾಗಿದ್ದುವೊ ಅವರಿಗೆ ಮೀಸಲಾತಿ ಅಗತ್ಯ. ಅಂದರೆ ಅದು ದೈಹಿಕ ದುಡಿಮೆಯಾಗಿರಬೇಕು, ಕೀಳಾದ ದುಡಿಮೆಯಾಗಿರ ಬೇಕು, ಅಂಥವು ಕೆಲವು ಜನಾಂಗಗಳಿಗೆ ನೂರಕ್ಕೆ ನೂರು ಮೀಸಲಾಗಿವೆ. ಅಂದರೆ ಯಾರೂ ಜಾಡಮಾಲಿ ಕೆಲಸವನ್ನು ನೂರಕ್ಕೆ ನೂರು ಕೊಡ್ತಿರೋದು ತಪ್ಪು ಅಂತ ವಾದ ಮಾಡೋದಿಲ್ಲ. ಅದು ಮೀಸಲಾತಿ ಅಲ್ಲವೇನೂ? ಅಂದರೆ ಯಾವ ಯಾವ ವರ್ಗಗಳಲ್ಲಿ ಮೀಸಲಾತಿ ಅನ್ನೊದು ನೂರಕ್ಕೆ ನೂರು ಅನ್ವಯವಾಗಿದೆಯೊ ಆ ವರ್ಗಗಳಿಗೆ ಪ್ರಾಯಶಃ ಬೇರೆ ಬೇರೆ ಉದ್ಯೋಗಗಳಲ್ಲಿ ಇರಲಿಕ್ಕೆ ಅವಕಾಶ ಒದಗಿಸಕ್ಕೋಸ್ಕರವಾಗೀನೆ ಮೀಸಲಾತಿ ಅಗತ್ಯ ಅಂದರೆ ಈಗ ಬ್ರಾಹ್ಮಣರನ್ನ ತೆಗೆದುಕೊಳ್ಳಿ. ಅವರು ಹೋಟೆಲ್ ಇಟ್ಟಿರ್ತಾರೆ, ಕಂಟ್ರಾಕ್ಟ್ ಮಾಡ್ತಾರೆ, ಇಂಜಿನಿಯರ್ಸ್ ಆಗಿರ್ತಾರೆ. ನೀವು ಯಾವ ಯಾವ ಉದ್ಯೋಗ ತೆಗೆದು ಕೊಂಡರೂ ಆ ಎಲ್ಲಾ ಉದ್ಯೋಗಗಳಲ್ಲು ಬ್ರಾಹ್ಮಣ ಇರುತ್ತಾನೆ. ಒಕ್ಕಲಿಗರೂ ಹೋಟೆಲ್ ಇಡ್ತ ಇದ್ದಾರೆ, ಲಾಯರ್‌ಗಳಾಗಿದ್ದಾರೆ, ಕಂಟ್ರಾಕ್ಟರ್ಸ್‌ಗಳಾಗಿದ್ದಾರೆ, ಎಲ್ಲಾ ಆಗಿದ್ದಾರೆ. ಅಂದರೆ ಯಾವ ಯಾವ ಜಾತಿಗಳು ಈಗ ಆಧುನಿಕ ಜಗತ್ತಿನಲ್ಲಿ ಅವಕಾಶವಿರುವ ಎಲ್ಲಾ ನೌಕರಿಗಳಲ್ಲೂ ಇದ್ದಾರೊ

ಅನೈತಿಕತೆ ಮುಚ್ಚಲು ಮೀಸಲಾತಿ

ಅವರಿಗೆ ಮೀಸಲಾತಿ ಅಗತ್ಯವಿಲ್ಲ. ಯಾರಿಗೆ ನೂರಕ್ಕೆನೂರು ಮೀಸಲಾತಿಯಾಗಿ ಒಂದೇ ಉದ್ಯೋಗದಲ್ಲಿದ್ದಾರೊ ಅವರಿಗೆ ಪ್ರಾಯಶಃ ಈ ಮೀಸಲಾತಿ ಅಗತ್ಯ. ಹರಿಜನರಿಗಲ್ಲದೆ ಇನ್ನು ಕೆಲವರಿಗೂ ಬೇಕಾಗಿಬರುತ್ತೆ ಅಂತ ಕಾಣುತ್ತೆ. ಉದಾಹರಣೆಗೆ ಕ್ಷೌರಿಕ ಜನಾಂಗ: ಅವರು ವಿದ್ಯಾವಂತರು, ವಾಲಗ ಊದುತ್ತಾರೆ, ಹಾಡುತ್ತಾರೆ. ಒಂದು ಕ್ಷೌರಿಕನ ಅಂಗಡಿಯಲ್ಲಿ ಪ್ರಜಾಮತ ಪತ್ರಿಕೆಯಾದರೂ ಬಂದಿರುತ್ತದೆ. ಊರಿನ 'ಗಾಸಿಪ್'ಗಳನ್ನೆಲ್ಲ ಕೇಳುತ್ತಿರುತ್ತಾರೆ. ಆದರೆ ನಾನು ಕಂಡ ಹಾಗೆ ಕ್ಷೌರಿಕ ಜನಾಂಗದವರು ಬೇರೆ ಬೇರೆ ಉದ್ಯೋಗದಲ್ಲಿರುವುದನ್ನು ನಾನು ನೋಡಿಲ್ಲ. ಅವರು ವಿದ್ಯಾವಂತರಾಗಿದ್ದು ತ್ಯಾಗರಾಜರ ಕೀರ್ತನೆಯು ಅವರಿಗೆ ಬರ್ತಾಇರ್‍ತದೆ. ಆದರೆ ಬೇರೆ ಉದ್ಯೋಗದಲ್ಲಿ ಅವರಿಲ್ಲ. ನನಗೊಬ್ಬ ಸ್ನೇಹಿತ ಇದ್ದ. ಬಹಳ ದಿವಸಗಳ ತನಕ ನಿನ್ನ ಜಾತಿ ಯಾವುದು ಅಂತ ಕೇಳಿದರೆ ನಾಚಿಕೆ ಪಟ್ಟುಕೊಳ್ಳುತ್ತಿದ್ದ. ನಾನು ಅವನಿಗೆ ಹೇಳಿದೆ–ನಿನ್ನೆನ್ನು ಯಾರು ಕೇಳಿದರೆ ಹಜಾಮ ಅಂತ ಹೇಳಯ್ಯ ಅಂತ. ಅವತ್ತಿನಿಂದ ಅವನು ಬಿಡುಗಡೆ ಪಡೆದು ಬಿಟ್ಟ. ಹಜಾಮ ಅಂದ್ರೆ ಕೇಳುವವನಿಗೆ ಅವಮಾನವಾಗಬೇಕು. ಹೀಗೆ ಯಾರಿಗೆ ಜಾತಿ ಅವಮಾನಕರವೊ ಮತ್ತು ಯಾವ ಯಾವ ಜಾತಿಗೆ ನೂರಕ್ಕೆ ನೂರು ಮೀಸಲಾತಿ ನಮ್ಮ ದೇಶದಲ್ಲಿ ಇತ್ತೊ ಅವರಿಗೆ ಈ ಮೀಸಲಾತಿ ಅಗತ್ಯ. ಏಕೆಂದರೆ ಅವರು ಅನೇಕ ಉದ್ಯೋಗಗಳಲ್ಲಿ ಹಂಚಿ ಒಡನಾಡಿ ಆ ಮೂಲಕ ಈ ಜಾತಿ ಪದ್ಧತಿಯನ್ನೆ ಹೊಡೆಯುವುದಕ್ಕೆ ಸಾಧ್ಯವಾಗುವುದಕ್ಕೋಸ್ಕರವಾಗಿ.

ಮೀಸಲಾತಿಯ ಉದ್ದೇಶವೇನು ಅಂತಂದರೆ ಮುಖ್ಯವಾದ ಜಾಗಗಳಲ್ಲಿ ಹೀಗೆ ಅವಮಾನಕ್ಕೆ ಒಳಗಾದ ಅಸ್ಪೃಶ್ಯರಾದ ಜನಾಂಗಗಳ ಪ್ರತಿನಿಧಿಗಳು ಇರೋದು ಎಲ್ಲರಿಗೂ ಕಂಡಾಗ, ಕಣ್ಣಿಗೆ ಕಾಣುವ ಜಾಗಗಳಲ್ಲಿ ಅವರು ಇದ್ದಾಗ, ಎರಡು ಮನಸ್ಸಿನ ಬದಲಾವಣೆ ಕೆಲಸಗಳಾಗುತ್ತೆ. ಒಂದು, ಅಸ್ಪೃಶ್ಯರಿಗೇನೇ ನಮ್ಮವನೊಬ್ಬ ಉಪಕುಲಪತಿ ಆಗಬಹುದು, ನಮ್ಮವನೊಬ್ಬ ಪ್ರೊಫೆಸರ್ ಆಗಬಹುದು, ನಮ್ಮವನೊಬ್ಬ ಮಂತ್ರಿ ಆಗಬಹುದು ಅನ್ನೋದನ್ನ ಕಂಡಾಗ ನಾನು ಈ ಸ್ಥಿತಿಯಲ್ಲಿ ಇರಬೇಕಾಗಿಲ್ಲ, ನಾನು ಅಸ್ಪೃಶ್ಯ ಅಂತ ನನ್ನೊಳಗೇನೆ ನೊಂದುಕೋಬೇಕಾಗಿಲ್ಲ ಅನ್ನುವ ಒಂದು ಆತ್ಮ ನಂಬಿಕೆ ಬರಬಹುದು. ಎರಡನೆಯದಾಗಿ: ಸವರ್ಣೀಯರಿಗೆ, ತಾವು ಮಾತ್ರ ಇರುವುದಕ್ಕೆ ಸಾಧ್ಯವಿದ್ದಂಥ ಜಾಗದಲ್ಲಿ ಇವರು ಇರುವುದನ್ನ ನೋಡಿದಾಗ, ಹೌದು ಇವರು ಇರಬಹುದು ಅಂತ ಅವರ ಮನಸ್ಸು ಬದಲಾವಣೆಯಾಗುವುದಕ್ಕೆ ಸಾಧ್ಯ. ಇದು ನಮ್ಮ ರಾಜ್ಯಾಂಗದ ಉದ್ದೇಶವಾಗಿದೆ–ಮೀಸಲಾತಿ ಬಗ್ಗೆ. ಮೀಸಲಾತಿ ಇದ್ದಾಗ ನಮ್ಮ ಧೋರಣೆಗಳಲ್ಲಿ ಬದಲಾವಣೆಗಳನ್ನೆ ಉಂಟುಮಾಡುವಂತಹ ಒಂದು ಅವಕಾಶವನ್ನ ನಾವು ಒದಗಿಸುತ್ತೇವೆ. ಇದು ಎಲ್ಲಿಯ ತನಕ ಮುಂದುವರಿಯುತ್ತೊ ಅಲ್ಲಿ ತನಕ ಒಳ್ಳೆಯದು. ಎಲ್ಲಿಯವರೆಗೆ ಈ ಮೀಸಲಾತಿ 'ಇರಬೇಕು ಅಂತಂದರೆ ಒಂದನೆಯದಾಗಿ,

ಹೀಗೆ ಮುಖ್ಯ ಜಾಗಗಳಲ್ಲಿ ಇರುವುದನ್ನ ನೋಡುವುದರ ಮುಖಾಂತರ ಆತ್ಮ ನಂಬಿಕೆ ಹರಿಜನರಲ್ಲೂ, ಮನಸ್ಸಿನ ಬದಲಾವಣೆ ಸವರ್ಣೀಯರಲ್ಲೂ ಆಗುವ ತನಕ. ಎರಡನೆಯದು ಎಲ್ಲಿವರೆಗೆ ಹಿಂದೂ ಮನಸ್ಸಿನಲ್ಲೆ ಸಂಪೂರ್ಣ ಬದಲಾವಣೆ ಆಗಬೇಕು ಅಲ್ಲಿತನಕ ಇರಬೇಕು. ಹಿಂದು ಮನಸ್ಸು ಯಾವ ತರಹದ್ದು ಅಂದರೆ ಒಬ್ಬ ಮನುಷ್ಯ ಅತ್ಯಂತ ಉನ್ನತ ಸ್ಥಿತಿಗೆ ಹೋದಾಗ ಅವನಿಗೆ ಜಾತಿಯೇ ಇಲ್ಲಾ ಅನ್ನಿಸುತ್ತದೆ. "ಒಬ್ಬ ಹರಿಜನ ದೊಡ್ಡ ಸಂತ ಆಗಲಿಕ್ಕೆ ಸಾಧ್ಯವಿಲ್ಲ" ಅಂತ ಹಿಂದೂ ಧರ್ಮ ಯಾವತ್ತು ಹೇಳೋದಿಲ್ಲ. ಎಷ್ಟೋ ಜನ ಸಂತರು ಹರಿಜನರು. ಆದರೆ ಅಸ್ಪೃಶ್ಯರು ಇಂಜಿನಿಯರ್ ಡಾಕ್ಟರ್ ಆಗಬಹುದು ಅಂತ ಒಪ್ಪಿಕೊಳ್ಳುವುದಿಲ್ಲ. ಸಂತ ಆಗಬಹುದು ಅಂತ ಒಪ್ಪಿಕೊಳ್ಳುತ್ತೆ, ಯಾಕೆ ಅಂದರೆ ನೀನು ಸನ್ಯಾಸಿಯಾದಾಗ ಜನಿವಾರನೂ ಸಹ ತೆಗೆದು ಹಾಕಬೇಕು ಅನ್ನುತ್ತದೆ. ಆದರೆ ಹಿಂದೂ ಸಮಾಜ ಏನುಮಾಡಿದೆ ಅಂದರೆ ಒಂದು ಅತ್ಯುನ್ನತ ಸ್ಥಿತಿಯಲ್ಲಿ ಸಮಾನತೆಯನ್ನು ಒಪ್ಪಿಕೊಳ್ಳುತ್ತೆ. ಆದರೆ ನಿತ್ಯ ಜೀವನದಲ್ಲಿ ಸಾರ್ವಜನಿಕ ಜೀವನದಲ್ಲಿ ಸಂಸಾರಿಕ ಜೀವನದಲ್ಲಿ ಅಸಮಾನತೆ ಅನ್ನೋದು ದೈವ ದತ್ತವಾದ ಪಕೃತಿ ದತ್ತವಾದನಿಯಮ ಅಂತ ತಿಳಿದು ಕೊಂಡಿವೆ. ಇದು ಬದಲಾವಣೆಯಾಗುವ ತನಕ ಮೀಸಲಾತಿ ಇರಬೇಕು. ಅಂದರೆ ನಮ್ಮ ನೈತಿಕತೆ ಒಂದು ಅತ್ಯುತ್ತಮವಾದ ಅತ್ಯುನ್ನತವಾದ ಆಧ್ಯಾತ್ಮಿಕ ಮಟ್ಟದಲ್ಲಿ ನಮಗೆ ನೈತಿಕತೆ ಇದೆ. ಆದರೆ ಸಾರ್ವಜನಿಕ ಮಟ್ಟದಲ್ಲಿ ಜನಜೀವನ ಮಟ್ಟದಲ್ಲಿ ನಾವು ನೈತಿಕರಾದ ಜನ ಅಲ್ಲ. ನಾವು ನಿತ್ಯ ಜೀವನದಲ್ಲಿ ನೋಡುತ್ತೀವೆ; ದೇವರ ವಿಷಯ ಬಂದಾಗ ಬಹಳ ಶುದ್ಧವಾಗಿರುವುದಕ್ಕೆ ನೋಡುತ್ತಾರೆ. ಆದರೆ ಪರರ ಗಂಟು ಮುನಿಸಿಪಾಲಿಟಿ ಕಲ್ಲು ಇಂಥ ಪ್ರಶ್ನೆಬಂದಾಗ ನಾವು ಯಾರೂ ನೈತಿಕರು ಅಲ್ಲೇ ಅಲ್ಲ. ಹಾಗೇನೆ ಇಂಥ ಜಾತಿ ಪ್ರಶ್ನೆಯಲ್ಲಿ ಏನಾಗಿದೆ ಅಂದರೆ ಈ ನೈತಿಕತೆ ಅನ್ನೋದು ನಮ್ಮ ನಿತ್ಯ ಜೀವನದಲ್ಲಿ ಇಲ್ಲದೆ ಇರುವುದರಿಂದ ಈ ಹಿಂದು ಮನಸ್ಸು ಸಾಮಾಜಿಕ ಜೀವನದಲ್ಲಿ ತೊಡಗುವುದರಲ್ಲೆ ನೈತಿಕತೆ ಆಗುವ ತನಕ,ಇದು ನಮ್ಮೆಲ್ಲರ ಜವಬ್ದಾರಿ ಅಂತ ತಿಳಿದು ಕೊಳ್ಳುವ ತನಕ,ಇದು ನಮ್ಮೆಲ್ಲರಿಗೂ ಅವಮಾನದ ವಿಷಯ ಅಂತ ತಿಳಿದು ಕೊಳ್ಳುವ ತನಕ ಈ ಮೀಸಲಾತಿ ಅಗತ್ಯವಿದೆ. ಇನ್ನೂ ಬಹಳ ಮುಖ್ಯವಾದ ಉತ್ತರ ಅಂದರೆ– ನೀವು ಎಷ್ಟು ಮೀಸಲಾತಿಯನ್ನಾದರು ಇಡಿರಿ, ನಮ್ಮ ಇಡೀ ದೇಶದ ಗುರಿ ಇದೆಯಲ್ಲ ಇದು ಪಾಶ್ಚಿಮಾತ್ಯ ಸಮಾಜದಂತೆ ಆಗಬೇಕು ಅನ್ನೊ ಗುರಿ ನಮ್ಮದಾದರೆ ಅಸಮಾನತೆಗಳು ಜನರ ನಡುವೆ ಹೆಚ್ಚಾಗ್ತನೇ ಹೋಗ್ತವೆ. ಈಗ ಇದ್ದಕ್ಕಿದ್ದಂತೇನೆ ಕಂಪ್ಯೂಟರ್ ಟೆಕ್ನಾಲಜಿ, ಅಟೋಮಿಕ್ ಟೆಕ್ನಾಲಜಿಗಳಿಗೆ ಹೋದರೆ ಅದು ಬಳಸ ಬಲ್ಲಂಥ ಮನಸ್ಸಿನ ಶಕ್ತಿಎಷ್ಟು ಇರಬೇಕಾಗುತದೆ ಅಂದರೆ ನಮ್ಮ ದೇಶದ ಎಷ್ಟೋ ಹಿಂದುಳಿದ ಜನಾಂಗದ ಜನರು ಆಪರಿಸ್ಥಿತಿಗೆ ಮುಟ್ಟುವುದಕ್ಕೆ ಸಾಧ್ಯವಿಲ್ಲ.ಆದರೆ ಎಲ್ಲಾ ಜನಾಂಗವನ್ನು ತೊಡಗಿಸ ಬಲ್ಲಂಥ ಒಂದು ವಿಜ್ಞಾ

ನದ ಟೆಕ್ನಾಲಜಿ ನಮ್ಮ ದೇಶದಲ್ಲಿ ಇಲ್ಲ. ಮಾವೊ ಅಂಥ ಟೆಕ್ನಾಲಜಿಯನ್ನು ಚೈನಾದಲ್ಲಿ ಮಾಡಿ ತೋರಿಸಿದರು. ಅಂತಹವರಲ್ಲಿ ಪ್ರಾಯಶಃ ನಮ್ಮ ದೇಶದಲ್ಲೂ ಎಲ್ಲಾ ಹಿಂದುಳಿದ ಜನಾಂಗದವರು ಇದ್ದಕ್ಕಿದ್ದ ಹಾಗೇನೆ ಭಾಗವಹಿಸಬಲ್ಲಂಥ ಕೆಲಸಗಳು ಇವೆ. ಈ ಹೊತ್ತು ಏನಾಗುತ್ತಿದೆ ಅಂದರೆ ನೀವು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತೆಗೆದು ಕೊಳ್ಳಿ, ಎಂಥ ಸಂಸ್ಥೆಗಳನ್ನ ನಾವು ಕಟ್ಟುತ್ತಿದ್ದೇವೆ ಎಂದರೆ ಸಾವಿರಾರು ವರ್ಷದಿಂದ ಯಾರ ಮನೆಯಲ್ಲಿ ವಿದ್ಯೆ ಇದೆಯೋ ಯಾರೂ ಬುದ್ಧಿವಂತ ರೊ ಅವರೂ ಕೂಡ ಪೈಪೋಟಿ ಮಾಡಿ ಅಲ್ಲಿಗೆ ಬರುವುದಕ್ಕಾಗುವುದಿಲ್ಲ. ಅಂಥ ಜಾಗ ಗಳನ್ನೆ ನಾವು ಸೃಷ್ಟಿಮಾಡ್ತ ಇದ್ದೇವೆ. ಇಂಥ ಜಾಗಗಳನ್ನೆ ಹೆಚ್ಚುಹೆಚ್ಚು ಸೃಷ್ಟಿ ಮಾಡಿದ ಹಾಗೆ ಅಸಮಾನತೆಗಳು ಹೆಚ್ಚಾಗುತಾ್ತ ಹೋಗುತ್ತವೆ. ಮೀಸಲಾತಿಯಿಂದ ಹರಿಜನರು ಮೇಲಕ್ಕೆ ಬರೋಕ್ಕೆ ಪ್ರಯತ್ನಪಟ್ಟರೂ ಅವರು ಹಿಂದುಳಿದ ಜನರಾಗಿಯೆ ಉಳಿದಿರುತ್ತಾರೆ. ಆದ್ದರಿಂದ ಮೀಸಲಾತಿಯ ಮುಖಾಂತರ ನಮ್ಮ ದೇಶದ ಸಮಸ್ಯೆ ಯಾವಾಗ ಪರಿಹಾರವಾಗುತ್ತೆ ಅಂದರೆ ಇಡೀ ದೇಶದ ಗುರಿ ಇದೆಯಲ್ಲ ಅದು ಅತ್ಯಂತ ಬಲಿಷ್ಠವಾದ ರಾಷ್ಟ್ರವಾಗಬೇಕು ಅನ್ನುವ ಗುರಿಯನ್ನು ಕೈ ಬಿಟ್ಟು ಇದು ನ್ಯಾಯ ಸಂಬಂಧವಾದ ರಾಷ್ಟ್ರ ಆಗಬೇಕು ಅನ್ನುವ ಗುರಿ ನಮ್ಮದಾದಾಗ. ಆಗ ಬೌದ್ಧಿಕತೆಗೂ ಅನುಭವಕ್ಕೂ ಸಂಬಂಧ ಏರ್ಪಡುತ್ತೆ ಅಂದರೆ ಒಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಂಥ ಕಡೆಯಲ್ಲಿ ಯಾವ ರೀತಿ ಬುದ್ಧಿ ಉಪಯೋಗ ಇದೆಯಂತಂದರೆ ನಿಮ್ಮ ನಿತ್ಯ ಜೀವನದ ಅನುಭವವನ್ನ ಏನನ್ನೂ ನೀವು ತರಬೇಕಾಗಿಲ್ಲ ಅಲ್ಲಿ. ಅದು ಅಮೂರ್ತವಾದುದು. ಅತ್ಯಂತ ಶ್ರೀಮಂತವಾದ ಅನುಭವವನ್ನ ಹರಿಜನ ಹುಡುಗರು ತರಬಲ್ಲರು. ನಾನು ಕಂಡ ಹಾಗೆ ಹರಿಜನರು ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಯಾರಿಗೂ ಸಮನಾದ, ಮೀರಿ ಸುವಂಥ ಕೆಲಸ ಮಾಡಿದ್ದಾರೆ. ಏಕೆಂದರೆ ಅಲ್ಲಿ ಬುದ್ಧಿ ತನ್ನ ಅನುಭವವನ್ನು ಉಳಿಸಿ ಕೊಳ್ಳುವಂಥ ಕ್ಷೇತ್ರ ಅದು. ಆದ್ದರಿಂದ ದೇಶದ ಆರ್ಥಿಕ ವ್ಯವಸ್ಥೆ ಹೇಗಿರ ಬೇಕಪ್ಪ ಅಂತಂದರೆ, ಪ್ರತಿಯೊಬ್ಬನ ಅನುಭವವನ್ನು ದುಡಿಸಿಕೊಳ್ಳಬಲ್ಲಂತಹ ಬುದ್ಧಿಯನ್ನು ಬಳಸುವ ವ್ಯವಸ್ಥೆ ಇದ್ದಾಗ ಪ್ರಾಯಶಃ ಈ ಮೀಸಲಾತಿ ಇನ್ನಷ್ಟು ಹೆಚ್ಚು ಯಶಸ್ವಿಯಾಗುತ್ತದೆ. ಮೂರನೆಯದು; ಮೀಸಲಾತಿ ಇಲ್ಲದಿದ್ದ ಪಕ್ಷದಲ್ಲಿ ಏನಾಗುತ್ತಿತ್ತು? ಅಂದರೆ ಈಗ ಆದಷ್ಟು ಬದಲಾವಣೆಯೂ ಆಗ್ತ ಇರಲಿಲ್ಲ. ಯಾಕೆ ದರೆ ಪರಿಪೂರ್ಣ ಕ್ರಾಂತಿ ಆಗಬೇಕು ಅನ್ನುವವರು ಸದ್ಯದಲ್ಲೆ ಆಗುವುದನ್ನ ಆಗದಂತೆ ಮಾಡಿ ಬಿಡುತ್ತಾರೆ. ಆದರೆ ಮೀಸಲಾತಿಯಿಂದ ಎಲ್ಲಾ ಹರಿಜನರ ಮೇಲೂ ಪರಿಣಾಮ ಆಗುತ್ತೆ ಅನ್ನೋದು ಸುಳ್ಳು. ಯಾಕೆಂದರೆ ಮೀಸಲಾತಿ ಮುಖಾಂತರ ಮೇಲೆ ಬಂದವರು ತಾನು ಬಿಟ್ಟು ಬಂದ ಭಾಗ ಎಷ್ಟು ಕೂಪದಲ್ಲಿ ಇದೆ ಅಂತ ನೋಡಿ ಬಿಟ್ಟು ಅವನು ಹೆದರಿ ಬಿಡಬಹುದು, ನನಗೆ ಗೊತ್ತು. ಎಷ್ಟೊ ಜನ ನನ್ನ ಹರಿಜನ ಸ್ನೇಹಿತರು ಅಧ್ಯಾಪಕರಾದ ಮೇಲೆ ಅವರಿಗೆ ಒಂದು

೬೦೦ ರೂಪಾಯಿ ಸಂಬಳ ಬಂದರೆ ಒಂದು ನೂರು ಜನ ಇರುವೆಗಳಂತೆ ಅವರಿಗೆ ಮುತ್ತಿಕೊಳ್ಳುತ್ತಾರೆ. ಏಕೆಂದರೆ ಅವರ ಸುತ್ತಮುತ್ತಲ ಬಡತನ ಎಷ್ಟಿರುತ್ತದೆ ಅಂದರೆ ಅವರಿಗೆ ನೆಂಟರು ಇಷ್ಟರು ಸಂಬಂಧಿಕರು ಹಳ್ಳಿಯವರು ಅವನಿಂದ ಎಷ್ಟು ಬೇಡುತ್ತಾರೆ ಅಂದರೆ ನಾನು ಯಾಕಾಗಿ ಈ ಜಾತೀಲಿ ಹುಟ್ಟಿದನಪ್ಪ ಅನ್ನಿಸುವಷ್ಟು. ಇಷ್ಟು ಹೊರೆ ಅವನ ಮೇಲೆ ಇರುತ್ತೆ. ಅಷ್ಟೇಕಣ್ಣುಗಳು ಅವನ ಮೇಲಿರುತ್ತವೆ. ಆದ್ದರಿಂದ ಮುಂದೆ ಬಂದವರಿಂದ ಉಳಿದ ಹರಿಜನರಿಗೆ ಬಹಳ ಅನುಕೂಲವಾಗುತ್ತೆ ಅನ್ನುವ ಭ್ರಮೆಯನ್ನ ನಾವು ಇಟ್ಟು ಕೊಳ್ಳಬಾರದು. ಅಂತೂ ಮೀಸಲಾತಿ ಬಗ್ಗೆ ಮಾಡಬಹುದಾದ ಒಂದೇ ಟೀಕೆ ಏನು ಅಂದರೆ ಮೀಸಲಾತಿ ಸಾಲದು ಏನೇನೂ ಸಾಲದು ಅನ್ನುವಂತಹದ್ದು. ಇದು ಬದಲಾವಣೆಯಾಗಬೇಕಾದರೆ ಪ್ರಾಯಶಃ ಮೀಸಲಾತಿ ಮುಖಾಂತರ ಮುಂದೆ ಬಂದ ಹರಿಜನರು ಒಂದು ಸಾಮಾಜಿಕ ದೃಷ್ಟಿಕೋನ ಇಟ್ಟುಕೊಂಡು ತಮ್ಮ ಜನರಿಗೆ ಹತ್ತಿರವಾಗುವಂತಹದ್ದು. ಅದು ಅವರ ವೈಯಕ್ತಿಕವೆ ಹೊರತು ಇಡೀ ಜನಾಂಗ ಹಾಗೇ ಮಾಡಬಲ್ಲದು ಅಂತ ನಾನು ತಿಳಿದಿಲ್ಲ. ಅಲ್ಲದೇನೆ ಅನೇಕ ಜನರು ಈ ರೀತಿಯ ಅವಕಾಶವನ್ನ ಪಡೆದವರು ಇನ್ನು ಮುಂದೆ ಯಾರು ಬರದಂತೆ ತಡೆಯುವ "ಬಾಗಿಲು ಕಾಯುವವ"ರಾಗಿ ಬಿಡುತ್ತಾರೆ. ಇದು ಆಗ ಬಹುದು ಅಂತ ತಿಳಿದಿದ್ದೂ ಸದ್ಯಕ್ಕೆ ಮೀಸಲಾತಿ ಬೇಕು ಅಂತಲೆ ಹೇಳಬೇಕು. ಏಕೆಂದರೆ ಇದು ಇಲ್ಲದಿದ್ದ ಪಕ್ಷದಲ್ಲಿ ಈಗಾಗುವಷ್ಟು ಬದಲಾವಣೆಗಳು ಆಗ್ತಾ ಇರಲಿಲ್ಲ. ಮುಂದೇನು ಅಂತ ಅನ್ನುವುದಾದರೆ ಪ್ರಾಯಶಃ ಎಲ್ಲರಿಗೂ ನಿಜವಾಗು ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ಆಗಬೇಕು. ಹೆಚ್ಚು ಜನ ತಮ್ಮ ಅನುಭವವನ್ನ ಬೌದ್ಧಿಕವಾಗಿ ತೊಡಗಿಸಿಕೊಳ್ಳುವಂಥ ಕ್ಷೇತ್ರಗಳು ಹೆಚ್ಚಾಗಬೇಕು. ಹಾಗಾಗುವುದರ ಮುಖಾಂತರ ಪ್ರಾಯಶಃ ಈ ಮೀಸಲಾತಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಬಲ್ಲಂಥಹ ಅಷ್ಟೊ ಶಕ್ತವಲ್ಲದಿದ್ದರೂ ಸಹ ಇನ್ನಷ್ಟು ಶಕ್ತವಾದ ಸಾಧನ ಆಗ ಬಹುದು.

ಈ ದೇಶದ ನಿಜವಾದಂಥ ಒಡೆಯರು ದಲಿತರು. ಒಡೆಯರೆ ಏನು ಮಾಡಬೇಕಾಗಿದೆ? ಭಿಕ್ಷೆ ಕೇಳಬೇಕಾಗಿದೆ. ನಾವು ಭಿಕ್ಷೆ ಕೊಡಿ ಅಂತ ಕೇಳಬಾರದು. ಇವರನ್ನೆಲ್ಲಾ Quit India ಅನ್ನಬೇಕು.

ಸಿದ್ಧಲಿಂಗಯ್ಯ

ಮೀಸಲಾತಿ ಅಂದರೆ ದಲಿತರ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ನ್ಯಾಯಬದ್ಧವಾದ ಪಾಲನ್ನು ಪಡೆಯತಕ್ಕಂಥ

ನೆಲದ ಒಡೆಯರಿಗೇ ಮೀಸಲಾತಿ ಭಿಕ್ಷೆ !

ವಿಧಾನ. ಅಲ್ಲದೆ ಈ ಜನ ಸಾವಿರಾರು ವರ್ಷಗಳಿಂದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ತಮ್ಮ ನ್ಯಾಯದ ಪಾಲನ್ನು ಪಡೆದುಕೊಂಡಿಲ್ಲದಿದ್ದರಿಂದ ಆ ಪಾಲನ್ನು ಧಕ್ಕಿಸುವ ಸಲುವಾಗಿ ಮಾಡಿರತಕ್ಕಂಥ ಒಂದು ವಿಧಾನ. ಮೀಸಲಾತಿ ಎನ್ನುವುದೇ ಹೋಗಬೇಕೆಂದರೆ ಈ ಜನರಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಯಾವುದೇ ರೀತಿಯ ಅವಕಾಶಗಳು ಸಿಕ್ಕಕೂಡದು ಎಂದು ಹೇಳಿದಾಗಾಗುತ್ತೆ. ಅಂದರೆ ಇವರ ಅಸ್ತಿತ್ವವನ್ನೇ ಅಲ್ಲಗಳೆಯತಕ್ಕಂಥದ್ದು. ಸಾವಿರಾರು ವರ್ಷಗಳಿಂದ 4% ಇರತಕ್ಕಂಥ ಜನ 100% ಶಿಕ್ಷಣ ಮತ್ತು ಉದ್ಯೋಗ ಸ್ಥಾನಗಳನ್ನು ಕಬಳಿಸುತ್ತಾ ಇದ್ದಾರೆ. ಇದನ್ನು ತಪ್ಪಿಸಬೇಕು. ಜನಸಂಖ್ಯೆಗೆ ಅನುಗುಣವಾಗಿ ಈ ಸೌಲಭ್ಯಗಳು ಸಿಗುವಂತೆ ಮಾಡಬೇಕು ಅಂತಹಂಥ ದೃಷ್ಟಿಯಿಂದ ಮೀಸಲಾತಿ ಜಾರಿಗೆ ತಂದಿರೋದು ನಿಜ ಎನ್ನುವುದಾದರೆ ಇದನ್ನು ವಿರೋಧಿಸುವುದರಲ್ಲಿ ಯಾವುದೇ ರೀತಿಯ ತರ್ಕ ಇಲ್ಲ ಅಂತ ನನ್ನ ಭಾವನೆ.

ಮೀಸಲಾತಿಯಿಂದ ಪ್ರಯೋಜನವೇನು? ಅಂತಂದರೆ ಜಾತಿ ಪದ್ಧತಿ ಈ ದೇಶದಲ್ಲಿ ಸಡಿಲವಾಗ ಬೇಕಾದರೆ ಮೀಸಲಾತಿ ಅಗತ್ಯ. ಯಾಕೆ ಅಂದರೆ ಕೆಳ ವರ್ಗದ ಜನಗಳು ಎಲ್ಲ ಕ್ಷೇತ್ರಗಳಲ್ಲಿ ಪ್ರವೇಶ ಮಾಡಿದಾಗ ಇತರ ಜಾತಿಯ ಜನರ ಜೊತೆಯಲ್ಲಿ ಒಡನಾಟ ಸಾಧ್ಯವಾಗುತ್ತದೆ. ಆವಾಗ ಜಾತಿ ಪದ್ಧತಿ ಸಡಿಲವಾಗುವುದಕ್ಕೆ ಕಾರಣವಾಗುತ್ತದೆ. ಜಾತಿ ಪದ್ಧತಿಯನ್ನು ಬಿಗಿಗೊಳಿಸಬೇಕು, ಈ ದೇಶದ ಒಂದು ಮುಖ್ಯ ಜನಾಂಗವಾದಂಥ ದಲಿತ ಜನಾಂಗವನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಸಂಪೂರ್ಣವಾಗಿ ನಿರ್ಮೂಲನ ಮಾಡಬೇಕು ಅಂತಕಂಥಹ ಅಮಾನವೀಯ ಧೋರಣೆ ಮೀಸಲಾತಿಯನ್ನು ವಿರೋಧಿಸತಕ್ಕಂಥವರ ತಲೆಯಲ್ಲಿ ಇದೆ ಎನ್ನುವುದು ಬಹಳ ಸ್ಪಷ್ಟವಾದ ವಿಚಾರ. ಅಂದರೆ ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ಈ ಜನರಿಗೆ ಶಿಕ್ಷಣ ಕ್ಷೇತ್ರದಲ್ಲಿ ಅವಕಾಶ ಕೊಟ್ಟಿಲ್ಲ. ಶೂದ್ರನಾದವನು, ಹೊಲೆಯನಾದವನು, ಮಾದಿಗನಾದವನು, ಚಾಂಡಾಲನಾದವನು–ವಿದ್ಯೆ ಕಲಿಯಕೂಡದು, ಓದಕೂಡದು, ಅವನು ಬರೀಕೂಡದು: ಅವನೇನಾದರೂ ಓದಿದ ಪಕ್ಷದಲ್ಲಿ ಅವನ ನಾಲಿಗೆಯ ಮೇಲೆ ಬರೆಹಾಕಿಬಿಡುತ್ತಿದ್ದರು. ಅವನೇನಾದರೂ ಓದಿದ್ದನ್ನು ಕೇಳಿದ ಪಕ್ಷದಲ್ಲಿ ಕಿವಿಗೆ ಸೀಸ ಕಾಯಿಸಿ ಸುರೀತೀವಿ ಅಂತ ಬರೆದುಕೊಂಡ ಜನ ಈ ಹೊತ್ತು ಈ ಮೀಸಲಾತಿ ಬೇಡ ಅಂತ ಹೇಳ್ತಾರೆ. ಆಮೇಲೆ ಈ ಜನ ಏನು ಮಾಡಿದರು ಅಂತಂದರೆ ಓದಬಾರದು ಅನ್ನೋದು ಅಷ್ಟೇ ಅಲ್ಲ ಸರಿಯಾಗಿ ಊಟ ಕೂಡ ಮಾಡಬಾರದು ಅಂತ ಮಾಡಿದರು ಇವರು. ಈ ಶೂದ್ರರು ತುಪ್ಪ ತಿನ್ನ ಕೂಡದು ಇದು ಇವರ ಕಾನೂನು. ಅಷ್ಟೇ ಅಲ್ಲ ಉತ್ತಮವಾದ ತರಕಾರಿ ಇದ್ದರೆ ಅದನ್ನು ಉತ್ತಮನಿಗೆ ತೆಗೆದುಕೊಂಡುಹೋಗಿ ಒಪ್ಪಿಸಿಬಿಡಬೇಕಂತೆ. ಈ ರೀತಿ ಮಾಡಿಕೊಂಡು ಜನರನ್ನು ಸುಲಿಗೆ ಮಾಡತಕ್ಕಂಥ ಜನ ಮತ್ತೆ ತಮ್ಮ ದನಿಯನ್ನು ಎತ್ತರಿಸಿ ಮಾತಾಡ್ತಾ ಇರೋದನ್ನ; ಎಲ್ಲ ಜನಪರ ಧೋರಣೆ ಇರತಕ್ಕಂಥ ಎಲ್ಲ

ಸಂಘಸಂಸ್ಥೆಗಳು ಮತ್ತು ವ್ಯಕ್ತಿಗಳು ಇದನ್ನು ಖಂಡನೆ ಮಾಡಬೇಕು.

ಅಂದರೆ ಮೀಸಲಾತಿಯಿಂದ ದಲಿತರ ವಿಮೋಚನೆ ಸಾಧ್ಯ ಅನ್ನುವ ಭ್ರಮೆ ನನಗಿಲ್ಲ. ರಾಜಕೀಯ ಮೀಸಲಾತಿಯನ್ನೇ ತೆಗೆದುಕೊಂಡರೆ ಮೂವತ್ತುಮೂರು ವರ್ಷಗಳಿಂದ ಕೇವಲ ಮೂರೇ ಮೂರು ಮನೆತನಗಳು ಕರ್ನಾಟಕದ ರಾಜಕೀಯ ಮೀಸಲಾತಿಯನ್ನು ಹಿಡಿದುಕೊಂಡು ಕೂತಿವೆ. ಈ ಮೂರೇ ಜನ ಅಲ್ಲ ದಲಿತರು; ದಲಿತರು ಲಕ್ಷಾಂತರ ಜನ ಇದ್ದಾರೆ ಅಂತಕಂತಹ ವಿಚಾರ ಇವರಿಗೆ ಗೊತ್ತಾಗಿಲ್ಲ ಇದು ಮೀಸಲಾತಿಯ ಅಪ್ಪಟ ದುರುಪಯೋಗ. ಈ ಗುತ್ತೇದಾರಿ ದಲಿತರನ್ನು ಇತರ ಎಲ್ಲಾ ದಲಿತರು ಖಂಡಿಸಬೇಕು. ಈ ರೀತಿಯ ಅನ್ಯಾಯ ಅನೇಕ ಕಡೆ ಆಗ್ತಾ ಇದೆ. ಕ್ಲಾಸ್ I ಆಗಬಹುದು ಕ್ಲಾಸ್ II ಆಗಬಹುದು. ಅನೇಕ ವಿಚಾರದಲ್ಲಿ ಮೀಸಲಾತಿ ಯಾರಿಗೆ ಹೋಗ್ತಾ ಇವೆ ಅಂದರೆ ನಿಜವಾದ ಬಂಡವಾಳಶಾಹಿ ದಲಿತರಿಗೆ,

ಕೆಲವರು ಭಾವಿಸುತ್ತಾರೆ ಮೀಸಲಾತಿ ಕೊಡುತ್ತಾ ಇರುವುದರಿಂದ ನಿರುದ್ಯೋಗ ಜಾಸ್ತಿ ಆಗ್ತಾ ಇದೆ ಅಂತ. ಇದು ಬಹಳ ಅವೈಜ್ಞಾನಿಕವಾದ ವಿಚಾರ. ಯಾಕೆ ಅಂದರೆ ಕರ್ನಾಟಕದ ಒಂದು ದೊಡ್ಡ ಸಂಸ್ಥೆಯಲ್ಲಿ ದಲಿತರು 12% ಇದ್ದಾರೆ. ಈ 12% ಕಿತ್ತಾಕಿದರೆ ಈ ದೇಶದ ಕೋಟಿ ಕೋಟಿ ನಿರುದ್ಯೋಗಿಗಳಿಗೆ ಕೆಲಸ ಕೊಡೋಕೆ ಆಗೋದಿಲ್ಲ. ಅಂದರೆ ನಿರುದ್ಯೋಗ ಪರಿಹಾರಕ್ಕೆ ಒಂದು ವ್ಯವಸ್ಥೆ ಮಾಡದೆ, ದಲಿತರನ್ನು ದೂರುತ್ತಾ ಇದ್ದಾರೆ ಹಾಗೆಯೇ ಈ ದೇಶದಲ್ಲಿ ಇರತಕ್ಕಂಥ ಸಮಸ್ಯೆಗಳಿಗೆ, ಬಡತನಕ್ಕೆ, ನಿರುದ್ಯೋಗಕ್ಕೆ ಕಾರಣ ದಲಿತರೊ? ಖಂಡಿತವಾಗಿಯೂ ದಲಿತರಲ್ಲ. ಈ ದೇಶದಲ್ಲಿರತಕ್ಕಂಥ ಬಡತನ–ನಿರುದ್ಯೋಗಕ್ಕೆ ಕಾರಣ–ಬಂಡವಾಳಶಾಹಿ ಸಮಾಜ ವ್ಯವಸ್ಥೆ ಮತ್ತು ಜಮೀನ್ದಾರೀ ಪದ್ಧತಿ ಕಾರಣವೇ ಹೊರತು ಈ ದೇಶದ ಉತ್ಪಾದನೆಯನ್ನು ಮಾಡತಕ್ಕಂಥ ದಲಿತರಲ್ಲ. ಇದನ್ನು ತಿಳಿದುಕೊಳ್ಳಬೇಕಾಗಿದೆ—ಮೇಲು ಜಾತಿಯ ಜನ ಮತ್ತು ಮೀಸಲಾತಿಯನ್ನು ವಿರೋಧಿಸತಕ್ಕಂಥ ಜನ. ಅಂದರೆ ನಾನು ಈ ವಿಚಾರ ಹೇಳುವಾಗ ಒಂದು ಗಮನದಲ್ಲಿಟ್ಟುಕೊಂಡಿದ್ದೇನೆ—ಮೀಸಲಾತಿಯನ್ನು ದಲಿತರಷ್ಟೆ ಅಲ್ಲ ಇತರ ಅನೇಕ ಕೆಳಜಾತಿಯವರಿಗೆ ವಿಸ್ತರಣೆ ಮಾಡಬೇಕು. ಹೀಗೆ ಮೀಸಲಾತಿಯನ್ನು ವಿಸ್ತರಣೆ ಮಾಡುವುದರ ಮೂಲಕ ಮೀಸಲಾತಿಯ ಬಗ್ಗೆ ಇರತಕ್ಕಂಥ ತಪ್ಪು ಕಲ್ಪನೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯ ಇದೆ ಅಂತ ನಾನು ತಿಳಿದುಕೊಂಡಿರುತ್ತೇನೆ.

ಜಪಾನಿನಲ್ಲಿ ಬುರಾಕುಮಿನ್ ಎಂಬ ಒಂದು ಜನಾಂಗವಿದೆ. ಅವರು ಜಪಾನಿನ ಅಸ್ಪೃಶ್ಯರು. ಒಂದು ಘಟನೆಯಾಯ್ತು : ಒಬ್ಬ ಜಪಾನಿ ಒಬ್ಬ ಬುರಾಕುಮಿನ್‌ನನ್ನು ಕೊಲೆ ಮಾಡಿಬಿಟ್ಟ. ಕೊಲೆ ಮಾಡಿದ್ದರಿಂದ ಕೋರ್ಟಿಗೆ ಕೇಸು ಹಾಕಿದರು. ಮ್ಯಾಜಿಸ್ಟ್ರೇಟ್ ಶಿಕ್ಷೆ ಕೊಡಲಿಲ್ಲ ಕೊಲೆಗಡುಕನಿಗೆ. ಶಿಕ್ಷೆ ಕೊಡಿ ಅಂತ ಬುರಾಕುಮಿನ್‌ಗಳು ಸಂಘಟನೆಯಾಗಿ ಹೋರಾಟಮಾಡುತ್ತಾರೆ. ಆಗ

ಮ್ಯಾಜಿಸ್ಟ್ರೇಟ್ ಇವನಿಗೆ ಮರಣದಂಡನೆ ವಿಧಿಸುವುದು ಸಾಧ್ಯವಿಲ್ಲ; ಅಕಸ್ಮಾತ್ ಮರಣದಂಡನೆ ವಿಧಿಸಬೇಕಾದರೆ ಈ ಜಪಾನಿ ಇನ್ನೂ ಆರುಜನ ಬುರಾಕುಮಿನ್‌ಗಳನ್ನು ಕೊಲೆ ಮಾಡಬೇಕು ಅಂತ ಅವನ ವಾದ. ಅಂದರೆ ಮ್ಯಾಜಿಸ್ಟ್ರೇಟ್ ಪ್ರಕಾರ ಏಳು ಜನ ಬುರಾಕುಮಿನ್‌ಗಳು ಒಬ್ಬ ಜಪಾನಿಯನಿಗೆ ಸಮ. ಇದೇ ಸ್ಥಿತಿ ಇಂಡಿಯಾದೇಶದಲ್ಲೂ ಇದೆ. ೪೨ ಜನರನ್ನು ಕಿಲ್ವನ್‌ಮಣಿಯಲ್ಲಿ ಸುಟ್ಟಂಥ ಒಬ್ಬ ಭೂಮಾಲಿಕನ್ನ ಈ ದೇಶದಲ್ಲಿ ಶಿಕ್ಷೆ ಮಾಡಲಿಲ್ಲ. ಅಂದರೆ ೪೨ ಜನ ದಲಿತರ ಪ್ರಾಣ ಒಬ್ಬನ ಪ್ರಾಣಕ್ಕೆ ಸಮನಲ್ಲ ! ಅಂದರೆ ಈ ರೀತಿ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿಗೆ ನಿರಂತರವಾಗಿ ತುತ್ತಾಗಿರತಕ್ಕಂಥ ಜನಾಂಗ ನಾವು.

ಮೀಸಲಾತಿ ಕೇಳುವುದೇ ಬಹಳ ನಾಚಿಕೆಗೇಡಿನ ವಿಷಯ. ಮೀಸಲಾತಿ ಕೊಡಿ? ಏನು ಇದರ ಅರ್ಥ ? ಈ ದೇಶದಲ್ಲಿ ನಿಜವಾದಂಥ ಮಾಲೀಕರು, ಈ ನೆಲದ ಒಡೆಯರು ದಲಿತರು. ಈ ದಲಿತರು ನೆಲದ ಒಡೆಯರು ಏನು ಮಾಡಬೇಕಾಗಿದೆ? ಭಿಕ್ಷೆ ಕೇಳಬೇಕಾಗಿದೆ. ಆದ್ದರಿಂದ ನಾವು ಭಿಕ್ಷೆ ಕೊಡಿ ಅಂತ ಕೇಳಬಾರದು. ಇವರನ್ನೆಲ್ಲಾ Quit India ಅನ್ನಬೇಕು. ಈ ನೆಲದ ಒಡೆಯರು ನಾವು. ಈ ದೇಶದ ಒಡೆಯರು ನಾವು. Quit India ಅನ್ನುವುದೇ ಸರಿಯಾದ ಉತ್ತರಾನೇ ಹೊರತು ನಮಗೆ ಮೀಸಲಾತಿ ಭಿಕ್ಷೆ ಅಲ್ಲ.

ಮೀಸಲಾತಿಯನ್ನು ವಿರೋಧಿಸತಕ್ಕಂಥ ಕೆಲವು ಜನರ ಜೊತೆಯಲ್ಲಿ ನಾನು ಮಾತಾಡಿದಾಗ ಅವರು ಏನು ಹೇಳಿದ್ರು ಅಂದರೆ: "ನೋಡ್ರಿ ಮೀಸಲಾತಿಯನ್ನು ಕೊಟ್ಟು ಒಬ್ಬನ್ನ ವೈದ್ಯನನ್ನಾಗಿ ಮಾಡಿದರೆ ಅವನು Inefficient ಆಗಿರ್ತಾನೆ. ಪೇಷಂಟ್‌ಗಳು ಸತ್ತೋಗ್ ಬುಡ್ತಾರೆ? ಅಂತ. ಇದು ಬಹಳ ವಿಚಿತ್ರ ತರ್ಕ. ಅದೇ ಜನರಿಗೆ ಒಂದು ಪ್ರಶ್ನೆ ಕೇಳಬೇಕು ನಾವು—ಲಕ್ಷಲಕ್ಷ ದುಡ್ಡು ಕೊಟ್ಟು ಡಾಕ್ಟರ್ ಆದವನು ಏನು ಮಾಡ್ತಾನೆ? ಎಷ್ಟು ಜನ ಪೇಷಂಟ್‌ಗಳನ್ನ ಮರ್ಡರ್ ಮಾಡ್ತಾನೆ? ಈ ಸಮಾಜದ ವ್ಯವಸ್ಥೆ ವಿಕಾರವಾಗಿರುವಾಗ ಈ ನೊಂದ ಜನತೆಯ ಬಗ್ಗೆ ತೀರಾ ಅಮಾನವೀಯವಾಗಿ ಮಾತಾಡುವುದು ಕ್ರೂರವಾದುದು. ಮೀಸಲಾತಿ ಮುಂದುವರೀಬೇಕು ಅನ್ನೋದರಲ್ಲಿ ನನಗೆ ಯಾವುದೇ ರೀತಿಯ ನಂಬಿಕೆ ಇಲ್ಲ. ಇಷ್ಟ ಕೂಡ ಇಲ್ಲ. ಮೀಸಲಾತಿ ಆದಷ್ಟು ಬೇಗ ಹೋಗಬೇಕು. ಈ ಮೀಸಲಾತಿಯೇ ಇಲ್ಲದೆ ಇರತಕ್ಕಂಥ, ಎಲ್ಲರಿಗೂ ಕೂಡ ಸುಖ ಮತ್ತು ಎಲ್ಲರಿಗೂ ಉದ್ಯೋಗ, ಎಲ್ಲರಿಗೂ ವಸತಿ ಊಟ ಇರತಕ್ಕಂಥ, ಸಮಾನತೆ ಇರತಕ್ಕಂಥ, ಬಂಡವಾಳಶಾಹಿಗಳು ಜಮೀನುದಾರರು ಪುರೋಹಿತಶಾಹಿಗಳು ಇಲ್ಲದೆ ಇರತಕ್ಕಂಥ ಒಂದು ಸಮಾಜ ವ್ಯವಸ್ಥೆಯನ್ನು ನಾವು ಮಾಡಬೇಕು. ಅದು ಬಹಳ ಮುಖ್ಯವಾದದ್ದು ಅಂತ ಹೇಳಿ ನನ್ನ ಮಾತು ಮುಗಿಸುತ್ತೇನೆ.

ಮೀಸಲಾತಿ ಇಲ್ಲದಿದ್ದರೆ — ಈ ಹೊತ್ತು ಕೆಲವರಾದರೂ ಅಲ್ಲಲ್ಲಿ ಕಾಣಿಸಿಕೊಳ್ಳುವಂತವರೂ ಕೂಡ ಕಾಣಿಸಿ ಕೊಳ್ಳದೆ ಇರತಕ್ಕಂಥ ಧಾರುಣ ಪರಿಸ್ಥಿತಿ ಇರ್ತಾ ಇತ್ತು. ಕ್ರೌರ್ಯ ಅಂತಕ್ಕಂತಹದು ಇವತ್ತಿಗಿಂತ ಹೆಚ್ಚಿನ ರೀತಿಯಲ್ಲಿ ನಡೆಯುತ್ತಾ ಇತ್ತು.

ಜಿ. ರಾಮಕೃಷ್ಣ

ಮೀಸಲಾತಿ ಇಲ್ಲದಿದ್ದರೆ ಕ್ರಾಂತಿ ಆಗ್ತಾ ಇತ್ತು ಅಂತಕ್ಕಂತಹ ಒಂದು ಮಾತು ನಿಜ ಆಗುವುದಾದರೆ ಮೀಸಲಾತಿಯನ್ನ ತಕ್ಷಣ ನಿಲ್ಲಿಸಬೇಕು ಅಂತ ಹೇಳಬೇಕೆನಿಸುತ್ತದೆ. ಆದರೆ ಮೀಸಲಾತಿ ಹೋದರೆ ಕ್ರಾಂತಿ ಆಗತಕ್ಕಂಥ ಸಂಭವ ಅಷ್ಟೇನೂ ಹೆಚ್ಚಾಗಿಲ್ಲ. ಸಾಮಾಜಿಕವಾಗಿ ಈ ಹೊತ್ತು ನಮ್ಮಲ್ಲಿರತಕ್ಕಂಥ ಶಕ್ತಿಗಳನ್ನೆಲ್ಲ ನಾವು ವಿಶ್ಲೇಷಣೆ ಮಾಡಿ ನೋಡಿದರೆ ನಮಗೆ ಸುಲಭವಾಗಿ ಗೊತ್ತಾಗುತ್ತದೆ. ಈಗಲೂ ಮೀಸಲಾತಿಯ ಸೌಲಭ್ಯ ಪಡೆದು ಅನುಕೂಲ ಪಡೆದಿರತಕ್ಕಂತಹವರ ಸಂಖ್ಯೆ ಬಹಳ ವಿರಳವಾಗಿದೆ. ಆದ್ದರಿಂದ ಜನರ ಆಸೆ ಆಕಾಂಕ್ಷೆಗಳು ಪೂರೈಕೆಯಾಗದೆ ಇದ್ದ ಪಕ್ಷದಲ್ಲಿ ಕ್ರಾಂತಿ ಆಗುತ್ತೆ ಅನ್ನತಕ್ಕಂಥದ್ದು ಕೇವಲ ಅವೈಜ್ಞಾನಿಕವಾದದ್ದು ಅನ್ನಿಸುತ್ತದೆ. ಕ್ರಾಂತಿಯಾಗಬೇಕಾದರೂ ಬೇರೆ ಶಕ್ತಿಗಳನ್ನ ಒಗ್ಗೂಡಿಸಿ ಒಂದು ಸಂಘಟನೆಯನ್ನ ಕಟ್ಟಿ ಹೋರಾಟವನ್ನ ಮಾಡಬೇಕಾದಂತಹ ಒಂದು ಅವಶ್ಯಕತೆ ಇದೆ. ಅದಕ್ಕೆ ಪೂರಕವಾಗಿ ಮೀಸಲಾತಿ ಇದ್ದಾಗಲೂ ಕೂಡ ಕೆಲಸ ಮಾಡಲಿಕ್ಕೆ ಸಾಧ್ಯ ಅಂತ ಅನ್ನಿಸುತ್ತದೆ.

ಒಂದು ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡತಕ್ಕಂಥವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಪತ್ನಿಯಾಗಿ ತಾವು ಯಾವುದೊ ಒಂದು ಜಾತಿಗೆ ಸೇರಿದವರು ಅನ್ನೋ ಕಾರಣದಿಂದ ತಮ್ಮ ಮಗನಿಗೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೀಸಲಾತಿಯ ಸೌಲಭ್ಯ ಬೇಕು ಅಂತ ಹೇಳಿ, ಕೋರ್ಟ್ ಹತ್ತತಕ್ಕಂತಹ ಒಂದು ಸಂಧರ್ಭ ಇರುವ ಈ ನಮ್ಮ ದೇಶದಲ್ಲಿ ಮೀಸಲಾತಿ ಸೌಲಭ್ಯ ಯಾರಿಗೆ ಅಂತಂದರೆ ? ಅವರಿಗಲ್ಲ ಅನ್ನುವುದನ್ನು ನಾವು ಹೇಳಬೇಕು. ನಾನು ಸ್ವಲ್ಪ ಅದ್ವೈತವಾದಿ. ಯಾರಿಗೆ ಬೇಕು ಅನ್ನುವುದನ್ನ ತಿಳಿದುಕೊಳ್ಳಲಿಕ್ಕೆ ಮೊದಲು ಯಾರಿಗೆ ಕೊಡಬಾರದು ಅನ್ನುವುದನ್ನ ತಿಳಿದುಕೊಂಡರೆ ಬಹುಶಃ ಅರ್ಥವಾಗುತ್ತದೆ. ಯಾರೊ ಒಬ್ಬಾಕೆ ಎಂ.ಎ. ಪಾಸುಮಾಡಿಕೊಂಡು–ಬ್ರಾಹ್ಮಣಳಾದುದರಿಂದ ತಕ್ಷಣ ಕೆಲಸಬೇಕು. ಆದ್ದರಿಂದ ಆಕೆ ಒಬ್ಬ ಹರಿಜನನನ್ನು ಮದುವೆ ಮಾಡಿಕೊಳ್ಳುತ್ತಾಳೆ. ಕೆಲಸ ಸಿಕ್ಕಿದ ಮೇಲೆ ಡೈವೋರ್ಸ್ ಮಾಡ್ತಿನಿ ಅಂತ ಹೇಳತಕ್ಕಂಥ ಇವರಿಗಲ್ಲ ಈ ಮೀಸಲಾತಿ ಸೌಲಭ್ಯ ಕೊಡಬೇಕಾದದ್ದು.

ಎರಡನೆಯದಾಗಿ ಈ ದೇಶದ ಪರಿಸ್ಥಿತಿ ಏನಿದೆ? ಅಂತ ತಿಳಿದುಕೊಳ್ಳುವಾಗ ಏಪ್ರಿಲ್ ೧೪ನೇ ತಾರೀಖಿನಂದು ಬೀದರ್‌ನಲ್ಲಿ ಡಾ|| ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯಂದು, ಹರಿಜನರು ಒಂದು ಮೆರವಣಿಗೆ ತೆಗೆದುಕೊಂಡು ಹೋಗುವುದಕ್ಕೆ ಈ ಸವರ್ಣೀಯರು ಅವಕಾಶ ಕೊಡದೆ ಹಲ್ಲೆ ನಡೆಸತಕ್ಕಂಥ ದೇಶ ಇದು. ಅಂಥಂದೇ ಸಮಾಚಾರ ಇವತ್ತು ಪರಿಗೋಣಿಯಲ್ಲಿದೆ. ಅಂಥದೇ ಸಮಾಚಾರ ತಮಿಳುನಾಡಿನ ತಿರ್‌ಪೂರ್‌ನಿಂದ ಬಂದಿದೆ. ಇಂಥ ದೇಶದಲ್ಲಿ ರಾಜಕೀಯವಾಗಿ ಯಾವ ವಾತಾವರಣವಿದ್ದೆ ಅಂತ ತಿಳಿದುಕೊಳ್ಳದೆ ಇದ್ದ ಪಕ್ಷದಲ್ಲಿ; ಆರ್ಥಿಕವಾಗಿ ಸಾಮಾಜಿಕವಾಗಿ ಯಾವ ಶಕ್ತಿಗಳು ಮುಂದೆ ಇವೆ ; ಯಾವವು ದಲಿತರನ್ನೆ ಅದುಮಿ ಹಿಡಿಯುತ್ತಾ ಇವೆ ಅನ್ನೋದನ್ನ ತಿಳಿದುಕೊಳ್ಳದೆ ಇದ್ದ ಪಕ್ಷದಲ್ಲಿ ನಾವು ಈ ಪ್ರಶ್ನೆಗಳಿಗೆ ಕೊಡತಕ್ಕಂತಹ ಉತ್ತರ ಸಮಂಜಸವಾಗಿರುವುದಕ್ಕೆ ಸಾಧ್ಯವಿಲ್ಲ. ವಿಧಾನ ವೀದಿಯನ್ನು ಅಂಬೇಡ್ಕರ್ ವೀದಿ ಅಂತ ಕರೆದರೆ ಕೋರ್ಟ್ ಹತ್ತುತಕ್ಕಂಥ ಜನ, ಹುಣಸೀಕೋಟೆಯಲ್ಲಿ ಶೇಷಗಿರಿಯಪ್ಪನ ಕೊಲೆಯಾದಾಗ ಕೋರ್ಟು ಕಛೇರಿಗೆ ಹೋಗಬೇಕು ಅಂತ ಅವರಿಗೆ ಅನ್ನಿಸಲಿಲ್ಲ; ಪೋಲಿಸ್ ಸ್ಟೇಷನ್‌ಗೂ ಹೋಗಬೇಕು ಅನ್ನಿಸಲಿಲ್ಲ. ಅಂಥ ದೇಶದಲ್ಲಿ ನಾವು ಜೀವನ ನಡೆಸುತ್ತಾ ಇದ್ದೇವೆ. ನನಗೆ ಕೆಲವು ಸಲ ಅನ್ನಿಸುವುದೇನೆಂದರೆ–ಬೇರೆ ಬೇರೆ ಹೆಸರುಗಳಿಂದ ತುಳಿತಕ್ಕೆ ಸಿಕ್ಕಲ್ಪಟ್ಟಂಥವರನ್ನೆಲ್ಲಾ ಹರಿಜನ ಅಂತ ಕರೆದು ಬಿಟ್ಟು ; ಎಲ್ಲಾ ರಾಜ್ಯಗಳಲ್ಲೂ ಒಂದೇ ಹೆಸರನ್ನ ಕೊಟ್ಟಿರುವುದು ಒಂದು ಪದದ contribution ಅಷ್ಟೆ. ಅಷ್ಟನ್ನು ಬಿಟ್ಟರೆ ಈ ಪದದಿಂದ ದೇಶದಲ್ಲಿರುವ ತುಳಿತಕ್ಕೊಳಗಾದ ಜನಕ್ಕೆ ಇನ್ಯಾವ ಸೌಲಭ್ಯವೂ ದೊರೆತಿಲ್ಲ.

ಈ ಸಮಸ್ಯೆಗೆ ; ಯಾವುದೇ ಒಂದು ವರ್ಷ ಅಥವಾ ದಶಕದಲ್ಲಿ ಗಮನವಿಟ್ಟುಕೊಂಡು ನಾವು ಉತ್ತರ ಕೊಡೋದಕ್ಕಾಗುವುದಿಲ್ಲ. ಎಷ್ಟೋ ವರ್ಷದ ಪರಂಪರೆಯಿಂದ ಬಂದಿರತಕ್ಕಂಥ ಸಮಾಜ ಇದು ಮುಂದೆ ಯಾವ ದಿಕ್ಕಿನಲ್ಲಿ ಹೋಗಬೇಕು ? ಯಾವ ವ್ಯವಸ್ಥೆ ಬರಬೇಕು ? ಅನ್ನುವುದನ್ನ ಗಮನದಲ್ಲಿ ಇಟ್ಟುಕೊಂಡು ಈ ಪ್ರಶ್ನೆಗಳನ್ನ ನಾವು ಉತ್ತರಿಸುವುದಕ್ಕೆ ಪ್ರಯತ್ನಮಾಡಬೇಕು. Intigration ಅಂತಕ್ಕಂಥಾದ್ದು ಆಗಬೇಕಾದರೆ; ಯಾವ ಒಂದು ಪಂಗಡವು ಕೂಡ ತನ್ನದು ಈ ದೇಶ ಅನ್ನುವುದನ್ನು ಮನಗಾಣಬೇಕಾದರೆ; ತನ್ನಸ್ಥಿತಿಗತಿ ಏನು ಈ ದೇಶದಲ್ಲಿ ಅನ್ನೋದನ್ನ ಅರಿತುಕೊಳ್ಳುವಂತಾಗಬೇಕು. Social intigration–ಕಲ್ಪನೆಯು ಇಲ್ಲದೆ ಇರುವುದರಿಂದ ಮೀಸಲಾತಿ ಬೇಡ ಅಂತಕ್ಕಂತಹ ವಾದವನ್ನ ಅವರು ಮುಂದೆ ಇಡುತ್ತಿರುವುದನ್ನು ನಾವು ಗಮನಿಸುತ್ತಾ ಇದ್ದೇವೆ. ಆದ್ದರಿಂದ ಈ ಹಿಂದಿನ ಪಿಡುಗು ಏನಿತ್ತೊ ಅದನ್ನೆ ಈ ಜನ ಮುಂದುವರಿಸುತ್ತಿರಬೇಕಾದರೆ ಈ ಸೌಲಭ್ಯವನ್ನು ಸ್ವಲ್ಪ ಮಟ್ಟಿಗಾದರೂ ನಾವು ಇಟ್ಟುಕೊಳ್ಳಬೇಕಾಗಿರತಕ್ಕಂಥದ್ದು ಬಹಳ ಮುಖ್ಯ.

ಮೀಸಲಾತಿಯನ್ನು ಉಪಯೋಗಿಸಿಕೊಂಡು ಬರತಕ್ಕಂಥ ಮೊದಲ ತಲಮಾರಿನ ವಿದ್ಯಾರ್ಥಿಗಳಿಗೂ ಹಾಗೂ ಹಲವು ತಲಮಾರುಗಳಿಂದ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದು ಬಂದಿರತಕ್ಕಂಥ ವಿದ್ಯಾರ್ಥಿಗಳಿಗೂ ಇರತಕ್ಕಂಥ ವ್ಯತ್ಯಾಸವನ್ನು ನಾವು ಗಮನಿಸಿದರೆ ಎಷ್ಟು ವರ್ಷದ ತನಕ ಈ ಮೀಸಲಾತಿಯನ್ನು ಮುಂದುವರಿಸಬೇಕೆಂಬುದನ್ನು ತಿಳಿಯುವುದು ಕಷ್ಟವಾಗುವುದಿಲ್ಲ. ಇಂಥ ಒಂದು ಪರಿಸರದಲ್ಲಿ ನಾವು ಇನ್ನೊಂದು ಬುದ್ಧಿವಂತಿಕೆಯನ್ನು ತಿಳಿದು ಕೊಳ್ಳಬೇಕು. ಯಾವುದೊ ಒಂದು ಅಧ್ಯಾಪಕರ ಸ್ಥಾನಕ್ಕೆ ಮೀಸಲಾತಿ ಇದೆ ಅಂದರೆ ಆ ಅಧ್ಯಾಪಕ ಸ್ಥಾನವನ್ನೆ ಭರ್ತಿ ಮಾಡದೆ Part time ಅಧ್ಯಾಪಕರನ್ನು ನೇಮಕ ಮಾಡತಕ್ಕಂಥದ್ದು ಬೆಂಗಳೂರಿನಲ್ಲಿಯೇ ಎಷ್ಟು ಕಾಲೇಜಿನಲ್ಲಿ ಬೇಕು ನಿಮಗೆ? ಅಥವಾ ವಿದ್ಯಾರ್ಥಿಗಳನ್ನುತೆಗೆದುಕೊಳ್ಳುವುದರಲ್ಲಿ ಮೀಸಲಾತಿ ಇದೆ ಅಂತಂದರೆ ಇದೆ–ಇಲ್ಲ ಎಂದರೆ ಇಲ್ಲ.

ಇಷ್ಟರಲ್ಲೆ ಎರಡು ಫರ್ಲಾಂಗ್ ದೂರದಲ್ಲಿರುವ ಒಂದು ಕಾಲೇಜಿಗೆ ಹೋದರೆ ನೀವು ಅವರನ್ನ Science ಬೇಕು ಅಂತ ಕೇಳಿದರೆ; ಅವರು ನಿಮಗೆ Science ಕೊಡುವುದಿಲ್ಲ, Arts ಬೇಕಾದರೆ ತೆಗೆದುಕೊಳ್ಳಿ ಅನ್ನುವುದನ್ನ ನಾನು ಕೇಳಿರತಕ್ಕಂಥದ್ದು. ಇರತಕ್ಕದ್ದನ್ನೇ ಕೊಡದೆ ಇರತಕ್ಕಂಥ ಒಂದು ಪರಿಸರದಲ್ಲಿ ಇರುವಾಗ ಮೀಸಲಾತಿಯ ಪ್ರಶ್ನೆ ಬರೀ ಮೀಸಲಾತಿಗೆ ಸಂಬಂಧಪಟ್ಟದ್ದಲ್ಲ. ಕೃಷಿ ಕಾರ್ಮಿಕರು, ಭೂ ರಹಿತರು, ನಿರುದ್ಯೋಗಿಗಳು, ಹಲವಾರು ಶತಮಾನಗಳಿಂದ ಸಾಮಾಜಿಕವಾಗಿ ತುಳಿತಕ್ಕೆ ಸಿಕ್ಕಿರತಕ್ಕಂಥವರು ಇಂತಹವರ ಒಟ್ಟು ವಿಮೋಚನೆಯ ಪ್ರಶ್ನೆ. ಅಷ್ಟೇ ಹೊರತು ಕೇವಲ ಮೀಸಲಾತಿಯಿಂದ, ಅದನ್ನ ಸ್ವಲ್ಪ ಹೆಚ್ಚಾಗಿ ವಿಸ್ತರಣೆ ಮಾಡುವುದರಿಂದ ಒಂದು ಸುಭದ್ರವಾದ ನಡೆಯನ್ನ ನಾವು ಕಲಿತುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಅಂತ ಹೇಳುವುದಕ್ಕೆ ಆಗುವುದಿಲ್ಲ.

ಎರಡನೆಯದಾಗಿ ಮೀಸಲಾತಿ ಎಲ್ಲಿಯವರೆಗೆ ಅಂತ ಹೇಳಿದರೇ ; ಯಾರು ಮೀಸಲಾತಿಯ ಸವಲತ್ತನ್ನು ಅನುಭವಿಸುತ್ತಿದ್ದಾರೆಯೋ ಅವರು ಇನ್ನು ಮುಂದೆ ಮೀಸಲಾತಿ ಬೇಡ ಎನ್ನುವವರೆಗೆ. ಮೀಸಲಾತಿ ಇಲ್ಲದಿದ್ದರೆ–ಈ ಹೊತ್ತು ಕೆಲವರಾದರೂ ಸವಲತ್ತನ್ನ ಪಡೆದು ಅಲ್ಲಲ್ಲಿ ಕಾಣಿಸಿಕೊಳ್ಳುವಂತಹವರೂ ಕೂಡ ಕಾಣಿಸಿಕೊಳ್ಳದೆ ಇರತಕ್ಕಂಥ ಧಾರುಣ ಪರಿಸ್ಥಿತಿ ಇರ್ತಾ ಇತ್ತು, ಕ್ರೌರ್ಯ ಅಂತಕ್ಕಂತಹದು ಇವತ್ತಿಗಿಂತ ಹೆಚ್ಚಿನ ರೀತಿಯಲ್ಲಿ ನಡೆಯುತ್ತಾ ಇತ್ತು, ದಲಿತ ಸಂಘರ್ಷ ಸಮಿತಿ ಕೂಡ ಇಷ್ಟು ವ್ಯಾಪಕವಾಗಿ ಬೆಳೆಯುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಒಂದು ಸಂದರ್ಭ ಇರ್ತಾ ಇತ್ತು. ಅದೂ ಇಲ್ಲದೆ ಇದ್ದಿದ್ದರೆ ಈ ಕ್ರೌರ್ಯ ರಾಜಕೀಯದಲ್ಲಿ ಇರತಕ್ಕಂತಹದ್ದು ಇನ್ನೂ ಹೆಚ್ಚು ಅಮಾನುಷವಾಗಿ ಇರ್ತಾ ಇತ್ತು.

ಮೀಸಲಾತಿಯಿಂದ ದಕ್ಷತೆಗೆ ಧಕ್ಕೆ ಬರುವುದು ಎಂಬ ವಾದವನ್ನು ಇವರು ಮುಂದಿಟ್ಟಿದ್ದಾರೆ. ಇದು ಆಧಾರ ರಹಿತವಾದುದು. ತಮ್ಮ ಮಾನಸಿಕ ಅಸೂಯೆ, ಅಸಡ್ಡೆ, ಅಸಹನೀಯತೆ ಇತ್ಯಾದಿ ಅಂಶಗಳು ಇವರ ವಾದದಲ್ಲಿ ಅಡಗಿದೆ. ದಲಿತರನ್ನು ಸದಾ ತಮ್ಮ ಅಡಿಯಾಳಾಗಿ ಇಟ್ಟು ಅವರ ಮೇಲೆ ತಮ್ಮ ದಬ್ಬಾಳಿಕೆಯನ್ನು ನಡೆಸುವುದೇ ಇವರ ಮುಖ್ಯ ಗುರಿ.

ಡಾ. ಮುಮ್ತಾಜ್ ಆಲಿಖಾನ್

ಚಾರಿತ್ರಿಕ ಆಧಾರದ ಮೇಲೆ ಹೇಳುವುದಾದರೆ ಅನಾದಿ ಕಾಲದಿಂದಲೂ ಸಾಮಾಜಿಕವಾಗಿಯೇ ಆಗಲಿ, ಆರ್ಥಿಕ ದೃಷ್ಟಿಯಿಂದಲಾಗಲಿ, ಧಾರ್ಮಿಕ ದೃಷ್ಟಿಯಿಂದಲಾಗಲಿ ಅಥವಾ ಸಂಪ್ರದಾಯಿಕ ದೃಷ್ಟಿಯಿಂದಲಾಗಲಿ ಸಮಾಜದಲ್ಲಿ ಸರಿ ಸಮಾನತೆ ಎಲ್ಲಿಯೂ ಕಂಡು ಬರುವುದಿಲ್ಲ. ಈ ಅಸಮಾನತೆಯೇ ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಬೇಕಿಲ್ಲ. ಆದರೆ ಅಸಮಾನತೆಯ ಆಧಾರದ ಮೇಲೆ ವರ್ಗೀಕರಣವಾದ ಸಮಾಜದಲ್ಲಿ ಹಿಂದುಳಿದವರಿಗೆ ಚಿತ್ರಹಿಂಸೆ ಕೊಡಲು ಪ್ರಾರಂಭಿಸಿದಾಗ ಇದು ಒಂದು ಮಹತ್ತರವಾದ ಸಮಸ್ಯೆಯಾಗಿ ಕಂಡು ಬರುವುದು. ಹೀಗೆ ಅಸಮಾನತೆಯಿಂದ ನೊಂದು ನರಳಿದ ದಲಿತರ ಪರಿಸ್ಥಿತಿ ಬಹು ಶೋಚನೀಯವಾದುದು.

ನಮ್ಮ ಭಾರತದ ಸಾಮಾಜಿಕ ಇತಿಹಾಸದಲ್ಲೂ ಸಹ ಈ ಪರಿಸ್ಥಿತಿ ಮಹತ್ತರವಾಗಿದೆ. ಭಾರತವು ಸ್ವತಂತ್ರವಾದ ನಂತರ ದಲಿತರ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರ್ಕಾರವು ಹಲವಾರು ಯೋಜನೆಗಳನ್ನು ಹಾಕಿಕೊಂಡು, ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿತು. ಇಂತಹ ಯೋಜನೆಗಳಲ್ಲಿ ಮೀಸಲಾತಿ ಪದ್ಧತಿಯು ಮುಖ್ಯವಾದುದು. ಮೀಸಲಾತಿ ಸಾಮಾಜಿಕ ಸುಧಾರಣೆಯ ಅಥವಾ ಬದಲಾವಣೆಯ ಒಂದು ಮುಖ್ಯ ಸಾಧನೆ. ಅನೇಕ ಕಾರಣಗಳಿಂದ ದಲಿತ ವರ್ಗದವರು ಉಚ್ಚ ಶಿಕ್ಷಣ ಪಡೆಯುವುದರಲ್ಲಿ ಹಾಗೂ ಸರ್ಕಾರದ ಉತ್ತಮ ಉದ್ಯೋಗಗಳನ್ನು ಪಡೆಯುವುದರಲ್ಲಿ; ಸವರ್ಣೀಯರೊಡನೆ ಪೈಪೋಟಿ ನಡೆಸುವುದು ಅಸಾಧ್ಯ. ಕಾರಣವೆಂದರೆ ಇವರಿಗೆ ಬಾಲ್ಯಾವಸ್ಥೆಯಲ್ಲಿ ದೊರೆತಿರುವ ಸಾಮಾಜಿಕ, ಸಾಂಸಾರಿಕ ಮತ್ತು ಸ್ವಾಭಾವಿಕ ವಾತಾವರಣ. ಜನ್ಮತಃ ಯಾರೂ ದಡ್ಡರೂ ಅಲ್ಲ ಜಾಣರೂ ಅಲ್ಲ. ಪರಿಸರವೇ ಅತ್ಯಂತ ಪ್ರಮುಖ ಪಾತ್ರ ವಹಿಸುವುದು.

ಮೀಸಲಾತಿ ಪದ್ಧತಿಯಿಂದ ಒಂದು ಹೊಸ ವಾತಾವರಣವು ಉದ್ಭವಿಸಿ, ದಲಿತರ ಏಳಿಗೆಯ ಒಂದು ಚಿಹ್ನೆ ಕಂಡು ಬರುವುದು ಎಂಬ ನಂಬಿಕೆ ದಲಿತರ ಹಿತೈಷಿಗಳಲ್ಲಿ ಇದೆ. ಆದರೆ ನಮ್ಮ ಸಮಾಜದಲ್ಲಿ ಬಹು ಮಂದಿ ಸವರ್ಣೀಯರಿಗೆ ಇದು ಬಹು ಕಟುವಾಗಿ ಕಂಡು ಬಂದಿದೆ. ಮೀಸಲಾತಿಯಿಂದ ದಕ್ಷತೆಗೆ ಧಕ್ಕೆ

ರುವುದು ಎಂಬ ವಾದವನ್ನು ಇವರು ಮುಂದಿಟ್ಟಿದ್ದಾರೆ. ಇದು ಬಹುಮಟ್ಟಿಗೆ ಧಾರ ರಹಿತವಾದುದು. ತಮ್ಮ ಮಾನಸಿಕ ಅಸೂಯೆ, ಅಸಡ್ಡೆ, ಅಸಹನೀಯತೆ ತ್ಯಾದಿ ಅಂಶಗಳು ಇವರ ವಾದದಲ್ಲಿ ಅಡಗಿದೆ. ದಲಿತರನ್ನು ಸದಾ ತಮ್ಮ ಅಡಿ ಯಾಳಾಗಿ ಇಟ್ಟು ಅವರ ಮೇಲೆ ತಮ್ಮ ದಬ್ಬಾಳಿಕೆಯನ್ನು ನಡೆಸುವುದೇ ಇವರ ಮುಖ್ಯ ಗುರಿ. ಈ ಕಾರಣಗಳಿಂದ ಸಾಮಾಜಿಕ ಬದಲಾವಣೆ ಕಂಡು ಬರಬೇಕಾ ದರೆ ಒಂದು ಮುಖ್ಯವಾದ ಮಾರ್ಗ ಮೀಸಲಾತಿ.

ಮೀಸಲಾತಿ ಸೌಲಭ್ಯಗಳು ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಬಂಧನ ಗಳಿಗೆ ಸಿಕ್ಕಿ ನರಳಿದ ಎಲ್ಲಾ ದಲಿತರಿಗೂ ಲಭಿಸಬೇಕು. ಆದರೆ ಇಂತಹ ಒಂದು ಯೋಜನೆಯಲ್ಲಿ ಪ್ರಧಾನತೆಯನ್ನು ಪರಿಶಿಷ್ಟ ವರ್ಗದವರಿಗೆ ಹಾಗೂ ಅದರಲ್ಲಿಯೂ ಅಸ್ಪೃಶ್ಯತೆಯಿಂದ ನರಳಿದವರಿಗೆ ಕೊಡಬೇಕು.

ಈ ಮೀಸಲಾತಿ ಸೌಲಭ್ಯವನ್ನು ಸಂವಿಧಾನದ ಪ್ರಕಾರ ಕೇವಲ ಹತ್ತು ವರ್ಷದವರೆಗೆ ಮಾತ್ರ ಕೊಡಬೇಕಿತ್ತು ಆದರೆ ಈಅವಧಿಯನ್ನು ಕಾಲಾನುಕ್ರಮೇಣ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಇತ್ತೀಚೆಗೆ ಗುಜರಾತಿನಲ್ಲಿ ಮೀಸಲಾತಿ ವಿರುದ್ಧ ನಡೆದ ಚಟುವಟಿಕೆ ದಲಿತರ ಹಿತೈಷಿಗಳ ಕಣ್ಣನ್ನು ತೆರೆಸಿದೆ. ಆದ್ದರಿಂದ ಈ ಹತ್ತು ವರ್ಷ ಹಂಗಾಮಿ ಅವಧಿಯ ಬದಲು ಅನಿರ್ದಿಷ್ಟ ಕಾಲ ಮುಂದುವರಿಯಬೇಕು. ಒಂದು ವೇಳೆ ಇದನ್ನು ಸ್ಪಷ್ಟೀಕರಿಸಬೇಕಾದರೆ, ಇದಕ್ಕೆ ಕೊಡಬಹುದಾದ ಉತ್ತರ ಒಂದು : ಎಲ್ಲಿಯವರೆಗೆ ಅಸ್ಪೃಶ್ಯತೆ ಹಿಂದೂ ಸಮಾಜದಿಂದ ನಿರ್ಮೂಲನವಾಗುವುದಿಲ್ಲವೋ ; ಎರಡು : ಎಲ್ಲಿಯವರೆಗೆ ಕಡು ಬಡತನದ ರೇಖೆಯಿಂದ ಕೆಳಗಿರುವ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಸಾಧ್ಯವಿಲ್ಲವೋ ; ಮೂರು : ಎಲ್ಲಿಯವರೆಗೆ ದಲಿತರನ್ನು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಸಂಪರ್ಕಗಳಲ್ಲಿ ತಮಗೆ ಸರಿ ಸಮಾನರೆಂದು ಸವರ್ಣೀಯರು ಕಾಣುವುದಿಲ್ಲವೋ ; ನಾಲ್ಕು : ದಲಿತರಿಗೆ ಮೀಸಲಾತಿಯನ್ನು ಸಂವಿಧಾನ ಜಾರಿಗೆ ತಂದಂದಿನಿಂದ ಸರಿ ಪ್ರಮಾಣದಲ್ಲಿ ಎಲ್ಲ ಕ್ಷೇತ್ರದಲ್ಲೂ ತುಂಬುವ ಮನಸ್ಥಿತಿ ಉಂಟಾಗುವುದಿಲ್ಲವೋ—ಅಲ್ಲಿಯವರೆಗೆ ಮೀಸ ಲಾತಿ ಮುಂದುವರಿಯಬೇಕು.

"ಮೀಸಲಾತಿಯನ್ನು ಮುಂದುವರಿಸದೆ ಇದ್ದರೆ ?" ಎಂಬುವ ಪ್ರಶ್ನೆಗೆ ಆಧಾರವೇ ಇಲ್ಲ. ಏಕೆಂದರೆ ಎಲ್ಲಾ ರಾಜಕೀಯ ಪಕ್ಷಗಳು ಇಂದು ದಲಿತರ ಸಹಾಯವನ್ನು ಕೋರುತ್ತವೆ. ಯಾವ ರಾಜಕೀಯ ಪಕ್ಷಕ್ಕೆ ಇವರ ಕೃಪೆ ದೊರಕುವುದೋ ಆ ಪಕ್ಷವೇ ಆಡಳಿತವನ್ನು ನಡೆಸಲು ಹಕ್ಕನ್ನು ಹೊಂದಿರುತ್ತದೆ. ಹೀಗಿರುವಲ್ಲಿ ಯಾವ ರಾಜಕೀಯ ಪಕ್ಷವೂ ಬಹಿರಂಗವಾಗಿ ಮೀಸಲಾತಿಯನ್ನು ತಡೆಯಲು ಶಾಧಿಸುವುದಿಲ್ಲ.

ಎರಡನೆಯದಾಗಿ ಮೀಸಲಾತಿ ಇರಬೇಕೋ ಬೇಡವೋಎಂಬ ನಿರ್ಧಾರವನ್ನು ಶೇಕಡಾ ೨೦-೨೫ರ ಸಂಖ್ಯೆಗಿಂತ ಕಡಿಮೆಯಿರುವ ಸವರ್ಣೀಯರು ಮಾಡಲು ಅರ್ಹರಾಗುವುದಿಲ್ಲ.

ಕೇವಲ ಮೀಸಲಾತಿ ಪದ್ಧತಿ ಕಾಗದದ ಮೇಲೆ ಇದ್ದರೆ ಪ್ರಯೋಜನವಿಲ್ಲ. ಇದನ್ನು ಪರಿಣಾಮಕಾರಿಯಾಗಿ ಮಾಡುವುದು ಸರ್ಕಾರದ ಬಹು ಮುಖ್ಯವಾದ ಕರ್ತವ್ಯವಾಗಿದೆ. ಇತ್ತೀಚಿನವರೆಗೆ ಅನೇಕ ವಿಶ್ವವಿದ್ಯಾನಿಲಯಗಳು ಮೀಸಲಾತಿಯನ್ನು ಜಾರಿಗೆ ತಂದಿರಲಿಲ್ಲ. ಹಾಗೇ ಅನೇಕ ಸಾರ್ವಜನಿಕ ಇಲಾಖೆಗಳಲ್ಲಿ ಇದನ್ನು ನಿರ್ಲಕ್ಷಿಸಿದರು. ಇದಕ್ಕೆ ಕಾರಣರಾದವರನ್ನು ಕ್ರೂರ ಶಿಕ್ಷೆಗೆ ಗುರಿ ಮಾಡಬೇಕು. ಇನ್ನು ಮುಂದೆ ಈ ಮೀಸಲಾತಿಯನ್ನು ಸಂವಿಧಾನದ ಪ್ರಕಾರ ಕಾರ್ಯಗತ ಮಾಡದಿದ್ದಲ್ಲಿ ಹಾಗೂ ಇದಕ್ಕೆ ಕಾರಣರಾದವರನ್ನು ತಕ್ಕ ಶಿಕ್ಷೆಗೆ ಗುರಿ ಪಡಿಸಬೇಕು.

ಸವರ್ಣೀಯರ ಪ್ರಭಾವಕ್ಕೆ ಸಿಕ್ಕಿ ಸರ್ಕಾರದವರು ಒಂದು ವೇಳೆ ಮೀಸಲಾತಿಯನ್ನು ತಡೆದರೆ, ಆಗ ಒಂದು ಕ್ರಾಂತಿಯಾಗುವುದು. ಈ ಕ್ರಾಂತಿಯಲ್ಲಿ ಪರಿಶಿಷ್ಟ ವರ್ಗದವರೂ, ಪರಿಶಿಷ್ಟ ಜಾತಿಯವರೂ ಹಾಗೂ ಕಡು ಬಡತನದ ರೇಖೆಯ ಕೆಳಗಿರುವ ಇತರ ದಲಿತರೂ ಒಂದಾಗಿ ಭಾಗವಹಿಸಬೇಕಾಗುವುದು. ಈ ದಲಿತರ ಸಹಾಯಕ್ಕೆ ಬುದ್ಧಿ ಜೀವಿಗಳು ಮುಂದಾಗಬೇಕು.

ಸುಮಾರು ೧೫-೨೦ ವರ್ಷಗಳ ಹಿಂದೆ ದಲಿತರು ಬಹಿರಂಗವಾಗಿ ಸವರ್ಣೀಯರ ವಿರುದ್ಧ ಒಂದೆರಡು ಮಾತುಗಳನ್ನಾಡಲು ಶಕ್ತಿಯನ್ನೂ ಹಾಗೂ ಹಕ್ಕನ್ನೂ ಪಡೆದಿರಲಿಲ್ಲ. ಆದರೆ ಇಂದು ದಲಿತರು ಧೈರ್ಯದಿಂದ ತಮ್ಮ ಕಷ್ಟಗಳನ್ನು ವರ್ಣಿಸಲು ಬಹಿರಂಗ ಸಭೆಗಳಲ್ಲಿ ವಾದಿಸಲೂ ಸಿದ್ಧರಿದ್ದಾರೆ.

ಇಂದು ಪರಿಸ್ಥಿತಿ ಬದಲಾಯಿಸಿದೆ. ಹೀಗೆಯೇ ಮುಂದುವರಿದಲ್ಲಿ ಇನ್ನೂ ಹೆಚ್ಚಿನ ಶಕ್ತಿಯನ್ನು ಪಡೆದು ತಮ್ಮ ಹೋರಾಟದಲ್ಲಿ ಯಶಸ್ಸನ್ನು ಪಡೆಯುತ್ತಾರೆಂದು ಆಶಿಸುವುದರಲ್ಲಿ ತಪ್ಪಾಗಲಾರದು. ಇದಕ್ಕೆ ಮೂಲ ಶಕ್ತಿಯನ್ನು ಡಾ. ಅಂಬೇಡ್ಕರ್ ಒದಗಿಸಿಕೊಟ್ಟಿದ್ದಾರೆ.

ಹೀಗಿದೆ !

ನಮ್ಮ ನ್ಯಾಯಾಲಯದಲ್ಲ 316 ಹೈಕೋರ್ಟು ಜಡ್ಜುಗಳ ನಾಲ್ವರು ಹರಿಜನರು ಮಾತ್ರ ಇರುವರು. ಗಿರಿಜನರು ಯಾರೂ ಇಲ್ಲ. ಆಮೇಲೆ 1975ನೇ ಇಸವಿಯೊಂದರಲ್ಲೆ 996 ಮೀಸಲಾತಿ ಹುದ್ದೆಗಳನ್ನು de reserved ಮಾಡಿದೆ. ಅಹ್ಮದಾಬಾದ್‌ನ ಬಿ.ಜೆ ಮೆಡಿಕಲ್ ಕಾಲೇಜಿನಲ್ಲಿ 700 ಕ್ಕೂ ಹೆಚ್ಚಿದ್ದ ಮೀಸಲು ಸ್ಥಳಗಳಲ್ಲಿ ಕೇವಲ 57ನ್ನು ಮಾತ್ರ ತುಂಬಿದೆ !

ಜಿ. ಹೆಚ್. ನಾಯಕ್

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು, ಪ್ರಜಾಪ್ರಭುತ್ವ ರಾಜ್ಯ ಪದ್ಧತಿ ಜಾರಿಗೆ ಬಂದಾಗ ಒಂದು ಬಗೆಯ ವಿಚಿತ್ರ ಪರಿಸ್ಥಿತಿ ನಿರ್ಮಾಣವಾಯಿತು. ಪ್ರಜಾಪ್ರಭುತ್ವ ಹುಟ್ಟಿಸಿದ ಆಸೆಗಳಿಗೂ ನಮ್ಮ ದೇಶದ ಚರಿತ್ರೆ ಬೆಳೆದು ಬಂದ ರೀತಿಗೂ ತಕ್ಕ ಹೊಂದಾಣಿಕೆ ಇರಲಿಲ್ಲ. ಆಗತ್ಯವಾದ ಹೊಂದಾಣಿಕೆ ಉಂಟಾಗುವಂತೆ ಮಾಡುವುದಕ್ಕೆ ಬೇಕಾದ ಪ್ರಾಮಾಣಿಕ ಪ್ರಯತ್ನವಾಗಲಿ, ವಿವೇಕಯುತವಾದ ನಡವಳಿಕೆಯಾಗಲಿ ನಮ್ಮ ಸರಕಾರದಲ್ಲಾಗಲಿ, ಅದನ್ನು ನಡೆಸುವ ರಾಜಕಾರಣಿಗಳಲ್ಲಾಗಲಿ, ನೌಕರಶಾಹಿಯಲ್ಲಾಗಲಿ ಇಷ್ಟು ಕಾಲವಾದರೂ ಕಂಡು ಬಂದಿಲ್ಲ. ಸದ್ಯದಲ್ಲೇ ಕಂಡು ಬಂದೀತೆಂಬ ಆಶಾದಾದಕ್ಕೂ ಕಾರಣ ಕಾಣುತ್ತಿಲ್ಲ. ಹಾಗಾಗಿ ದೇಶದಲ್ಲಿ ವಿಷಮ ಸ್ಥಿತಿ ಬಹುತೇಕ ಎಲ್ಲ ರಂಗಗಳಲ್ಲಿಯೂ ನಿರ್ಮಾಣವಾಗಿದೆ.

ಪ್ರಜಾಪ್ರಭುತ್ವ ರಾಜ್ಯಪದ್ಧತಿ ಘೋಷಿತವಾದೊಡನೆಯೆ ಸಹಜವಾಗಿಯೇ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಗಳು ಸರ್ವಜನ ಸಮ್ಮತವಾದ ಮೌಲ್ಯಗಳಾಗಬೇಕಾಯಿತು. ರಾಷ್ಟ್ರದ ಸಂವಿಧಾನ, ಕಾನೂನುಗಳು ಈ ಮೌಲ್ಯಗಳ ಅನುಷ್ಠಾನಕ್ಕೆ ಅನುಕೂಲವಾಗಬೇಕೆಂಬ ಆಶಯದಿಂದಲೇ ರೂಪಿತವಾದವು. ಕೆಲವು ಅಸಂಬದ್ಧಗಳು ಇನ್ನೂ ಉಳಿದು ಕೊಂಡಿವೆಯಾದರೂ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಗಳ ಮೌಲ್ಯಗಳನ್ನು ಆಧರಿಸಿಯೇ ನಮ್ಮ ಸಂವಿಧಾನ, ಕಾನೂನುಗಳು ಬಹುಪಾಲು ರೂಪಿತವಾದವು. ಆದರೆ ಈ ಮೌಲ್ಯಗಳು ಜನತೆಯ ದಿನನಿತ್ಯದ ಬದುಕಿನಲ್ಲಿ ಎಷ್ಟರ ಮಟ್ಟಿಗೆ, ಹೇಗೆ ಅನುಷ್ಠಾನಕ್ಕೆ ಬಂದವು? ಈ ಪ್ರಶ್ನೆಗೆ ಪ್ರಾಮಾಣಿಕ ಉತ್ತರ ಹೇಳುವುದಾದರೆ ಆ ಮೌಲ್ಯಗಳೆಲ್ಲ ಬಹುಪಾಲು ಜನಕ್ಕೆ, ಅದರಲ್ಲೂ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಶತಶತಮಾನಗಳಿಂದ ಮನುಷ್ಯಮಾತ್ರರೆಂಬ ಗಣನೆ, ಗೌರವಕ್ಕೂ ಪಾತ್ರರಾಗದಂತೆ ಈ ದೇಶದಲ್ಲಿ ಬದುಕಬೇಕಾಗಿ ಬಂದ, ನಿತ್ಯನರಕಿಗಳೆಂಬಂತೆ ಮೇಲು ಜಾತಿಯವರ ಅಮಾನುಷ ದಬ್ಬಾಳಿಕೆಗೆ ಬಲಿಪಶುಗಳಾಗಿ ನೊಂದು ಬೆಂದು ಬಸವಳಿದಿದ್ದ, ಈಗಲೂ ಉತ್ತಮ ಸ್ಥಿತಿಯಲ್ಲಿ ಇಲ್ಲದಿರುವ ನಿಮ್ನ ವರ್ಗ, ನಿಮ್ನ ಜಾತಿಗಳವರಿಗೆ ಕನಸಾಗಿಯೇ ಉಳಿದಿದೆ ಎಂಬುದು ಕಣ್ಣಿದ್ದವರಿಗೆ, ಕಾಣಿಸುವಂತಿದೆ. "ವ್ಯಕ್ತಿ ಸ್ವಾತಂತ್ರ್ಯ", "ಸಮಾನತೆ"– ಇವು ಈ ದಲಿತರಿಗೆ ಚೆಂದದ ಮಾತುಗಳಾಗಿ ಕಾಣಿಸುತ್ತಲಿವೆಯೇ ಹೊರತು ಅನುಭವದ ಸಂಗತಿಗಳಾಗಿಲ್ಲ. ಬಹುಶಃ ಚುನಾವಣೆಯಲ್ಲಿ ತನಗಿರುವ ಮತದ ಹಕ್ಕನ್ನು ಚಲಾಯಿಸುತ್ತಿರುವ ಆ ಒಂದು ಕ್ಷಣದಲ್ಲಿ ಮಾತ್ರ ಪ್ರಧಾನಿಗೂ ಒಂದೇ 'ವೋಟು' ತನಗೂ ಒಂದೇ 'ವೋಟು' ಆದ್ದರಿಂದ ದೇಶದಲ್ಲಿ ಸ್ವಾತಂತ್ರ್ಯ,

---

ಭ್ರಮೆಯಲ್ಲಿ 'ಸಮಾನತೆ' 'ಸ್ವಾತಂತ್ರ್ಯ'

ಸಮಾನತೆ ನೆಲೆಸಿಬಿಟ್ಟಿದೆ ಎಂಬ ಭ್ರಮೆಯಲ್ಲಿ ದಲಿತ ಬೀಗಬಹುದೊ ಏನೊ! ಬೇರೆ ಯಾವ ಕ್ಷಣದಲ್ಲೂ ಕೋಟಿ ಕೋಟಿ ಹರಿಜನರಲ್ಲಿ ಅಂಥ ಭ್ರಮೆ ಹುಟ್ಟಿಸುವಂಥ ಸ್ಥಿತಿ ನಮ್ಮ ದೇಶದಲ್ಲಿ ಇಲ್ಲ. ಸಂವಿಧಾನ ರಚಿಸುವವರಿಗೆ, ಕಾನೂನು ಮಾಡುವವರಿಗೆ ಈ ಪರಿಸ್ಥಿತಿಯ ತಿಳುವಳಿಕೆ ಇದ್ದದ್ದರಿಂದಲೇ ನಿಮ್ಮ ವರ್ಗ, ನಿಮ್ಮ ಜಾತಿಯವರೂ ಇತರ ಮೇಲು ವರ್ಗ, ಮೇಲು ಜಾತಿಯವರ ಸಮಸಮಕ್ಕೆ ಬರುವುದಕ್ಕೆ ಅನುಕೂಲವಾಗಬಹುದಾದಂಥ ಕಾನೂನುಗಳನ್ನು ಮಾಡಿದರು. ಮೀಸಲಾತಿಯ ಸೌಲಭ್ಯವೂ ಅಂಥ ಉದ್ದೇಶದಿಂದಲೇ ಹರಿಜನರಿಗೆ ದೊರೆಯುವಂತಾಯಿತು. ಇಂಥ ಸೌಲಭ್ಯ ಇಂತಿಷ್ಟು ವರ್ಷಗಳವರೆಗೆ ಇರಬೇಕು ಎಂದೂ ನಮೂದಿಸಲಾಗಿತ್ತು ಎಂಬುದೂ ನಿಜ. ಆ ನಿಗದಿಯಾದ ಕಾಲಾವಧಿ ಮುಗಿದರೂ ಹರಿಜನರ ಸಾಮಾಜಿಕ, ಆರ್ಥಿಕ, ಮತ್ತು ಶೈಕ್ಷಣಿಕ ಸ್ಥಿತಿಗತಿಯಲ್ಲಿ ನಿರೀಕ್ಷಿತ ಬದಲಾವಣೆ ಕಾಣದೇ ಇರುವುದರಿಂದ ಈ ಸೌಲಭ್ಯವನ್ನು ಇನ್ನೂ ಕೆಲವು ಕಾಲ ಮುಂದುವರಿಸುವುದು ಸೂಕ್ತ ಎಂದು ಸರಕಾರ ಮತ್ತು ಜನತೆಯ ಪ್ರತಿನಿಧಿಗಳು ಭಾವಿಸಿ ಅದಕ್ಕೆ ಅನುಗುಣವಾಗಿ ತೀರ್ಮಾನ ಕೈಕೊಂಡರು. ಇತ್ತೀಚೆಗೆ ಗುಜರಾಥ ರಾಜ್ಯದಂಥ ಕಡೆ ಮೀಸಲಾತಿ ಸೌಲಭ್ಯವನ್ನು ವಿರೋಧಿಸುವ ಚಳುವಳಿ ಎಷ್ಟೇ ತೀವ್ರ ಸ್ವರೂಪ ತಾಳಿದರೂ ದೇಶದ ಸಂಸತ್ತು ಮತ್ತು ಗುಜರಾಥ ರಾಜ್ಯದ ಶಾಸನ ಸಭೆ ಸರ್ವಾನುಮತದಿಂದ ಮೀಸಲಾತಿ ಸೌಲಭ್ಯವನ್ನು ಸಮರ್ಥಿಸಿದವು. ಇದೆಲ್ಲ ನಿಮಗೆ ಗೊತ್ತಿರುವ ವಿಚಾರ. ಆದರೆ, ನಮಗೆ, ನಿಮಗೆ ಸರಿಯಾಗಿ ಗೊತ್ತಾಗದೇ ಇರುವ ಒಂದು ವಿಚಾರವೂ ಇಲ್ಲಿದೆ. ಅದು, ಸಂಸತ್ತಿನ ಮತ್ತು ಶಾಸನ ಸಭೆಯ ಸದಸ್ಯರಲ್ಲಿ ಎಷ್ಟು ಜನ ತಮ್ಮ ಅಂತಃಸಾಕ್ಷಿ ಪೂರ್ವಕವಾಗಿ ಮೀಸಲಾತಿ ಪರ ಮತ ನೀಡಿದರು, ಎಷ್ಟು ಜನ ರಾಜಕಾರಣದ ಅನುಕೂಲಸಿಂಧು ಚಾಣಾಕ್ಷತನದಿಂದ ಮತನೀಡಿದರು ಎಂಬುದು ನಮಗೆ, ನಿಮಗೆ ಸುಲಭವಾಗಿ ಲೆಕ್ಕಕ್ಕೆ ಸಿಕ್ಕುವಂತಿಲ್ಲ. ಹರಿಜನರಿಗೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬಲ ಮೇಲುವರ್ಗ, ಮೇಲು ಜಾತಿಯವರಷ್ಟು ಇಲ್ಲ ಎಂಬುದು ಅವರಿಗೆ ಗೊತ್ತಿದ್ದರೂ ಹರಿಜನರಿಗೆ ಇರುವ 'ವೋಟು' ಎಷ್ಟು, ಅದಕ್ಕಿರುವ ಬಲ ಎಷ್ಟು ಎಂಬ ತಿಳುವಳಿಕೆ ಅವರಿಗೆ ಇದ್ದೇ ಇದೆ. ನಿಮ್ಮ ಜಾತಿ, ನಿಮ್ಮ ವರ್ಗಗಳವರ 'ವೋಟು'ಗಳು ತಮಗೆ ಸಿಗದಿದ್ದರೂ ಅಧಿಕಾರಕ್ಕೆ ಬರುವುದು ಸಾಧ್ಯ ಎಂಬಂಥ ಸ್ಥಿತಿ ಒಂದೊಮ್ಮೆ ಬರುವುದಾದರೆ ನಮ್ಮ ದೇಶದ ರಾಜಕಾರಣಿಗಳ, ರಾಜಕೀಯ ಪಕ್ಷಗಳ ನಿಜವಾದ ಭಾವನೆ ಮೀಸಲಾತಿ ವಿಷಯದಲ್ಲಿ ಏನಿದೆ ಎಂಬುದು ಗೊತ್ತಾಗಬಹುದು. ಆದರೆ ಬಹುಶಃ ಸದ್ಯಕ್ಕೆ ಬಹಿರಂಗವಾಗಿ ಅಂಥ ಹುಂಬ ಧೈರ್ಯಮಾಡುವ ಸ್ಥಿತಿಯಲ್ಲಿ ಯಾವ ರಾಜಕಾರಣಿಯೂ, ಯಾವ ರಾಜಕೀಯ ಪಕ್ಷವೂ ಇದ್ದಂತೆ ಕಾಣುವುದಿಲ್ಲ. ಆದರೂ ಮೀಸಲಾತಿ ವಿರುದ್ಧ ಮೇಲು ವರ್ಗ ಮತ್ತು ಮೇಲು ಜಾತಿಯವರು ಚಳುವಳಿ ಹೂಡುವಂತೆ 'ಒಳಗೊಳಗೆ' ಪ್ರಚೋದನೆ ನಡೆಸುವ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಇರಲಾರವು

ಎಂದು ಹೇಳುವ ಸ್ಥಿತಿ ಇಲ್ಲವಂತಿಲ್ಲ. ಗುಜರಾಥದ ಚಳುವಳಿಯ ಹಿಂದೆ ಇಂಥ ಶಕ್ತಿಗಳೆಲ್ಲ ಕೆಲಸಮಾಡಿವೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ. ಸರ್ಕಾರ ಮತ್ತು ಕೆಲವು ರಾಜಕೀಯ ನಾಯಕರೂ ಅಂಥ ಆಪಾದನೆ ಮಾಡಿದ್ದಾರೆ. ಆ ವಿಷಯ ನಿಮಗೂ ಗೊತ್ತಿದೆ. ಇಂಥ ಹಿನ್ನೆಲೆ ಇರುವುದರಿಂದ ನಿಮ್ಮ ಮತ್ತು ದೇಶದ ಹಿತಾಸಕ್ತಿಯ ದೃಷ್ಟಿಯಿಂದ ದೇಶಾದ್ಯಂಥ ಮೀಸಲಾತಿಯ ಪರವಾಗಿ ಜನಾಭಿಪ್ರಾಯವನ್ನು ರೂಪಿಸುವುದು ಅತ್ಯಂತ ಅಗತ್ಯವಾಗಿದೆ. ಆದ್ದರಿಂದ ನೀವು ನಡೆಸುತ್ತಿರುವ ಈ ಸಮ್ಮೇಳನ ಸಕಾಲಿಕವಾಗಿದೆ, ಸಮಂಜಸವಾಗಿದೆ.

ನಿಮ್ಮ ಜಾತಿ, ನಿಮ್ಮ ವರ್ಗಗಳವರಿಗೆ ಇರುವ ಮೀಸಲಾತಿಯನ್ನು ವಿರೋಧಿಸುವವರು ಮುಂದಿಡುವ ವಾದದ ವೈಖರಿ ಹೀಗಿದೆ : ನಮ್ಮದು ಪ್ರಜಾಪ್ರಭುತ್ವದ ರಾಷ್ಟ್ರ. ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಯ ಹಕ್ಕನ್ನು ನಮ್ಮ ಸಂವಿಧಾನ ಎಲ್ಲ ಜಾತಿ-ಮತಗಳವರಿಗೂ ಕೊಟ್ಟಿದೆ. ಅದಕ್ಕೆ ಅನುಗುಣವಾಗಿ ಕಾನೂನುಗಳನ್ನೂ ಮಾಡಿದ್ದಾಗಿದೆ. ಆದ್ದರಿಂದ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಯ ಹಕ್ಕುಗಳಿಗೆ ಚ್ಯುತಿ ಬಾರದಂತೆ ದೇಶದ ಪ್ರಜೆಗಳನ್ನೆಲ್ಲ ನಡೆಸಿಕೊಳ್ಳಬೇಕಾದದ್ದು ರಾಷ್ಟ್ರ ಧರ್ಮವಾಗಬೇಕು. ಇರುವ ಅವಕಾಶಗಳನ್ನು ಸಮಾನವಾದ ನೆಲೆಯಲ್ಲಿ ನಿಂತು ಸ್ಪರ್ಧಿಸಿ ಪಡೆಯ ಕೊಳ್ಳುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇರಬೇಕು. ಅದರಲ್ಲಿ ಮೀಸಲಾತಿ ಗೀಸಲಾತಿ ಎಂಬ ತಾರತಮ್ಯ ತೋರಿಸಬಾರದು. ಆದರಿಂದ ಹೆಚ್ಚಿನ ಅರ್ಹತೆ, ಪ್ರತಿಭೆ (merit) ಇರುವವರಿಗೆ ಅನ್ಯಾಯವಾಗುತ್ತದೆ. ಜಾತಿ ಜಾತಿಗಳಲ್ಲಿ ತಾರತಮ್ಯ ಉಳಿಸಿದಂತಾಗುತ್ತದೆ. ಜಾತ್ಯತೀತ, (Secular) ತತ್ವಕ್ಕೇ ಪೆಟ್ಟು ಬೀಳುತ್ತದೆ. ಅದು ಪ್ರಜಾಸತ್ತೆಗೆ ವಿರೋಧವಾದ ನೀತಿಯಾಗುತ್ತದೆ. ಎಲ್ಲ ಕ್ಷೇತ್ರಗಳಲ್ಲಿಯೂ ಗುಣಮಟ್ಟ (Standard), ಪ್ರತಿಭೆ (merit) ಕಡಿಮೆಯಾಗುತ್ತದೆ. ಅದರಿಂದ ದೇಶಕ್ಕೆ ದೇಶವೇ ಅಧೋಗತಿಗೆ ಹೋಗುವಂತಾಗುತ್ತದೆ. ಆದ್ದರಿಂದ ನಿಮ್ಮ ವರ್ಗ, ನಿಮ್ಮ ಜಾತಿಯವರಿಗೆಂದು ಇರುವ ಮೀಸಲಾತಿ ಸೌಲಭ್ಯ ರದ್ದಾಗಬೇಕು. ಇದು ಶುದ್ಧಾಂಗವಾಗಿ ನ್ಯಾಯವಾದ ಬೇಡಿಕೆ. ಈ ಬೇಡಿಕೆಯನ್ನು ಈಡೇರಿಸುವುದು ಸರ್ಕಾರದ ಕರ್ತವ್ಯ. ಅದನ್ನು ಪಡೆಯುವುದು ಈ ದೇಶದ ಪ್ರಜೆಗಳೆಲ್ಲರ ನ್ಯಾಯ ಸಮ್ಮತವಾದ ಹಕ್ಕು ಇತ್ಯಾದಿ.

ಇಂಥ ವಾದ ಮೇಲು ನೋಟಕ್ಕೆ ಸರಿ ಎಂದು ಅನಿಸಿಬಿಡುತ್ತದೆ. ತತ್ವದ ನೆಲೆಯಲ್ಲಿಯೇ ನೋಡಿದಾಗ, ಅದಕ್ಕೆ ಹೊಂದಿಕೊಳ್ಳುವಂಥ ತರ್ಕದ ನೆಲೆಯಲ್ಲಿಯೇ ನೋಡಿದಾಗ ಅವರ ವಾದ ಸರಿಯಾಗಿಯೇ ಇದೆ ಎಂಬ ಭ್ರಮೆ ಹುಟ್ಟಿಸಿ ಬಿಡುವಂತಿದೆ. ಆದರೆ, ನಿಜವಾಗಿ ನೋಡಿದರೆ ಈ ತತ್ವ ಈ ತರ್ಕದ ಹಿಂದೆ ಸ್ವಾರ್ಥಪರ ದೃಷ್ಟಿಯಿದೆ, ಕುತಂತ್ರದ ಮನೋವೃತ್ತಿ ಇದೆ. ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಗುಣಮಟ್ಟ, ಪ್ರತಿಭೆ ಮುಂತಾದವುಗಳ ಬಗ್ಗೆ ಅವರಿಗೆ ನಿಜವಾದ ಕಳಕಳಿ ಇಲ್ಲ. ತಮ್ಮ ಹಿತಾಸಕ್ತಿ, ತಮ್ಮ ಜಾತಿ-ಮತಗಳ ಹಿತಾಸಕ್ತಿಗಳಿಗಿಂತ ದೇಶದ

ಒಟ್ಟಿನ ಹಿತದ ಬಗ್ಗೆ ನಮ್ಮಲ್ಲಿ ಯೋಚಿಸುವವರೇ ಕಡಮೆ ಎಂದು ಡಾ. ಲೋಹಿಯಾ ರವರು ಹೇಳುತ್ತಿದ್ದ ಮಾತು (ನೋಡಿ "The caste system") ಇವರಿಗೆ ಚೆನ್ನಾಗಿ ಅನ್ವಯಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ಪ್ರಜಾಪ್ರಭುತ್ವ ರಾಜ್ಯಪದ್ಧತಿ ಜಾರಿಗೆ ಬಂದಾಗ ಸಂವಿಧಾನದಲ್ಲಿ, ಮುಂದೆ ಹಲವು ಕಾನೂನುಗಳಲ್ಲಿ ದೇಶದ ಪ್ರಜೆಗಳಿಗೆಲ್ಲ ವ್ಯಕ್ತಿ ಸ್ವಾತಂತ್ರ್ಯ ಸಮಾನತೆಗಳನ್ನು ಘೋಷಿಸಲಾಯಿತು. ಆದರೆ ವಾಸ್ತವ ಜೀವನದಲ್ಲಿ, ದೇಶದ ದಿನನಿತ್ಯದ ವ್ಯವಹಾರದಲ್ಲಿ ಇನ್ನೂ ಆ ಮೌಲ್ಯಗಳು ಬಹು ಪಾಲು ಪುಸ್ತಕದ ಮಾತುಗಳಾಗಿಯೇ ಇವೆ. ನಿಮ್ನ ವರ್ಗ, ನಿಮ್ನ ಜಾತಿಯ ವರಿಗಂತೂ ಅವು ಅಮೂರ್ತವಾದ ಮಾತುಗಳಾಗಿಯೇ ಇವೆ. ಸ್ವಾತಂತ್ರ್ಯ ದೇಶಕ್ಕೆ ಬಂದೊಡನೆಯೇ ಈ ದೇಶದ ಮೂರು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲದ ಚರಿತ್ರೆ ಇದ್ದಕ್ಕಿದ್ದಂತೆ ನಮಗೆ 'ಟಾಟಾ' ಹೇಳಿ ಹೊರಟು ಹೋಗಲಿಲ್ಲ. ಆ ಭೂತಕಾಲದ ಭಾರ ಕಳಚಿ ಹೋಗಲಿಲ್ಲ. ಸ್ವಾತಂತ್ರ್ಯ ಸಮಾನತೆ ಮುಂತಾದ ಮೌಲ್ಯಗಳು ಪ್ರಜಾಸತ್ತೆಯ ಆದರ್ಶಮೌಲ್ಯಗಳಾದರೂ ನಮ್ಮ ಚರಿತ್ರೆಯ ಉದ್ದಕ್ಕೂ ಅವಕಾಶ, ಅನುಕೂಲಗಳ ದೃಷ್ಟಿಯಿಂದ ಯಾರು ಹೆಚ್ಚಿನ ಸೌಲಭ್ಯ ಹೊಂದಿದ್ದರೊ ಅಂಥ ಜಾತಿ, ವರ್ಗಗಳವರಿಗೆ ಸ್ವಾತಂತ್ರ್ಯ, ಸಮಾನತೆಗಳು ದಕ್ಕ ಬಹುದಾದಷ್ಟು ಸುಲಭದಲ್ಲಿ ನಿಮ್ನ ಜಾತಿ, ನಿಮ್ನ ವರ್ಗಗಳವರಿಗೆ ದಕ್ಕುವಂಥ ಸ್ಥಿತಿ ಇರಲಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹೀನ ಸ್ಥಿತಿಯಲ್ಲಿ ಅವರಿದ್ದರು. ತೀರಾ ಅಸಮಾನ ಸ್ಥಿತಿಯಲ್ಲಿ, ಆ ಸ್ವಾತಂತ್ರ್ಯದ ಸ್ಥಿತಿಯಲ್ಲಿ ಇದ್ದರು. ಈಗಲೂ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಂಥ ಸುಧಾರಣೆ ಆಗಿಲ್ಲ. ಈ ಅಸಮ ಪರಿಸ್ಥಿತಿಯನ್ನು ಸರಿಪಡಿಸುವುದು ಸಮಾಜದ, ಸರಕಾರದ, ದೇಶದ ಮೊದಲ ಕರ್ತವ್ಯವಾಗಬೇಕು. ಆ ಮೇಲೆ ಸಮಾನ ಸ್ಪರ್ಧೆಯ, ಸಮಾನ ಸೌಲಭ್ಯಗಳ, ಸಮಾನ ಅವಕಾಶಗಳ ಬಗ್ಗೆ ವಾದಿಸಬಹುದು.

ಮೀಸಲಾತಿಯಿಂದ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಗುಣಮಟ್ಟ, ಪ್ರತಿಭೆ ಕಡಿಮೆ ಯಾಗಿ ಬಿಡುತ್ತದೆ, ಎಂಬ ವಾದದಲ್ಲಿ ಹುರುಳಿಲ್ಲ. ಗುಣಮಟ್ಟ (Standard)ದ ಪ್ರಶ್ನೆಯನ್ನು ಬೇರೆ ರೀತಿಯಿಂದ ನೋಡಬೇಕು. ದೇಶದ ಜನಸಂಖ್ಯೆಯ ಸುಮಾರು ಐದರಲ್ಲಿ ಒಂದು ಭಾಗದಷ್ಟಿರುವ ಹರಿಜನ, ಗಿರಿಜನರಿಗೆ ಶತಶತಮಾನಗಳ ಕಾಲ ದಿಂದ ವಿದ್ಯಾಭ್ಯಾಸದ ಸೌಲಭ್ಯವನ್ನು ಅಲ್ಲಗಳೆಯುತ್ತ ಬಂದ ಚರಿತ್ರೆ ನಮ್ಮದು. ಅವರು ಇರುವ ಇಂದಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿಯೂ ಮಕ್ಕಳಿಗೆ ತಾವಾಗಿ ವಿದ್ಯಾಭ್ಯಾಸ ಮಾಡಿಸುವ ಸಾಧ್ಯತೆ ಇಲ್ಲವೇ ಇಲ್ಲ. ಸರಕಾರವೇ ವಿಶೇಷ ಸೌಲಭ್ಯ, ವಿದ್ಯಾರ್ಥಿ ವೇತನ ಕೊಟ್ಟರೆ ಮಾತ್ರ ಅವರ ಮಕ್ಕಳು ವಿದ್ಯಾ ಭ್ಯಾಸ ಮಾಡುವುದಕ್ಕೆ ಸಾಧ್ಯ. ಇಲ್ಲವಾದರೆ ದಿನನಿತ್ಯದ ಹೊಟ್ಟೆಗೇ ದಿನವಿಡೀ ದುಡಿ ದರೂ ಹೊಟ್ಟೆ ತುಂಬಿಸಿಕೊಳ್ಳಲಾರದ ಇವರು, ಎಂದೆಂದೂ ವಿದ್ಯಾಭ್ಯಾಸದ ಅವ

ಕಾಶವನ್ನೇ ಪಡೆದಿರದ ಆ ಮೂಲಕ ವಿದ್ಯಾಭ್ಯಾಸದ ಮಹತ್ವವನ್ನೇ ಅರಿಯದ ಇವರು ತಾವಾಗಿ ತಮ್ಮ ಮಕ್ಕಳನ್ನು ಓದಿಸುವ ಸ್ಥಿತಿ ಇಲ್ಲ. ಸರಕಾರ ವಿಶೇಷ ಸೌಲಭ್ಯ ಅವಕಾಶಗಳನ್ನು ನೀಡದಿದ್ದಲ್ಲಿ ಆ ಜನ ಅವಿದ್ಯಾವಂತರಾಗಿ, ಆರ್ಥಿಕ ವಾಗಿ ದರಿದ್ರರಾಗಿ, ಸಾಮಾಜಿಕವಾಗಿ ನಿಕೃಷ್ಟರಾಗಿಯೇ ಉಳಿಯುವಂತಾಗುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳೆಂದು ಹೇಳುವ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಗಳು ಈ ದೇಶದಲ್ಲಿ ಯಾವ ಕಾಲಕ್ಕೂ ಅವರಿಗೆ ಧಕ್ಕದಂತಾಗುತ್ತದೆ. ಸ್ವಾತಂತ್ರ್ಯ, ಸಮಾನತೆಗಳ ಹೆಸರಿನಲ್ಲಿ ಮೀಸಲಾತಿಯನ್ನು ವಿರೋಧಿಸುವವರು ಇದಕ್ಕೇನೆನ್ನು ತ್ತಾರೆ? ಹರಿಜನ, ಗಿರಿಜನರಿಗೆ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಬೇಕಾಗಿಯೇ ಇಲ್ಲ, ಅವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಉಳಿದ ಜಾತಿ ಮತಗಳ ವರ ಮಟ್ಟಕ್ಕೆ ಬರುವ ಅಗತ್ಯವೇ ಇಲ್ಲ ಎಂಬಂಥ ಅಮಾನುಷವಾದವನ್ನು ಮುಂದಿ ಡುತ್ತಾರೆಯೇ? ದೇಶದ ಐದರಲ್ಲಿ ಒಂದರಷ್ಟು ಜನಸಂಖ್ಯೆ ಇರುವ ಹರಿಜನ, ಗಿರಿಜನರು ಅಜ್ಞಾನದಲ್ಲಿ, ದಾರಿದ್ರ್ಯದಲ್ಲಿ ಉಳಿಯುವುದಾದರೆ ವಿದ್ಯಾಭ್ಯಾಸ, ಸರ್ಕಾರಿ ನೌಕರಿಗಳಲ್ಲಿ ಗುಣಮಟ್ಟಕ್ಕೆ ಧಕ್ಕೆಯಾಗಲಾರದೆಂದು ವಾದಿಸುವವರು ಇಡೀ ದೇಶ ವನ್ನೇ ಒಂದು ಘಟಕವನ್ನಾಗಿಟ್ಟುಕೊಂಡು ನೋಡಬೇಕು. ಆಗ ನಮ್ಮ ದೇಶದ ಗುಣ ಮಟ್ಟ, ಪ್ರಜಾಪ್ರಭುತ್ವ ರಾಷ್ಟ್ರದ ಒಟ್ಟೂ ಜನತೆಯ ಗುಣಮಟ್ಟ ತೀರಾ ಕೆಳ ದರ್ಜೆ ಯದಾಗಿಯೇ ಉಳಿಯುತ್ತದೆ. ಆ ಮೂಲಕ ವ್ಯಕ್ತಿ ಸ್ವಾತಂತ್ರ್ಯ ಸಮಾನತೆ, ಸಮಾನಾವಕಾಶಗಳನ್ನು ಪಡೆಯುವ ಅವಕಾಶ ಎಂದಾದರೂ ಇದ್ದಿರಬಹುದಾದ ಪ್ರಜಾಪ್ರಭುತ್ವ ರಾಜ್ಯಪದ್ಧತಿಯೇ ಅರ್ಥಹೀನವಾಗಿಯೋ, ಇಲ್ಲವೆ ಸಂಪೂರ್ಣವಾಗಿ ಇಲ್ಲವಾಗಿಯೊ ಹೋಗಬಹುದು. ಇದನ್ನು ಮೀಸಲಾತಿ ವಿರೋಧಿಗಳು ಅರಿಯ ಬೇಕು.

ಇನ್ನು ಪ್ರತಿಭೆ (merit)ಯ ಮಾತು. ಹರಿಜನ, ಗಿರಿಜನರಿಗಿರುವ ಮೀಸ ಲಾತಿ ಪ್ರಮಾಣ ಶೇಕಡ ಹದಿನೆಂಟೊ ಇಪ್ಪತ್ತೊ ಇದೆ. ಅವರ ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ಅಷ್ಟು ಪ್ರಮಾಣ ಅವರಿಗೆ ಹೆಚ್ಚಿನದಲ್ಲ. ಅವರಿಗೆ ಹಾಗೆ ಮೀಸಲಾತಿ ಸೌಲಭ್ಯ ಇಲ್ಲದೆ ಇದ್ದರೆ ಏನಾಗುತ್ತಿತ್ತು, ಎಂಬ ಪ್ರಶ್ನೆ. ಹರಿಜನ, ಗಿರಿಜನರಿಗಿರುವ ಮೀಸಲಾತಿಯನ್ನು ಕಳೆದರೆ ಉಳಿದಂತೆ 80% ಅವಕಾಶ ಗಳು ಶಾಲಾ ಕಾಲೇಜುಗಳ ಪ್ರವೇಶಕ್ಕೆ, ಸರಕಾರಿ ನೌಕರಿಗಳಿಗೆ ಸಂಬಂಧಿಸಿದಂತೆ ಇವೆ. ಅಲ್ಲಿ ನಿಜವಾದ ಪ್ರತಿಭೆ ಒಂದನ್ನೇ ಪ್ರಮಾಣವಾಗಿ ಇಟ್ಟುಕೊಂಡು ಸೀಟು ಗಳನ್ನು ನೀಡಲಾಗುತ್ತಿದೆಯೇ? ಹಾಗೆ ನೀಡಿದ್ದಾದರೆ ಶೇಕಡ ಒಂಬತ್ತರಷ್ಟು ಪ್ರತಿಭಾಶಾಲಿಗಳಿಗೆ ಅವಕಾಶ ಸಿಕ್ಕೇ ಸಿಕ್ಕಿದಂತಾಗುತ್ತದೆ. ಮೀಸಲಾತಿ ಸೌಲಭ್ಯ ದಿಂದಾಗಿ ಸೀಟುಗಳನ್ನು, ನೌಕರಿಗಳನ್ನು ಪಡೆದು ಬರುವವರೆಲ್ಲಾ ಈ ಶೇಕಡಾ ಎಂಬತ್ತು ಜನರಿಗಿಂತ ಕಡಿಮೆ ಪ್ರತಿಭಾವಂತರೇ ಎಂದು ಹೇಳುವಂತಿಲ್ಲ. ಶೇಕಡಾ ಐದೋ ಹತ್ತೋ ಹರಿಜನ, ಗಿರಿಜನ ವಿದ್ಯಾರ್ಥಿಗಳು, ನೌಕರ ವರ್ಗದವರು ಮೇಲೆ

ಹೇಳಿದ ಶೇಕಡಾ ಎಂಬತ್ತರ ಮಟ್ಟಕ್ಕಿಂತ ಪ್ರತಿಭೆಯ ದೃಷ್ಟಿಯಿಂದ ಸ್ವಲ್ಪ ಕೆಳ ಮಟ್ಟದವರೆಂದೇ ಒಪ್ಪಿಕೊಳ್ಳೋಣ. ಅಂದ ಮಾತ್ರಕ್ಕೆ ದೇಶದ ವಿದ್ಯಾಕ್ಷೇತ್ರದಲ್ಲಿ ನೌಕರಶಾಹಿ ವರ್ಗದಲ್ಲಿ ಪ್ರತಿಭಾ ದಾರಿದ್ರ್ಯ ಬಂದಿತೆಂದು ಕೂಗು ಹಾಕಬೇಕಾಗಿಲ್ಲ.

ಈ ಪ್ರತಿಭೆಯ ವಾದವನ್ನು ಮುಂದಿಡುವವರಿಗೆ ನಿಜವಾಗಿ ಪ್ರತಿಭೆಯ ಬಗ್ಗೆ ಕಳಕಳಿ ಇದ್ದದ್ದಾದರೆ ಅವರು ಮೊದಲು ಚಳುವಳಿ ಹೂಡಬೇಕಾದದ್ದು ಹರಿಜನ, ಗಿರಿಜನರಿಗಿರುವ ಮೀಸಲಾತಿ ಸೌಲಭ್ಯದ ವಿರುದ್ಧವಾಗಿ ಅಲ್ಲ. ಉಳಿದ ಶೇಕಡಾ ಎಂಬತ್ತರಲ್ಲಿ ಪ್ರತಿಭೆಗೇ ಪ್ರಾಮುಖ್ಯ ದೊರೆಯುವಂತೆ ಆಂದೋಲನ ಸಂಘಟಿಸ ಬೇಕು. ಈಗ ಮೀಸಲಾತಿ ಸೌಲಭ್ಯ ಹರಿಜನ ಗಿರಿಜನರಿಗೆ ಮಾತ್ರ ಇಲ್ಲ. ಹಿಂದುಳಿದ (backward) ಜಾತಿ, ಮತ, ಪಂಗಡಗಳಿಗೂ ಅಂದರೆ ಕೆಲವು ಸವರ್ಣೀಯ ಪಂಗಡಗಳಿಗೂ ಕೆಲ ಪ್ರಮಾಣದ ಮೀಸಲಾತಿ ಸೌಲಭ್ಯವಿದೆ. ಹರಿಜನ, ಗಿರಿಜನರ ಮೀಸಲಾತಿ ಸೌಲಭ್ಯವನ್ನು ವಿರೋಧಿಸಿ ಚಳುವಳಿ ಮಾಡುತ್ತಿರುವವರು, ಉಳಿದ ಸವರ್ಣೀಯ ಆದತೆ ಹಿಂದುಳಿದ ಜಾತಿ, ಮತ, ಪಂಗಡಗಳೆಂದು ಘೋಷಿತವಾದ ಜನರಿಗೆ ಇರುವ ಮೀಸಲಾತಿ ಸೌಲಭ್ಯವನ್ನು ಏಕೆ ಈಗಲೇ ವಿರೋಧಿಸುತ್ತಿಲ್ಲ? ಇಲ್ಲಿ ಕುತಂತ್ರವಿದೆ. ಮೊದಲ ಹಂತದಲ್ಲಿ ಇತರ ಹಿಂದುಳಿದ (backward) ಜಾತಿ, ಮತ, ಪಂಗಡಗಳವರ ಬೆಂಬಲವನ್ನೂ ದೊರಕಿಸಿಕೊಂಡು. ಹರಿಜನ, ಗಿರಿಜನರಿಗಿರುವ ಮೀಸಲಾತಿಯನ್ನು ವಿರೋಧಿಸಿ ಗೆದ್ದರೆ, ಎರಡನೆಯ ಹಂತದಲ್ಲಿ ಗಿರಿಜನ, ಹರಿಜನರ ಮೀಸಲಾತಿ ರದ್ದತಿಯ ಪೂರ್ವನಿದರ್ಶನವನ್ನು ಮುಂದೆ ಮಾಡಿ ಹಿಂದುಳಿದ ಜಾತಿಗಳವರಿಗಿರುವ ಮೀಸಲಾತಿ ಸೌಲಭ್ಯವನ್ನೂ ಪ್ರಶ್ನಿಸಬಹುದು, ಅದರ ವಿರುದ್ಧವೂ ಚಳುವಳಿ ಹೂಡಬಹುದು, ಆಗ ಹರಿಜನ, ಗಿರಿಜನರ ಮೀಸಲಾತಿ ಸೌಲಭ್ಯದ ವಿರುದ್ಧ ಚಳುವಳಿಯಲ್ಲಿ ಭಾಗವಹಿಸಿದ ಹಿಂದುಳಿದ (backward)ಜಾತಿ, ಪಂಗಡಗಳವರಿಗೆ ತಮ್ಮ ವಿರುದ್ಧ ನಡೆಯಬಹುದಾದ ಚಳುವಳಿಯನ್ನು ವಿರೋಧಿಸುವ ನೈತಿಕ ಹಕ್ಕು ಇಲ್ಲದಂತಾಗಿ ಇಂಗು ತಿಂದ ಮಂಗನಂತಾಗಬೇಕಾದೀತು. ಆದ್ದರಿಂದ ಹಿಂದುಳಿದ ಜಾತಿ, ಪಂಗಡಗಳಿಗೆ ಸೇರಿದ, ಕೆಲವು ಮೀಸಲಾತಿ ಸೌಲಭ್ಯಗಳನ್ನು ಪಡೆಯುತ್ತಿರುವ ಹರಿಜನ-ಗಿರಿಜನೇತರ ಸವರ್ಣೀಯರು ಹರಿಜನ-ಗಿರಿಜನ ಮೀಸಲಾತಿಯ ವಿರುದ್ಧ ಗುಣಮಟ್ಟ, ಪ್ರತಿಭೆಯ ಹೆಸರಿನಲ್ಲಿ ನಡೆಯುತ್ತಿರುವ ವಾದ, ಆ ವಾದದಿಂದ ಪ್ರೇರಿತವಾದ ಚಳುವಳಿ ತಮ್ಮ ವಿರುದ್ಧವೂ ತಿರುಗೀತು ಎಂಬ ಕಟು ಸತ್ಯವನ್ನು ಮುಂದಾಗಿ ಅರಿತುಕೊಳ್ಳಬೇಕಾದ ಅಗತ್ಯವಿದೆ. ಇಲ್ಲವೆ ಹರಿಜನ, ಗಿರಿಜನರಿಗಿರುವ ಮೀಸಲಾತಿ ಸೌಲಭ್ಯವನ್ನು ಒಂದೊಮ್ಮೆ ರದ್ದುಪಡಿಸುವ ತೀರ್ಮಾನವನ್ನು ಸರಕಾರ ಕೈಗೊಳ್ಳುವುದಾದರೆ, ತಾನಾಗಿಯೇ ಇತರ ಹಿಂದುಳಿದ ಜಾತಿ, ಮತ, ಪಂಗಡಗಳವರಿಗಿರುವ ಮೀಸಲಾತಿ ಅಥವಾ ವಿಶೇಷ ರಿಯಾಯತಿಗಳೂ ತನ್ನಷ್ಟಕ್ಕೆ ತಾನೆ ರದ್ದಾದವು ಎಂಬ ಕಟು ಸತ್ಯವನ್ನು ಕುರಿತೂ ಹಿಂದುಳಿದವರೆನಿಸಿಕೊಂಡ ಸವರ್ಣೀಯರು ಯೋಚಿಸ ಬೇಕಾ

ಗಿದೆ. ಇಲ್ಲವಾದರೆ ಶತಶತಮಾನಗಳಿಂದ ಸಾಮಾಜಿಕವಾಗಿ ಉತ್ತಮ ಅವಕಾಶಗಳನ್ನು ಹೊಂದಿದ್ದ ಜಾತಿ, ಪಂಗಡಗಳವರಿಗೆ ಶೇಕಡಾ ಅರವತ್ತಕ್ಕಿಂತ ಹೆಚ್ಚಿನ ಪಾಲಿನ ಅಘೋಷಿತ ಮೀಸಲಾತಿ ದೊರೆಯುವಂತಾಗುವುದನ್ನು ಕಾಣಬೇಕಾದೀತು.

ಇಲ್ಲಿ ಇನ್ನೊಂದು ಅಂಶವನ್ನು ಪ್ರಸ್ತಾಪಿಸುತ್ತೇನೆ. ಹರಿಜನ, ಗಿರಿಜನರ ಮೀಸಲಾತಿ ವಿರೋಧಿಸುವವರು ಉಳಿದ ಶೇಕಡಾ ಎಂಬತ್ತರಷ್ಟು ಸೀಟುಗಳು, ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳ ನೌಕರಿಗಳು ಹೇಗೆ ಹಂಚಲ್ಪಡುತ್ತವೆ ಎಂಬುದನ್ನು ಗಮನಿಸಬೇಕು. ಆ ಎಂಬತ್ತರಲ್ಲಿ ಹಿಂದುಳಿದ ಜಾತಿ, ಮತ, ಪಂಗಡಗಳವರಿಗೆಂದು ಎಷ್ಟೋ ಸ್ಥಾನಗಳು ಮೀಸಲಾಗಿರುತ್ತವೆ. ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಿಗೆಂದು ಕೆಲವು ಸೀಟುಗಳು, ಗವರ್ನಮೆಂಟ್ ಕೋಟಾಗಳೆಂದು ಕೆಲವು ಸೀಟುಗಳು ಇರುತ್ತವೆ. ಜೊತೆಗೆ ಕೆಪಿಟೇಶನ್ ಫೀ, ಡೊನೇಶನ್‌ಗಳ ಹೆಸರಿನಲ್ಲಿ ಕೆಲವು ಸೀಟುಗಳು, ಪರದೇಶದ ವಿದ್ಯಾರ್ಥಿಗಳಿಗೆಂದು ಕೆಲವು ಸೀಟುಗಳು —ಹೀಗೆ ಎಷ್ಟೋ ಪ್ರಮಾಣ ಹಂಚಿ ಹೋಗುತ್ತವೆ. ಇದೆಲ್ಲ ಗುಣಮಟ್ಟ, ಪ್ರತಿಭೆ, ವ್ಯಕ್ತಿ ಸ್ವಾತಂತ್ರ್ಯ, ಸಮಾನಾವಕಾಶಗಳ ಹೆಸರಿನಲ್ಲಿ ಹರಿಜನ, ಗಿರಿಜನರಿಗಿರುವ ಮೀಸಲಾತಿಯನ್ನು ವಿರೋಧಿಸುವವರ ಕಣ್ಣಿಗೆ ಕಾಣಿಸುವುದಿಲ್ಲವೇಕೆ? ಮೀಸಲಾತಿ ವಿರೋಧಿಗಳು ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ಸಮಾನ ಅವಕಾಶಗಳ ಬಗ್ಗೆ ನಿಜವಾಗಿಯೂ ನಿಷ್ಠೆ ಉಳ್ಳವರಾಗಿದ್ದಲ್ಲಿ, ಆ ಮೌಲ್ಯಗಳಿಗಾಗಿ ಪ್ರಾಮಾಣಿಕವಾಗಿ ಹೋರಾಡುವವರಾಗಿದ್ದಲ್ಲಿ—ಭಾರತದ ವಿಶಿಷ್ಟ, ಸಂಕೀರ್ಣ ಸಂದರ್ಭದಲ್ಲಿ ಅವರ ವಾದವನ್ನು ನಾವು ಒಪ್ಪಲಾಗದೇ ಇದ್ದರೂ—ಅವರನ್ನು ಸಹಾನುಭೂತಿಯಿಂದ ಕಾಣುವುದು ಸಾಧ್ಯವಾಗುತ್ತಿತ್ತು. ಅವರ ಚಳುವಳಿ ಮೊದಲು ಈ ರಿಯಾಯತಿಗಳನ್ನು, ಈ ಹಣದ ಪ್ರಭಾವವನ್ನು, ಸರ್ಕಾರದ ಅರ್ಥಹೀನ ಕ್ವೋಟಾ ಪದ್ಧತಿಗಳನ್ನು, ಅಧಿಕಾರದಲ್ಲಿರುವವರ ವಶೀಲಿ ಹಾಗೂ ಹಣದ ಬಲದಿಂದ ಪ್ರತಿಭೆಯಿದ್ದವರಿಗೆ ಕೈತಪ್ಪಿ ಹೋಗುವ, ಅನರ್ಹರಾದವರಿಗೆ ಸೀಟು, ಕೆಲಸ ಸಿಕ್ಕುವ ಭ್ರಷ್ಟಾಚಾರ ಲಂಚಗಳ ಹಾವಳಿಯನ್ನು, ಜಾತಿಮತಗಳ ಹೆಸರಿನಲ್ಲಿ ನಡೆಯುವ ಸಾರ್ವಜನಿಕ ಸಂಸ್ಥೆಗಳಲ್ಲಿ ಇತರರ ಪ್ರತಿಭೆ ಕಡೆಗಣಿಸಿ ತಮ್ಮ ತಮ್ಮ ಜಾತಿ–ಮತಗಳವರಿಗೇ ಸೀಟು ಕೊಡುವುದನ್ನು, ಕೆಲಸ ಕೊಡುವುದನ್ನು, ತಮ್ಮ ತಮ್ಮ ಜಾತಿ ಮತದವರಲ್ಲಿಯೂ ಪ್ರತಿಭೆಗೆ ಬೆಲೆ ಕೊಡದೆ ಅವರಿಗಿರುವ ವಶೀಲಿ ಇಲ್ಲವೆ ಅವರು ಆಡಳಿತ ವರ್ಗದ ಪ್ರಬಲರಿಗೆ ಕೊಡಬಹುದಾದ ಲಂಚ ಅಥವಾ ಕಡಮೆ ಸಂಬಳ ಪಡೆದು ಹೆಚ್ಚು ಸಂಬಳ ಪಡೆದದ್ದೆಂದು ಸಹಿ ಹಾಕಲು ಸಿದ್ಧವಿರುವವರಿಗೆ ಕೆಲಸ ಕೊಡುವ ವಂಚನೆ—ಗುಣಮಟ್ಟ ಮತ್ತು ಪ್ರತಿಭೆಗೆ ಶತ್ರುಗಳಾಗಿರುವ ಇಂಥ ಹತ್ತು ಹಲವು ದುಷ್ಟ ಪ್ರವೃತ್ತಿಗಳ ವಿರುದ್ಧ ಮೊದಲು ಹೋರಾಟ ನಡೆಸಬೇಕು. ಅವನ್ನೆಲ್ಲ ಸರಿಪಡಿಸುವವರೆಗೆ ಹರಿಜನ, ಗಿರಿಜನರಿಗಿರುವ ಮೀಸಲಾತಿಯನ್ನು ವಿರೋಧಿಸುವುದು ನೈತಿಕವಾಗಿಯೂ ಸಾಮಾಜಿಕ ನ್ಯಾಯದ ದೃಷ್ಟಿ

ಯಿಂದಲೂ ಸರಿಯಾದದ್ದಾಗುವುದಿಲ್ಲ. ಭ್ರಷ್ಟಾಚಾರ, ವಶೀಲಿ ಮೊದಲಾದ ಶಕ್ತಿಗಳೆದುರು ಸೆಣಸಿ ನ್ಯಾಯ ಪಡೆಯುವುದಕ್ಕೆ ಇತರ ಜಾತಿ, ಮತಗಳ ಬಹುಸಂಖ್ಯಾತರಿಗೇ ಸಾಧ್ಯವಾಗದಿದ್ದಂಥ ಪರಿಸ್ಥಿತಿ ಇರುವಾಗ ಸಾಮಾಜಿಕವಾಗಿ ಸ್ಥಾನಮಾನವಿಲ್ಲದ, ಆರ್ಥಿಕವಾಗಿ ದುರ್ಬಲರಾಗಿರುವ, ವಿದ್ಯೆಯ ದೃಷ್ಟಿಯಿಂದ ಹಿನ್ನೆಲೆಯೇ ಇಲ್ಲದಂಥ ಹರಿಜನ, ಗಿರಿಜನರ ಪಾಡು ಏನಾದೀತು, ಎಂಬುದನ್ನು ಯೋಚಿಸಬೇಕು. ಶೇಕಡಾ ಒಂದರಷ್ಟು ಪಡೆಯುವುದಕ್ಕೂ ಇಂದಿನ ಪರಿಸ್ಥಿತಿಯಲ್ಲಿ ಅವರಿಗೆ ಸಾಧ್ಯವಾಗುವಂತಿಲ್ಲ. ಈ ವಾಸ್ತವವನ್ನು ಕಡೆಗಣಿಸುವುದು ಹೇಗೆ?

ಗುಣಮಟ್ಟ, ಪ್ರತಿಭೆಯವಾದಕ್ಕೆ ಸಂಬಂಧಿಸಿದಂತೆ ಇನ್ನೊಂದು ಅಂಶವನ್ನು ಗಮನಿಸಬೇಕು. ನಮ್ಮ ದೇಶದಲ್ಲಿ ಪ್ರತಿಭೆಯನ್ನು ನಮ್ಮ ವಿದ್ಯಾಭ್ಯಾಸ ಪದ್ಧತಿಯ ಸಂದರ್ಭದಲ್ಲಿಯೇ ಅಳೆಯುತ್ತಿದ್ದೇವೆ. ಪಠ್ಯಗ್ರಂಥಗಳಲ್ಲಿರುವ ವಿಷಯಗಳಿಗೆ ಸೇರದ ಎಷ್ಟೋ ವಿಷಯಗಳಲ್ಲಿ, ಕಸಬುಗಳಲ್ಲಿ, ಜ್ಞಾನ ಕ್ಷೇತ್ರಗಳಲ್ಲಿ ಒಬ್ಬನಿಗೆ ಇದ್ದಿರಬಹುದಾದ ಕರ್ಮ ಕುಶಲತೆ, ತಿಳುವಳಿಕೆಗಳನ್ನು ಗಮನಿಸುವಷ್ಟು ವೈವಿಧ್ಯಪೂರ್ಣವಾಗಿ, ಸಮಗ್ರವಾಗಿ ನಮ್ಮ ಶಿಕ್ಷಣ ಪದ್ಧತಿ ಬೆಳೆದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ವಿಷಯ ಗೊತ್ತಿದ್ದರೂ ಮನೆಮಾತಲ್ಲದ, ಪರಿಸರದ ಮಾತೂ ಅಲ್ಲದ, ಪರಕೀಯ ಭಾಷೆಯಲ್ಲಿ ಅವುಗಳ ತಾಂತ್ರಿಕ ಭಾಷೆಗಳಲ್ಲಿ ಬರೆಯಬೇಕಾದ, ತಿಳಿಸಬೇಕಾದ ಕಷ್ಟ ಬೇರೆ ಇದೆ. ಹೀಗಾಗಿ ನಮ್ಮ ವಿದ್ಯಾಭ್ಯಾಸ ಬಯಸುವ ಬಗೆಯ ಕುಶಲತೆ, ಭಾಷೆಯ ಅನುಕೂಲತೆ, ಸ್ಮರಣಶಕ್ತಿಯ ಸಂಪ್ರದಾಯ ಉಳ್ಳ ಮೇಲುಜಾತಿಯವರಿಗೆ ಹೆಚ್ಚಾಗಿರುವುದು ಈಗ ಕಾಣುತ್ತಿದೆ. ಆದರೆ ಹರಿಜನ, ಗಿರಿಜನರಲ್ಲಿಯೂ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಎರಡು, ಮೂರನೆಯ ತಲೆಮಾರಿನವರು ಬರುವಾಗ ಅವರಿಗೂ ಅಗತ್ಯವಾದ ಹಿನ್ನೆಲೆ ಸಿದ್ಧವಾಗಬಹುದಾದ್ದರಿಂದ ಪ್ರತಿಭಾಶಾಲಿಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಂಡಾರು. ಡಾ. ಅಂಬೇಡ್ಕರ್‌ರಂಥ ಮಹಾಧೀಮಂತನನ್ನು ಕೊಟ್ಟ ಜನಾಂಗ ಪ್ರತಿಭಾ ದಾರಿದ್ರ್ಯದ್ದು ಎಂದು ಈಗಲೇ ತೀರ್ಮಾನಿಸುವುದು ತಪ್ಪಾದೀತು. ಇನ್ನು ಒಬ್ಬ ಬ್ರಾಹ್ಮಣ ಹುಡುಗ ವಿದ್ಯಾಭ್ಯಾಸ ಮಾಡಿ ಅಧ್ಯಾಪಕನೊ, ಎಂಜಿನಿಯರನೊ, ವೈದ್ಯನೊ ಇನ್ನೇನೊ ಆಗುವುದರ ಮೂಲಕ ಅವನ ಜಾತಿಯ ಪರಿಸರದಲ್ಲಿ ಅಂಥ ಹೆಚ್ಚಿನ ಪ್ರಭಾವ ಏನೂ ಆಗುವುದಿಲ್ಲ. ಅಲ್ಲಿ ಅವನು ಹತ್ತಿರುವ ಕಡೆ ಹನ್ನೊಂದು ಅಷ್ಟೇ ಅಲ್ಲ, ಸಾವಿರಾರು ಜನ ಇರುವಲ್ಲಿ ಒಬ್ಬ. ಆದರೆ ಹರಿಜನನೊ ಗಿರಿಜನನೊ ಅಂಥ ಸ್ಥಿತಿಗೆ ಬಂದಾಗ ಅವನ ಪರಿಸರದಲ್ಲಿ ಹೆಚ್ಚಿನ ಪ್ರಭಾವವಾಗುತ್ತದೆ. ಆತ ಆದರ್ಶವ್ಯಕ್ತಿಯಾಗಿ ಕಾಣಿಸುತ್ತಾನೆ. ತಮ್ಮ ಮಕ್ಕಳೂ ಹಾಗೆ ಆಗಬಹುದಾದ ಕನಸುಕಾಣುವುದು ತಾಯ್ತಂದೆಯರಿಗೆ ಸಾಧ್ಯವಾಗುತ್ತದೆ. ಮಕ್ಕಳಿಗೆ ತಾವೂ ಹಾಗಾಗಬೇಕೆಂಬ ಪ್ರೇರಣೆ ಉಂಟಾಗುತ್ತದೆ. ಈ ಅಂಶವನ್ನು ನಾವು ಮರೆಯುವಂತಿಲ್ಲ.

ದೇಶದಲ್ಲಿ ಹುಟ್ಟಿದ ಯಾರಿಗೂ ಅವನು ಹುಟ್ಟಿದ ಜಾತಿ ಕಾರಣವಾಗಿ ವಿದ್ಯಾ

ಭ್ಯಾಸಮಾಡುವ ಸೌಲಭ್ಯ ಇರಲೇಬೇಕು. ಆದರೆ ಕೆಲಸದ ಅವಕಾಶಗಳು ಕಡಿಮೆ ಇರುವಷ್ಟು ಕಾಲ ಸಾಮಾಜಿಕವಾಗಿ ದುರ್ಬಲರಾದವರಿಗೆ ಕೆಲಸಕ್ಕೆ ಸಂಬಂಧಿಸಿದಂತೆ ಮೀಸಲಾತಿ ಸೌಲಭ್ಯ ಇರಬೇಕಾದದ್ದು ನ್ಯಾಯ, ಎಂದು ಡಾ. ಲೋಹಿಯಾರವರು ಹೇಳಿದ್ದು ಇಲ್ಲಿ ನೆನಪಾಗುತ್ತಿದೆ. (ನೋಡಿ "The caste system") ಕನಿಷ್ಠ ಅರ್ಹತೆ ಉಳ್ಳವರಿಗೆ ಶಾಲಾ ಕಾಲೇಜುಗಳಿಗೆ ಪ್ರವೇಶ ದೊರೆಯುವಂಥ ಪರಿಸ್ಥಿತಿ ಸ್ವಾತಂತ್ರ್ಯ ದೊರೆತು ಮೂರು ದಶಕಗಳಿಗಿಂತ ಹೆಚ್ಚು ಕಾಲವಾದರೂ ನಿರ್ಮಾಣ ಮಾಡದೇ ಇರುವ ಸರ್ಕಾರವನ್ನು ಹರಿಜನ, ಗಿರಿಜನ ಮೀಸಲಾತಿ ವಿರೋಧಿಗಳು ಮೊದಲು ಪ್ರಶ್ನಿಸಲಿ. ಅದಕ್ಕಾಗಿ ಬೇಕಾದರೆ ಚಳುವಳಿಗಳನ್ನು ಮಾಡಲಿ. ಇನ್ನು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಾಗದಿರುವಂಥ ಪರಿಸ್ಥಿತಿ ನಿರ್ಮಾಣ ವಾಗಿರುವುದರಿಂದ ಉದ್ಯೋಗಾವಕಾಶಕ್ಕೆ ಸಂಬಂಧಿಸಿದಂತೆ ಮೀಸಲಾತಿ ಉಳಿದು ಕೊಳ್ಳುವಂತಾಗಿದೆ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವವರೆಗೆ ಸರಕಾರ ಹರಿಜನ, ಗಿರಿಜನರ ಮೀಸಲಾತಿಯ ಸೌಲಭ್ಯವನ್ನು ರದ್ದುಗೊಳಿಸುವುದು ನ್ಯಾಯ ಸಮ್ಮತವಾಗಲಾರದು, ಎಂದು ಹೇಳಿ ನನ್ನ ಅಧ್ಯಕ್ಷ ಭಾಷಣ ಮುಗಿಸುತ್ತೇನೆ.

ರವಿವರ್ಮ ಕುಮಾರ್

ದಲಿತರು ತಾವು ಪಟ್ಟ ಎಳ್ಳಷ್ಟು ನಷ್ಟವನ್ನಾಗಲಿ ಅದರ ಬಡ್ಡಿಯ ನ್ನಾಗಲಿ ಕೇಳಿಲ್ಲ. "ಅಹಿಂಸಾತ್ಮಕ ವಾಗಿ ಸಂವಿಧಾನದ ಮೂಲಕ ನಮ್ಮ ಮೇಲೆ ನಡೆಯುತ್ತಿರುವ ದರೋಡೆ ತಪ್ಪಿಸಿ" ಇದಿಷ್ಟೆ ದಲಿತರ ಹೃದಯದ ಕೂಗು.

ಈ ಒಂದು ಶತಮಾನಕ್ಕಾಚೆ ಸಮಾಜದ ಶೇಕಡಾ 4ಭಾಗವಿರುವ ಬ್ರಾಹ್ಮಣರು ಮಾತ್ರ ಶಿಕ್ಷಣಕ್ಕೆ ಅರ್ಹರು. ಬ್ರಾಹ್ಮಣರಲ್ಲದವರು ಶಿಕ್ಷಣದ ಗಂಧ ಗಾಳಿಪಡೆಯಲೂ ಅನರ್ಹರು. ಪಡೆದರೆ ಅದು ಘೋರ ಅಪರಾಧ; ಶಿಕ್ಷಾರ್ಹ; ಅದರ ಪುನರಾವರ್ತನೆಯಾಗದಂತೆ ಕ್ರಮ ತೆಗೆದು ಕೊಳ್ಳಬೇಕು; ಈ ಕಾನೂನಿನ ಉಲ್ಲಂಘನೆಯಾದಾಗ ಶ್ರೀ ರಾಮಚಂದ್ರ, ಶೂದ್ರ ತಪಸ್ವಿ ಶಂಭೂಕನನ್ನು ಕೊಂದು ಧರ್ಮ ಎತ್ತಿ ಹಿಡಿದನು; ಪರಶುರಾಮನು ಬ್ರಾಹ್ಮಣನಲ್ಲದ ಕರ್ಣನು ಕಲಿತದ್ದು, ಸಮಯಕ್ಕೆ ಉಪಯೋಗ ಬರದಂತೆ ಶಪಿಸಿದನು. ದ್ರೋಣಾಚಾರ್ಯನು ಏಕಲವ್ಯನು ಮತ್ತೊಮ್ಮೆ ಬಿಲ್ಲು ಹಿಡಿಯುವುದು ಸಾಧ್ಯವಾಗದಂತೆ ಅವನ ಹೆಬ್ಬೆರಳನ್ನೇ ಕಡಿಸಿದನು. ಸಮಾಜದ ಶೇಕಡಾ 96 ಭಾಗ ಜನರು ಈ ಐದು ಸಾವಿರ ವರ್ಷಗಳ ವರೆಗೆ ಅಕ್ಷರ ಓದುವುದು, ಬರೆಯುವುದು, ಕೇಳುವುದು ಅಥವಾ ಕಲಿಯುವುದು

ಬಾಕಿ ವಸೂಲಿಯಾದೀತು ಎಚ್ಚರ

ಅಕ್ಷಮ್ಯ ಅಪರಾಧವಾಗಿತ್ತು. ಅಂದರೆ ಸಾವಿರ ವರ್ಷಗಳರೆಗೆ ಸಮಾಜದ ಶೇಕಡಾ 4 ಬ್ರಾಹ್ಮಣರಿಗೆ ಶಿಕ್ಷಣ ಸಂಸ್ಥೆಯ ಶೇಕಡಾ 100 ಸ್ಥಾನಗಳೂ ಮೀಸಲಾಗಿತ್ತು.

ಉದ್ಯೋಗಾವಕಾಶಗಳಿಗೆ ಬಂದರೆ, ಉನ್ನತ ಹುದ್ದೆಗಳು ಕೆಳ ಜಾತಿಯವರಿಗೆ ದೊರಕಿರಲಿಲ್ಲ ಎಂಬುದು ನಿರ್ವಿವಾದ. ಶಿಕ್ಷಣ ಪಡೆಯುವುದೆ ಅಕ್ಷಮ್ಯ ಅಪರಾಧ ವಿದ್ದಾಗ ಬ್ರಾಹ್ಮಣರಿಗೆ ಐದು ಸಾವಿರ ವರ್ಷಗಳವರೆಗೆ ಶೇಕಡಾ 100 ಶಿಕ್ಷಕ ವೃತ್ತಿ ಮೀಸಲಾತಿ. ಈ ಮೀಸಲಾತಿ ಎಲ್ಲಾ ಬುದ್ಧಿ ಪ್ರಧಾನವಾದ ಉದ್ಯೋಗ ಗಳಿಗೂ ಅನ್ವಯಿಸುತ್ತದೆ. ಸೈನ್ಯದಲ್ಲಿ ಕೂಡ ಸ್ಥಾನಗಳು ಮೇಲ್ಜಾತಿಯ ಕ್ಷತ್ರಿಯ ಮೊದಲಾದವರಿಗೆ ಮಾತ್ರ ಮೀಸಲು. ಹಾಗಾಗಿ ಈಗ ಮೀಸಲಾತಿ ಗಳಿಸಿರುವ ಕೆಳ ಜಾತಿಗಳಿಗೆ ಒಂದು ಸ್ಥಾನವೂ ಇರಲಿಲ್ಲ.

ಹಾಗೇಯೇ ರಾಜ್ಯಾಡಳಿತ–ಶಾಸನ ಸಭೆಗಳಲ್ಲೂ ಶಿಕ್ಷಣ ಇಲಾಖೆಯ ತತ್ವವೇ ಅನ್ವಯಿಸಿರುವುದರಿಂದ ಇಲ್ಲಿ ಕೂಡ ಕೆಳ ಜಾತಿಗಳಿಗೆ ಅವಕಾಶ ಸೊನ್ನೆ.

ಈಗ ನಷ್ಟದ ಸ್ವರೂಪ ಮತ್ತು ಮೊತ್ತದ ಅರಿವಿರುವುದರಿಂದ ಈ ಮೂರು ಕ್ಷೇತ್ರಗಳ ನಷ್ಟ ತುಂಬುವುದಾಗಲೀ ದೋಚಿದ್ದನ್ನು ಹಿಂದಿರುಗಿಸುವುದಾಗಲೀ ಮಾಡ ಬೇಕಾದರೆ ಕನಿಷ್ಠ ಇಷ್ಟು ಮಾಡಬೇಕಾಗುತ್ತದೆ :

ಶಿಕ್ಷಣ ರಂಗದಲ್ಲಿ ಶೇಕಡಾ 4 ಬ್ರಾಹ್ಮಣರು ತಮಗಿಂತ 24 ಪಟ್ಟುಜಾಸ್ತಿ ಇದ್ದ ಸಮಾಜದ ಶೇ. 96 ಇತರೆ ಜಾತಿಯವರಿಗೆ ಶಿಕ್ಷಣ ಕೊಡದೆ ಆದ ನಷ್ಟವನ್ನು ತುಂಬಲು–ಶೇಕಡಾ 96 ಇತರೆ ಜಾತಿಯವರಿಗೆ 5000 × 24 ಅಂದರೆ120000 ವರ್ಷಗಳವರೆಗೆ ಶೇಕಡಾ 100 ಮೀಸಲಾತಿ ಇರಬೇಕು. ಈಕಾಲದಲ್ಲಿ ಬ್ರಾಹ್ಮಣರು ಶಿಕ್ಷಣ ಕಲಿಯುವುದು ಅಪರಾಧವಾಗಬೇಕು. ಶ್ರೀರಾಮನ ಎಲ್ಲಾ ಅವತಾರಗಳಿಗೂ ಶಂಭೂಕ ತಪಸ್ಸಿಗೆ ಬಂದ ಗತಿಯನ್ನು ಒದಗಿಸಬೇಕು. ಪರುಶರಾಮನ ವಂಶಕ್ಕೆ ಕೊಡಲಿ ಪೆಟ್ಟು ಕೊಡಬೇಕು. ದ್ರೋಣಾಚಾರ್ಯರ ವಾರಸುದಾರರಿಗೆಲ್ಲಾ ಹೆಬ್ಬೆರ ಳನ್ನು ಕತ್ತರಿಸಬೇಕು.

ಉದ್ಯೋಗ ವಲಯದಲ್ಲಿ ಯಾವ ಯಾವ ಉದ್ಯೋಗಗಳು ಕೆಳಜಾತಿಯವರಿಗೆ ಇಲ್ಲಿಯವರಿಗೆ ದುರ್ಲಭವೋ ಅವೆಲ್ಲಾ ಉದ್ಯೋಗಗಳನ್ನು 5 ಸಾವಿರ ವರ್ಷಗಳವರೆಗೆ ಕೆಳ ಜಾತಿಯವರಿಗೆ ಶೇ 100 ಮೀಸಲಾತಿ ಮಾಡಬೇಕು. ಇಲ್ಲಿಯವರೆಗೆ ಮೇಲ್ಜಾ ತಿಯವರಿಗೆ ಯಾವ ಯಾವ ಉದ್ಯೋಗಾವಕಾಶವಿರಲಿಲ್ಲವೋ (ಉದಾ: ಮಲ ಹೊರುವ ಕೆಲಸ, ವ್ಯವಸಾಯ, ಚರ್ಮದ ಕೆಲಸ, ತೋಟಿ, ತಳವಾರ ಇತ್ಯಾದಿ); ಅಲ್ಲಿ 5 ಸಾವಿರ ವರ್ಷಗಳವರೆಗೆ ಶೇ. 100 ಮೀಸಲಾತಿ ಮಾಡಬೇಕು. ಮೊದಲ ನಮೂನೆ ಉದ್ಯೋಗಗಳನ್ನು ಮೇಲ್ಜಾತಿಯವರು ಮಾಡುವುದಾಗಲೀ, ಎರಡನೆಯ ನಮೂನೆಯದನ್ನು ಕೆಳಜಾತಿಯವರು ಮಾಡುವುದಾಗಲೀ ಶಿಕ್ಷಾರ್ಹವಾಗಬೇಕು.

ರಾಜ್ಯಾಡಳಿತದಲ್ಲಿ ರಾಷ್ಟ್ರಾಧ್ಯಕ್ಷ, ಉಪಾಧ್ಯಕ್ಷ, ರಾಜ್ಯಪಾಲ, ಮುಖ್ಯಕಾರ್ಯ ದರ್ಶಿ,ಇತರೆ ಕಾರ್ಯದರ್ಶಿಗಳು, ಸುಪ್ರೀಂ ಕೋರ್ಟು ಮತ್ತಿತರೆ ಅಧೀನ ಕೋರ್ಟುಗಳ

ನ್ಯಾಯಾಧೀಶರು, ಪ್ರಧಾನಿ, ಮುಖ್ಯಮಂತ್ರಿ, ಇತರೆ ಮಂತ್ರಿಗಳು, ಎಲ್ಲಾ ಲೋಕಸಭೆ, ರಾಜ್ಯಸಭೆ, ವಿಧಾಸಭೆ ಮತ್ತು ವಿಧಾನ ಪರಿಷತ್ತು ಸದಸ್ಯತ್ವ ಈ ಎಲ್ಲಾ ಸ್ಥಾನಗಳೂ 5 ಸಾವಿರ ವರ್ಷಗಳವರೆಗೆ ಶ್ರಮಜೀವಿ ವರ್ಗಗಳಾಗಿದ್ದ ಕೆಳ ಜಾತಿಗಳಿಗೆ ಶೇಕಡಾ 100 ಮೀಸಲಿಡಬೇಕು.

ಈ ಮೇಲ್ಕಂಡ ಬಾಕಿ ವಸೂಲಿ ಅಥವಾ ನಷ್ಟ ತುಂಬುವಿಕೆಯಲ್ಲಿ ಅಸಲಿನ ವಿಚಾರ ಮಾತ್ರ ಮಾಡಲಾಗಿದೆ. ಬಡ್ಡಿಯನ್ನಾಗಲೀ ಅಥವಾ ದಂಡವಾಗಲೀ ಸೇರಿಸಿಲ್ಲ. ಈಗ ಸ್ಪಷ್ಟವಾಗುತ್ತದೆ: ದಲಿತರಿಗೆ ಆದ ನಷ್ಟ ತುಂಬುವ ಕಾರ್ಯಕ್ರಮ ಏನೇನೂ ಸುರುವಾಗಿಲ್ಲ. ದಲಿತರೂ ಸಹ ಇದನ್ನು ಇನ್ನೂ ಕೇಳಿಲ್ಲ; ದಲಿತರು ಶಾಂತಿಯುತ ಸಮಾನತಾ ವ್ಯವಸ್ಥೆಯ ಸಮಾಜವನ್ನು ಬಯಸಿರುವುದರಿಂದ ತಾವು ಪಟ್ಟ ಎಳ್ಳಷ್ಟು ನಷ್ಟವನ್ನಾಗಲೀ ಅದರ ಬಡ್ಡಿಯನ್ನಾಗಲೀ ಕೇಳಿಲ್ಲ. 'ಅಹಿಂಸಾತ್ಮಕವಾಗಿ ಸಂವಿಧಾನ ಮೂಲಕ ಮೇಲೆ ತಿಳಿಸಿದ ಕ್ಷೇತ್ರಗಳಲ್ಲಿ ನಮ್ಮ ಮೇಲೆ ನಡೆಯುತ್ತಿರುವ ದರೋಡೆ ತಪ್ಪಿಸಿ' ಇದಿಷ್ಟೇ ದಲಿತರ ಸದ್ಯದ ಕೂಗು.

ಮೀಸಲಾತಿಯ ಮೂಲಕ ಯಾವುವೇ ಮೇಲ್ಜಾತಿಯ ಅವಕಾಶವನ್ನಾಗಲೀ ಅಥವಾ ಸವಲತ್ತನ್ನಾಗಲೀ ದಲಿತರಿಗೆ ಕೊಡುತ್ತಿಲ್ಲ. ದಲಿತರಿಗೆ ಅವರ ಜನಸಂಖ್ಯಾ ಆಧಾರದ ಮೇಲೆ ನ್ಯಾಯವಾಗಿ ಇನ್ನು ಮುಂದೆ ಸಲ್ಲಬೇಕಾದ ಅವಕಾಶ ಮತ್ತು ಸವಲತ್ತುಗಳನ್ನು ಮೇಲ್ಜಾತಿಯವರು ದರೋಡೆ ಮಾಡದಂತೆ ಅಹಿಂಸಾತ್ಮಕವಾಗಿ ಸಂವಿದಾನದ ಮೂಲಕ ತಡೆಯುವುದೇ ಮೀಸಲಾತಿ. ಮೇಲ್ಜಾತಿಯವರು ಮೀಸಲಾತಿಯು ರದ್ದಾಗಲಿ ಎಂದು ಕೇಳುತ್ತಿರುವುದರ ಅರ್ಥ ಅವರು ಸಾವಿರಾರು ವರ್ಷಗಳು ನಡೆಸಿರುವ ದರೋಡೆಗೆ ಪುನಃ ಅವಕಾಶ.

ಮೀಸಲಾತಿಯ ಮೂಲಕ ದಲಿತರ ಪ್ರಗತಿ ಎಷ್ಟು? ಮೀಸಲಾತಿಯ ಮೂಲಕ ದಲಿತರ ಪ್ರಗತಿ ಮೀಸಲಾತಿಯನ್ನು ರದ್ದು ಮಾಡಬಹುದಾದಷ್ಟು ಮುಂದುವರಿದಿದೆಯೆಂಬುದು ಶುದ್ಧ ಸುಳ್ಳು. ಕೆಲವು ಅಂಕಿಅಂಶಗಳನ್ನು ನೋಡಿ. ಬೆಂಗಳೂರು ಮೆಡಿಕಲ್ ಕಾಲೇಜಲ್ಲಿ 1963 ರಿಂದ 1973 ರವರೆಗೆ ಒಟ್ಟು ಪ್ರವೇಶ 1995 ಜನರಲ್ಲಿ ಪರಿಶಿಷ್ಟ ಜಾತಿ 148, ಪರಿಶಿಷ್ಟ ಬುಡಕಟ್ಟು 12 ಮಾತ್ರ. ಮತ್ತು ಬೆಂಗಳೂರು ಡೆಂಟಲ್ ಕಾಲೇಜಲ್ಲಿ 1962 ರಿಂದ 1973ರವರೆಗೆ ಒಟ್ಟು ಸೇರಿದ ಸಂಖೆ, 320ರಲ್ಲಿ ಪರಿಶಿಷ್ಟ ಜಾತಿ 3ಜನ, ಪರಿಶಿಷ್ಟ ವರ್ಗ 1 ಮಾತ್ರ !

ಮೀಸಲಾತಿಯ ಮೂಲಕ ದಲಿತ ಜಾತಿಗಳಿಗೆ ಆಗುತ್ತಿರುವ ದರೋಡೆ ತಪ್ಪಿಸಿ ಅವರ ಸವಲತ್ತು ಮತ್ತು ಅವಕಾಶಗಳನ್ನು ಅವರಿಗೇ ಇನ್ನು ಮುಂದಾದರೂ ಕೊಡುವುದರಿಂದ, ಮೇಲ್ಜಾತಿಯವರ ಸರಿಸಮಾನ ಶಿಕ್ಷಣ, ತರಬೇತಿ ಅವಕಾಶ, ಸವಲತ್ತು, ಸಂಪತ್ತು ಮತ್ತು ಉದ್ಯೋಗಗಳನ್ನು ಕೊಡುವುದರ ಮೂಲಕ ಜಾತಿ ಜಾತಿ ನಡುವೆ ಅವುಗಳಲ್ಲಿ ಮೇಲು ಕೀಳು ಭಾವನೆ ಮರೆಯಾಗಿ ಜಾತಿ ಜಾತಿ ನಡುವೆ ಸಮಾನತೆ ಮೂಡುವುದು. ಇದೇ ನಮ್ಮ ರಾಜ್ಯಾಂಗದಲ್ಲಿ ತಿಳಿದಿರುವ ಸಮಾನ

ತೆಯ ಅರ್ಥ. (ಎಲ್.ಜಿ.ಹಾವನೂರ್, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ವರದಿ 1975, ಜಾತಿ ಜಾತಿ ನಡುವೆ ಒಡನಾಟವಾಗಿ ಸಮಾನತೆ ನೆಲಸುವುದರಿಂದ ಜಾತಿ ಬೇಧಗಳೂ ಮರೆಯಾಗಿ ಜಾತಿ ವಿನಾಶಕ್ಕೆ ನಾಂದಿ.

1-1-75ರಂದು ಕರ್ನಾಟಕ ಸರ್ಕಾರದ ನೌಕರಿಯಲ್ಲಿರುವ ಸ್ಥಿತಿ

ನಮೂನೆ	ಒಟ್ಟು ಹುದ್ದೆಗಳು	ಹರಿಜನರು	ಶೇಕಡಾ	ಗಿರಿಜನ	ಶೇಕಡಾ
ಮೊದಲನೆಯ ದರ್ಜೆ	2892	135	4.70	13	0.40
ಎರಡನೆಯ ದರ್ಜೆ	8598	395	4.60	42	0.50
ಮೂರನೆಯ ದರ್ಜೆ	2,29,702	17,502	7.60	1863	0.80
ನಾಲ್ಕನೆಯ ದರ್ಜೆ	56,587	9727	17.20	1334	2.40

1-1-78ರಲ್ಲಿ ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಹರಿಜನ-ಗಿರಿಜನರು

ನಮೂನೆ	ಒಟ್ಟು ಹುದ್ದೆಗಳು	ಹರಿಜನರು	ಶೇಕಡಾ	ಗಿರಿಜನರು	ಶೇಕಡಾ
ಮೊದಲನೆ ದರ್ಜೆ	31,635	1420	4.49	265	0.84
ಎರಡನೆಯ ದರ್ಜೆ	39,792	2599	6.33	296	0.74
ಮೂರನೆಯ ದರ್ಜೆ	1,079,018	123,686	11.46	21,712	2.01
ನಾಲ್ಕನೆಯ ದರ್ಜೆ	1,109,450	211,561	19.07	51,293	4.62

1-1-78ರಲ್ಲಿ ರೈಲ್ವೆ ಸರ್ವೀಸ್ ಹುದ್ದೆಗಳಲ್ಲಿ ಹರಿಜನ-ಗಿರಿಜನರು

ನಮೂನೆ	ಶೇಕಡಾವಾರು ಹರಿಜನರು ಖಾಯಂ|ಹಂಗಾಮಿ	ಶೇಕಡಾವಾರು ಗಿರಿಜನರು ಖಾಯಂ/ಹಂಗಾಮಿ
ಮೊದಲನೆ ದರ್ಜೆ	6.7|4.7	0.9|0.9
ಎರಡನೆಯ ದರ್ಜೆ	11.1|10.4	1.6|1.7
ಮೂರನೆಯ ದರ್ಜೆ	10.6|13.4	1.7|4.0
ನಾಲ್ಕನೆಯ ದರ್ಜೆ	17.4|20.1	4.7|7.9

ಇಷ್ಟರ ಮೇಲೆ ಸಮಾಜದ ಯಾವುದೇ ವರ್ಗ, ಅದರಲ್ಲೂ ಮೇಲ್ಜಾತಿಯ ಪಟ್ಟಭದ್ರ ಹಿತಾಸಕ್ತಿಗಳು, ಮೀಸಲಾತಿ ರದ್ದು ಮಾಡಿಸಿ ದಲಿತರ ದರೋಡೆಯನ್ನು ಬಯಸಿದರೆ ದಲಿತರನ್ನು ಬಾಕಿವಸೂಲಿಗೆ ಆಹ್ವಾನಿಸಿದಂತೆಯೇ ಸರಿ, ಎಚ್ಚರವಿರಲಿ.

ದೇ ಜ ಗೌ

ಅಂಬೇಡ್ಕರ್‌ರು ಗಾಂಧಿಯವರನ್ನು ಭೆಟ್ಟಿ ಮಾಡಿದಾಗ "ಗಾಂಧೀಜಿ ನನಗೆ ತಾಯಿ ನಾಡೆಂಬುದೇ ಇಲ್ಲ ನನ್ನ ಜನಕ್ಕೆ ತಾಯಿ ನಾಡು ಬೇಡವೇ" ಎಂದು ಕೇಳುತ್ತಾರೆ. ಸಾಹಿತ್ಯದ ವಿದ್ಯಾರ್ಥಿಯಾಗಿ ನಾನು ಬಲ್ಲೆ—ಆ ಮಾತಿಗೆ ಎಷ್ಟು ಧ್ವನಿ ಇದೆ ಎಂಬುದಾಗಿ

ಗುಜರಾತ್‌ನಲ್ಲಿ ನಡೆದಿರುತಕ್ಕಂಥ ಮೀಸಲಾತಿ ವಿರೋಧ ಚಳುವಳಿಯ ಹಿನ್ನೆಲೆಯಲ್ಲಿ ಈ ದಿವಸ ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಗುಜರಾತಿನ ಈ ಘಟನೆಗಳುಎಲ್ಲರಿಗೂ ಎಚ್ಚರಿಕೆಯನ್ನು ನೀಡುತ್ತಿವೆ. ಈದಿವಸ ದಲಿತ ಸಂಘರ್ಷ ಸಮಿತಿ ಈ ವಿಚಾರ ಸಂಕಿರಣವನ್ನು ಏರ್ಪಡಿಸಿ ಸಕಾಲದಲ್ಲಿ ಸೂಕ್ತವಾದ ಕೆಲಸವನ್ನು ಕೈಗೊಂಡಿದೆ. ಆದರೆ ಇಂಥ ವಿಚಾರ ಸಂಕಿರಣದಲ್ಲಿ ಭಾಗವಹಿಸುವುದಕ್ಕೆ ನಾನು ಎಷ್ಟರ ಮಟ್ಟಿಗೆ ಅರ್ಹ ಎಂಬುದನ್ನು ನಾನು ಅನೇಕ ಸಾರಿ ಯೋಚನೆ ಮಾಡಿಕೊಂಡಿದ್ದೇನೆ. ಹರಿಜನರಿಗೆ ನನ್ನ ಜೀವಮಾನದಲ್ಲಿ ಒಂದಿಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದ ಪಕ್ಷದಲ್ಲಿ, ಇಲ್ಲಿ ನಿಂತು ಮಾತಾಡುವ ಅರ್ಹತೆ ಬರ್‍ತಾ ಇತ್ತು. ತಾನೆ ಗೋವಿಂದ ರಾವ್ ದೇಶಪಾಂಡೆ ಮಾತಾಡಿದರು. ಸರ್ವೋದಯ ಕಾರ್ಯಕರ್ತರು ಇತ್ತೀಚೆಗೆ ನಡೆದಂಥ ಅಲ್ಲಿಯ ದಾರುಣವಾದ ಸನ್ನಿವೇಶದಲ್ಲಿ ಮೀಸಲಾತಿಯ ಪರ ಭಾಗವಹಿಸಿದ್ದರು. ಅಂದ ಮೇಲೆ ಅವರು ಇಲ್ಲಿ ಭಾಗವಹಿಸುವುದಕ್ಕೆ ಎಲ್ಲ ಅರ್ಹತೆಯನ್ನು ಕೂಡ ಪಡೆದಿದ್ದಾರೆ. ಈ ರಾಜಕೀಯದ ಕುತಂತ್ರದ ಪರಿಣಾಮವಾಗಿ ಇಂಥ ಒಂದು ಅವಕಾಶ ಸಿಕ್ಕಿದರೆ ಸಾಕು ಏನಾದರೂ ಮಾತಾಡೋಣ, ಹರಿಜನರು ಕೂಡ ನನ್ನಲ್ಲಿ ಸಹಾನುಭೂತಿಯನ್ನು ಕಾಣುವಂತಾಗಲಿ ಎಂದು ಭಾವಿಸುವವರು ನಮ್ಮಲ್ಲಿ ಅನೇಕರಿದ್ದೇವೆ. ಆದರೆ ಹರಿಜನರೇ ಆಗಲಿ ಬಡವರೇ ಆಗಲಿ ಅವರ ಕಣ್ಣೀರನ್ನು ಒರಸತಕ್ಕಂಥ, ಕೊಟ್ಟಿಗೆಯಲ್ಲಿ ನರಳುವಾಗ ಒಂದು ತುತ್ತು ಅನ್ನವನ್ನ ಕೊಡತ್ತಕ್ಕಂಥ, ಚಿಂದಿ ಉಡುವವನಿಗೆ ಒಂದು ಮೊಳ ಬಟ್ಟೆಯನ್ನು ಕೊಡತಕ್ಕಂಥ ಅನುಕಂಪೆಯನ್ನು ಯಾರೂ ತೋರಿಸುವ ಹಾಗೆ ಕಾಣುವುದಿಲ್ಲ. ನಾನಂತೂ ಈ ಕೆಲಸವನ್ನು ಮಾಡಿಲ್ಲ. ಕುಲಪತಿಯಾಗಿದ್ದಾಗ ನಾಲ್ಕಾರು ನೇಮಕಾತಿಗಳನ್ನು ಮಾಡಿರಬಹುದು ಅಷ್ಟೆ. ಆದರೆ ಅದು ಕಾನೂನು ಇದ್ದುದ್ದರಿಂದ ಮಾಡಬೇಕಾಯಿತೇ ಹೊರತಾಗಿ ಇಲ್ಲದಿದ್ರೆ ಮಾಡ್ತಾ ಇದ್ದೆನೋ ಇಲ್ವೋ ನನಗೆ ಗೊತ್ತಿಲ್ಲ. ಅಷ್ಟೆ ಅಲ್ಲ ನಮ್ಮ ಬಂಧುಗಳು ಯಾರಾದರೂ ಒಂದು ಅಧಿಕಾರಕ್ಕೆ ಬರುವ ಪಕ್ಷದಲ್ಲಿ ಅಷ್ಟೇ ಅರ್ಹತೆ ಇರತಕ್ಕಂಥ ಮತ್ತೊಬ್ಬ ಹರಿಜನ ಅದಕ್ಕೆ ಬಂದಿದ್ದಲ್ಲಿ ಆ ಸಂದರ್ಭದಲ್ಲಿ ಹರಿಜನನಿಗೆ ಕೆಲಸವನ್ನು ಕೊಡತ್ತೇವೆಯೇ? ಇದು ನಾವು ಯೋಚನೆ ಮಾಡಬೇಕಾದಂಥ ವಿಷಯ. ಯಾವುದಾದರೂ ಒಂದುpromotion ಇದೆ, ಅಲ್ಲಿ ಹರಿಜನ ಅಭ್ಯರ್ಥಿ

ಇದ್ದಾನೆ, ಹಾಗೂ ಅಲ್ಲೊಬ್ಬ ಸವರ್ಣೀಯ ಇದ್ದಾನೆ. ಇಬ್ಬರಿಗೂ ಸಮಾನವಾದಂಥ ಅರ್ಹತೆ ಇದೆ. ಅಂಥ ಸಂದರ್ಭದಲ್ಲಿ ಹರಿಜನ ಅಭ್ಯರ್ಥಿಗೆ ನಾವು promotion ಕೊಡ್ತೇವೆಯೇ? ಅಂದರೆ ಒಂದು ಪ್ರಾಮಾಣಿಕವಾದ ಭಾವನೆ ಏನೆಂದರೆ ಎರಡು ಸಾವಿರ ಮೂರು ಸಾವಿರ ವರ್ಷಗಳಿಂದ ಅನೇಕ ಕಷ್ಟ ಪರಂಪರೆಗಳನ್ನು ಅನುಭವಿಸಿರತಕ್ಕಂಥ ಜನ ಮೇಲೆ ಬರಬೇಕೆ ಬೇಡವೆ? ಈ ದೇಶ ನಮ್ಮದು ಅಂತ ಅವರು ತಿಳಿದುಕೊಳ್ಳಬೇಡವೆ?

ದಲಿತರಿಗೆ ಪ್ರತ್ಯೇಕ ಚುನಾವಣಾ ವ್ಯವಸ್ಥೆಗೆ ಸಂಬಂಧಪಟ್ಟಂತೆ; ಆಗ ಎರವಾಡದ ಜೈಲಿನಲ್ಲಿದ್ದ ಗಾಂಧಿಯವರು ಆಮರಣಾಂತ ಉಪವಾಸವನ್ನು ಕೈಗೊಳ್ಳುತ್ತೇನೆಂದು ನಿರ್ಧರಿಸುತ್ತಾರೆ. ಆಗ ಬೊಂಬಾಯಿಯ ಸಭೆಯ ನಂತರದಲ್ಲಿ ಅನೇಕ ನಾಯಕರುಗಳು ಡಾ. ಅಂಬೇಡ್ಕರ್‌ರವರನ್ನು ಭೇಟಿ ಮಾಡಿ—ನೀವು ಮಹಾತ್ಮ ಗಾಂಧಿಯವರ ಪ್ರಾಣವನ್ನು ಉಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಅಂಬೇಡ್ಕರ್ "ನಾನು ಉಳಿಸುವುದೇನಿದೆ? ನನ್ನ ಜನ ಉಳಿಯಬೇಕೊ ಬೇಡವೊ?" ಎಂಬುದಾಗಿ ಪ್ರಶ್ನಿಸುತ್ತಾರೆ. ಇದೇ ಸಮಯದಲ್ಲಿ ಅಂಬೇಡ್ಕರ್‌ರು ಗಾಂಧಿಯವರನ್ನು ಭೆಟ್ಟಿ ಮಾಡಿದಾಗ ಹೇಳುವ ಮಾತು ಮುಖ್ಯವಾದದ್ದು : 'ಗಾಂಧಿಜಿ, ನನಗೆ ತಾಯಿನಾಡೆಂಬುದೇ ಇಲ್ಲ ನನ್ನ ಜನಕ್ಕೆ ತಾಯಿನಾಡು ಬೇಡವೇ' ಎಂದು ಕೇಳುತ್ತಾರೆ. ಸಾಹಿತ್ಯದ ವಿದ್ಯಾರ್ಥಿಯಾಗಿ ನಾನು ಬಲ್ಲೆ ಆ ಮಾತಿಗೆ ಧ್ವನಿ ಇದೆ ಎಂಬುದಾಗಿ. ಆ ಹೊತ್ತು ಅಂಬೇಡ್ಕರ್ ಈ ಸಮಸ್ಯೆಯ ಬಗ್ಗೆ ಔದರ್ಯವನ್ನು ತೋರಿಸದಿದ್ದ ಪಕ್ಷದಲ್ಲಿ, ಪ್ರತ್ಯೇಕ ಚುನವಣಾ ಕ್ಷೇತ್ರಗಳು, ಬೇಕೇ ಬೇಕು ಎಂಬುದಾಗಿ ಹಠಮಾಡಿದ್ದ ಪಕ್ಷದಲ್ಲಿ ಈ ಹೊತ್ತು ದೇಶದ ಪರಿಸ್ಥಿತಿ ಏನಾಗುತ್ತಿತ್ತು ಅಂತ ಹೇಳುವುದಕ್ಕೆ ಆಗುವುದಿಲ್ಲ. ಅಂದೂ ನಿಜಕ್ಕೂ ಅಂಬೇಡ್ಕರ್ ತಮ್ಮ ಔದಾರ್ಯ ತೋರಿಸಿದ್ದರು. ಪ್ರತ್ಯೇಕ ಚುನಾವಣಾ ಕ್ಷೇತ್ರದ ಬದಲಾಗಿ ಮೀಸಲಾತಿಯು ಒಂದು ಏರ್ಪಾಡು ಆಯ್ತು. ಈ ಮೀಸಲಾತಿ ಏರ್ಪಾಡು, ಅದೂ ಎಷ್ಟು ದಿನದವರೆಗೆ ಇರಬೇಕು? ಎಲ್ಲಿಯ ತನಕ ಅಸ್ಪೃಶ್ಯತೆ ಇರುತ್ತದೆ, ಎಲ್ಲಿಯ ತನಕ ಈ ದೇಶದಲ್ಲಿ ಜಾತಿಯತೇ ಇರುತ್ತದೆ, ಅಲ್ಲಿಯವರೆಗೆ ಮೀಸಲಾತಿ ಸೌಲಭ್ಯ ಇರುಬೇಕೂ ಅಂತ ಕಾಣಿಸುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಇತರರ ಸಮಾನಕ್ಕೆ ಈ ಜನಾಂಗ ಬಂದಾಗ, ಇತರರಿಗೆ ಹೆಗಲೆಣೆಯಾಗಿ ನಿಲ್ಲುವ ಶಕ್ತಿ ಅವರಿಗೆ ಬಂದಾಗ ಒಂದು ಪಕ್ಷ ಮೀಸಲಾತಿ ಇಲ್ಲದಿದ್ದ ಪಕ್ಷದಲ್ಲಿ ಅವರು (ದಲಿತ ಜನಾಂದವರು) ಮೇಲಕ್ಕೆ ·ಬರುವುದಕ್ಕೆ ಕಷ್ಟವೇ ಇಲ್ಲ. ಅಂದ ಮೇಲೆ ಸವರ್ಣೀಯರಾಗಿರತಕ್ಕಂತ ನಾವು ಕೂಡ ಯೋಚನೆ ಮಾಡಬೇಕಾಗಿ ಬರುತ್ತದೆ. ನಿಜವಾಗಿಯೂ ನಮಗೆ ಮಾನವೀಯತೆ ಅನುಕಂಪ ಇದ್ದ ಪಕ್ಷದಲ್ಲಿ ಇವರೂ ನಮ್ಮಂತೆ ಇರಬೇಕು ಅನ್ನುವ ಪಕ್ಷದಲ್ಲಿ ಆಗ ಮೀಸಲಾತಿ ಅನಿವಾರ್ಯವಾಗುತ್ತದೆ ಎಂದು ತಿಳಿಯಬೇಕಾಗುತ್ತದೆ. ಈ ದೃಷ್ಟಿಯಿಂದ ನಮ್ಮ ರಾಜಕೀಯದ ಜನರಾಗಲಿ, ನಮ್ಮ ನಾಯಕರಾಗಲಿ,

ದೊಡ್ಡ ದೊಡ್ಡ ವೇದಿಕೆಯಮೇಲೆ ನಿಂತು ಕೊಂಡು ಗಂಟಲು ಹರಿಯೋ ಅಂಗೆ ಮಾತಾಡೋ ಜನರೇ ಆಗಲಿ ಎಷ್ಟರ ಮಟ್ಟಿಗೆ ಹರಿಜನರಿಗೆ ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ? ನಮ್ಮಲ್ಲಿ ಬಹು ಜನ ಶ್ರೀಮಂತರಿದ್ದಾರೆ. ಶ್ರೀಮಂತರಲ್ಲಿ ಯಾರಾದರೂ ಒಬ್ಬ ಅಥವಾ ಇಬ್ಬರು ಹರಿಜನ ಮಕ್ಕಳನ್ನು ತಮ್ಮ ಮನೆಯಲ್ಲಿರಿಸಿಕೊಂಡು ಅವರಿಗೆ ಅನ್ನ ಹಾಕಿ, ಬಟ್ಟೆಕೊಟ್ಟು ವಿದ್ಯಾಭ್ಯಾಸವನ್ನು ಮಾಡಿಸಿದ್ದಾರೆಯೆ? ನಾನು ಕೇಳಿದ್ದೇನೆ: ಯಶೋದರ ದಾಸಪ್ಪನವರು ಮಾತ್ರ ಇಂಥ ಕೆಲಸ ಮಾಡಿದ್ದಾರೆ ಅಂತ. ಒಬ್ಬ ಹರಿಜನ ಹೆಣ್ಣು ಮಗುವನ್ನು ಸಾಕಿಕೊಂಡು ಮದುವೆ ಮಾಡಿ ಅವರಿಗೆ ತಮ್ಮ ಆಸ್ತಿಯಲ್ಲಿ ಒಂದು ಭಾಗವನ್ನು ಕೊಟ್ಟರು ಅಂತ ಹೇಳ್ತಾರೆ. ಇದು ನಿಜವಾದ ಪಕ್ಷದಲ್ಲಿ, ಅನುಕರಣೀಯವಾಗಿರತಕ್ಕ ವಿಷಯ. ದೇಶದ ಎಲ್ಲರು ಈ ಕೆಲಸವನ್ನು ಮಾಡುವ ಪಕ್ಷಕ್ಕೆ ಈ ಅಸ್ಪೃಶ್ಯತೆ ಸಮಸ್ಯೆಯು ಕೇವಲ ಒಂದು ವರ್ಷ ಎರಡು ವರ್ಷಗಳಲ್ಲಿ ನಿವಾರಣೆಯಾಗುತ್ತದೆ. ಇಲ್ಲದಿದ್ದಲ್ಲಿ ಎಷ್ಟು ದಿನವಾದರೂ ಹೀಗೆ ಇರುತ್ತದೆ. ಇದು ತಕ್ಷಣಕ್ಕೆ ಹೋಗತಕ್ಕಂತಹ ವಿಷಯವಲ್ಲ. ಅದಕ್ಕೋಸ್ಕರವಾಗಿ ನಾನು ಮೊದಲು ಹೇಳಿದ್ದು; ಗುಜರಾತಿನ ಇವತ್ತಿನ ಘಟನೆ ಬೇಕಾಗಿತ್ತು ಅಂತ-ನನಗನಿಸುತ್ತದೆ. ಅಂತಂದರೆ ಸವರ್ಣೀಯರಿಗೆ, ಮತ್ತು ಅಸ್ಪೃಶ್ಯರಿಗೆಲ್ಲ ಇವುಗಳೆಲ್ಲ ಎಚ್ಚರಿಕೆಯ ವಿವರಗಳಾಗಿವೆ. ಸವರ್ಣೀಯರಿಗೆ ಹೇಳುತ್ತಿದ್ದೇನೆ—ಎಲ್ಲಿಯ ತನಕ ಹರಿಜನರನ್ನು ನಿಮ್ಮ ಸಮಕ್ಕೆ ತರುವುದಿಲ್ಲ; ಎಲ್ಲಿಯ ತನಕ ಅಸ್ಪೃಶ್ಯತೆಯನ್ನು ಬೆಳೆಸಿಕೊಂಡು ಹೋಗುತ್ತೀರಿ; ಅಲ್ಲಿಯ ತನಕ ಈ ದೇಶಕ್ಕೆ ಕ್ಷೇಮವಿಲ್ಲ. ದೇಶದಲ್ಲಿ ಶಾಂತಿ ಇರುವುದಿಲ್ಲ. ನನಗನ್ನಿಸುತ್ತದೆ. ಇನ್ನು ಹತ್ತು ವರ್ಷಗಳಲ್ಲಿ ಸವರ್ಣೀಯರು ಎಚ್ಚೆತ್ತುಕೊಂಡು ಹರಿಜನರು ಮೇಲೆ ಬರುವಂಥ ಅವಕಾಶವನ್ನ ಕಲ್ಪಿಸದಿದ್ದ ಪಕ್ಷದಲ್ಲಿ ಈ ದೇಶದಲ್ಲಿ ಅಂತಃಕಲಹ ಖಂಡಿತ ಆಗಿಯೇ ಆಗುತ್ತದೆ. ಆದುದರಿಂದ ಇದನ್ನು ತಪ್ಪಿಸಬೇಕೆಂದರೆ ನಾವೆಲ್ಲರು ಎಚ್ಚೆತ್ತುಕೊಳ್ಳಬೇಕಾಗುತ್ತದೆ. ಅದರಲ್ಲೂ ನಾಯಕ ಶಿರೋಮಣಿಗಳಾಗಿರತಕ್ಕಂಥವರು, ಪ್ರಾಧ್ಯಾಪಕರಾಗಿರತಕ್ಕಂಥವರು ಅಧಿಕಾರದಲ್ಲಿರತಕ್ಕಂಥವರು- ಇವರೆಲ್ಲರೂ ಎಚ್ಚೆತ್ತುಕೊಂಡು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನ ಪಟ್ಟ ಪಕ್ಷದಲ್ಲಿ ಯಾವ ತೊಂದರೆ ಇಲ್ಲ ಅಂತ ನಾನು ಭಾವಿಸಿದ್ದೇನೆ. ಅಲ್ಲದೆ ಮತ್ತೊಂದು ಮಾತು ಈ ದೇಶದಲ್ಲಿ ಜಾತಿಯತೆ ಇದ್ದ ಪಕ್ಷದಲ್ಲಿ ಅಥವಾ ಅಸ್ಪೃಶ್ಯತೆ ಇದ್ದ ಪಕ್ಷದಲ್ಲಿ, ಈ ದೇಶ ಖಂಡಿತವಾಗಿಯೂ ಮುಂದವರಿಯುವುದಿಲ್ಲ ಎಂಬ ಸಂಕಟದಿಂದ ಜಾತಿಯತೆಯನ್ನು ನಾವೆಲ್ಲರೂ ಸೇರಿ ನಿರ್ಮೂಲನ ಮಾಡಬೇಕು.

ಇದು ಸುಲಭವಾದ ಕೆಲಸವಲ್ಲ. ವೇದಗಳ ಕಾಲದಿಂದಲೂ ರಕ್ತ ಶುದ್ಧಿಯ ಆಧಾರದ ಮೇಲೆ ನಮ್ಮಲ್ಲಿ ಒಡೆದು ಆಳುವ ನೀತಿ ಬಂದಿದೆ. ಹಾಗೆ ನೋಡಿದರೆ ಯಾವ ಜಾತಿಯಲ್ಲಿ ಶುದ್ಧತೆ ಇದೆ? ಪ್ರಪಂಚದಲ್ಲಿ ಯಾವ ರಕ್ತವೂ ಕೂಡ ಶುದ್ಧವಾಗಿಲ್ಲ. ನಮ್ಮ ಇಂಡಿಯಾ ದೇಶದಲ್ಲೂ ಒಬ್ಬ ಮಾಧ್ವನಾಗಲಿ ಅದ್ವೈತಿಯಾಗಲಿ

ಅಥವಾ ವಿಶಿಷ್ಟಾದ್ವೈತಿಯಾಗಲಿ, ಲಿಂಗಾಯತರಾಗಲಿ, ಜೈನರಾಗಲಿ, ಬೌದ್ಧರಾಗಲಿ, ಯಾರೇ ಆಗಲಿ ಯಾರ ರಕ್ತವು ಕೂಡ ಶುದ್ಧವಾಗಿಲ್ಲ, ಮಾಧ್ವರಲ್ಲಿ ಎಲ್ಲಾ ಜಾತಿಯವರೂ ಸೇರಿಕೊಂಡಿರುವುದುಂಟು. ರಾಮಾನುಜಾಚಾರ್ಯರು ಅನೇಕ ಜಾತಿಯವರನ್ನು ತಮ್ಮ ಸಮಾಜಕ್ಕೆ ಸೇರಿಸಿಕೊಂಡಿರುವುದುಂಟು. ಬಸವಣ್ಣನವರದು ಗೊತ್ತೇ ಇದೆ. ಹೀಗಿರುವಾಗ ರಕ್ತ ಶುದ್ಧಿ ಎಲ್ಲಿಂದ ಬಂತು? ಆದ್ದರಿಂದ ಈ ಭ್ರಮೆಯೆಲ್ಲೆ ನಮ್ಮಿಂದ ತೊಲಗಬೇಕಾಗಿದೆ.

ಶೋಷಣೆ ವಿಷಯ ತೆಗೆದುಕೊಂಡರೆ ಪ್ರತಿಯೊಂದು ಕೋಮಿನಲ್ಲೂ, ಆಯಾಯ ಜಾತಿಯ ಮುಖಂಡರೇ ಆಯಾಯ ಜಾತಿಯ ಬಡವರನ್ನು ಶೋಷಣೆ ಮಾಡುತ್ತಿದ್ದಾರೆ. ಇದೆಲ್ಲಾ ಹೋಗಲಾಡಿಸಬೇಕಾದರೆ ನಮ್ಮ ಜನತೆಯಲ್ಲಿ ಎಲ್ಲರೂ ವಿದ್ಯಾವಂತರಾಗಬೇಕಾಗಿ ಬರುತ್ತೆ. ಯಾರು ಯಾರು ಮೌಢ್ಯದ ಅಂಧಕಾರದಲ್ಲಿ ತೊಳಲಾಡುತ್ತಿದ್ದಾರೆ, ಯಾರು ಯಾರು ಹಿಂದುಳಿದಿದ್ದಾರೆ ಅವರೆಲ್ಲರೂ ಸೇರಿಕೊಂಡು ಇಡೀ ದೇಶವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಆದರೆ ಇವತೆಲ್ಲಾ ಒಂದುಗೂಡುವುದು ಬಹಳ ಕಷ್ಟ. ಈಗ ಉದಾಹರಣೆಗೆ ಹರಿಜನರಲ್ಲೇ ಎಡಗೈನವರಿಗೂ, ಬಲಗೈನವರಿಗೂ ಒಂದು ರೀತಿಯ ಸ್ಪರ್ಧೆಯಿದೆ. ಈ ಎಡಗೈ ಬೇರೆ ಬಲಗೈ ಬೇರೆ ಇರುವಂಥ ಸಂದರ್ಭದಲ್ಲಿ ಈ ಸವರ್ಣೀಯರು ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿ ಕಟ್ಟುತ್ತಾರೆ. ಇದು ಇತಿಹಾಸದ ಕಾಲದಿಂದಲೂ ನಡೆದು ಬಂದಿರತಕ್ಕಂಥ ವಿಷಯ. ಆದ್ದರಿಂದ ಎಡಗೈಗೆ ಬೇರೆ, ಬಲಗೈಗೆ ಬೇರೆ ಸಂಘಟನೆ ಇದ್ದ ಪಕ್ಷದಲ್ಲಿ ನೀವು ಒಂದಾಗದೆ ಇದ್ದ ಪಕ್ಷದಲ್ಲಿ, ಅದನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ.

ನಮ್ಮಲ್ಲಿ ಬೇಕಾದಷ್ಟು ಮಠಗಳಿವೆ. ಈ ಮಠಗಳಲ್ಲಿರುವವರು ಏನು ಮಾಡ್ತಾರೆ? ಹರಿಜನರ ಕೇರಿಗೆ ಹೋಗ್ತಾರೆ. ಹರಿಜನರ ಜೊತೆ ಮಾತಾಡ್ತಾರೆ. ಭಾಷಣ ಮಾಡಿ ಬರ್‍ತಾರೆ. ಆದರೆ ಈ ಸ್ವಾಮಿಗಳಾಗಿರತಕ್ಕಂಥವರು ಹರಿಜನರನ್ನು ತೆಗೆದುಕೊಂಡು ತಮ್ಮ ಮಠಕ್ಕೆ ಶಿಷ್ಯರನ್ನಾಗಿ ಅಥವಾ ಮುಂದಿನ ಸ್ವಾಮಿಯನ್ನು ಮಾಡತಕ್ಕಂಥವರು ಎಷ್ಟು ಜನ ಇದ್ದಾರೆ? ಇಲ್ಲವೆ ಇಲ್ಲ. ಭಾಷಣ ಮಾಡುವುದರ ಬದಲಾಗಿ ಒಬ್ಬ ಹರಿಜನನ್ನು ತೆಗೆದುಕೊಂಡು ಅವನಿಗೆ ವೇದ ಉಪನಿಷತ್ ಏನು ಬೇಕೊ ಅದನ್ನು ಕಲಿಸಿ ಅಲ್ಲಿ ಅವನನ್ನು ಸ್ವಾಮಿಯನ್ನಾಗಿ ಮಾಡಿದ ಪಕ್ಷದಲ್ಲಿ ಪ್ರಾಯಶಃ ಎಷ್ಟೋ ಸಮಸ್ಯೆಗಳು ಬಗೆ ಹರಿಯುತ್ತವೆ ಅಂತ ಕಾಣುತ್ತದೆ.

ಆದ್ದರಿಂದ ಈ ಹೊತ್ತು ಈ ಸಮಸ್ಯೆ ಬಗೆಹರಿಯಬೇಕಾದರೆ ಮಾಡಬೇಕಾದ ಕೆಲಸ ಇಷ್ಟೇನೆ : ಎಲ್ಲರಿಗೂ ಶಿಕ್ಷಣವನ್ನು ಕೊಡಬೇಕು. ಬಡವರು, ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರು, ಹರಿಜನರು ಎಲ್ಲರಿಗೂ ಶಿಕ್ಷಣವನ್ನು ಖಡ್ಡಾಯವಾಗಿ ಕೊಡಬೇಕು. ಇಷ್ಟೇ ಅಲ್ಲ, ಎಲ್ಲೋ ಒಂದು ಕಡೆ ದೊಡ್ಡ ದೊಡ್ಡ ಕಾರ್ಖಾನೆಗಳನ್ನಿಟ್ಟುಕೊಂಡು ಕೇಂದ್ರೀಕರಣ ಮಾಡಿಕೊಂಡು ಕೇವಲ ಕೆಲವರಿಗೆ ಕೆಲಸ

ವನ್ನು ಕೊಡುವ ಬದಲಾಗಿ; ಈ ಬಡ ವಿದ್ಯಾರ್ಥಿಗಳಿಗೆ ತರಪೇತಿ ಕೊಟ್ಟು ಎಲ್ಲಾ ಕಾರ್ಖಾನೆಗಳಲ್ಲೂ ಕೆಲಸ ಸಿಗುವಂಥ ಏರ್ಪಾಡನ್ನು ಮಾಡಬೇಕು. ಮೀಸಲಾತಿಯ ವಿಷಯವನ್ನು ಮೊದಲೇ ಹೇಳಿದ್ದೇನೆ. ಈ ಬಗ್ಗೆ ಯಾವ ಅನುಮಾನವೂ ಇಲ್ಲ. ಪ್ರತ್ಯೇಕ ಚುನಾವಣಾ ವ್ಯವಸ್ಥೆ ಆಗದಿದ್ದುದೇ ಇಂಡಿಯಾದ ಅದೃಷ್ಟ. ನಾವೆಲ್ಲರೂ ಇಂಡಿಯಾ ದೇಶದವರು ಎಂಬತಕ್ಕಂಥ ಭಾವನೆಯನ್ನು ಇಟ್ಟುಕೊಂಡು ಯಾರು ಕೆಳಗಿದ್ದಾರೆ ಅವರನ್ನು ಮೇಲೆ ಎತ್ತುವುದಕ್ಕೆ ಪ್ರಯತ್ನ ಮಾಡತಕ್ಕಂಥದ್ದು, ಒಂದು ಮನೆಯಲ್ಲಿ ನಾಲ್ಕು ಜನ ಮಕ್ಕಳಿರತಕ್ಕಂಥ ಸಂದರ್ಭದಲ್ಲಿ, ಅವರಲ್ಲಿ ಒಬ್ಬ ಖಾಯಿಲೆಯಿಂದ ನರಳುತ್ತಾ ಇದ್ದ ಪಕ್ಷದಲ್ಲಿ ಅಥವಾ ದುರ್ಬಲನಾಗಿದ್ದ ಪಕ್ಷದಲ್ಲಿ ಅವನನ್ನು ಮನೆಯವರೆಲ್ಲರು ನೋಡಿಕೊಳ್ಳುತ್ತಾರೆ, ವಿಶೇಷವಾದ ತಿಂಡಿ ತೀರ್ಥಗಳನ್ನು ಅವರಿಗೆ ಕೊಡುತ್ತಾರೆ, ಹಣ್ಣು ಹಂಪಲ ಅವನಿಗೆ ಕೊಡುತ್ತಾರೆ; ಹಾಲು ಕೊಡುತ್ತಾರೆ; ಬೇರೆ ಮಕ್ಕಳಿಗೆ ಇಲ್ಲದಿದ್ದರೂ ಕೂಡ ಈ ಮಗುವನ್ನು ನೋಡಿಕೊಳ್ಳುತ್ತಾರೆ. ತಂದೆ ತಾಯಿ ಅಕ್ಕ ತಮ್ಮ ತಂಗಿ ಎಲ್ಲರೂ ಕೂಡ. ಈ ಒಂದು ದೃಷ್ಟಿಯಿಂದ ಹಿಂದುಳಿದಿರತಕ್ಕಂಥವರನ್ನು ಅಥವಾ ಅಸ್ಪೃಶ್ಯರನ್ನು ನೋಡಿಕೊಳ್ಳಬೇಕು ಅನ್ನುವುದು ಸಮಾಜದ ಕರ್ತವ್ಯ. ಅದೇನು ಇವರು ಭಿಕ್ಷೆ ಬೇಡತಕ್ಕಂಥ ಸಂದರ್ಭ ಅಲ್ಲ ಇದು. ತಮ್ಮ ಹಕ್ಕನ್ನು ಚಲಾಯಿಸತಕ್ಕಂಥ ಸಂದರ್ಭ ಇದು. ಎರಡು ಸಾವಿರ ವರ್ಷದಿಂದ ಈ ಒಂದು ದುಸ್ಥಿತಿಯಲ್ಲಿ ಇದ್ದಾಗ ಗೇದು ಗೇದೂ ಬೇರೊಬ್ಬರ ಅನುಕೂಲವನ್ನು ಹೊಂದಿರತಕ್ಕಂಥ ಸಂದರ್ಭದಲ್ಲಿ ಈಗ ಕೆಲವು ವರ್ಷಗಳ ಕಾಲ ಇತರರು ತ್ಯಾಗ ಮಾಡತಕ್ಕಂಥದ್ದು ಸಹಜ, ಅದು ನೈಜ.

ದುರ್ಬಲ ವರ್ಗಕ್ಕೆ ಸೇರಿದ ಜನರು ಅಪ್ರಮಾಣಿಕತೆ ಚಮಚಾಗಿರಿ ಭ್ರಷ್ಟಾಚಾರ ಮತ್ತು ಖಂಡದಿಂದ ಖಂಡಕ್ಕೆ ಜಿಗಿಯುವ ಡಾ|| ಧರ್ಮ ತೇಜರಂಥ ದುರುಪಯೋಗ ಪ್ರಕರಣಗಳಲ್ಲಿ ಹಿಂದೆ ಬಿದ್ದಿದ್ದಾರೆ!

ಯಶವಂತರಾವ್ ಬಾಬ್ಲದ್

ಮೀಸಲಾತಿ ವಿರೋಧಿ ಮುಂದಾಳುಗಳು ತಾವು ಸೇರಿದ ಇಡೀ ದೇಶವೇ ಹಿಂದುಳಿದಿದ್ದು, ಅಂತರರಾಷ್ಟ್ರೀಯ ಸಮುದಾಯದಲ್ಲಿ ವಿಶೇಷ ಸವಲತ್ತುಗಳನ್ನು ಪಡೆಯುತ್ತಾರೆ ಎಂಬುದನ್ನು ಬೇಕೆಂದೇ ಮರೆಯುತ್ತಾರೆ ಮತ್ತು ಆ ಮೂಲಕ ತಾನಾಯೇ ಹಿಂದೂ ಸಮಾಜ ಈ ನೆಲದ ಮೇಲಿನ ಅತ್ಯಂತ ಕಪಟಿ ಎಂಬುದನ್ನು ಹೊಗೆಡುಹುತ್ತಾರೆ. ದಕ್ಷತೆ ಮತ್ತು ಸಾಮರ್ಥ್ಯದ ಕ್ಷೇತ್ರದಲ್ಲಿ, ಅಂತರರಾಷ್ಟ್ರೀಯ ಮಾನದಂಡದಿಂದ ಅಳೆದಾಗ ಭಾರತೀಯರು ಸ್ವತಃ ದಡ್ಡರೂ ಮೂರ್ಖರಾಗಿದ್ದರೂ, ಇವರು ದಕ್ಷತೆಯ ಹೆಸರಿನಲ್ಲಿ ಮೀಸಲಾತಿಯನ್ನು ವಿರೋಧಿಸುತ್ತಾರೆ !

ನೂರೆಂಟು ರೋಗದ ಭಾರತಮಾತೆ

ದಕ್ಷತೆಯ ಹೆಸರಿನಲ್ಲಿ ಮೀಸಲಾತಿಯನ್ನ ರಾಜ್ಯಾಂಗ ಸಭೆಯ ಕೆಲವೇ ಸದಸ್ಯರು ವಿರೋಧಿಸಿದ್ದರು. ಆಗಿನ ಪರಿಸ್ಥಿತಿಯು ಹೇಗಿತ್ತೆಂದರೆ ದುರ್ಬಲ ವರ್ಗಗಳಿಗೆ ಸೇರಿದ ಜನರು ಶಿಕ್ಷಣ ಮತ್ತು ಪ್ರತಿಭೆಯ ಕ್ಷೇತ್ರಗಳಲ್ಲಿ ಶತಮಾನಗಳಿಂದ ಅವಕಾಶ ವಂಚಿತರಾಗಿದ್ದು ಮುಂದುವರಿದವರೊಡನೆ ಸಮಾನವಾಗಿರಲಿಲ್ಲ. ಆದರೆ ಈದಿನಗಳಲ್ಲಿ ದಕ್ಷತೆ ಮತ್ತು ಪ್ರತಿಭೆ ಹೇಗಿದೆಯೆಂದರೆ–ಸಾಮೂಹಿಕ ಕಾಪಿ ಹೊಡೆಯುವುದು, ಸ್ವಜನ ಜಾತಿ ಪಕ್ಷಪಾತ–ಇನ್ನು ಮುಂದುವರೆದು ಕೆಲವು ಕಡೆ ಭ್ರಷ್ಟಾಚಾರವನ್ನು ಬಹಿರಂಗವಾಗಿಯೇ ಅವಲಂಬಿಸಿದೆ. ಇಂಥ ರಂಗದಲ್ಲಂತು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಹಾಗೂ ಇತರ ಹಿಂದುಳಿದ ವರ್ಗಗಳ ಮಂದಿ ಸ್ಪರ್ಧಿಸಲಾರರು ! ಹಾಗೂ ಮೀಸಲಾತಿ ವಿರೋಧಿ ಮುಂದಾಳುಗಳು ಬಯಸುವಷ್ಟು ಹಿಂದುಳಿದವರು ಸ್ಪರ್ಧಿಸುವರೆಂದು ಭಾವಿಸಲಾಗದು. ಈ ದೇಶದಲ್ಲಿ ದುರ್ಬಲ ವರ್ಗಕ್ಕೆ ಸೇರಿದ ಜನರು ಅಪ್ರಾಮಾಣಿಕತೆ, ಚಮಚಾಗಿರಿ, ಭ್ರಷ್ಟಾಚಾರ ಮತ್ತು ಖಂಡದಿಂದ ಖಂಡಕ್ಕೆ ಜಿಗಿಯುವ ಡಾ. ಧರ್ಮತೇಜರಂಥ ದುರುಪಯೋಗ ಪ್ರಕರಣಗಳಲ್ಲಿ ಹಿಂದೆ ಬಿದ್ದಿದ್ದಾರೆಂಬುದು ನಿಜ. ಯಾವುದೇ ನಾಗರಿಕ ರಾಜ್ಯವು ದುರ್ಬಲ ವರ್ಗಗಳ ಜನರನ್ನು, ಅವರು ಮಾಡಲು ಕಾನೂನು ಬದ್ಧರಲ್ಲದ ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ನಿರೀಕ್ಷಿಸುವುದು ನಾಗರಿಕವಾಗಲಾರದು.

ಜಾತಿ ಆಧಾರಿತ ಮೀಸಲಾತಿಗೆ ವಿರೋಧವಿರುವುದರಲ್ಲಿ ಸ್ವಲ್ಪ ಅರ್ಥವಿರುವುದಾದರೂ ಭಾರತೀಯ ಪರಿಸ್ಥಿತಿಯಲ್ಲಿ, ಯೂರೋಪಿನಂತಲ್ಲದೆ ಬಹು ಹಿಂದೆಯೇ ವರ್ಗದ ಎಲ್ಲಾ ಲಕ್ಷಣಗಳನ್ನು ಜಾತಿ ಗಳಿಸಿಕೊಂಡಿದೆ. ಆದುದರಿಂದ ಅರ್ಥ ವ್ಯವಸ್ಥೆಯ ಆಧಾರದ ಮೇಲೆ ಸಮಾಜದ ವರ್ಗೀಕರಣ ಆದರ್ಶ ಪ್ರಾಯವಾದುದಾದರೂ ಈ ಆದರ್ಶವನ್ನು ಸಂಪೂರ್ಣವಾಗಿ ಅರಿತುಕೊಳ್ಳಲು ಜಾತಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಅದು ವಾಸ್ತವತೆಯನ್ನು ಸುಮ್ಮನೆ ಆದರ್ಶಗೊಳಿಸಿದಂತಾಗುತ್ತದೆ, ಅಷ್ಟೆ. ಭಾರತೀಯ ಪರಿಸ್ಥಿತಿಯಲ್ಲಿ ಆರ್ಥಿಕತೆಯ ಆಧಾರದ ಮೇಲೆ ವರ್ಗೀಕರಿಸುವುದರಲ್ಲಿ ಮತ್ತೊಂದು ದೋಷವಿದೆ. ಅದೆಂದರೆ, ಶ್ರೀಮಂತರಾದ ಜನರು ರಾಜ್ಯ ಕಾರ್ಯಾಂಗದೊಡನೆ ಸುಲಭ ವ್ಯವಹಾರ ಇಟ್ಟುಕೊಂಡಿದ್ದು, ಅವರನ್ನು ಅಲ್ಪಾದಾಯ ಗುಂಪಿಗೆ ಸೇರಿಸುವ ಪ್ರಮಾಣ ಪತ್ರಗಳನ್ನು ಬಡಜನರಿಗಿಂತ ಮುಂಚಿತವಾಗಿಯೇ ಪಡೆಯಬಲ್ಲ ಪ್ರತಿಭಾವಂತರಾಗಿರುತ್ತಾರೆ !

ಹಾಗೆಯೇ ಕೆಲವು ವಲಯಗಳಲ್ಲಿ ಪರಿಶಿಷ್ಟ ಜಾತಿ ಬುಡಕಟ್ಟುಗಳಲ್ಲಿ ಸೇರಿದ ಸುಶಿಕ್ಷಿತ ಮತ್ತು ಶ್ರೀಮಂತ ಜನರು ವಿಶೇಷ ಸವಲತ್ತುಗಳ ಅವಕಾಶದಿಂದಾಗಿ ತಮ್ಮ ಜನಾಂಗದ ಹೆಸರಿನಲ್ಲಿ ಎಲ್ಲವನ್ನು ಕಬಳಿಸುತ್ತಿದ್ದಾರೆ ಎಂಬ ಅನುಮಾನಗಳಿಗೆ ಇಂಬುಗೊಟ್ಟಿದೆ. ಇನ್ನೊಂದು ದಶಕ ಇದೇ ಪ್ರತಿಕ್ರಿಯೆ ಮುಂದುವರಿದರೆ ಬ್ರಾಹ್ಮಣ ವರ್ಗಕ್ಕೆ ಸದೃಶ್ಯವಾದ ಒಂದು ವರ್ಗ ಹರಿಜನರಲ್ಲಿ ಉದ್ಭವಿಸುವುದು. ಈ ಪ್ರವೃತ್ತಿಯನ್ನು ತಡೆಗಟ್ಟಲು ಕೆಲವು ಸೂತ್ರ ಕ್ರಮಗಳನ್ನು ರೂಪಿಸಬೇಕು.

ಏನೆ ಆಗಲಿ ಇಡೀ ವ್ಯವಸ್ಥೆ ಮತ್ತು ಸಾಮಾಜಿಕ ಕ್ರಮ ಅನುದಿನವೂ ಅಸ್ತ ವ್ಯಸ್ತಗೊಳ್ಳುತ್ತಿರುವ ಈ ಸಮಯದಲ್ಲಿ ಸೂಚಿತ ಸೂತ್ರಗಳು ಎಲ್ಲಾ ಅನಿಷ್ಟ ಗಳಿಗೂ ಸರ್ವ ರೋಗಕ್ಕೂ ಪರಿಹಾರವಲ್ಲ. ಈ ಲಕ್ಷಣವು, ರೈತ ಚಳುವಳಿ, ಅಸ್ಸಾಂ ಚಳುವಳಿ, ಜಾರ್ಖಂಡ್ ಚಳುವಳಿ, ದಲಿತ ಪ್ಯಾಂಥರ್ ಚಳುವಳಿ, ಡಿ.ಕೆ ಡಿ.ಎಂ.ಕೆ. ಚಳುವಳಿ, ಮೀಸಲಾತಿ ಪರ ಹಾಗೂ ವಿರೋಧಿ ಚಳುವಳಿ ಮುಂತಾದ ರೂಪದಲ್ಲಿ ತಲೆ ಎತ್ತುತ್ತಿವೆ. ಇವೆಲ್ಲಕ್ಕೂ ಮೂಲತಃ ಆರ್ಥಿಕ ಅಂಶಗಳು ಕಾರಣ; ಆದರೆ ಅವು ಕಾಣಿಸಿಕೊಳ್ಳುವ ರೀತಿ ಹಾಗಿರುವುದಿಲ್ಲ.

ಈ ಹಿನ್ನೆಲೆಗೆ ಎದುರಿಗಾಗಿ, ವರ್ಗ ಮತ್ತು ಜಾತಿ ಹಾಗೂ ಅವುಗಳಿಗೆ ಅಂಟಿದ ಅನಿಷ್ಟಗಳನ್ನು ತೊಡೆದು ಹಾಕಲು ಪ್ರತಿಯೊಬ್ಬ ಪ್ರಜಾ ಪ್ರಭುತ್ವವಾದಿ ವ್ಯಕ್ತಿ ಅಥವಾ ವ್ಯಕ್ತಿಗಳ ಬಣಗಳು ವಾಗಾಡಂಬರಗಳಲ್ಲಿ ತೊಡಗದೆ ಸೂಕ್ತ ಮಾರ್ಗ ಗಳನ್ನು ಕಂಡು ಹಿಡಿಯುವ ಕರ್ತವ್ಯ ನಿರ್ವಹಿಸಬೇಕಾಗಿದೆ. ಕೇವಲ ಬೇರೆ ದೇಶ ಗಳಲ್ಲಿ ಅಲ್ಲಿನ ಪರಿಸ್ಥಿತಿಯಲ್ಲಿ ರೂಪುಗೊಂಡ ವಿವಿಧ ಕ್ರಾಂತಿಗಳ ಸಾಹಿತ್ಯವನ್ನು ಓದುವುದರಿಂದ ಮತ್ತು ಭಾರತೀಯ ಪರಿಸ್ಥಿತಿಯನ್ನು ಗಣಿಸಿದೆ ಅದನ್ನು ಅನ್ವಯಿ ಸುವುದರಿಂದ, ಕ್ರಾಂತಿ ಮತ್ತು ಕ್ರಾಂತಿಕಾರಿಗಳ ಸ್ಥಿತಿ ಈವರೆಗಾದಂತೆಯೇ ಆಗ ತ್ತದೆ ಎಂಬುದನ್ನು ನೆನಪಿನಲ್ಲಿಟ್ಟು ಇನ್ನಾದರೂ ಮುನ್ನಡೆಯಬೇಕು.

ವೈ. ರಫೀಕ್ ಅಹಮದ್

ಆರ್ಥಿಕ ಭದ್ರತೆಯನ್ನು ಒದಗಿಸು ವುದಕ್ಕಾಗಿ ಮಾತ್ರ ಮೀಸಲಾತಿ ಬೆಂಬಲಿಸಿದರೆ ಸಾಲದು. ಕೆಳಜಾತಿ ಗಳಲ್ಲಿ ಸಾಮಾಜಿಕ ಸ್ಥಾನಮಾನ ಮೂಡಿಸುವುದೂ ಅಗತ್ಯ.

ಕರ್ನಾಟಕದಲ್ಲಿ ಹಾವನೂರು ಆಯೋಗವು ಶಿಫಾರಸು ಮಾಡಿದಂತೆ, ಆರ್ಥಿಕ ವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಎಲ್ಲ ಭಾರತೀಯರಿಗೂ ಮೀಸಲಾತಿ ದೊರೆಯಬೇಕೆಂಬ ನೀತಿಗೆ ನಾನು ಪರವಾಗಿದ್ದರೂ ಸಹ ಈ ಪುಟ್ಟ ಪ್ರಬಂಧದಲ್ಲಿ ನಾನು ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನರಿಗಾಗಿ-ರುವ ಮೀಸಲಾತಿ ಸೌಲಭ್ಯವನ್ನು ಮುಂದುವರಿಸಬೇಕಾದ ಆವಶ್ಯಕತೆಗೆ ನನ್ನನ್ನು ಸೀಮಿತಗೊಳಿಸಿಕೊಂಡಿರುವುದನ್ನು ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಬಯಸುತ್ತೇನೆ.

ಭಾರತದಲ್ಲಿ ಜಾತಿಯು ಒಂದು ಗಮನಾರ್ಹ ಹಾಗೂ ಆಳವಾಗಿ ಬೇರುಬಿಟ್ಟ

ಸಾಂಪ್ರದಾಯಿಕ ಸಾಮಾಜಿಕ ಸಂಸ್ಥೆಯಾಗಿ ಮುಂದುವರೆದಿದೆ. ಜಾತಿಪದ್ಧತಿ ಬದಲಾಗುತ್ತಿರುವುದು ನಿಜ. ಆದರ ಕರಾಳ ಮುಖವಾದ ಅಸ್ಪೃಶ್ಯತೆಯೂ ಕ್ಷೀಣಿಸುತ್ತಿದೆ. ಕೈಗಾರೀಕರಣ, ನಗರೀಕರಣದಂತಹ ಬೆಳವಣಿಗೆಗಳು, ಜಾತಿಯ ವ್ಯಾಪಕತೆಯನ್ನು ಕತ್ತರಿಸುವಂತಹ ಹೊಸ ವರ್ಗಗಳನ್ನು ಸೃಷ್ಟಿಸಿವೆ. ಆದರೆ ಗ್ರಾಮೀಣ ಪ್ರದೇಶಗಳು ಜಾತಿಯ ನಿಯಂತ್ರಣದಲ್ಲಿ ಇನ್ನೂ ಇರುವುದರಿಂದ, ಭಾರತದ ಸಮಾಜದ ಮೇಲೆ ಜಾತಿಯ ಪ್ರಾಬಲ್ಯ ಇಲ್ಲ ಎಂದು ಹೇಳಿಬಿಡುವುದು ಆತುರದ ನಿರ್ಣಯವೆನಿಸುತ್ತದೆ. ಜಾತಿ ಪದ್ಧತಿಯು ವಿನಾಶದ ದಾರಿ ಹಿಡಿದಿಲ್ಲ. ಅದು ಆಶ್ಚರ್ಯಕರವಾದ ಪ್ರತಿರೋಧವನ್ನು ಪ್ರದರ್ಶಿಸುತ್ತಿದ್ದು, ಅದರ ಶಕ್ತಿಯನ್ನು ಕಡೆಗಣಿಸುವುದು ದುರಂತಕ್ಕೆ ಅವಕಾಶ ಕಲ್ಪಿಸುವುದು ಖಂಡಿತ.

ಕೆಳಜಾತಿಗಳು ಅನುಭವಿಸುತ್ತಿರುವಂತಹ ಸಾಮಾಜಿಕ ಹಾಗೂ ಧಾರ್ಮಿಕ ಅನಿಷ್ಟಗಳನ್ನು ಕಾನೂನಿನ ಮೇರೆಗೆ ನಿರ್ಬಂಧಿಸಲಾಗಿದ್ದರೂ, ಆಚರಣೆಯಿಂದ ಅವು ಉಚ್ಚಾಟನೆಗೊಂಡಿಲ್ಲ. ತಮ್ಮ ಸಾಮರ್ಥ್ಯದ ಬಲದಿಂದ ಒಳ್ಳೆಯ ಶಿಕ್ಷಣ ಹಾಗೂ ಮನ್ನಣೆ ಪಡೆದಿರುವವರನ್ನು ಹೊರತುಪಡಿಸಿದರೆ, ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟಿನ ಜನ ಇನ್ನೂ ಹೊಲಸು ಕೆಲಸಗಳನ್ನೇ ಮಾಡುತ್ತಿದ್ದಾರೆ. ಮುಖ್ಯವಾಗಿ ಹಳ್ಳಿಗಳಲ್ಲಿ ಅವರನ್ನು ಕೆಟ್ಟದಾಗಿ ನಡೆಸಿ ಕೊಳ್ಳಲಾಗುತ್ತಿದೆ. ಭಾರತೀಯ ಸಂವಿಧಾನವು ಅಸ್ಪೃಶ್ಯತೆಯನ್ನು ನಿಷೇಧಿಸಿ, ಜಾತಿಯನ್ನಾಧರಿಸಿದ ಯಾವುದೇ ತಾರತಮ್ಯವನ್ನು ಪ್ರತಿಬಂಧಿಸಿ, ಶೈಕ್ಷಣಿಕ ಸಂಸ್ಥೆಗಳಿಂದ ಹರಿಜನರ ಬಹಿಷ್ಕಾರವನ್ನು ನಿರ್ಬಂಧಿಸಿದ್ದರೂ ಸಹ, ಕೆಳಜಾತಿಗಳ ಬಡತನ, ಅಜ್ಞಾನ ಹಾಗೂ ತಮ್ಮ ನ್ಯಾಯಬದ್ಧ ಹಾಗೂ ಸಂವಿಧಾನಬದ್ಧ ಹಕ್ಕುಗಳನ್ನು ಚಲಾಯಿಸುವಲ್ಲಿನ ಅವರ ಹೆದರಿಕೆಯಿಂದಾಗಿ ಭೇದ-ಭಾವ ಅವ್ಯಾಹತವಾಗಿ ನಡೆದಿದೆ.

ಆದ್ಯಗಮನ ನೀಡಬೇಕಾದ ಸಂಗತಿಯೆಂದರೆ, ಮೇಲಿರುವ ಬ್ರಾಹ್ಮಣರ ಸ್ಥಾನಮಾನ ಹಾಗೂ ಕೆಳಗಿರುವ ಅಸ್ಪೃಶ್ಯರ ಸ್ಥಾನಮಾನ ಅಬಾಧಿತವಾಗಿಯೇ ಉಳಿದಿರುವುದು. ಜಾತಿಯ ಸಮಸ್ಯೆಯನ್ನು ಮೂಲಭೂತವಾಗಿ ಆರ್ಥಿಕ ಸಮಸ್ಯೆಯನ್ನಾಗಿ ನೋಡುವವರು ಬಹುದೊಡ್ಡ ತಪ್ಪು ಮಾಡುತ್ತಿದ್ದಾರೆ. ಏಕೆಂದರೆ, ಆರ್ಥಿಕ ಸುಧಾರಣೆಯು ಉತ್ತಮ ಸಾಮಾಜಿಕ ಸ್ಥಾನಮಾನವನ್ನು ತಂದು ಕೊಡಲಾರದು. ಒಬ್ಬ ವ್ಯಕ್ತಿ ಅಥವಾ ಒಂದು ಜಾತಿಯ ಆರ್ಥಿಕ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಯಾದಾಗಲೆಲ್ಲ ವ್ಯಕ್ತಿಯ ಅಥವಾ ಒಂದು ಜಾತಿಯ ಸಾಮಾಜಿಕ ಸ್ಥಾನಮಾನದಲ್ಲಿ ತುಲನಾತ್ಮಕ ಬದಲಾವಣೆಯನ್ನು ನಿರೀಕ್ಷಿಸುವುದು ಸಹಜ. ಇದು ಪಾಶ್ಚಾತ್ಯ ರಾಷ್ಟ್ರಗಳ ವಿಷಯದಲ್ಲಿ ನಿಜವಾಗಿದೆ. ಆದರೆ ಭಾರತದ ಸಮಾಜ ವ್ಯವಸ್ಥೆ ಹೇಗಿದೆ ಎಂದರೆ- ಕೆಳಜಾತಿಗಳು ಯಾವುದೇ ಪ್ರಮಾಣದಲ್ಲಿ ಆರ್ಥಿಕ ಪ್ರಗತಿ ಹಾಗೂ ಅಭಿವೃದ್ಧಿ ಸಾಧಿಸಿದರೂ, ಅವುಗಳ ಸಾಮಾಜಿಕ ಸ್ಥಾನಮಾನ ಹೆಚ್ಚುವುದಿಲ್ಲ. ಆರ್ಥಿಕ ಭದ್ರತೆಯನ್ನು ಒದಗಿಸುವುದಕ್ಕಾಗಿ ಮಾತ್ರ ಮೀಸಲಾತಿ

ನೀತಿಯನ್ನು ಬೆಂಬಲಿಸಿದರೆ ಸಾಲದು, ಕೆಳಜಾತಿಗಳಲ್ಲಿ ಸಾಮಾಜಿಕ ಸ್ಥಾನಮಾನದ ಭರವಸೆ ಮೂಡಿಸುವುದೂ ಅಗತ್ಯ ಎಂಬುದನ್ನು ನಾನು ಒಪ್ಪುತ್ತೇನೆ.

ಭಾರತವು ಸಮ್ಮಿಶ್ರ ಸಮಾಜವನ್ನು ಹೊಂದಿದೆ. ಸಮಾಜದ ಎಲ್ಲ ವರ್ಗಗಳಿಗೂ ಎಲ್ಲ ಮಟ್ಟಗಳಲ್ಲಿಯೂ ಸೂಕ್ತ ಅವಕಾಶ ಒದಗಿಸುವ ಅಗತ್ಯ ಹೆಚ್ಚಿದೆ. ಅರ್ಹತೆಯೇ ಅಳತೆಗೋಲಾದರೆ, ಭಾರತೀಯ ಸಮಾಜದ ಬಹುತೇಕ ವರ್ಗಗಳು ಪ್ರಾತಿನಿಧ್ಯದಿಂದ ವಂಚಿತವಾಗುತ್ತವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವವು, ಎಲ್ಲ ವರ್ಗಗಳೂ ರಾಷ್ಟ್ರದ ರಾಜಕೀಯ, ಆರ್ಥಿಕ, ಸಾಮಾಜಿಕ, ಆಡಳಿತ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವುದನ್ನು ಬಯಸುತ್ತದೆ. ಮೀಸಲಾತಿಯ ದೆಸೆಯಿಂದಾಗಿ ಉದ್ಯೋಗ ದೊರಕದೇ ಹೋದಾಗ ಜನ ಕುಪಿತರಾಗುತ್ತಾರೆ ಮತ್ತು ಕಾಲೇಜುಗಳಲ್ಲಿ ಸೀಟುಗಳನ್ನು ನಿರಾಕರಿಸಿದಾಗ ಸಿಟ್ಟಿಗೇಳುತ್ತಾರೆ. ಅರ್ಹತೆಯುಳ್ಳವರು ಮಾತ್ರ ಪುರಸ್ಕೃತರಾಗುವುದರಲ್ಲಿ ನ್ಯಾಯ ಇರುವುದಿಲ್ಲ ಎಂಬುದನ್ನು ಅವರು ಅರಿತುಕೊಳ್ಳುವುದಿಲ್ಲ. ನಮ್ಮಂತಹ ಸಮ್ಮಿಶ್ರ ಸಮಾಜದಲ್ಲಿ ವಿತರಣಾ ಪೂರ್ಣ ನ್ಯಾಯದ ಕಲ್ಪನೆಯ ಬಗ್ಗೆ ಸಹಾನುಭೂತಿ ಹಾಗೂ ಆದರ ಇರಬೇಕು. ಮೀಸಲಾತಿ ನೀತಿಯಿಂದಾಗಿ ಅನ್ಯಾಯವೇನಾದರೂ ಸಂಭವಿಸಿದರೆ, ಅದನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕು; ಏಕೆಂದರೆ ಅದು ಶತಮಾನಗಳ ಅನ್ಯಾಯವನ್ನು ಕೊನೆಗೊಳಿಸಲು ಅನಿವಾರ್ಯ ಪರಿಹಾರ. ಮೀಸಲಾತಿಯ ವಿರುದ್ಧದ ಆಂದೋಲನಕ್ಕೆ ಸ್ಪಷ್ಟವಾದ ಕಾರಣವೆಂದರೆ–ಸಹನೆಯ ಅಭಾವ. ನಮ್ಮ ಜೀವನ ಹಾಗೂ ಪ್ರಜ್ಞೆಯನ್ನು ಸಮಗ್ರವಾಗಿ ಬದಲಿಸಿರುವ ನಮ್ಮ ರಾಜಕೀಯ ಹಾಗೂ ಸಾಮಾಜಿಕ ಅನುಭವಗಳು ಸಹನೆಯನ್ನು ಆಹ್ವಾನಿಸಿರಬಹುದು ಅಥವಾ ನಾಶಪಡಿಸಿರಬಹುದು. ಸಹನೆಯು ದೌರ್ಬಲ್ಯದ ಸಂಕೇತವೆಂದು ಪರಿಗಣಿಸಲಾಗುತ್ತದೆ.

ಮೀಸಲಾತಿಯು ನಮ್ಮ ರಾಜಕೀಯ ವ್ಯವಸ್ಥೆಯ ಒಂದು ಅಂಗವಾಗಿ ಬಿಟ್ಟಿದೆ, ಕೆಳಜಾತಿಗಳು ಅವಮಾನಗಳನ್ನು ಸಹಿಸುವ ಸ್ಥಿತಿಯಲ್ಲಿಲ್ಲ ಎಂಬ ಸಂಗತಿಯು ಮೇಲ್ಜಾತಿಗಳನ್ನು ನಿಜವಾಗಿಯೂ ಹೆದರಿಸಿದೆ. ತುಳಿತಕ್ಕೊಳಗಾದ ಜಾತಿಯ ಜನರು ತಮ್ಮ ಹಕ್ಕು ಹಾಗೂ ಅಧಿಕಾರವನ್ನು ಮೇಲ್ಜಾತಿಗಳವರ ಮೇಲೆ ಚಲಾಯಿಸುವ ಸಾಧ್ಯತೆಯನ್ನು ಮೇಲ್ಜಾತಿಯ ಮನಸ್ಥಿತಿಯು ಸ್ವೀಕರಿಸುವ ಹಂತದಲ್ಲಿಲ್ಲ. ಪ್ರಾಬಲ್ಯ ಹೊಂದುವ ಹಂಬಲ ಅತ್ಯಂತ ಶಕ್ತಿಶಾಲೀ ಅಂಗವಾಗಿದೆ. ಸಾಂಪ್ರದಾಯಿಕ ಆಳುವ ವರ್ಗಗಳ ಪಾಲಿಗೆ ತೀವ್ರ ಕಳವಳ ಉಂಟುಮಾಡಿರುವ ಸಂಗತಿಯೆಂದರೆ–ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನರಲ್ಲಿ ಬೆಳೆಯುತ್ತಿರುವ ರಾಜಕೀಯ ಪ್ರಜ್ಞೆ.

ಮೀಸಲಾತಿಯ ನೀತಿಯು ಸಮಾಜದ ವಂಚಿತ, ಉಪೇಕ್ಷಿತ ವರ್ಗಗಳಿಗೆ ವಿಶೇಷ ಹಂಚಿಕೆಯ ತತ್ವವನ್ನು ಆಧರಿಸಿದೆ. ಜಾತಿಪದ್ಧತಿಯನ್ನು ಹೋಗಲಾಡಿ

ಸಲು ಆಗದಿದ್ದರೂ, ಅದನ್ನು ಬದಲಿಸುವುದು ಅದರ ಅಂತಿಮ ಗುರಿ. ಆದರೆ ಅನೇಕ ಬದಲಾವಣೆಗಳನ್ನೂ ಮೀರಿ ಜಾತಿಪದ್ಧತಿಯು ಮುಂದುವರಿಯುವ ಶಕ್ತಿಯನ್ನು ಕಾಯ್ದುಕೊಂಡಿದ್ದೆ. ಆದ್ದರಿಂದ ಹತ್ತು ಅಥವಾ ಇಪ್ಪತ್ತು ವರ್ಷಗಳ ಮೀಸಲಾತಿ ನೀತಿಯನ್ನು ಕುರಿತ ಯಾವುದೇ ಚರ್ಚೆಯು ತಿರುಳಿಲ್ಲದ್ದು, ಭಾರತದ ಬಡತನದ ಹಾಗೆ ಜಾತಿಯೂ ಕೂಡ ಕಾಲಮಿತಿಯ ಕಾರ್ಯಕ್ರಮವೊಂದರಿಂದ ತೊಡೆದು ಹಾಕಲಾಗದಂತಹ ಕಳಂಕ. ಶತಮಾನಗಳ ದಬ್ಬಾಳಿಕೆಯು, ಸಂವಿಧಾನ ನೀಡಿರುವ ಸಾಮಾಜಿಕ ಸಮಾನತೆಯನ್ನು ತರುವುದಕ್ಕಾಗಿ ವರ್ಷ–ವರ್ಷಗಳವರೆಗೆ ಕಠಿಣ ಜಾಗರೂಕ ಹಾಗೂ ಉದ್ದೇಶಪೂರ್ವಕ ಸಾಧನೆಯನ್ನು ಅಗತ್ಯಗೊಳಿಸಿದೆ.

ಇಂದು ಇದು ರಾಷ್ಟ್ರದ ಮುಂದಿರುವ ಒಂದು ಕಠಿಣವಾದ ಪರಿಹಾರ. ಭಾರತೀಯ ಸಮಾಜದ ಸಾಮಾಜಿಕವಾಗಿ ಉಪೇಕ್ಷಿಸಲ್ಪಟ್ಟ, ಶೈಕ್ಷಣಿಕವಾಗಿ ಕಡೆಗಣಿಸಲ್ಪಟ್ಟ ಹಾಗೂ ರಾಜಕೀಯವಾಗಿ ದೂರ ಇಡಲ್ಪಟ್ಟ ವರ್ಗಗಳಿಗಾಗಿ ಎಲ್ಲ ಹಂತಗಳಲ್ಲಿಯೂ ಮೀಸಲಾತಿ ಅಥವಾ ಬಹುಕಾಲದಿಂದ ದಮನಕ್ಕೊಳಗಾದ ಜನರು ತಮ್ಮ ಹಕ್ಕು, ಸ್ಥಾನಮಾನಗಳ ಪ್ರಾಪ್ತಿಗಾಗಿ ನಡೆಸುವ ರಕ್ತಕ್ರಾಂತಿ–ಇವೆರಡರಲ್ಲಿ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ನಿಜವಾಗಿಯೂ ಯಾವುದೇ ರಾಜಕೀಯ ವ್ಯವಸ್ಥೆಯೂ ವಂಚಿತ ಜನತೆಯನ್ನು ಕಡೆಗಣಿಸಲಾಗದು ಮತ್ತು ತುಳಿತಕ್ಕೊಳಗಾದ ಜನತೆ ಬಂಡೆದ್ದು ಆಡಳಿತ ವ್ಯವಸ್ಥೆಯನ್ನೂ ಸಮಾಜವನ್ನೂ ನಾಶಪಡಿಸಲು ಅವಕಾಶ ಕೊಡಲಾರದು. ಕೆಳಜಾತಿಗಳ ಸಾಮಾಜಿಕ ಹಾಗೂ ರಾಜಕೀಯ ಬವಣೆಗಳ ಬಗ್ಗೆ ಕುರುಡು ನಟಿಸುವ ಯಾವುದೇ ಪ್ರಭುತ್ವವು ಪ್ರಗತಿಯ ವೈರಿ ಯಾಗುತ್ತದೆ ಮತ್ತು ಇಪ್ಪತ್ತನೇ ಶತಮಾನದಲ್ಲಿ ಪ್ರಭುತ್ವವು ಪ್ರಗತಿಯ ವೈರಿ ಯಾಗುತ್ತದೆ ಮತ್ತು ಇಪ್ಪತ್ತನೇ ಶತಮಾನದಲ್ಲಿ ಲಾಸೆಝ್ ಫಾಯರ್ ಸಿದ್ಧಾಂತ ವನ್ನು ಆಚರಿಸುವ ಹಂತದಲ್ಲಿ ತಾನಾಗಿಯೇ ನಿಲ್ಲುತ್ತದೆ.

ಮೀಸಲಾತಿಯನ್ನು ಕುರಿತ ಯಾವುದೇ ನೀತಿಯ ಹಿಂದಡಗಿರುವ ಸಮಗ್ರ ಕಲ್ಪನೆಯು–ವಂಚಿತ ಜನರ ಸ್ಥಿತಿ–ಗತಿ ಉತ್ತಮಗೊಳ್ಳುವಂತಹ, ಹೆಚ್ಚು ಸಮಾನತೆ ಯುಳ್ಳ ಸಮಾಜವೊಂದರ ಆದರ್ಶ. ಮೀಸಲಾತಿ ನೀತಿಯನ್ನು ರಾಜಕೀಯ ಉದ್ದೇಶ ಗಳಿಗಾಗಿ ಪ್ರಚಾರ ಮಾಡಲಾಗುತ್ತಿದೆ ಎಂಬುದರಲ್ಲಿ ಬಹುಶಃ ಸತ್ಯಾಂಶವಿದೆ. "ಹಿಂದುಳಿದಿರುವಿಕೆ" ಯಲ್ಲಿ ಸರಕಾರದ ಪಟ್ಟ ಭದ್ರ ಹಿತಾಸಕ್ತಿ ಇದೆ ಎಂದು ಕೆಲವರು ಭಾವಿಸುವುದರಲ್ಲಿ ತಪ್ಪೇನೂ ಇರಲಿಕ್ಕಿಲ್ಲ ಮತ್ತು ಮೀಸಲಾತಿ ನೀತಿಯಿಂದಾಗಿ ಇತರರಿಗಿಂತ ಕೆಲವರು ಹೆಚ್ಚು ಸಮಾನತೆ ಸಾಧಿಸಿದ್ದಾರೆಂದು ಕೆಲ ಜನ ಹೇಳುವುದು ಹೊರ ನೋಟಕ್ಕೆ ಸರಿ ಎಂದೇ ಅನಿಸುತ್ತದೆ. ಆದರೆ, ಇದೆಲ್ಲ ಮೀಸಲಾತಿ ನೀತಿಯ ಅಗತ್ಯವನ್ನು ಕುಗ್ಗಿಸುವುದಿಲ್ಲ. ರಾಜಕೀಯ ಲೆಕ್ಕಾಚಾರದಲ್ಲಿ ಶೋಷಿತರನ್ನು ಕುರಿತ ರಾಜಕೀಯ ನಾಯಕತ್ವದ ಕಳಕಳಿಯು ಎಷ್ಟೇ ಪ್ರಾಸಂಗಿಕವಾಗಿರಲಿ, ಮೀಸಲಾತಿ ನೀತಿಯು ಕೆಳಜಾತಿಗಳಿಗೆ ಸಾಕಷ್ಟು ಒಳಿತನ್ನುಂಟುಮಾಡಿದೆ ಎಂಬುದು

ನಿಜ. ಮೀಸಲಾತಿಗಳು ಶಾಶ್ವತ ಲಕ್ಷಣವಾಗಿರುವ ಉದ್ದೇಶ ಹೊಂದಿಲ್ಲ ಮತ್ತು ಹರಿಜನ-ಗಿರಿಜನರು ಅದನ್ನು ಕೊನೆಯವರೆಗೂ ಅವಲಂಬಿಸುವ ಆಸಕ್ತಿ ಹೊಂದಿಲ್ಲ ಎಂಬುದು ಸತ್ಯ, ಆದರೆ, ಭಾರತದ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯು ಇದೇ ರೀತಿ ಮುಂದುವರಿಯುವವರೆಗೂ ಮೀಸಲಾತಿ ಮುಂದುವರಿಯಲೇ ಬೇಕಾಗುತ್ತದೆ.

ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ಜನರಿಗಾಗಿ ಬಹುದೊಡ್ಡ ರಕ್ಷಣೆ ಮೀಸಲಾತಿ ನೀತಿಯಲ್ಲಿಯೇ-ಅದು ಸಂಸತ್ತಿನಲ್ಲಿ ಸ್ಥಾನಗಳ ಮೀಸಲಾತಿಯೇ ಆಗಲಿ, ಹುದ್ದೆಗಳ ಮೀಸಲಾತಿಯೇ ಆಗಲಿ ಅಥವಾ ಕಾಲೇಜುಗಳಲ್ಲಿ ಸೀಟುಗಳ ಮೀಸಲಾತಿಯೇ ಆಗಲಿ- ಅಡಗಿದೆ. ಸಂಸತ್ತಿನಲ್ಲಿ ಕೆಳಜಾತಿಗಳಿಗೆ ವಿಶೇಷ ಪ್ರಾತಿನಿಧ್ಯ ನೀಡಿರುವ ಸಂವಿಧಾನದ ಏರ್ಪಾಡು, ಆ ಜನರಿಗೆ ಹೊಸದೊಂದು ರಾಜಕೀಯ ಪ್ರಾಮುಖ್ಯತೆಯನ್ನು ನೀಡಿರುವುದೇ ಅಲ್ಲದೆ, ಪ್ರತಿಯಾಗಿ ಕೆಳಜಾತಿಗಳಲ್ಲಿ ಆತ್ಮ ಗೌರವವನ್ನೂ, ಭದ್ರತೆಯ ಭರವಸೆಯನ್ನೂ ಮೂಡಿಸಿದೆ. ಸಂಸತ್ತು ಹಾಗೂ ಶಾಸನಸಭೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟುಗಳವರಿಗಾಗಿರುವ ಸ್ಥಾನ ಮೀಸಲಾತಿಯ ಔಚಿತ್ಯವನ್ನು ಕೆಲವರು ಪ್ರಶ್ನಿಸುತ್ತಾರೆ. ಸಂಸತ್ತಿನಲ್ಲಿ, ಹರಿಜನ-ಗಿರಿಜನರಿಗೆ ಸೇರಿದ ಸದಸ್ಯರ ಸಂಖ್ಯೆಯನ್ನು ಹೊಂದಿದರೆ ಮಾತ್ರ ಸಾಲದು, ಈ ಚುನಾಯಿತ ಶಾಸಕರು ನಿಜವಾಗಿಯೂ ಕೆಳಜಾತಿಗಳ ಹಿತಾಸಕ್ತಿಗಳನ್ನು ಈಡೇರಿಸುತ್ತಾರೆಯೇ ಎನ್ನುವುದು ಮುಖ್ಯ ಎಂಬುದು ಅವರ ಮುಖ್ಯ ಪ್ರತಿಪಾದನೆಯಾಗಿರುವಂತೆ ತೋರುತ್ತದೆ. ಈ ಟೀಕೆ ಒಂದಷ್ಟು ಸಮರ್ಥನೀಯವೂ ಆಗಿರಬಹುದು, ಆದರೆ, ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರಾತಿನಿಧ್ಯಕ್ಕೆ ಬೆಲೆ ಇದೆ ಮತ್ತು ಸಂಖ್ಯೆಯು ಮಾನಸಿಕವಾಗಿಯೂ ರಾಜಕೀಯವಾಗಿಯೂ ಒಂದು ಶಕ್ತಿ ಎನಿಸುತ್ತದೆ.

ಭಾರತೀಯ ಸಮಾಜದಲ್ಲಿ ಈಗ ಬಹಳಷ್ಟು ಒತ್ತುಕೊಡಬೇಕಾದ ಮುಖ್ಯ ಪ್ರಶ್ನೆ- ಮೀಸಲಾತಿ ನೀತಿಯನ್ನು ಮುಂದುವರಿಸಬೇಕೇ ಅಥವಾ ಬೇಡವೇ ಮತ್ತು ಮುಂದುವರಿಸುವುದಾದರೆ ಎಲ್ಲಿಯವರೆಗೆ?- ಎಂಬುದಲ್ಲ. ಆದರೆ ಗಮನಿಸಬೇಕಾದ ಗಂಭೀರ ಸಮಸ್ಯೆ ಎಂದರೆ, ಕೆಳಜಾತಿಗಳಲ್ಲಿ ಬೆಳೆದು ನಿಂತಿರುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಮೀಸಲಾತಿಯ ಪ್ರಯೋಜನಗಳನ್ನು ಹೇಗೆ ನಿರಾಕರಿಸಬೇಕು ಎಂಬುದು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಭಾರತೀಯ ಸಮಾಜದ ಕೆಳಸ್ತರದಲ್ಲಿರುವ ನತದೃಷ್ಟ ಜಾತಿಗಳಲ್ಲಿ ಮೀಸಲಾತಿಯ ಸೌಲಭ್ಯಗಳನ್ನು ಹೇಗೆ ಸಮರ್ಪಕವಾಗಿ ಹಂಚಬೇಕೆಂಬುದೇ ಕಳಕಳಿಯ ವಿಷಯವೆನಿಸಬೇಕು.

(ಅನುವಾದ: ಎಂ. ಆರ್. ಶಿವಣ್ಣ)

ದಲಿತ ಹುಡುಗರಿಗೆ ಒಂದು ಚೂರು encourage ಕೊಡಿ, ಒಂದು ಚೂರು ಮುಗಳ್ನಗಿ, ಸವರ್ಣೀಯ ನನ್ನ ಮಕ್ಕಳು ಹತ್ತು ವರ್ಷದಲ್ಲಿ ಎಷ್ಟು ಬೆಳೆಯ ಬಹುದೋ ಅದನ್ನ ಎಂಟು ದಿವಸ ದಲ್ಲಿ ಈ ನಮ್ಮ ದಲಿತ ಹುಡುಗರು ಬೆಳೆಯುತ್ತಾರೆ!

ಪಿ. ಲಂಕೇಶ್

ನಾನು ಹೇಳಬೇಕೆಂದಿರುವುದನ್ನು ನಿಮ್ಮೆದುರಿಗೆ ಇಟ್ಟುಬಿಡುತ್ತೇನೆ. ಅಲ್ರಿ, ಈ ಮೇಲು ಜಾತಿಯ ಜನಕ್ಕೆ ದಲಿತರ inefficiancy ಬಗ್ಗೆ ಮಾತಾಡೊದಕ್ಕೆ ನಾಚಿಕೆಯಾಗಬೇಕು. ಏಕೆ ಅಂತ ಹೇಳಿದರೆ, the most inefficient people ಯಾರೆಂದರೆ ಮೊದಲನೆಯದಾಗಿ ನಮ್ಮ ಒಟ್ಟಾರೆ ಜನ, ಎರಡನೆಯದಾಗಿ ಮೇಲ್ಜಾತಿಯ ಜನ. ಸಾವಿರಾರು ವರ್ಷಗಳಿಂದ ನಿಷ್ಕ್ರಿಯವಾಗಿ ಸೃಷ್ಟ್ಯಾತ್ಮಕತೆ ಕಳೆದುಕೊಂಡು ಬಿದ್ದಿರುವ ಜನಗಳು ನಾವು. ಅಲ್ರಿ, ಇಲ್ಲಿಯ ಜನಗಳು ವೈಜ್ಞಾನಿಕವಾಗಿ ಯೋಚನೆ ಮಾಡುವ ಮನುಷ್ಯರಾಗಿ ಒಂದು ಕುರ್ಚಿ ಮಾಡಕಾಗ್ತ ಇರಲಿಲ್ಲ? ಒಂದು ಬೆಂಚ್ ಮಾಡಕಾಗ್ತ ಇರಲಿಲ್ಲ? ಒಂದು ಸೈಕಲ್ ಮಾಡಕಾಗ್ತ ಇರಲಿಲ್ಲ? ಕಾರ್‌ಗಳ ಬಿಡಿ ಬೆಂಚ್‌ಕಾರು, ಆ ಕಾರು ಈ ಕಾರುಗಳ ಬಿಡಿ. ಒಂದು ಸೈಕಲ್ ಮಾಡಲಿಕ್ಕೆ ಇವರಿಗೆ ಯೋಗ್ಯತೆ ಇದ್ದಿದ್ದರೆ ಪಲ್ಲಕ್ಕಿ ಇರ್ತಾ ಇರಲಿಲ್ಲ. ಆಮೇಲೆ ಮಲವನ್ನು ಸಾಗಿಸುವ ಒಂದು ವಿಧಾನ ಕಂಡುಹಿಡಿದುಕೊಂಡಿದ್ದರೆ ದಲಿತರೆ ಇರ್ತಾ ಇರಲಿಲ್ಲ. The most inefficient people who had kept these nation in total inefficiancy ಅವರು ದಲಿತರ ಬಗ್ಗೆ inefficiant ಅಂತ ಮಾತಾಡ್ತಾ ಇರ್ತಾರೆ. ನಾಚಿಕೆಗೇಡಿನ ವಿಚಾರ. ಆಮೇಲೆ ನಾನು ಬಹಳ ಜನ ನೋಡಿದ್ದೇನೆ. ಅನೇಕ ಬ್ಯಾಂಕುಗಳಲ್ಲಿ ಆಫೀಸ್‌ಗಳಲ್ಲಿ ನೋಡಿದ್ದೇನೆ. Dalith boys, the dark boys integrate ಆಗಿರೊಲ್ಲ ಆಫೀಸ್ ಜೊತೆಗೆ. ಏಕೆಂದರೆ ಅವರಿಗೆ ಕೆಲಸ ಮಾಡೊಕ್ಕೆ ಖದೀಮರು chance ಕೊಟ್ಟಿರುವುದಿಲ್ಲ. ಹೀಗಾಗಿಬಿಟ್ಟು ಏನಾಗಿದೆ ಗೊತ್ತೇನು? These boys should be encouraged ಒಂದು ಚೂರು encourage ಕೊಡಿ ಅವರಿಗೆ. ಒಂದು ಚೂರು ಮುಗಳ್ನಗಿ, ಈ ನನ್ನ ಮಕ್ಕಳು ಹತ್ತು ವರ್ಷದಲ್ಲಿ ಎಷ್ಟು ಬೆಳೆಯಬಹುದೂ ಅದನ್ನ ಎಂಟು ದಿವಸ ದಲ್ಲಿ ಬೆಳೆಯುತ್ತಾರೆ! ನಿಮ್ಮನ್ನ sentimentalige ಮಾಡೊಲ್ಲ. ಆದರೆ ಈ efficiancy ಬಗ್ಗೆ ನಮ್ಮ ಮೇಲ್ಜಾತಿ ಜನ ಮಾತಾಡಿದ ಕೂಡಲೆ ನನಗೆ ಒದಿ ಬೇಕು ಅನ್ಸುತ್ತೆ. ಯಾಕೆ ಅಂತ ಹೇಳಿದರೆ you never allowed them to work, you never gave a chance them to work. And you are speaking inefficiancy? you are inefficiant

people because you are most uncreative people. ಮೇಲ್ಜಾತಿ ಜನ ಕ್ರಿಯಾಶೀಲತೆ ಇಲ್ಲದೆ ಇರುವ ಜನಗಳು, ಒಂದು ಕುರ್ಚಿ ಮಾಡಕ್ಕಾಗದೆ ಇರುವವರು, ಒಂದು ಪೆನ್ ಮಾಡಕ್ಕಾಗದೆ ಇರುವವರು, ಒಂದು ಪೇಪರ್ ಮಾಡಕ್ಕಾಗದೆ ಇರುವವರು ಒಂದು ಮಂಚ ಮಾಡಕ್ಕಾಗದೆ ಇರುವವರು, ಒಂದು ಮೇಜ್ ಮಾಡಕ್ಕಾಗದೆ ಇರುವವರು, ಇಂಥವರು" If you speak of inefficiency of other, it is shame!

ನಮ್ಮ ಸರ್ಕಾರದವರು, ಗುಂಡೂರಾವ್‌ರಾಗಲಿ ಯಾರೇ ಆಗಲಿ ಈ ಹೊತ್ತು 35% ಬಂದವರಿಗೂ ಲಕ್ಷ ಕೊಟ್ಟರೆ ಸೀಟು ಕೊಟ್ಟುಬಿಡ್ತಾರೆ, ಆಮೇಲೆ ಅವನನ್ನು ಒಳ್ಳೆ ಡಾಕ್ಟರ್ ಮಾಡಿಬಿಡುತ್ತಾರಂತೆ! ದುಡ್ಡು ಇರುವವನು ದುಡ್ಡು ಕೊಟ್ಟೇ ಅಲ್ಲೇನು ಪಾಸುಮಾಡೋದು? ಆದರೆ ಈ ದಲಿತ ಹುಡುಗನಿಗೆ 50% ಬಂದರೂ 45% ಬಂದರೂ ಇವರು ಡಾಕ್ಟರ್ ಆಗಲ್ಲವಂತೆ! ಆದರೆ ನಿಜ ಇರೋದು ಏನು ಗೊತ್ತೇನು? ಹರಿಜನರ ಹುಡುಗನಾಗಲಿ, ಲಂಬಾಣಿ ಹುಡುಗನಾಗಲಿ if they can get 35% they should be given a seat, not only that, they will be a better Doctor. Human Anatomy ಮನುಷ್ಯನ ದೇಹದ ರಚನೆ, ಮನುಷ್ಯನ ರಕ್ತನಾಳಗಳ ನಾಡಿಗಳು ಎಲ್ಲಾ ಚೆನ್ನಾಗಿ ಗೊತ್ತಿರುವುದು ನಮ್ಮ ಹರಿಜನರಿಗೆ. ಯಾಕೆಂದರೆ ನಿಮಗೆ ಗೊತ್ತು, they have been cutting the body. ಸರ್ಜನ್ಸ್ ಇವರಾಗಬೇಕೆ ಹೊರತು, ಬೇರೆ ಯವರು ಆಗುವುದಕ್ಕೆ ಸಾಧ್ಯವೇನ್ರಿ? ನೀವು ಯಾರಾರು ಬ್ರಾಹ್ಮಣನ ಕರೆದು ಕೊಂಡು ಹೋಗಿಬಿಟ್ಟು insight ಇರುವ ಸರ್ಜನ್ ಮಾಡುವುದಕ್ಕೆ ಆಗುತ್ತೇನ್ರಿ? ಅವನಿಗೆ ಪಾಪ, ಅವನು ಜನಿವಾರ ನೀವಿಕೊಂಡ್ಬಿಟ್ಟು, ಅದನ್ನ ಅವನು ತೆಗೆದಿಟ್ಟು ಎಲ್ಲಾ ಸರ್ಜರಿ ಶುರುಮಾಡುವುದರೊಳಗಾಗಿ ರೋಗಿ ಗೊಟಕ್ಕಾಗಿರುತ್ತಾನೆ. ನಾನು ಗ್ಯಾರಂಟಿಯಾಗಿ ಹೇಳ್ತೇನೆ-ಆ ರೇಗನ್‌ಗೇನಾದ್ರು ಇಂಡಿಯಾದಲ್ಲಿ ಅಂಥ ಹೊಡೆತ ಬಿದ್ದಿದ್ರೆ ಸತ್ತೋಗಿಬಿಡುತ್ತಿದ್ದ. Most in efficiant rasckles ಇಲ್ಲಿನವರು

ನಮ್ಮ ಮೇಲ್ಜಾತಿ ಜನ gilty people, ಅನಾಚಾರಗಳನ್ನ ಮಾಡೋರು, ಕ್ರಿಯಾಶೀಲತೆ ಅನ್ನೋದು ಒಂದು ಚೂರೂ ಇಲ್ಲದೆ ಇರುವವರು—ಇವರೆಲ್ಲ ಮಾತಾಡಿದಾಗ ನನಗೆ ಬಹಳ ಆಶ್ಚರ್ಯ.

ಸಂವಿಧಾನಕಾರರು ಈ ಮೀಸಲಾತಿ ಮಾಡಿದ್ದಕ್ಕೆ ಎರಡು ಮೂರು ಬಹಳ ಮುಖ್ಯ ಕಾರಣ ಇದೆ. ಅವರಿಗೆ ಗೊತ್ತಿತ್ತು—ಮೀಸಲಾತಿ ಮಾಡದಿದ್ದರೆ ಹರಿಜನ ಗಿರಿಜನರಿಗೆ ಮೇಲ್ಜಾತಿಜನ ಒಂದು chance ಕೊಟ್ನೋ ನೋಡ್ತಾ ಇರಲಿಲ್ಲಅಂತ. reserve ಮಾಡದೆ ಇದ್ದರೆ ಏನಾಗುತ್ತಿತ್ತು ಅಂದರೆ there is a voilence. voilence ಆಗೇ ಆಗುತ್ತದೆ. ನಿಮಗೆ ಮೀಸಲಾತಿ ಇಲ್ಲದೆ ಇರೋದು ಒಂದು ರೀತಿ ಒಳ್ಳೆಯದು. ಯಾಕೆ ಗೊತ್ತೇನು? you will take law in to

the hand, you will have to take law in to the hands. ಅದೇನೋ ಸ್ವಾತಂತ್ರ್ಯ ಅನ್ನೋದು ಬಂದು 35 ವರ್ಷವಾಗಿದೆ. ಈ ಹೊತ್ತಿನವರೆಗೆ ಉಣ್ಣಕ್ಕಿಲ್ಲ ತಿನ್ನಕ್ಕಿಲ್ಲ ವಿದ್ಯೆ ಇಲ್ಲ, ಕೆಲಸ ಇಲ್ಲ. ಹರಿಜನರಿಗೇನೆ ಕೆಲಸ ಸಿಕ್ತಾ ಇಲ್ಲ. ಅಲ್ಲದೆ ಕೊಡಬೇಕಾದ ಕಡೆಗೂ ನೂರೆಂಟು ಮೋಸ. ಅಂಥ ಸ್ಥಿತಿ ಬಂದಿದೆ.

ಇದರೊಡನೆ ಇನ್ನೊಂದು ಮಾತು—ನಮ್ಮ ಹುಡುಗ್ರು ಬ್ರಾಹ್ಮಣರ ಜೊತೆಗ Examination ತೆಗೆದುಗೂಳ್ಳುವುದಕ್ಕೆ ಆಗ್ತದೇನ್ರಿ ? ಈ ತರಹ Examination ತೆಗೆದುಕೊಳ್ಳುವುದಕ್ಕೆ ? Home school ನಲ್ಲಿ ಒಬ್ಬ ಓದುತ್ತಾನೆ. ಇನ್ನೊಬ್ಬ East-west ನಲ್ಲಿ ಓದುತ್ತಾನೆ. ಇನ್ನೊಬ್ಬ corporation school ನಲ್ಲಿ ಓದುತ್ತಾನೆ ಇಂಥ ಜನಗಳು ಎಲ್ಲಾ ಸೇರಿಕೊಂಡುಬಿಟ್ಟು ಹಳ್ಳಿಯಲ್ಲಿ ಏನೇನು ಇಲ್ಲದಂತಹ ಕಡೆ ಓದಿದಂಥ ಹುಡುಗ, ಅವನು Grammar ಕಲಿತುಕೊಂಡು, ಇವರ ಚರಿತ್ರೆ ಓದಿ ಆ ಶಿವಾಜಿ ಗಿವಾಜಿ ಎಲ್ಲಾ ಬಗ್ಗೆ ಓದಿ examination ತೆಗೆದುಕೊಂಡುಬಿಟ್ಟು he can't score the same marks. ಅದೇ ಥರ ಅವನು grammarನ್ನ ಕಲಿಯುವುದಕ್ಕೆ ಆಗಲ್ಲ. ಜೊತೆಗೆ ಯಾರು ನಿಮ್ಮ ಎಕ್ಸಾಮಿನರ್ಸ್? ನಿಮ್ಮ examination ಅನ್ನುವ ಅರ್ಥವೇನು? ಪರೀಕ್ಷೆಯಲ್ಲಿ ಪರೀಕ್ಷಿಸುತ್ತಿರ್ತವುದು ಏನನ್ನ? ಇವನ್ನೆಲ್ಲ ಕೇಳಬೇಕು ನೀವು. ಯಾಕೆ ಅಂತ ಹೇಳಿದರೆ, ಹತ್ತು ಹದಿನೈದು ಹೊಳೆಗಳನ್ನು ದಾಟ ನೀವು ಬ್ರಾಹ್ಮಣರ ಜೊತೆ ಬರಬೇಕು ಅಥವಾ ಲಿಂಗಾಯಿತರ ಜೊತೆ ಬರಬೇಕು. ಆ ಹೊಳೆ ದಾಟ ಬರುವುದರೊಳಗಾಗಿ ನೀವು ಸುಸ್ತಾಗಿ ಬಿಟ್ಟಿರ್ತೀರಿ. ನೀವು, ಅಂತಹ ಸ್ಥಿತಿಯಲ್ಲಿ ಇರುವ ನೀವು, ಅವರ Grammer ಕಲಿತುಕೊಂಡು ನೀವು ಪಾಂಡಿತ್ಯವನ್ನು? ಆ ಒಣ ಪಾಂಡಿತ್ಯ ತೆಗೆದು ದೂರ ಎಸೆಯಿರಿ. ಅದಕ್ಕೆ ನಿಮಗೆ ಹೇಳೋದು you reserve the great energy ! ಇಂಗ್ಲೆಂಡಿನಲ್ಲಿ ಒಬ್ಬನಿಗೆ ಕತೆ ಬರೆಯೋಕೆ ಆಗಲ್ಲ. ಅಮೆರಿಕದವನೊಬ್ಬನಿಗೆ ಕತೆ ಬರೆಯೋಕೆ ಆಗುವುದಿಲ್ಲ, the language is exhausted, the feeling is ex austed. Everything is exhausted. ಒಬ್ಬ ಬ್ರಾಹ್ಮಣ ಕತೆ ಬರೆಯುವುದು ಕಷ್ಟ. ಹೀಗೆ ಆದರೆ ಇನ್ನು ಲಿಂಗಾಯಿತನಿಗೂ ಕಷ್ಟವಾಗುತ್ತದೆ. ಯಾಕೆ ಅಂತ ಹೇಳಿದರೆ their emotions are exhausted. ಊಟ ಇದೆ, ತಿಂಡಿ ಇದೆ, ಮಾಡಲು ಕೆಲಸಗಾರರಿದ್ದಾರೆ, ಕೈಯಲ್ಲಿ ದುಡ್ಡಿದೆ, ಅಧಿಕಾರ ಇದೆ. ಆಗ ಬರೆಯೊಕ್ಕೆ ಆಗ್ತದೇನ್ರಿ ಅವನಿಗೆ? It is suffering people, ಯಾರು ಈಗ ಬೆಳೆಯುತ್ತಿದ್ದೀರೋ ಅರಳುತ್ತಿದ್ದಿರೋ ಯಾರಲ್ಲಿ ಟೆನ್ಸನ್ ಇದೆಯೋ, ತಲೆ ತಲಾಂತರ ಅವಮಾನ ಸೇರಿದೆಯೋ, ಅಂಥ ನೀವು ಬರೆಯಲು ಆಗುತ್ತದೆ. This is great force. ಈ reservation ರಿಸರ್ವೇಶನ್ cultural fieldನಲ್ಲಿ ಬೇಕಾಗಿಲ್ಲ. You are the winner. ನೀವು ಗೆಲ್ಲುತ್ತೀರಿ. ಯಾವಾಗ ಗೆಲ್ಲುತ್ತೀರಿ ಅಂತ

ಹೇಳಿದರೆ the Bhraminical kind of clarity, the Bhramanical kind of efficiancyಗೆ tryನೇ ಮಾಡಕೂಡದು. ಬಾರಯ್ಯ, ನೀನು ನನ್ನ ಜೊತೆ ಸ್ಪರ್ಧಿಸು ಅಂತ ಹೇಳುತ್ತಾರೆ. ಅದು ಸ್ಪರ್ಧೆ ಅಲ್ಲವೆ ಅಲ್ಲ. ನಿಮಗೆ ನಿಮ್ಮದೇ ಕನ್ನಡ ಇದೆಯಲ್ಲ, ಅದರಲ್ಲಿ ಬರೀಬೇಕು. You are most eloquent people. ಎಷ್ಟು ಚೆನ್ನಾಗಿ ನಿಮಗೆ ಭಾಷೆ ಬರುತ್ತೆ ಗೊತ್ತೇನು? ನಿಮ್ಮ ಭಾಷೆ ನೋಡಿದರೆ ಬಾಕಿಯವರಿಗೆಲ್ಲ ಆಶ್ಚರ್ಯವಾಗಿ ಬಿಡುತ್ತದೆ. ಅದಕ್ಕೇನೆ ಯಾವ ವಿಮರ್ಶಕ ನಿಮ್ಗೆ ನಿಮ್ಮನ್ನ ನೀವು ಕಂಡು ಕೊಳ್ಳಲಿಕ್ಕೆ ಸಹಾಯ ಮಾಡ್ತಾನೊ, ಯಾವ ವಿಮರ್ಶಕ ನಿಮ್ಮ ಒಟ್ಟು ವೊತ್ತವಾಗಿದೆಯಲ್ಲ ಆ ಅನುಭವವನ್ನ ತೋರಿಸಿ ಕೊಡುತಾನೊ ಅವನೆ ನಿಜವಾದ ವಿಮರ್ಶಕ. ನಿಮ್ಮಲ್ಲಿ ವಿಮರ್ಶಕ ಹುಟ್ಟಿಕೊಳ್ಳಬೇಕು. ಈಗ ಬುದ್ಧಿಜೀವಿಗಳು ಹುಟ್ಟಿಕೊಳ್ಳಬೇಕು. ಯಾವ ಯಾವ ಥರ ಅಂದರೆ, ಆ ಕಲ್ಲನ್ನು ಈ ಕಡೆಯಿಂದ ನೋಡಿದರೆ ಹೇಗೆ ಕಾಣುತ್ತೆ, ಆ ಕಡೆಯಿಂದ ನೋಡಿದರೆ ಹೇಗೆ ಕಾಣಿಸುತ್ತದೆ, ಈ ದ್ವೈತ, ಅದ್ವೈತ, ವಿಶಿಷ್ಟಾದ್ವೈತ all nonsense ಆ ಥರ ಅಲ್ಲ.

ದಯವಿಟ್ಟು ನೆನಪಿಟ್ಟುಕೊಳ್ಳಿ, ಯಾವ ಒಕ್ಕಲಿಗನಾಗಲಿ, ಲಿಂಗಾಯತರಾಗಲಿ, ಬ್ರಾಹ್ಮಣರಾಗಲಿ ನಿಮ್ಮನ್ನ ನಂಬೊಲ್ಲ. ಇದನ್ನ ಬೇಸರದಲ್ಲಿ ಹೇಳ್ತಾ ಇದ್ದೇನೆ ನಾನು. ಬಹಳ ನೋವುಂಡು ಜೀವನವನ್ನು ನೋಡಿ educate ಆಗಿರೊನು ಸ್ವಲ್ಪ sympathaise ಮಾಡ್ತನೆ ಅಷ್ಟೇ. ಯಾವನೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ. ಏನ್ಮಾಡುತ್ತಾನೆ ಗೊತ್ತೇನು? reform ಮಾಡಿ, ಅದು ಮಾಡಿ ಇದು ಮಾಡಿ, ನಿಮಗೆ ಕಾಫಿ ಕೊಡಿಸಿ ಮಸಾಲೆ ದೋಸೆ ಕೊಡಿಸಿ ಏನೇನೂ ಮಾಡಿ ನಿಮ್ಮನ್ನು ಹಾಳು ಮಾಡುತ್ತಾನೆ. ಕೂರಿಸುಕೊ ಬಿಟ್ಟು ಹೊಗಳುತ್ತಾನೆ. ಎಷ್ಟು ಚೆನ್ನಾಗಿ ಬರೆಯುತ್ತಿಯೂ ನೀನು. ನೀನು ಇಲಿಯಟ್ ಥರ ಬರೀತಿಯಾ, ಲೀವೀಸ್ ಥರ ವಿಮರ್ಶೆ ಮಾಡ್ತಿಯ all nonsense, ಹೊಗಳಿಕೆ ನಂಬಬೇಡಿ. Trust your geniousness. ನಿಮಗೆ ಪ್ರತಿಭೆ ಯಾವ ಥರ ಇರುತ್ತೆ ಅಂತ ಹೇಳಿದರೆ ನಿಮ್ಮ ಪ್ರತಿಭೆಯಂತಹ ಪ್ರತಿಭೆ ಬೇರೆ ಯಾರಿಗೂ ಇರುವುದಿಲ್ಲ. ನೆನಪಿಟ್ಟುಕೊಳ್ಳಿ ಈ ಹೊತ್ತು ನೀವು ನಿಮ್ಮ ಅವಮಾನವನ್ನು ನಿಮ್ಮ ನೋವನ್ನ ಎಷ್ಟೋ ದಿವಸದಿಂದ ಬಂದಿರುವ ಅನುಭವವನ್ನೆಲ್ಲ ಹೇಳಬೇಕಾಗಿದೆ. As soon as you recognise that, you will be a critic, you will be a poet, you will be a Singer, ಅದನ್ನ ನೀವು ನೆನಪಿಟ್ಟುಕೊಳ್ಳಬೇಕು. ನಿಮ್ಮ ಅನುಭವಗಳನ್ನು ನೀವು ಕಂಡುಕೊಳ್ಳಿರಿ ಅಂತ ಹೇಳುತ್ತೇನೆ ನಾನು.

ಪಾಕಿಸ್ತಾನ ಇಂಡಿಯಾದಿಂದ ಏಕೆ ಬೇರ್ಪಟ್ಟಿತು ಗೊತ್ತೇನು? ಇಂದು ಪಾಕಿಸ್ತಾನದಲ್ಲಿ ಜನರಲ್ಸ್ ಲೆಫ್ಟಿನೆಂಟ್ಸ್, ಕಲೆಕ್ಟರ್ಸ್, ಕ್ಯಾಪ್ಟನ್ಸ್, ಎಲ್ಲಾ ವಿಭಾಗಡ ಮೇಲಾಧಿಕಾರಿಗಳೂ, ವಿಮಾನ ದಳದವರೂ, ಹಡಗು ದಳದವರೂ– ಎಲ್ಲರೂ ಸಹ ಮುಸ್ಲೀಮರು. ಇಂಡಿಯಾದಲ್ಲೇ ಮುಂದುವರೆದಿದ್ದರೆ 10 ಪರ್ಸೆಂಟ್ ಪ್ರಾತಿನಿಧ್ಯಕ್ಕಾಗಿ ಅವರು ಕೈಯೊಡ್ಡ ಬೇಕಾಗುತ್ತಿತ್ತು!

ಧರ್ಮಲಿಂಗಂ

ಈ 'ಮೀಸಲಾತಿ' ನಮ್ಮ ದೇಶಕ್ಕೇನು ಹೊಸದಲ್ಲ. ಇದು ಹಿಂದೂ ಧರ್ಮದಷ್ಟೇ ಪುರಾತನವಾದುದು. ದೇವರಲ್ಲಿ ನಂಬಿಕೆ ಇರುವ ಹಿಂದುಗಳು ಹೀಗೆನ್ನುತ್ತಾರೆ: ಸ್ವತಃ ದೇವರೇ ಈ ಮೀಸಲಾತಿ ತತ್ವವನ್ನು ಇಂಡಿಯಾದಲ್ಲಿ ಮೊಟ್ಟ ಮೊದಲಿಗೆ ಪ್ರಾರಂಭಿಸಿದನು. ಹೇಗೆಂದು ನೀವು ಕೇಳಬಹುದು. ಮನುಧರ್ಮ ಶಾಸ್ತ್ರವನ್ನು ಪರಿಶೀಲಿಸಿ. ಈ ಮನು ಧರ್ಮ ಶಾಸ್ತ್ರದ ಪ್ರಕಾರ ಎಲ್ಲಾ ಹುದ್ದೆಗಳು ಅಂದರೆ ನ್ಯಾಯಾಧೀಶರು, ಮಂತ್ರಿಗಳು, ನೌಕರರು ಇತ್ಯಾದಿ ಬ್ರಾಹ್ಮಣರಿಗೆ ಮಾತ್ರ ಮೀಸಲು. ಸಂಸ್ಕೃತ ವಿದ್ಯೆಯನ್ನು ಬ್ರಾಹ್ಮಣರು ತಮಗೇ ಮೀಸಲಿಟ್ಟುಕೊಂಡರು. ಅಬ್ರಾಹ್ಮಣ ಸಂಸ್ಕೃತ ಓದುವುದು ಮಹಾಪರಾಧ ಎಂದು ನಂಬಲಾಯ್ತು. ಶೂದ್ರನೇನಾದರೂ ಒಂದು ರಾಜ್ಯವನ್ನು ಆಳುವ ಪರಿಸ್ಥಿತಿ ಒದಗಿದರೆ ಆ ರಾಜ್ಯವನ್ನೆ ಬ್ರಾಹ್ಮಣರು ತೆಜಿಸಬೇಕೆಂದು ತಾಕೀತು ಮಾಡಲಾಯ್ತು. ಈ ರೀತಿಯಾಗಿ ಇಂಡಿಯಾದಲ್ಲಿ ಮೀಸಲಾತಿ ತತ್ವವನ್ನು ಮನುಧರ್ಮಶಾಸ್ತ್ರ ಪ್ರತಿಪಾದಿಸಿದೆ, ಮನುಧರ್ಮ ಶಾಸ್ತ್ರವನ್ನು ದೇವರೇ ಉಪದೇಶಿಸಿದನೆಂದು ನೀವು ಭಾವಿಸುವುದಾದರೆ ಈ ಮೀಸಲಾತಿ ತತ್ವಕ್ಕೆ ದೇವರೇ ಜವಾಬ್ದಾರನೆಂದೂ ಹೇಳಬೇಕು. ಆದರೆ ಪುರಾತನ ಮನುಧರ್ಮಶಾಸ್ತ್ರದ ಮೀಸಲಾತಿಗೂ ಇಂದಿನ ಮೀಸಲಾತಿಗೂ ಮೂಲಭೂತ ವ್ಯತ್ಯಾಸವಿದೆ. ಪುರಾತನ ಮೀಸಲಾತಿಯಲ್ಲಿ ಅಧಿಕಾರ ಮತ್ತು ಪ್ರತಿಷ್ಠೆಯ ಸ್ಥಾನಗಳೆಲ್ಲ ಮೇಲ್ಜಾತಿಯವರಿಗೆ ಮೀಸಲಾಗಿದ್ದವು. ಆದರೆ ಆಧುನಿಕ ಮೀಸಲಾತಿಯು ಕೆಳಜಾತಿಗಳ ದಲಿತರಿಗೆ ನ್ಯಾಯ ದೊರಕಿಸುವುದಕ್ಕಾಗಿ ಹುಟ್ಟಿಕೊಂಡಿದೆ. ಯಾಕೆಂದರೆ ಈ ಜನಾಂಗಗಳು ರಾಷ್ಟ್ರದ ಸೇವೆಯಲ್ಲಿ ತಮ್ಮ ಪಾಲನ್ನು ಅನುಭವಿಸಿಲ್ಲ.

ಬ್ರಿಟೀಷರು– ಮುಸ್ಲಿಮರು, ಸಿಕ್ಕರು ಮತ್ತು ಆಂಗ್ಲ ಭಾರತೀಯರಿಗೆ ಪ್ರಾತಿನಿಧ್ಯ ಮತ್ತು ಮೀಸಲಾತಿಯನ್ನು ಕೊಟ್ಟರು. ಆದರೆ ಅಸ್ಪೃಶ್ಯರಿಗೆ ಯಾವುದೇ ಮೀಸಲಾತಿಯನ್ನು ಕೊಡಲಿಲ್ಲ. ಅದಕ್ಕೆ ಕಾರಣ ಅಸ್ಪೃಶ್ಯರು ತೀರ ಬಡವರು,

---

ಅವಿದ್ಯಾವಂತರೂ ಆಗಿದ್ದುದು ಅಥವಾ ಅವರ ಪರ ಹೋರಾಡುವ ನಾಯಕರೇ ಇರಲಿಲ್ಲ. ಅವರಿಗಿದ್ದ ಒಬ್ಬನೇ ನಾಯಕನೆಂದರೆ ಮಹಾತ್ಮಾಗಾಂಧಿ. ಗಾಂಧಿಯವರ ಪ್ರಧಾನ ಆಸಕ್ತಿ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ದೊರಕಿಸುವುದೇ ಆಗಿತ್ತು. ಹರಿಜನರಿಗೆ ಸರಕಾರಿ ಸೇವೆ ಮತ್ತು ವ್ಯಾಪಾರ ವಾಣಿಜ್ಯಗಳಲ್ಲಿ ಅವಕಾಶ ಒದಗಿಸಬೇಕೆಂಬುದರ ಕಡೆಗೆ ಗಾಂಧಿಜಿಯವರಿಗೆ ಆಸಕ್ತಿ ಇರಲಿಲ್ಲ. ನಿಮ್ನ ಜಾತಿಯವರಿಗೆ ಸರಕಾರಿ ಸೇವೆಗಳಲ್ಲಿ ಮೀಸಲಾತಿ ಬೇಕೇ ಬೇಕೆಂದು ಏಕಾಏಕಿ ಹೋರಾಡಿದ ಕೀರ್ತಿ ಡಾ|| ಅಂಬೇಡ್ಕರ್‌ಗೆ ಸಲ್ಲುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳು ಈ ಮೀಸಲಾತಿಯ ಮುಂದುವರಿಕೆಗಾಗಿ ಹಿಂದುಳಿದ ವರ್ಗಗಳ ಜೊತೆ ಸೇರಿ ತಮ್ಮ ಹೋರಾಟವನ್ನು ಮುಂದುವರೆಸಬೇಕು. ಇಂದುಳಿದ ವರ್ಗಗಳೇ ರಾಷ್ಟ್ರದ ಜನಸಂಖ್ಯೆಯ ಸುಮಾರು ಶೇಕಡ 50ರಷ್ಟಿದೆ. ಮುಸ್ಲಿಮರು ಒಟ್ಟು ಜನಸಂಖ್ಯೆಯ 10ರಷ್ಟಿದ್ದಾರೆ. ಇವತ್ತಿಗೂ ಕೂಡ ಅವರಿಗೆ ಪ್ರಾತಿನಿಧ್ಯ ಶೇಕಡ 2ಕ್ಕಿಂತ ಹೆಚ್ಚಿಗೆ ಇಲ್ಲ. ನೆನಪಿರಲಿ ಅಸ್ಪೃಶ್ಯರಿಗೆ ಮೀಸಲಾತಿ ರದ್ದು ಪಡಿಸಿದರೆ ಹಿಂದುಳಿದ ವರ್ಗಗಳಿಗೆ ಇರುವ ಮೀಸಲಾತಿಯನ್ನೂ ರದ್ದುಪಡಿಸುತ್ತಾರೆ. ಹಿಂದುಳಿದ ವರ್ಗಗಳಿಗೆ ಸರಕಾರಿ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿದ್ಯವಿದ್ದರೂ ದೇಶದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸಮನಾಗಿಲ್ಲ. ತಮಿಳು ನಾಡಿನಲ್ಲಿ ಈಗ ಒಟ್ಟು ಮೀಸಲಾತಿ ಶೇಕಡ 60 ಇದೆ. ಅದೇ ರೀತಿ ಕರ್ನಾಟಕದಲ್ಲಿ ಶೇಕಡ 50ರಿಂದ 58ರವರೆಗೆ ಇದೆ. ಭಾರತೀಯ ರಾಜಕೀಯ ವ್ಯವಸ್ಥೆಯು ಮುಂದುವರೆಯಬೇಕಾದರೆ ಮೀಸಲಾತಿಯನ್ನು ಆ ರಾಜಕೀಯ ವ್ಯವಸ್ಥೆಯ ಅವಿಬಾಜ್ಯ ಅಂಗವೆಂದು ಒಪ್ಪಿಕೊಳ್ಳಬೇಕು. ಮೀಸಲಾತಿಯು ಮುಂದುವರೆಯಬೇಕಾದರೆ ಹರಿಜನರ, ಕ್ರಿಶ್ಚಿಯನ್ನರ, ಹಿಂದುಳಿದ ವರ್ಗಗಳ ಮತ್ತು ಮುಸ್ಲಿಮರ ಒಕ್ಕೊರಳಿನ ಬೆಂಬಲವಿರಬೇಕು. ಮೇಲ್ಜಾತಿಯವರ ಪ್ರಾಬಲ್ಯವನ್ನು ಮುರಿಯಬೇಕಾದರೆ ಯಾವುದೇ ಒಂದು ಜಾತಿಯ ಜನರಿಂದ ಸಾಧ್ಯವಿಲ್ಲ. ಆದ್ದರಿಂದ ಕೆಳಜಾತಿಗಳ ಎಲ್ಲರೂ ಒಗ್ಗಟ್ಟಾಗಿ ಅವರನ್ನು ಬಗ್ಗು ಬಡಿಯಬೇಕು.

ಮೀಸಲಾತಿಯಿಂದ ಅರ್ಹತೆ ಮತ್ತು ದಕ್ಷತೆಗಳಿಗೆ ಪೆಟ್ಟು ಬೀಳುತ್ತದೆ ಎಂಬುದನ್ನು ನಾನು ವಿರೋಧಿಸುತ್ತೇನೆ. ಈ ಅರ್ಹತೆ ಮತ್ತು ದಕ್ಷತೆ ಎಂದರೆ ಏನು? ಹೇಗೆ ಈ ಅರ್ಹತೆ ಮತ್ತು ದಕ್ಷತೆ ಗಳಿಸುತ್ತಾರೆ? ಬೇರೆ ಜಾತಿಯ ಜನರಿಗೆ ವಿದ್ಯಾಭ್ಯಾಸವನ್ನು ನಿರಾಕರಿಸಿದ್ದರಿಂದ ಇದು ಸಾಧ್ಯವಾಯಿತು ಅಷ್ಟೆ. ತೀರಾ ಸಣ್ಣ ಜನಾಂಗವಾದ ಬ್ರಾಹ್ಮಣರು ಹೇಗೆ ಅತ್ಯಂತ ಅರ್ಹತೆ ಮತ್ತು ದಕ್ಷತೆಯುಳ್ಳವರಾದರು?

ಸಮಾಜಶಾಸ್ತ್ರಜ್ಞರು, ವಿಜ್ಞಾನಿಗಳು ಹಾಗು ಇತರರು ಮಾನವ ಜನಾಂಗಕ್ಕೆ ಎರಡು ಕಣ್ಣುಗಳಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ: ಒಂದು ಕಣ್ಣು ಅಸ್ತಿ,

ಇನ್ನೊಂದು ಕಣ್ಣು ಶಿಕ್ಷಣ: ಹರಿಜನರಿಗೆ ಆಸ್ತಿ ಮತ್ತು ಶಿಕ್ಷಣವನ್ನು ಕೊಡ ಕೂಡದೆಂದು ಮನುಧರ್ಮ ಶಾಸ್ತ್ರ ಕಟ್ಟಪ್ಪಣೆ ಮಾಡಿತು. ಅಂದರೆ ಈ ದೇಶದಲ್ಲಿ ಹರಿಜನರು ಕಣ್ಣುಗಳಿಲ್ಲದೆ ಸಂಪೂರ್ಣ ಕುರುಡಾಗಿ ಬದುಕಬೇಕು! ಯಾವುದೇ ಸಮುದಾಯವಾಗಲಿ ಅಥವಾ ರಾಷ್ಟ್ರವಾಗಲಿ ಶಿಕ್ಷಣವಿಲ್ಲದೆ ಆಸ್ತಿ ಇಲ್ಲದೆ ಪ್ರಗತಿ ಹೊಂದಲು ಸಾಧ್ಯವಿಲ್ಲ. ಅದಿಲ್ಲದಿದ್ದಾಗ ಅವರು ಗುಲಾಮರಾಗಿದ್ದಾರೆ. ಪುರಾತನ ರೋಮ್ ಮತ್ತು ಗ್ರೀಕ್ ದೇಶಗಳಲ್ಲಿ ಈ ಪರಿಸ್ಥಿತಿ ಇತ್ತು.

ಸಂವಿಧಾನದ 17ನೇ ವಿಧಿಯ ಪ್ರಕಾರ ಅಸ್ಪೃಶ್ಯತೆಯನ್ನು ತೊಡೆದು ಹಾಕಲಾಗಿದೆ. ಆದರೆ ನಿಜ ಜೀವನದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ನಡೆಸಿರುವ ಪ್ರಯತ್ನ ತೀರ ಅಲ್ಪ. ಈ ಅಸ್ಪೃಶ್ಯತೆ ವಿರೋಧಿ ಕಾನೂನನ್ನು ಜಾರಿಗೆ ತರುವವರು ಯಾರು? ಅದು ಸವರ್ಣೀಯ ಹಿಂದೂಗಳಿಂದಲೇ ಆಗಬೇಕು, ಏಕೆಂದರೆ ಅವರೇ ಎಲ್ಲಾ ಇಲಾಖೆಗಳ ಅಧಿಕಾರದ ಮುಖ್ಯಸ್ಥರಾಗಿದ್ದಾರೆ. ಅವರೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಿತಿಗಳಲ್ಲಿದ್ದಾರೆ. ಅವರ ಗಮನವೆಲ್ಲ ಕೆಳಜಾತಿಗಳಿಂದ ಬರುವ ಅಭ್ಯರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದರ ಕಡೆಗೆ ಇರುತ್ತದೆ. ಆದಕ್ಕೇ ಮೀಸಲಾತಿ ಅನಿವಾರ್ಯವಾಗುತ್ತದೆ. ಮೀಸಲಾತಿ ಅನಿವಾರ್ಯವಾಗುವುದಾದರೆ ಅದು ಆರ್ಥಿಕ ತತ್ವದ ಮೇಲೆ ಆಗಲೆಂದು, ಆಗ ಎಲ್ಲಾ ಜಾತಿಯ ಬಡವರನ್ನು ಸಮಾನವಾಗಿ ಕಂಡಂತಾಗುತ್ತದೆ, ಎಂದು ಮೇಲ್ಜಾತಿಯವರು ಹೇಳುತ್ತಾರೆ. ಆದರೆ ಮೀಸಲಾತಿಯ ಉದ್ದೇಶ ಅದಲ್ಲ. ನಿಮ್ನ ವರ್ಗಗಳು ಪರಿಶಿಷ್ಟ ಮತ್ತು ಹಿಂದುಳಿದ ಜಾತಿಗಳಿಗೆ ಮಾತ್ರ ಮೀಸಲಾತಿ ಅಗತ್ಯ. ಏಕೆಂದರೆ ಅವರಿಗೆ ಸ್ಥಾನಮಾನಗಳಿಲ್ಲ. ಮೇಲ್ಜಾತಿಯವರೊಡನೆ ಸಮಾನರೆಂಬಂತೆ ನಡೆದುಕೊಳ್ಳಲು ಸಾಧ್ಯವಿಲ್ಲ. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟು ಜನ ಮುಸ್ಲಿಮರಿಗೆ ಓದಲು ಅವಕಾಶ ಸಿಕ್ಕಿದೆ? ಒಂದು ಪರ್ಸೆಂಟ್ ಸಹ ಇಲ್ಲ! ಪಾಕಿಸ್ಥಾನ ಇಂಡಿಯಾದಿಂದ ಏಕೆ ಬೇರ್ಪಟ್ಟಿತು ಗೊತ್ತೇನು? ಇಂದು ಪಾಕಿಸ್ಥಾನದಲ್ಲಿ ಜನರಲ್ಸ್, ಲೆಫ್ಟಿನೆಂಟ್ಸ್, ಕಲೆಕ್ಟರ್ಸ್, ಕ್ಯಾಪ್ಟನ್ಸ್ ಎಲ್ಲಾ ವಿಭಾಗದ ಮೇಲಾಧಿಕಾರಿಗಳೂ, ವಿಮಾನದಳದವರೂ, ಹಡಗುದಳದವರೂ—ಎಲ್ಲರೂ ಸಹ ಮುಸ್ಲಿಮರು. ಇಂಡಿಯಾದಲ್ಲಿಯೇ ಇವರು ಮುಂದುವರೆದಿದ್ದರೆ ಇಂದು ಅವರೆಲ್ಲರ ಅದೃಷ್ಟ ಏನಾಗುತ್ತಿತ್ತು? ಸಂಯುಕ್ತ ಭಾರತದಲ್ಲಿ ಅವರು ಜನರಲ್‌ಗಳ ಸೇನಾದಿ ಪಡೆಗಳಲ್ಲಿ 10 ಪರ್ಸೆಂಟ್ ಪ್ರಾತಿನಿಧ್ಯಕ್ಕಾಗಿ ಕೈಯೊಡ್ಡಬೇಕಾಗುತ್ತಿತ್ತು. ಆದ್ದರಿಂದ ಮೇಲ್ವರ್ಗದ ಹಿಂದೂಗಳ 'ಯೋಗ್ಯತೆ' ಮತ್ತು 'ಸಾಮರ್ಥ್ಯ'ಗಳಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಪಾಕಿಸ್ತಾನ ಉದಯವಾಯಿತು. ಹೋಗಲಿ. ಭಾರತ ಏಕೆ ಸ್ವತಂತ್ರವಾಯಿತು? 1947 ರಲ್ಲಿ ಗಾಂಧೀಜಿ, ನೆಹರು, ಸುಭಾಷ್‌ಚಂದ್ರ ಬೋಸ್ ಹಾಗೂ ಮತ್ತಿತರರಿಗೆ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ನಡೆಸೋದು

ಏಕೆ ಅಗತ್ಯವಾಗಿತ್ತು? ಧರ್ಮ ಹಾಗೂ ಜಾತಿಗಳಲ್ಲಿ- ಛಿದ್ರರಾಗಿರುವ ಭಾರತೀಯರು ಅನಾಗರಿಕರೆಂದೂ, ಹಿಂದುಳಿದವರೆಂದೂ ಮತ್ತು ಪೋಲಿಸ್ ಇನ್ಸ್‌ಪೆಕ್ಟರ್ ಅಥವಾ ಡಿಸ್ಟ್ರಿಕ್ಟ್ ಕಲೆಕ್ಟರ್ ಆಗಲೂ ಅಸಮರ್ಥರೆಂದೂ ಬ್ರಿಟೀಷರು ಭಾವಿಸಿದ್ದರು. ಆದ್ದರಿಂದ ಎಲ್ಲಾ ಜಿಲ್ಲೆಯ ಸರ್ಕಾರಿ ನೌಕರರ ಉನ್ನತ ಹುದ್ದೆಯಲ್ಲಿರುವವರೂ ಬ್ರಿಟಿಷ್ ಜನರೇ ಆಗಿದ್ದರು. ಎಷ್ಟು ಜನ ಇಂಡಿಯಾದ ಬ್ರಾಹ್ಮಣ ಬುದ್ಧಿವಂತರು, ಬ್ರಿಟೀಷರ ಯೋಗ್ಯತೆ ಮತ್ತು ಸಾಮರ್ಥ್ಯಗಳ ಅಧೀನದಲ್ಲಿದ್ದರು ನಿಮಗೆ ಗೊತ್ತೇ? ನಾನು ಒಬ್ಬ ಬುದ್ಧಿವಂತ ಅಯ್ಯರ್ ಅಥವಾ ಅಯ್ಯಂಗಾರಿಯಾಗಿದ್ದರೂ ಸಹ, ಎಸ್. ಪಿ. ಅಥವಾ ಸರ್ಕಾರದ ಸೆಕ್ರಟರಿ ಆಗಲಿಕ್ಕೆ ಸಾಧ್ಯವಿರುತ್ತಿರಲಿಲ್ಲ. ಯಾಕೆಂದರೆ ಬಿಳಿಯರ ಯೋಗ್ಯತೆ ಮತ್ತು ಸಾಮರ್ಥ್ಯಗಳೂ ಆಳ್ವಿಕೆಯಲ್ಲಿದ್ದರಿಂದ. ಬಿಳಿಯರ ಯೋಗ್ಯತೆ ಮತ್ತು ಸಾಮರ್ಥ್ಯಗಳಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ನಾವು ಸ್ವಾತಂತ್ರ್ಯಕ್ಕೆ ಹೋರಾಟ ನಡೆಸಿದವು. ನಿಮಗೆಲ್ಲಾ ಗೊತ್ತು ಜರ್ಮನ್-ಜರ್ಮನಿಯ ಜರ್ಮನ್ನರು- ಈ ಪ್ರಪಂಚದ ಎಲ್ಲಾ ಪಂಗಡದ ಸಾಮರ್ಥ್ಯ ಬುದ್ಧಿವಂತರನ್ನು ನುಂಗಿ ಹಾಕಿತು. ಇದು ಜರ್ಮನ್‌ರಿಂದ ಹೇಳಲ್ಪಟ್ಟಿಲ್ಲ. ಆದರೆ ಅವರ ಶತ್ರುಗಳಿಂದ ಹೇಳಲ್ಪಟ್ಟಿದೆ. ಫ್ರೆಂಚ್, ಬ್ರಿಟೀಷ್, ಹಾಗೂ ರಶ್ಯನ್ನರು—"ಜರ್ಮನರು ವೈಜ್ಞಾನಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಸೈನ್ಯ ಪಡೆಗಳಲ್ಲಿ ತುಂಬಾ ಸಾಮರ್ಥ್ಯವುಳ್ಳ ಬುದ್ಧಿವಂತರು" ಎಂದು ಒಪ್ಪಿಕೊಂಡಿರುತ್ತಾರೆ. ನಂತರ ಇದರ ಉತ್ತರವೇನು? ಜರ್ಮನ್ನರು ಪ್ರಪಂಚವನ್ನು ಆಳಲಿಕ್ಕೆ ಇಷ್ಟಪಟ್ಟರು! ಅಡಾಲ್ಫ್ ಹಿಟ್ಲರನು ತನ್ನ ಪುಸ್ತಕ ಒಂದರಲ್ಲಿ ಹೀಗೆ ಬರೆದಿದ್ದಾನೆ. "ಬಾಲ್ಕನ್ ರಷ್ಯನ್ನರು ಹಿಂದುಳಿದವರು. ಜರ್ಮನ್ನರು ಅತ್ಯುಚ್ಛ ಪಂಗಡದವರು. ಈ ಆರ್ಯ ಪಂಗಡವು ಪ್ರಪಂಚವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ. ಇದು ದೇವರ ಆಜ್ಞೆ" ಎಂದು ಅವನು ಹೇಳಿದ್ದಾನೆ. ಇದರ ಪ್ರತಿಫಲವೇನಾಯಿತು? ಜರ್ಮನ್ನರ ಯೋಗ್ಯತೆ ಮತ್ತು ಸಾಮರ್ಥ್ಯಗಳಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಪ್ರಪಂಚ ಹಾಗೂ ಪ್ರಜಾಪ್ರಭುತ್ವವು ಗ್ರೇಟ್ ಬ್ರಿಟನ್, ಫ್ರಾನ್ಸ್ ಹಾಗೂ ಸಂಯುಕ್ತ ಸಂಸ್ಥಾನಗಳ ಮುಂದಾಳತ್ವದಲ್ಲಿ, ಜರ್ಮನಿ ವಿರುದ್ಧ ಪ್ರಪಂಚದ ಎರಡು ಮಹಾಯುದ್ಧಗಳನ್ನು ಬಾರಿ ಬೆಲೆ ಹಾಗೂ ಮಿಲಿಯನ್‌ಗಟ್ಟಲೆ ಜನರ ಜೀವ ಹಾನಿಯಲ್ಲಿ ಹೋರಾಟ ನಡೆಸಬೇಕಾಯಿತು. ಆದ್ದರಿಂದ ಯೋಗ್ಯತೆ ಹಾಗೂ ಸಾಮರ್ಥ್ಯಗಳು ಸ್ಪಷ್ಟವಾದ ವಿಚಾರವಲ್ಲ. ಇದು ಪ್ರಪಂಚವನ್ನು ಆಳುವುದಕ್ಕೆ ಜನರಿಗೆ ದಾರಿ ಮಾಡಿಕೊಡುವಂತಹ ಮೌಲ್ಯವಲ್ಲ. ಇದು ಪ್ರಪಂಚವನ್ನು ಆಳುವ ಅನೇಕ ಕಾರಣಗಳಲ್ಲಿ ಒಂದು ಮಾತ್ರ.

ನೀವು, ನಿಮ್ಮನ್ನು ನೀವೆ ಚನ್ನಾಗಿ ಆಳಿಕೊಳ್ಳೋ ವಿಚಾರಕ್ಕೆ ವಿರುದ್ಧವಾಗಿರ ಬಿಷಪ್ ಸಾಹರಿಸೋರೆ ಬಳಿ ಹೋಗಿ, "ಬಂದು ಆಳಿ" ಎಂದು ಕೇಳಬೇಡಿ. ಈ ತತ್ವ

ವೆಂದರೆ ಸ್ವಂತ-ಸರ್ಕಾರ ಸ್ವ-ಆಳ್ವಿಕೆ. ಇಂದು ದುರ್ಬಲವಾಗಿದ್ದರೂ ಸಹ, ಹಿಂದು ಳಿದಿದ್ದರೂ ಸಹ ಸ್ವಂತವಾಗಿಯೇ ಆಳಬೇಕಾದುದರ ಅವಶ್ಯಕತೆ ಇದೆ. 'ಬ್ರಿಟೀಷರೇ ಬಂದು ಆಳಿ' ಅನ್ನುವುದಲ್ಲ! ಈ ದೇಶದ ಬಹುತೇಕ ಜನ ಹಿಂದುಳಿದವರು. ಆದ್ದರಿಂದ ಹಿಂದುಳಿದ ವರ್ಗಕ್ಕೆ ಈ ದೇಶ ಆಳೋದಕ್ಕೆ ಬಿಡಿ ಎಂದು ಕೇಳಬೇಕು.

ಯೋಗ್ಯತೆ ಹಾಗೂ ಸಾಮರ್ಥ್ಯಗಳು ಮನುಷ್ಯ ವರ್ಗದ ಚರಿತ್ರೆಯಲ್ಲಿ ಕೆಳ ವರ್ಗಗಳ ಅಭಿವೃದ್ಧಿಗಾಗಿ ಉಪಯೋಗಿಸಲ್ಪಟ್ಟಿಲ್ಲ. ಯೋಗ್ಯತೆ ಮತ್ತು ಸಾಮರ್ಥ್ಯ ಗಳು ಏಕಸ್ವಾಮ್ಯಕ್ಕೆ, ಹಿಂಸೆಗೆ, ಅಧಿಕಾರ ಮತ್ತು ಸ್ಥಾನ ಕಸಿದುಕೊಳ್ಳೋಕೆ ಉಪ ಯೋಗಿಸಲ್ಪಟ್ಟಿವೆ. ಮೂರು ಅಥವಾ ನಾಲ್ಕು ಸಾವಿರ ವರ್ಷಗಳಿಂದಲೂ ನಾವು ಬಹು ಬುದ್ಧಿವಂತ ಬ್ರಾಹ್ಮಣ ವರ್ಗದಿಂದ ಆಳಲ್ಪಡುತ್ತಿದ್ದೇವೆ. ಅವರೇನು ಮಾಡಿ ದ್ದಾರೆ? ಅವರು ಅಸ್ಪೃಶ್ಯತೆಯನ್ನು ಹೋಗಲಾಡಿಸಿದ್ದಾರೆಯೇ? ಅವರು ಜಾತಿಯ ಪಂಗಡಗಳ ವ್ಯವಸ್ಥೆಯನ್ನು ಹೋಗಲಾಡಿಸಿದ್ದಾರೆಯೆ ? ಅವರು 'ಸತಿ' ಪದ್ಧತಿ ಯನ್ನು ಹೋಗಲಾಡಿಸಿದ್ದಾರೆಯೆ? ಬಾಲ್ಯ ವಿವಾಹ ಹೋಗಲಾಡಿಸಿದ್ದಾರೆಯೆ? ಅವರು ಮಾಡಿದ್ದು ಏನೆಂದರೆ, ಲಕ್ಷಾನುಗಟ್ಟಲೆ ಮಕ್ಕಳನ್ನು ಐದು ವರ್ಷದ ಒಳಗೆ ಮದುವೆ ಮಾಡಿಸಿ ಮೂರು ವರ್ಷಗಳಲ್ಲಿ ವಿಧವೆ ಮಾಡಿಸುವಂಥಹುದು. ನಾನಿಲ್ಲಿ ಒಂದು ಉದಾಹರಣೆ ಕೊಡುತ್ತೇನೆ 1931ರ ಜನಗಣತಿಯ ಪ್ರಕಾರ ಇಂಡಿಯಾದಲ್ಲಿ 1 ರಿಂದ 5 ವರ್ಷದ ಹುತ್ತು ಸಾವಿರ ಅದಕ್ಕೂ ಹೆಚ್ಚು ಹಿಂದೂ ವಿಧವೆಯರಿದ್ದಾರೆ. ಎಷ್ಟು ಜನ 1 ರಿಂದ 5 ವರ್ಷದವರೆಗೆ ಮದುವೆ ಯಾಗಿದ್ದರು ಅಂತ ನೀವು ಯೋಚಿಸಬಹುದು. ಐದು ಲಕ್ಷ ಮಕ್ಕಳು ಐದು ವರ್ಷದ ಒಳಗೆ ವಿಧವೆಯರಾಗಿದ್ದರು !

ಇಂಡಿಯಾ ವಿಚಿತ್ರ ದೇಶ. ಮೊದಲು ದೇವರಿಂದ ಜತೆಗೆ ಜಾತಿ ಮತ್ತು ಅಸ್ಪೃ ಶ್ಯತೆಯ ತೊಡಕಿನಿಂದ ಕೂಡಿದೆ. ಅಸ್ಪೃಶ್ಯತೆಯು ಜಾತಿಯ ಒಂದು ಭಾಗ ಹಾಗೂ ಅದರಲ್ಲೇ ಸೇರಿರುವಂಥದ್ದು. ಅಸ್ಪೃಶ್ಯತೆಯು ಜಾತಿ ಇರುವವರೆಗೂ ಹೋಗುವಂಥ ದಲ್ಲ. ಜಾತಿಯೂ ಅಸ್ಪೃಶ್ಯತೆಯು ಉಳಿದಿರುವವರೆಗೂ ಹೋಗುವಂಥದಲ್ಲ. ಅವು ಒಂದಕ್ಕೊಂದು ಕೊಂಡಿ ಹಾಕ್ಕೊಂಡಿರುವಂಥವು. ಆದ್ದರಿಂದ ನಾವು ಅಸ್ಪೃಶ್ಯ ತೆಯು ಜಾತಿಯಾಧಾರವಾಗಿದೆ ಎಂದು ವಾದಿಸಲೇಬೇಕಾಗುತ್ತೆ. ಜಾತಿ ವಿನಾಶಕ್ಕೆ ಒಂದು ಸುಲಭ ನಿವಾರಣೆಯೆಂದರೆ ಅಂತರ್ಜಾತಿ ವಿವಾಹವಷ್ಟೆ. ಸರ್ಕಾರ ಅಥವಾ ಯಾವುದೇ ರಾಜಕೀಯ ಪಕ್ಷ ಅಂತರ್ಜಾತಿ ವಿವಾಹ ಕಡ್ಡಾಯಗೊಳಿಸುವ, ಸ್ವಜಾತಿ ವಿವಾಹ ಪದ್ಧತಿಯನ್ನು ವಿರೋಧಿಸುವ ಕಾಯಿದೆ ತರಬಲ್ಲದೆ? ಅಂಥ ಕಾಯಿದೆಗೆ ನೀವು ಒಪ್ಪಿಗೆ ನೀಡಿದಲ್ಲಿ ನಮಗೆ ಮೀಸಲಾತಿ ನಾಳೆಯಿಂದಲೇ ಬೇಕಾಗಿಲ್ಲ. ಅಂಥ ಕಾಯಿದೆ ಜಾರಿಗೆ ತನ್ನಿ; ಮೀಸಲಾತಿ ಇಲ್ಲವೆಂದು ಹೇಳಿ. ಆದ್ದರಿಂದಲೇ ಈ ಜನ ಎಲ್ಲಿಯವರೆಗೆ ಮೀಸಲಾತಿ ಮುಂದುವರೆಯುವುದು? ಎಂದು ಕೇಳುತ್ತಿದ್ದಾರೆ. ಹಾಗೆ ನೋಡಿದರೆ ಮೀಸಲಾತಿಯು ಜಾತಿ ಪದ್ಧತಿ ಇರುವವರೆಗೂ ಮುಂದುವರಿಯಬೇಕು.

ಕಲಿಯುಗದಲ್ಲಿರುವುವು ಎರಡೇ ಜಾತಿ. ಯಾವುವೆಂದರೆ ಬ್ರಾಹ್ಮಣರು ಹಾಗೂ ಅಬ್ರಾಹ್ಮಣರು. ಬ್ರಾಹ್ಮಣ ಮತ್ತು ಶೂದ್ರ, ಜಾತಿಯೆಂದಲ್ಲ. ಬ್ರಾಹ್ಮಣ ಬಿಟ್ಟು ಉಳಿದೆಲ್ಲ ಶೂದ್ರರೂ ಶೂದ್ರರೇ. ಜಪಾನಿಯರು, ಅಮೇರಿಕನ್ನರು, ಬ್ರಿಟೀಷರು ಎಲ್ಲಾ ಸೇರಿದಂತೆ ಅವರೆಲ್ಲ ಶೂದ್ರರು. ನಾನು ಹೇಳುವುದಲ್ಲ ಇದು. ಇದನ್ನು ಶಾಸ್ತ್ರ ಹೇಳುತ್ತದೆ. ಆದ್ದರಿಂದ ಹಿಂದೂತ್ವದ ಮೂಲಭೂತ ತತ್ವಗಳ ವಿರುದ್ದ ಹೋರಾಡದ ಹೊರತು, ಅಸ್ಪೃಶ್ಯತೆಯ ವಿರುದ್ಧ ಅಥವಾ ಜಾತಿ ವಿರುದ್ಧ ಹೋರಾಡಲಾರೆವು. ಪುರಿ ಶಂಕರಾಚಾರ್ಯ ಹೇಳುತ್ತಾನೆ: ಈ ಅಸ್ಪೃಶ್ಯತೆ, ಜಾತಿ ಪದ್ಧತಿ ಸೃಷ್ಟಿಸಿದ್ದು ದೇವರು. ದೇವರೇ ಬ್ರಾಹ್ಮಣನನ್ನು ಈ ಪ್ರಪಂಚದಲ್ಲೇ ಶ್ರೇಷ್ಠನು ಎಂದು ಸೃಷ್ಟಿಸಿರುವನು. ಆದ್ದರಿಂದ ಅಸ್ಪೃಶ್ಯತೆ ಮತ್ತು ಜಾತಿ ವಿನಾಶಕ್ಕೆ ಪ್ರಯತ್ನಪಡುವುದು ತಪ್ಪು! ಅದಕ್ಕೇ ಹರಿಜನ ಹೋಗಿ ಬ್ರಾಹ್ಮಣರ ಸಂಪೂರ್ಣನಂದ ಮೂರ್ತಿಯನ್ನು ಅನಾವರಣ ಮಾಡಿದಾಗ ಬೆನಾರಸ್ ಯೂನಿವರ್ಸಿಟಿಯ ಹಿಂದೂ ಜಾತೀಯ ವಿದ್ಯಾರ್ಥಿಗಳು ಗಂಗಾ ನದಿಗೆ ಹೋಗಿ ಅಲ್ಲಿ ಕಲುಷಿತ ನೀರಿನಿಂದ ತಾವೇ ಪರಿಶುದ್ಧರಾದರು! ಜತೆಗೆ ಬ್ರಾಹ್ಮಣ ಮೂರ್ತಿಯ ಮೇಲೆ ತಂದೆರಚಿದರು! ಕಾರಣ: ಅನಾವರಣ ಮಾಡಿದ್ದ ಜಗಜೀವನರಾಮರಿಂದ ಅದು ಅಪವಿತ್ರವಾಯಿತಂತೆ! ದೇವರೇ ಈ ಅಸ್ಪೃಶ್ಯತೆ, ಜಾತಿ ಸೃಷ್ಟಿಸಿದ್ದೆಂದರೆ ಇದು ತಪ್ಪೆಂದು ಹೇಳುವುದು ಹೇಗೆ ಸಾಧ್ಯ? ಅದಕ್ಕೆ ತಮಿಳು ನಾಡಿನ ಪೆರಿಯಾರ್ ರಾಮಸ್ವಾಮಿ ಶುರು ಮಾಡಿದ್ದು, "ಮೊದಲು ತೊಲಗಿಸಿ ಈ ದೇವರ" ಎಂದು. ೩೦೦೦ ವರ್ಷಗಳಿಂದ ಅಸ್ಪೃಶ್ಯತೆ ಅನುಭವಿಸಿದ ಜನಕ್ಕೆ ಈ ದೇವರುಗಳಿಂದ ಏನು ಪ್ರಯೋಜನ? ಗಾಂಧೀಜಿ ಸಾಮಾನ್ಯವಾಗಿ ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ. ಯಾಕೆ? ಎಂದು ಕೇಳಲಾಗಿ ಒಮ್ಮೆ ಅವರು ಹೇಳುತ್ತಾರೆ: "ದೇವಸ್ಥಾನದಲ್ಲಿ ಅಸ್ಪೃಶ್ಯತೆ ಇದ್ದಲ್ಲಿ ಅಸಮಾನತೆ ಇದ್ದಲ್ಲಿ ಅಲ್ಲಿ ದೇವರಿಲ್ಲ" ಎಂದು. ಆದರೆ "ಈ ವ್ಯವಸ್ಥೆಗೆ ಕಾರಣ ದೇವರು. ಈ ದೇವರೇ ೩೦೦೦ ವರ್ಷಗಳಿಂದ ಅಸ್ಪೃಶ್ಯರನ್ನು ಗುಡಿಗೆ ಬರದಂತೆ ತಡೆದದ್ದು" ಎನ್ನುವುದನ್ನು ಅವರು ಮರೆಯುತ್ತಾರೆ. ಆದ್ದರಿಂದಲೇ ಬಸವಲಿಂಗಪ್ಪ ಒಮ್ಮೆ ಹೇಳಿದ್ದು, "ದೇವರುಗಳನ್ನೆಲ್ಲ ಗಟಾರಕ್ಕೆ ಎಸೆಯಿರಿ" ಎಂದು. ಯಾವಾಗ ಅವು ಅಸ್ಪೃಶ್ಯತೆಯನ್ನು ಹೋಗಲಾಡಿಸಲಾರವೊ ಅಥವಾ ಅಸ್ಪೃಶ್ಯತೆಯ ಹುಟ್ಟಿಗೆ ಅವು ಕಾರಣವೋ—ಅಂಥ ದೇವರುಗಳಿಂದಾಗುವ ಪ್ರಯೋಜನವೇನು? ಜ್ಞಾಪಕವಿರಲಿ, ಪ್ರಪಂಚ ಬಹಳ ಬದಲಾಗಿದೆ. ಯೂರೋಪಿನಲ್ಲಿ ಬೇರುಬಿಟ್ಟಿದ್ದಂಥ ಹೆಚ್ಚಿನ ಗುಲಾಮಗಿರಿ ಹೋಗುತ್ತಿದೆ. ಬದಲಿ ವ್ಯವಸ್ಥೆಗಳು ಜಾರಿಗೆ ಬಂದಿವೆ—ಧರ್ಮಗುರುಗಳಿಂದಲ್ಲ, ಅದು ಕೇವಲ ನಾಸ್ತಿಕತೆಯಿಂದ. ವಿಲಿಯನ್‌ಗಟ್ಟಲೆ ಆಫ್ರಿಕಾದ ಕಪ್ಪು ಆಳುಗಳನ್ನು ಅಮೇರಿಕಾಕ್ಕೆ ಕೊಂಡೊಯ್ದು, ಗಂಡನನ್ನು ಒಬ್ಬಾತನಿಗೆ, ಆತನ ಹೆಂಡತಿಯನ್ನು ಮತ್ತೊಬ್ಬನಿಗೆ, ಮಗನನ್ನು ಮಗದೊಬ್ಬನಿಗೆ ಮಾರಿದರು. ದೇವರು ಇದನ್ನೆಲ್ಲ ನೋಡುತ್ತಲೇ ಇದ್ದನು! 'ಗುಲಾಮರ ಹಡಗ'ಲ್ಲಿ ಪ್ರಯಾಣ ಮಾಡುತ್ತಿದ್ದ ಪ್ರತಿ

ಯೊಬ್ಬ ನೀಗ್ರೊ ಮಹಿಳೆ ಪೋರ್ಚಗೀಸರಿಂದ, ಬ್ರಿಟೀಷರಿಂದ, ಆಂಗ್ಲರಿಂದ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾಗ ಒಬ್ಬನೇ ಒಬ್ಬ ಕೆತೋಲಿಕ್ ಚರ್ಚಿನ ಮುಖಂಡನೂ ಇದರ ವಿರುದ್ಧ ಉಸಿರೆತ್ತಲಿಲ್ಲ. ಅಷ್ಟೇ ಏಕೆ ಅಮೆರಿಕಾದ ಕ್ರಿಶ್ಚಿಯನ್ ಚರ್ಚುಗಳೇ ಅರವತ್ತು ಸಾವಿರಕ್ಕೂ ಹೆಚ್ಚು ಗುಲಾಮರನ್ನು ಹೊಂದಿದ್ದವು. ಅದೇ ರೀತಿ ಇಂಡಿಯಾದಲ್ಲಿ ಹಿಂದೂ ದೇವಸ್ಥಾನಗಳಿಗೆ ಸೇರಿದ ಸಾವಿರಾರು ಎಕರೆ ಭೂಮಿಯಲ್ಲಿ ಲಕ್ಷಾಂತರ ಅಸ್ಪೃಶ್ಯರು ದುಡಿಯುತ್ತಿದ್ದಾರೆ! ಆದ್ದರಿಂದ ಈ ತರದ ವ್ಯವಸ್ಥೆಯಲ್ಲಿ ಯಾವುದು ನಮ್ಮನ್ನು ಬೆಳಕಿನೆಡೆಗೆ ಕೊಂಡೊಯ್ಯಬಹುದು ಎನ್ನುವುದರ ಬಗ್ಗೆ ಬಹಳ ಎಚ್ಚರ ವಹಿಸಬೇಕಾಗಿದೆ. ನಿಜವಾದ ಮಹತ್ ಬದಲಾವಣೆಯಾಗುವುದು ಜಾತಿ ವಿನಾಶದಿಂದ ಮಾತ್ರ. ಅಂತರ್ ಜಾತಿ ವಿವಾಹದಿಂದ, ಜಾತಿ ಪದ್ಧತಿ ಮುರಿಯುವುದರಿಂದ ಮಾತ್ರ ಸಾಧ್ಯ. ಆಗ ನೀವು ಹೊರದೂಡಲ್ಪಡಲಾರಿರಿ. ನಿಮ್ಮನ್ನು ಬಹಿಷ್ಕರಿಸಲಾರರು. ಅಂತರ್ ಜಾತಿ ವಿವಾಹ ಮಾಡಲು ತಂದೆ ತಾಯಿ ಇನ್ನೂ ತಯಾರಿಲ್ಲ. ಆದರೆ ವಿವಾಹಕ್ಕೆ ಹುಡುಗ ಹುಡುಗಿ ರೆಡಿಯಾದಲ್ಲಿ ಈ ದಿನಗಳಲ್ಲಿ ಯಾರೂ ಬಹಿಷ್ಕರಿಸಲಾರರು. ಇಂಡಿಯಾದಲ್ಲಿ ಬದಲಾವಣೆಯಾಗುತ್ತಿದೆ. ಭವಿಷ್ಯ ಅಷ್ಟೊಂದು ಕತ್ತಲಾಗಿಲ್ಲ.

ಈಗ ಗುಜರಾತಿನ ಮೀಸಲಾತಿ ವಿರೋಧಿ ಚಳುವಳಿ ಒಳ್ಳೆಯದಕ್ಕೇ ಎಡೆ ಮಾಡಿದೆ. ಉತ್ತರ ಭಾರತದ ಹಿಂದುಳಿದ ವರ್ಗದ ಜನ, ಅವರ ಹಕ್ಕುಗಳಿಗಾಗಿ ಹೋರಾಡುತ್ತಿರುವರು. ಇದೀಗ ಹರಿಯಾಣದ ಮುಖ್ಯಮಂತ್ರಿ ದೇವಿಲಾಲ್ ಅವರು ಹೇಳಿದ್ದಾರೆ, ಜನಸಂಖ್ಯೆಯ ಅಧಾರದ ಮೇಲೆ ಮೀಸಲಾತಿ ಕೇಳುವುದು ಸರಿಯೆಂದು. ಹಾಗೆ ಜನಸಂಖ್ಯಾನುಸಾರ ಮೀಸಲಾತಿ ಕೊಟ್ಟರೆ ಬ್ರಾಹ್ಮಣರು ಶೇಕಡಾ 4 ಉದ್ಯೋಗ ಪಡೆಯುವರು. ಆದರೆ ಏನಾಗುವುದು? ಅವರು ಸಂತುಷ್ಟರಾಗುವರೇನು? ಅವರು ಮೀಸಲಾತಿಯನ್ನು ಹಿಂಸೆಯಿಂದ ತಡೆಯಲು ಪ್ರಯತ್ನಿಸುವರು ಆದರೆ ವಿಫಲರಾಗುವರು, ಏಕೆಂದರೆ ನನಗೆ ಖಾತ್ರಿಯಿದೆ, ಎಚ್ಚೆತ್ತ ಹರಿಜನರು ಹಿಂಸೆಯನ್ನು ಹಿಂಸೆಯಿಂದ ತಡೆಯಲು ಸಿದ್ಧರಿದ್ದಾರೆ. ಆದ್ದರಿಂದ ಮೀಸಲಾತಿ ತೆಗೆಯಲು ಸಾಧ್ಯವಾಗದು. ಜಾರಿಗೆ ತರುವುದರಲ್ಲಿ ನಾಟಕವಾಡಬಹುದೇ ಹೊರತು ಮೀಸಲಾತಿ ನೀತಿಯನ್ನೇ ರದ್ದುಗೊಳಿಸಲು ಯಾವ ರಾಜಕೀಯ ಪಕ್ಷವೂ ಶಕ್ತವಾಗಿಲ್ಲ. ಯಾಕೆಂದರೆ ಮೀಸಲಾತಿ ರದ್ದುಗೊಳಿಸಿದಲ್ಲಿ ಅವರ ರಾಜಕೀಯ ಭವಿಷ್ಯವೇ ಹಾಳಾಗುತ್ತದೆ. ಆದರೆ ಇದೇ ವೇಳೆಯಲ್ಲಿ ನೀವು ಎಚ್ಚರವಹಿಸಬೇಕು. ಎಂದೂ ಎಚ್ಚರ ತಪ್ಪಬಾರದು. ಬಿಡುಗಡೆ, ಸ್ವಾತಂತ್ರ್ಯಕ್ಕಾಗಿ ನಾವು ತೆರುವ ಬೆಲೆಯೆಂದರೆ ಸತತ ಎಚ್ಚರ.

—

(ಅನುವಾದ : ಕೆ. ಎಸ್. ಭಗವಾನ್, ಜವರನಹಳ್ಳಿ ಸಿದ್ದಪ್ಪ)

ಭಾರತೀಯರು ತಮ್ಮ ದೇಶವನ್ನಾದರೂ ಅಖಂಡವಾಗಿ ಪ್ರೀತಿಸಿದ್ದರೆ. ಈ ದೇಶದ ಯಾವುದೇ ಒಂದು ವಿಭಾಗದ ಜನ ತಿರಸ್ಕಾರದಿಂದ ವೇದನೆಯನ್ನು ಅನುಭವಿಸುತ್ತಾ ಪ್ರಾಣಿಗಳಿಗಿಂತ ಕಡೆಯಾಗಿ ಬದುಕಲು ಅವಕಾಶವಿರುತ್ತಿರಲಿಲ್ಲ.

ಎ.ಬಿ.ಷಾ

ನಾನು ಮಿಾಸಲಾತಿ ವಿಷಯದ ಬಗ್ಗೆ ಯೋಚಿಸುವುದರಿಂದ ಕಳಚಿಕೊಳ್ಳಲು ಸಾಧ್ಯವೇ ಇಲ್ಲ. ಯಾತಕ್ಕೆಂದರೆ ಕಳೆದ ಹಲವಾರು ವರ್ಷಗಳಿಂದ ಈ ವಿಷಯದ ಬಗ್ಗೆ ನಾನು ಯೋಚಿಸುತ್ತಲೇ ಬಂದಿರುವೆ. ಇತ್ತೀಚಿನ ಗುಜರಾತ್ ಮಿಾಸಲಾತಿ ವಿರೋಧಿ ಚಳವಳಿಯು, ಸ್ವತಂತ್ರ್ಯಪೂರ್ವದ ಸುಮಾರು ನೂರ ಇಪ್ಪತ್ತೈದು ವರ್ಷಗಳಿಂದಲೂ ಪಾಶ್ಚಿಮಾತ್ಯರ ಪ್ರಭಾವದಿಂದ ಹರಿದುಬಂದ ಸಚ್ಛಂದ ಮೌಲ್ಯಗಳನ್ನು ಏನು ಗಳಿಸಿಕೊಂಡಿದ್ದೆವೋ ಇವುಗಳೆಲ್ಲವೂ ಸಂಪೂರ್ಣ ತೋರ್ಕೆಯ ಮೌಲ್ಯಗಳು ಎಂದು ತಿಳಿಯುವಂತೆ ಮಾಡಿತು. ಅದೂ ಅಲ್ಲದೆ ಸ್ವಾತಂತ್ರ್ಯನಂತರದ ಈ ಮೂವತ್ತುನಾಲ್ಕು ವರ್ಷಗಳಲ್ಲಿ ಸವರ್ಣೀಯರು ಬಡಿದಾಡುವ ಮಟ್ಟಕ್ಕೂ ಬೆಳೆದಿದ್ದಾರೆ. ಆದ್ದರಿಂದಲೇ ಈ ರೀತಿಯ ಒಂದು ಚಳವಳಿ ಕೇವಲ ನಾಚಿಕೆಯನ್ನುಂಟುಮಾಡುವದಷ್ಟೇ ಅಲ್ಲ; ಇದೊಂದು ಕುತೂಹಲ ಕೆರಳಿಸುವಂಥ ಚಳವಳಿಯೂ ಕೂಡ ಆಗಿರುವುದು. ಮನುಷ್ಯತ್ವದ ಆಧಾರದ ಮೇಲೆ ಬದುಕಬೇಕಿರುವ ಮನುಷ್ಯ ಮನುಷ್ಯರುಗಳ ನಡುವೆ, ಒಡಕುಗಳನ್ನು ತಂದಿಟ್ಟು, ಆಧುನಿಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಈ ರಾಷ್ಟ್ರ ಯೋಗ್ಯತೆಯಿಂದ ಬೆಳೆಯುವುದಕ್ಕೆ ಅಡ್ಡಿಯುಂಟುಮಾಡಿದ್ದಾರೆ. ಆ ಮುಖೇನ ಈ ರಾಷ್ಟ್ರದ ಸಮಗ್ರತೆಗೆ ಯಾವತ್ತೂ ಧಕ್ಕೆಯುಂಟಾಗುವಂತೆ ಮಾಡಿದ್ದಾರೆ. ಹೀಗಿದ್ದೂ ಮನುಷ್ಯನ ಮೂಲಭೂತವಾದ ಮನುಷ್ಯತ್ವದ ಮೌಲ್ಯವನ್ನೂ ಒಂದು ಪಕ್ಷ ಗಣನೆಗೆ ತೆಗೆದುಕೊಳ್ಳದಿದ್ದರೂ, ಇಂಥವರು ದೇಶವನ್ನಾದರೂ ಅಖಂಡವಾಗಿ ಪ್ರೀತಿಸಿದ್ದರೆ, ಈ ದೇಶದ ಯಾವುದೇ ಒಂದು ವಿಭಾಗದ ಜನ ತಿರಸ್ಕಾರದಿಂದ ವೇದನೆಯನ್ನು ಅನುಭವಿಸುತ್ತಾ ಪ್ರಾಣಿಗಳಿಗಿಂತ ಕಡೆಯಾಗಿ ಬದುಕಲು ಅವಕಾಶವಿರುತ್ತಿರಲಿಲ್ಲ.

ಹೀಗಿದ್ದೂ ಈ ದೇಶದ ರಾಜಕೀಯವನ್ನು ದೂಷಿಸಿ ಫಲವಿಲ್ಲ. ಈ ದೇಶದ ರಾಜಕೀಯ ಸಮಸ್ಯೆಗಳು ಬಹಳ ಮುಖ್ಯವಾದುವಲ್ಲ. ನಮ್ಮ ಸಮಾಜದಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಯಾವೊಂದು ಅಸ್ವಸ್ಥತೆ ತುಂಬಿದೆಯೊ ಅಂಥದು ನಮ್ಮ ರಾಜಕಾರಣವನ್ನೂ; ನಮ್ಮ ಪುರಾತನ ಧ್ಯೇಯೋದ್ದೇಶಗಳನ್ನು ಹೊಂದಿರುವ ರಾಜಕೀಯ ಪಕ್ಷಗಳನ್ನೂ: ಅವುಗಳ ನಾಯಕರನ್ನೂ ಆಕ್ರಮಿಸಿಕೊಂಡಿರುವುದು. ಒಂದು ಪಕ್ಷ

ಇಂಥ ರಾಜಕಾರಣಿಗಳು, ಮಾನವ ಮೌಲ್ಯಗಳನ್ನು ನಂಬಿದ್ದು, ಮನುಷ್ಯನ ಗುಣ ನಡತೆಗೆ ಬೆಲೆಯನ್ನು ಕೊಟ್ಟು ಸ್ವತಂತ್ರ ಅನುಭವಿಸುವುದು ಅವನ ಹಕ್ಕು ಎಂದು ತಿಳಿದಿದ್ದೂ, ಅವನು ಸಂತೋಷ ವ್ಯಕ್ತಮಾಡುವುದು ಅವನ ಹಕ್ಕು ಎಂದು ತಿಳಿದಿದ್ದೂ—ಇವೆಲ್ಲವನ್ನೂ ಸಮಾಜದ ತಳದವರೆಗೂ ತೆಗೆದುಕೊಂಡುಹೋಗಿ ಗುರ್ತಿಸಿಕೊಳ್ಳಬೇಕು ಎಂದು ಹಂಬಲವುಳ್ಳವರಾಗಿದ್ದರು ಎಂದು ಭಾವಿಸಿಕೊಳ್ಳೋಣ!! ಆದರೆ ಯಾವ ರೀತಿಯ ರಾಜಕಾರಣಿಗಳು ಈ ಹೊತ್ತು ಸೋಲನ್ನು ಅನುಭವಿಸುತ್ತಾರೆ ಎಂಬುದು ನಿಮಗೆ ಗೊತ್ತು. ನಾವು ಈ ಸಂದರ್ಭದಲ್ಲಿ ಇಬ್ಬರು ವಿಭಿನ್ನ ಮನೋಧರ್ಮಕ್ಕೆ ಸೇರಿದಂಥ ವ್ಯಕ್ತಿಗಳ ವಿಷಯವನ್ನು ನೋಡಬಹುದು; ಇಬ್ಬರೂ ನಿಜವಾದ ಮನುಷ್ಯರು; ಇಬ್ಬರೂ ಕೆಲವು ಮೌಲ್ಯಗಳಿಗೆ ಕಟ್ಟುಬಿದ್ದವರು—ಮಹಾತ್ಮಗಾಂಧಿ ಮತ್ತು ಅಂಬೇಡ್ಕರ್. ಈ ಇಬ್ಬರು ಮಹನೀಯರ ಸೋಲು ಗಣನೀಯವಾದುದು. ಕಾರಣ ಕಂಡುಕೊಳ್ಳುವುದು ನಮಗೆ ಸಂಬಂಧಿಸಿದುದು.

ಮಹರಾಷ್ಟ್ರದಲ್ಲಿ ಮೊದಲನೆಯ ಮರಾಠಿ ವಾರಪತ್ರಿಕೆ 'ಬಾಂಬೆ ದರ್ಪಣ್' ೧೮೩೨ರಲ್ಲಿ ಪ್ರಾರಂಭವಾಗುತ್ತಿದ್ದಾಗಲೇ ಅಸ್ಪೃಶ್ಯತೆಯ ಬಗ್ಗೆ ವಿಮರ್ಶೆಯೂ ಪ್ರಾರಂಭವಾಯಿತು. ಈ ಪತ್ರಿಕೆಯ ಪ್ರತಿಯೊಂದು ಪುಟಗಳೂ ಮಹರಾಷ್ಟ್ರದ ಹಿಂದೂ ಸಮಾಜವನ್ನು ಎಚ್ಚರಿಸುತ್ತಿದ್ದವು. ಸಮಾಜದಲ್ಲಿ ಅಸ್ಪೃಶ್ಯತೆಯಿರುವುದನ್ನು ವಿಮರ್ಶಿಸುತ್ತಿದ್ದುದಲ್ಲದೆ, ಮನುಷ್ಯನ ಅಗತ್ಯವಾದ ಸ್ಥಾನಮಾನಗಳಿಗಾಗಿ ಈ ಪತ್ರಿಕೆಯು ವಾದಮಾಡುತ್ತಿತ್ತು. ಈ ನಂತರದಲ್ಲೇ ಇಂಡಿಯಾ ಸೃಷ್ಟಿಸಿದಂಥ ಬಹು ದೊಡ್ಡ ವ್ಯಕ್ತಿಗಳಲ್ಲಿ ಒಬ್ಬರಾದ **ಜ್ಯೋತಿರಾವ್ ಪುಲೆ** (1827–1890) ಬಂದರು. ಪುಲೆ ಮಹರಾಷ್ಟ್ರದ ಹೊರಗೆ ಗೊತ್ತಾಗಲಿಲ್ಲ. ಯಾಕಂದರೆ ಮತ್ತೆ ಇಲ್ಲಿ ಜಾತೀಯತೆಯ ಪ್ರಶ್ನೆ ಬರುತ್ತದೆ. ಇರಲಿ. ಇವರು ಅಸ್ಪೃಶ್ಯರ ಮಕ್ಕಳಿಗಾಗಿ ಇಂಡಿಯಾದಲ್ಲೇ ಪ್ರಥಮ ಬಾರಿಗೆ 1851ರಲ್ಲಿ ಪೂನಾದೊಳಗೆ ಶಾಲೆಯನ್ನು ತೆರೆದರು. ಇವರ ಹೆಂಡತಿ ಶಾಲೆಯಲ್ಲಿ ಕಲಿಸುತ್ತಿದ್ದರು. ಇದನ್ನು ಆ ಕಾಲದ ಬ್ರಾಹ್ಮಣರು ಬಹಳವಾಗಿ ವಿರೋಧಿಸುತ್ತಿದ್ದರು. ಇಂದಿನ ಮಹರಾಷ್ಟ್ರದ ಬ್ರಾಹ್ಮಣರು ಸರಳ ಸ್ವಭಾವದವರು. ಆದರೆ ಆ ಹೊತ್ತಿನ ಬ್ರಾಹ್ಮಣರು ಬಹಳ ಕ್ರೂರಿಗಳೂ ಮಾತ್ರವಲ್ಲ ಬಹಳ ದಡ್ಡರೂ ಆಗಿದ್ದರು. ಇವರು ಶಾಲೆಯಲ್ಲಿ ಕಲಿಸುತ್ತಿದ್ದ ಆಕೆಯನ್ನು ಅವಮಾನ ಮಾಡುತ್ತಿದ್ದರು. ಕೊನೆಗೊಂದು ದಿವಸ ಯಾವ ಬ್ರಾಹ್ಮಣ ಆಕೆಯನ್ನು ಹಿಯ್ಯಾಳಿಸುತ್ತಿದ್ದನೋ, ಅಂಥವನ ಕಪಾಲಕ್ಕೆ ಭಾರಿಸಿಬಿಟ್ಟಳು. ಇದು ಬಹುಶಃ ನನಗೆ ತಿಳಿದಮಟ್ಟಿಗೆ ಅಸ್ಪೃಶ್ಯತೆ ವಿನಾಶದ ಹಾದಿಯಲ್ಲಿ ನಡೆದ ಮೊದಲ ಹೆಜ್ಜೆ.

ಜ್ಯೋತಿರಾವ್ ಪುಲೆ ಚಕ್ರ ಅಥವಾ ಮಾಲಿ ಜನಾಂಗಕ್ಕೆ ಸೇರಿದವರು. ಇವರ ನಂತರದಲ್ಲಿ ಹಲವಾರು ಜನರು ಬರುತ್ತಾರೆ. ಅವರಲ್ಲಿ ಲೋಕಹಿತವಾದಿಯವರು ಪುಲೆಯವರ ಜೊತೆಗಿದ್ದರು ಅಂತ ನನಗನ್ನಿಸುತ್ತದೆ. ಈತ ಚಿತ್‌ಪಾವನ ಬ್ರಾಹ್ಮ

ಜನಾಂಗಕ್ಕೆ ಸೇರಿದವರು. ಇವರಿಬ್ಬರೂ ಬ್ರಾಹ್ಮಣ ಸಂಪ್ರದಾಯವನ್ನು ಅತ್ಯಂತ ತೀಕ್ಷ್ಣವಾಗಿ ಟೀಕಿಸುತ್ತಿದ್ದರು. ಈ ಒಂದು ಚಳವಳಿ ೧೯ನೆಯ ಶತಮಾನದ ಕೊನೆಯವರೆಗೂ ನಡೆಯಿತು. ಆದರೆ ಈ ಶತಮಾನದಕೊನೆಯಲ್ಲಿ ರಾಷ್ಟ್ರೀಯಸ್ವಾತಂತ್ರ್ಯ ಚಳವಳಿ ಬಹಳ ಬಲವತ್ತರವಾಗಿ ಬೆಳೆಯತೊಡಗಿತು. ಇದರಿಂದಾಗಿ ಯಾವ ಹಿಂದೂ ಸಮಾಜವನ್ನು ವಿಮರ್ಶಿಸುತ್ತಾ ಒಂದು ಸಾಮಾಜಿಕ ಆಂದೋಳನ ಶುರುವಾಗಿತ್ತೋ ಅದು ಹಿಂದಾಯಿತು. ಹಾಗಾಗಿ ಈ ರಾಷ್ಟ್ರೀಯ ಚಳವಳಿಯ ಮುಖೇನ ಹಿಂದೂ ಸಮಾಜವನ್ನು ಮತ್ತದರ ಸ್ಥಾನದಲ್ಲೇ ಸ್ಥಾಪಿಸಲಾಯಿತು. ಇದರಿಂದ ಬಹಳ ಜನ ವೇದನೆಯನ್ನನುಭವಿಸುವಂತಾಯಿತು. ಇದು ರಾಷ್ಟ್ರೀಯ ಚಳವಳಿಯಿಂದಾದ ಮೊದಲನೆಯ ಬದಲಾವಣೆ. ನಂತರ ರಾಜಕೀಯ ಪ್ರಭುತ್ವವನ್ನು ಮಹರಾಷ್ಟ್ರದಲ್ಲಿ ಯಾವಾಗ ಮರಾಠರು ಆಕ್ರಮಿಸಿಕೊಂಡರೋ ಆಗ ಮತ್ತೆ ಹಿಂದೂ ಸಮಾಜಕ್ಕೆ ರೆಕ್ಕೆ ಪುಕ್ಕ ಬಲಿಯಿತು. ಇದು ರಾಷ್ಟ್ರೀಯ ಚಳವಳಿಯಿಂದಾದ ಎರಡನೆಯ ಬದಲಾವಣೆ. ಅದೂ ೧೯೫೬ರ ಪ್ರಾದೇಶಿಕ ಕಾಯ್ದೆಯ ಪ್ರಕಾರವಾಗಿ ಮಹರಾಷ್ಟ್ರ ಪ್ರದೇಶ ರಚಿತವಾದ ಮೇಲೆ ಮರಾಠ ರಾಜಕೀಯ ಪ್ರಭುತ್ವ ಮತ್ತೂ ಬಲಿಯಿತು; ಈಗಂತೂ ೧೯೬೦ರ ನಂತರದಲ್ಲಿ ಇವರೇ ಸರ್ವಸ್ವಾಮ್ಯವನ್ನು ಪಡೆದುಕೊಂಡಿದ್ದಾರೆ.

ಆದರೆ ಬಹಳ ಸ್ವಾರಸ್ಯಕರವಾದ ಸಂಗತಿಯೆಂದರೆ ೧೯ನೆಯ ಶತಮಾನದಲ್ಲಿ ಮರಾಠರು ಫುಲೆಯವರ ಚಳವಳಿಗೆ ಬೆಂಬಲಿಗರಾಗಿದ್ದರು. ಕೊಲ್ಹಾಪುರದ ರಾಜಕುಮಾರ ಛತ್ರಪತಿ ಷಾಹು ಫುಲೆಯವರ ಚಳವಳಿಗೆ ಆರ್ಥಿಕ ಬೆಂಬಲವನ್ನು ನೀಡುತ್ತಿದ್ದನು. ಇವನೊಬ್ಬ ಸಮಾಜ ಸುಧಾರಕನೂ ಆಗಿದ್ದನು. ಆದ್ದರಿಂದಲೇ ಪ್ರಥಮ ಬಾರಿಗೆ ತನ್ನ ರಾಜ್ಯದಲ್ಲಿ ಅಸ್ಪೃಶ್ಯತೆಯನ್ನು ತೊಡೆದುಹಾಕುತ್ತಾನೆ; 'ಹಿಂದುಳಿದ ವರ್ಗದ ಮಕ್ಕಳಿಗೆ ಶಾಲೆ ಮತ್ತು ಉಚಿತ ಊಟ ಮತ್ತು ವಸತಿ ಗೃಹಗಳನ್ನು ನಿರ್ಮಿಸಿ ಅವರ ವಿದ್ಯಾಪ್ರಗತಿಗೆ ಕಾರಣನಾಗುತ್ತಾನೆ. ಆ ಸಂದರ್ಭದಲ್ಲಿ ನಿಜವಾಗಿ ಹೇಳುವುದಾದರೆ ಮರಾಠರು ಅಧಿಕಾರದಲ್ಲಿರಲಿಲ್ಲ. ಅಧಿಕಾರದಲ್ಲಿದ್ದವರು ಬ್ರಾಹ್ಮಣರು. ಯಾಕೆಂದರೆ ಅವರೊಬ್ಬರೆ ಅಕ್ಷರ ಬಲ್ಲಂಥ ಜನರಾಗಿದ್ದುದರಿಂದ, ಅವರು ಆಗ ಮಹತ್ವದ ಜನಾಂಗವಾಗಿದ್ದರು. ಸ್ವಾತಂತ್ರ್ಯಾನಂತರ ಮರಾಠರಿಗೆ ಅಧಿಕಾರ ದೊರೆಯುತ್ತದೆ. ಆದರೆ ಬ್ರಾಹ್ಮಣಿಕೆಯನ್ನು ಸಮರ್ಥಿಸುವಂಥ ಜನಾಂಗವೂ ಆಗಿಬಿಡುತ್ತಾರೆ. ಒಂದು ವ್ಯತ್ಯಾಸವೆಂದರೆ ಬ್ರಾಹ್ಮಣರ ಬದಲಾಗಿ ಇಲ್ಲಿ ಮರಾಠರಿದ್ದರು ಅಷ್ಟೆ. ಇಂಥ ಸಂದರ್ಭದಲ್ಲಿ ಬ್ರಾಹ್ಮಣ ಜನಾಂಗ ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬಂದುದರಿಂದ, ಇವರನ್ನು ತುಳಿಯಲು ಮರಾಠರಿಂದ ಸಾಧ್ಯವಾಗಲಿಲ್ಲ. ಈ ರೀತಿ ಪಟ್ಟಣಕ್ಕೆ ಬಂದು ಸೇರಿದ ಬ್ರಾಹ್ಮಣನು ಯಾವಾಗಲೂ ಅಸ್ಪೃಶ್ಯರನ್ನು ಶಾಲೆ ಕಾಲೇಜುಗಳಿಂದ ಹೊರಗಿಡಲು ಪ್ರಯತ್ನಿಸುತ್ತಲೇ ಬಂದನು. ಈಗಲೂ ಮಹರಾಷ್ಟ್ರದ ಸರ್ಕಾರಿ ಸೇವೆಯಲ್ಲಿ ನೂರಕ್ಕೆ ೮೦ ಭಾಗವನ್ನು ಆಕ್ರಮಿಸಿಕೊಂಡಿರುವ ಬ್ರಾಹ್ಮಣರು; ಸರ್ಕಾರದ ಬೇರೆ ಬೇರೆ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ

ಮಾಡುವ ಸಂದರ್ಭದಲ್ಲಿ ಅಸ್ಪೃಶ್ಯರನ್ನು ಹೊರಗಿಡಲು ತಂತ್ರಗಳನ್ನು ಬಳಸುತ್ತಾರೆ, ಅಷ್ಟೇ ಅಲ್ಲ. ಇತರ ಹಿಂದುಳಿದ ವರ್ಗದವರಿಗೂ ಇದೇ ಕುಯುಕ್ತಿಗಳನ್ನು ಬಳಸಿ ಅವರು ಹೊರಗುಳಿಯುವಂತೆ ಮಾಡುತ್ತಿದ್ದಾರೆ. ಆದರೂ ನೇರವಾದ ಶೋಷಣೆ ನಡೆಯುತ್ತಿರುವುದು ಮರಾಠರಿಂದ ಅದೂ ಹಳ್ಳಿಗಳಲ್ಲಿ. ದೇಶದ ಇತರ ರಾಜ್ಯಗಳಿಗೆ ಹೋಲಿಸಿಕೊಂಡರೆ ಮಹರಾಷ್ಟ್ರ ಪ್ರಗತಿಪರ ರಾಜ್ಯವಾದರೂ ೧೯೭೧ನೆಯ ಜನಗಣತಿಯ ಪ್ರಕಾರವಾಗಿ ಇಡಿಯ ದೇಶದಲ್ಲಿ ಶೇಕಡ ೯ ರಿಂದ ಶೇಕಡ ೨೦ರವರೆಗೆ ನಗರೀಕರಣವಾದರೆ ಮಹರಾಷ್ಟ್ರದಲ್ಲಿ ಶೇಕಡ ೩೦ರಿಂದ ೩೧ರವರೆಗೆ ನಗರೀಕರಣವಾಗಿರುವುದು. ಹಾಗಿದ್ದೂ ಇನ್ನೂ ಶೇಕಡ ೭೦ ಜನ ಹಳ್ಳಿಯಲ್ಲೇ ಇರುತ್ತಾರೆ ಎಂಬುದು ಗಮನಾರ್ಹ. ಅದೂ ಅಲ್ಲದೆ ಪಟ್ಟಣಗಳಲ್ಲಿಯೂ ಕೂಡ ಒಂದು ಜಾತಿಯ ಜನ ಒಂದೇ ಕಡೆ ಇರುವುದು, ಒಂದೇ ಭಾಷೆ–ಸಂಸ್ಕೃತಿ–ನಡುವಳಿಕೆ ಎಲ್ಲವನ್ನೂ ಇಟ್ಟುಕೊಂಡಿರುವುದೇ ಬಹುಪಾಲು ಹೆಚ್ಚಾಗಿರುವುದರಿಂದ ಹೆಚ್ಚು ಹೆಚ್ಚು ನಗರೀಕರಣವಾಗುವುದರಿಂದಲೂ ಸಮಸ್ಯೆ ಬಗೆಹರಿಯುವುದಿಲ್ಲ. ಅಷ್ಟೇ ಅಲ್ಲದೆ ಮತ್ತೂ ಹಳ್ಳಿಯ ಜನರ ಶೋಷಣೆ ಹೆಚ್ಚಾಗೇ ಇರುವುದು.

ನಾನು ನಿಮಗೆ ಇಲ್ಲಿ ಯಾವುದೇ ರೀತಿಯ ಜಾತೀಯತೆಯನ್ನು ಬೋಧಿಸುತ್ತಿಲ್ಲ; ಆದರೆ ಈ ಕೆಲಸವನ್ನು ನಮ್ಮ ಎಲ್ಲ ರಾಜಕಾರಣಿಗಳು ಮಾಡುತ್ತಿದ್ದಾರೆ. ನಮಗೆ ನಮ್ಮ ಸಂಪ್ರದಾಯದಲ್ಲಿರುವುದರಲ್ಲಿ ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ಎಂಬುದನ್ನು ತಿಳಿದುಕೊಳ್ಳಲು ಹಿಂದೂ ಧರ್ಮ ಅವಕಾಶಗಳನ್ನು ಕಲ್ಪಿಸಿಕೊಟ್ಟಿಲ್ಲ ಅಥವಾ ಆ ರೀತಿಯ ವಿಮರ್ಶಮಾನದಂಡಗಳನ್ನು ಸೃಷ್ಟಿಸಿಲ್ಲ. ಇದನ್ನು ನಾವು ಹೊರನಾಡಿನಿಂದ ಬಂದ ವಿಚಾರಗಳಿಂದ ಕಲಿತುಕೊಳ್ಳಬೇಕು. ಈ ರೀತಿಯ ವೈಚಾರಿಕತೆಯ ನಿಲುವುಗಳೊಂದಿಗೆ ಹುಟ್ಟಿದ ಕೆಲವು ಅತ್ಯಗತ್ಯವಾದ ಮೌಲ್ಯಗಳು ಇಂಡಿಯಾದ ಸಂವಿಧಾನದಲ್ಲಿ ಸೇರಿವೆ. ಅವು ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಭ್ರಾತೃತ್ವದ ಸಂಗತಿಗಳಾಗಿವೆಯಲ್ಲದೆ ಇವು ಸಂವಿಧಾನದಲ್ಲಿ ಪ್ರತಿಯೊಬ್ಬ ಪ್ರಜೆಗೂ ದೊರೆಯುವಂತೆ ಅಳವಡಿಸಲಾಗಿರುವ ಹಕ್ಕಿನ ಸಂಗತಿಗಳಾಗಿವೆ. ಈ ಮೌಲ್ಯಗಳು ಒಟ್ಟು ಮಾನವ ಜನಾಂಗಕ್ಕೇ ಬೇಕಾಗಿರುವಂಥ ವಿಶ್ವಮಾನ್ಯ ಮೌಲ್ಯಗಳು. ಎಲ್ಲಾ ಈ ಹಕ್ಕುಗಳನ್ನು ಜನತೆ ಯೋಗ್ಯವಾದ ರೀತಿಯಲ್ಲಿ ಅನುಭವಿಸುವುದೆಂದರೆ, ಯೋಗ್ಯವಾದ ರೀತಿಯಲ್ಲಿ ಜನತೆ ಬದುಕುವುದು ಎಂದು ಅರ್ಥವಾಗುತ್ತದೆ. ಅಲ್ಲದೆ ಈ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಅಳವಡಿಸಲಾಗಿರುವ ಇಂಥ ಕಾನೂನುಗಳು ಕೂಡ ತಮ್ಮ ಯೋಗ್ಯತೆಯನ್ನು ಕಾಪಾಡಿಕೊಳ್ಳುವಂಥವಾಗಿರುತ್ತವೆ. ಈ ದೃಷ್ಟಿಯಲ್ಲಿ ಮತ್ತೆ ಒಬ್ಬ ವ್ಯಕ್ತಿ ಯೋಗ್ಯವಾಗಿ ಬದುಕುವುದು ಎಂದರೆ; ಅವನಿಗೆ ಕೈತುಂಬ ಸಂಪಾದನೆ ಮಾಡುವಂಥ ಒಂದು ಕೆಲಸವಿರಬೇಕು–ಅವನಿಗೆ ಜೀವನದ ಅಗತ್ಯಗಳನ್ನು ಪೂರೈಸುವಂಥ ವಸ್ತುಗಳು ಸಿಗಬೇಕು ಎಂಬ ಈ ಸಂಗತಿಗಳನ್ನು ಧ್ವನಿಸುವಂತಹುದಾಗಿರುತ್ತದೆ. ಆದರೆ ಲೋಕಹಿತವಾದಿ ತನ್ನ ಕೆಲಸವನ್ನು ಪ್ರಾರಂಭಮಾಡಿ, ಫುಲೆ

ಅಸ್ಪೃಶ್ಯರ ಮಕ್ಕಳಿಗೆ ಶಾಲೆಯನ್ನು ಶುರುಮಾಡಿ ೧೩೦ ವರ್ಷಗಳು ತುಂಬುತ್ತಿದ್ದರೂ ಮೇಲಿನ ಜೀವನದ ಅಗತ್ಯದಂತಹ ಮಾನದಂಡಗಳನ್ನು ಇಟ್ಟುಕೊಂಡು ನಡೆದು ಬಂದ ಹಿಂದೂ ಸಂಪ್ರದಾಯವನ್ನು ನೋಡಿದರೆ–ಇದರಲ್ಲಿರುವ ದ್ವಂದ್ವ ನೀತಿಯು ಯಾರಿಗಾದರೂ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ಹಿಂದೂ ಸಾಂಪ್ರದಾಯಿಕ ಸಮಾಜದ ಈ ನಡಿಗೆಯನ್ನು ಅರ್ಥಮಾಡಿಕೊಳ್ಳಬೇಕು. ವಿಶ್ಲೇಷಣೆ ಮಾಡಿ ಗ್ರಾಮಸ್ಥರಿಗೆ ತಿಳಿಸಬೇಕು, ಇದನ್ನು ತಡೆಯಬೇಕು. ಇಲ್ಲದೇ ಹೋದರೆ ಯಾತನೆಯು ನಮಗೆ ಕಾದುಕೊಂಡು ಕುಳಿತಿರುತ್ತದೆ.

ಪ್ರಪಂಚದ ಬೇರೆ ಬೇರೆ ಸಮಾಜಗಳು ಆಯಾಯ ಸಮಾಜದಲ್ಲಿ ಪ್ರಮುಖವಾಗಿ ಪ್ರಚಲಿತವಿರುವ ಧರ್ಮಗಳ ಜೊತೆ ನಿಕಟ ಸಂಪರ್ಕವಿಟ್ಟುಕೊಂಡಿರುವಂತೆಯೇ, ಹಿಂದೂ ಸಾಂಪ್ರದಾಯಿಕ ಸಮಾಜವೂ ತನ್ನ ಧರ್ಮದ ಜೊತೆ ನಿಕಟ ಸಂಪರ್ಕವಿಟ್ಟುಕೊಂಡಿರುವುದು. ಆದರೂ ಇತರ ಸಮಾಜಗಳಂತಲ್ಲದೆ; ತನ್ನ ಸಮಾಜದಲ್ಲಿ ಬದುಕಿರುವ ಮನುಷ್ಯ ಮನುಷ್ಯರ ನಡುವೆ ಇದು ವ್ಯತ್ಯಾಸವನ್ನು ನಿರ್ಮಿಸುತ್ತದೆ. ಈ ರೀತಿ ಮನುಷ್ಯ ಮನುಷ್ಯರ ನಡುವೆ ವ್ಯತ್ಯಾಸವನ್ನು ಸೃಷ್ಟಿಸುವ ಸಂದರ್ಭದೊಳಗೆ ಇಲ್ಲಿ ಭಿನ್ನ ಭಿನ್ನ ಧರ್ಮಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದಷ್ಟೇ ಅಲ್ಲ ಹುಟ್ಟಿದ ಜಾತಿಯನ್ನು ಗಣನೀಯವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಈಗ ಕ್ರಿಸ್ತ ಧರ್ಮವನ್ನು ನಾವು ಗಮನಿಸಿದರೆ ಎಲ್ಲಾ ಕ್ರಿಸ್ತಮತೀಯರೂ ಸಹೋದರತ್ವವನ್ನು ಪಡೆದಿರುತ್ತಾರೆ; ಅಲ್ಲದೆ ಅವರೆಲ್ಲಾ ಸ್ವರ್ಗದ ಒಬ್ಬನೇ ದೇವನಿಂದ ಸೃಷ್ಟಿಸಿದಂತಹವರಾಗಿರುತ್ತಾರೆ. ಅವರೆಲ್ಲಾ ಒಂದೇ ದೇವನ ಸ್ವರ್ಗಕ್ಕೆ ಹೋಗುತ್ತಾರೆ; ಆದರೆ ಇತರ ಧರ್ಮೀಯರು ಮಾತ್ರ ನರಕಕ್ಕೆ ಹೋಗುತ್ತಾರೆ. ಕ್ರಿಸ್ತಮತವನ್ನು ಒಪ್ಪಿಕೊಂಡವರು ಇಂಡಿಯಾದಲ್ಲಿರಲಿ, ಬರ್ಮಾ ಪಾಕಿಸ್ಥಾನ, ಸೌದಿಅರೇಬಿಯಾ, ರಷ್ಯಾ ಎಲ್ಲಾದರೂ ಇರಲಿ ಅವರೆಲ್ಲಾ ಒಂದೇ ಸ್ವರ್ಗಕ್ಕೆ ಹೋಗುತ್ತಾರೆ. ಆದರೆ ಹಿಂದೂ ಧರ್ಮದೊಳಗೆ ಹುಟ್ಟಿದ ಎಲ್ಲಾ ಜಾತೀಯ ಜನರೂ ಸ್ವರ್ಗಕ್ಕೆ ಹೋಗುವುದಿಲ್ಲ. ನಾಲ್ಕು ವರ್ಣಗಳಲ್ಲಿ ಮೊದಲನೆಯ ಮೂರು ವರ್ಣದವರು ಮಾತ್ರ ಸ್ವರ್ಗಕ್ಕೆ ಹೋಗುತ್ತಾರೆ. ಆದರೆ ಶೂದ್ರ ತನ್ನ ಮೊದಲನೆಯ ಜನ್ಮದಲ್ಲೇ ನೇರವಾಗಿ ಪ್ರವೇಶಮಾಡುವ ಹಾಗಿಲ್ಲ; ಮೇಲಿನ ಯಾವುದಾದರೂ ಮೂರು ವರ್ಣಗಳಲ್ಲೊಂದರಲ್ಲಿ ಜನ್ಮವೆತ್ತಿ ಮತ್ತೆ ಸ್ವರ್ಗವನ್ನು ಪ್ರವೇಶ ಮಾಡಬೇಕಾಗಿರುತ್ತದೆ. ಹಾಗೆಯೇ ಮರ–ಕಲ್ಲು–ಪ್ರಾಣಿ–ಪಕ್ಷಿಗಳಿಗಿಂತ ಕಡಿಮೆಯಾಗಿ ಬದುಕುತ್ತಿರುವ ಅಸ್ಪೃಶ್ಯರಿಗೂ ಇದು ಅನ್ವಯಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಮೇಲಿನ ಸಂಗತಿಯು ನೇರವಾಗಿ ಅವತಾರಪುರುಷ ಶ್ರೀ ವಿಷ್ಣುಪ್ರಭುವಿನಿಂದ ದಯಪಾಲಿಸಿದಂತಹುದಾಗಿದೆ. ಭಗವದ್ಗೀತದಲ್ಲಿ ಪ್ರಭು ಸ್ಪಷ್ಟಪಡಿಸುತ್ತಾನೆ: "ಚಾತುರ್ವರ್ಣ್ಯಂ ಮಯಾ ಸೃಷ್ಟಂ, ಗುಣ ಕರ್ಮ ವಿಭಾಗಶಃ". ತಾನು

ಶ್ರೀ ಕೃಷ್ಣನ ಅವತಾರವೆಂದೂ, ತಾನು ಈ ನಾಲ್ಕು ವರ್ಣಗಳನ್ನು ಸೃಷ್ಟಿಸಿದವನೆಂದೂ ಹೇಳಿಕೊಳ್ಳುತ್ತಾನೆ. ಆದರೆ ಇಲ್ಲಿಯ ಗುಣವೆಂದರೆ–ನಡವಳಿಕೆಯಿಂದ ರೂಪಿತವಾಗುವಂಥ ವ್ಯಕ್ತಿಯ ಅಂತಃಸತ್ವಕ್ಕೆ ಸಂಬಂಧಪಟ್ಟಂಥದ್ದಲ್ಲ. ಆಧ್ಯಾತ್ಮಿಕ ದೃಷ್ಟಿಕೋನದ ಭೌತಿಕ ವಿಷಯಕ್ಕೆ ಸಂಬಂಧಪಟ್ಟ ಗುಣದ ವಿಷಯವಾಗಿ ಇಲ್ಲಿ ಭಗವಂತ ಮಾತನಾಡುತ್ತಾನೆ. ಗುಣ ಮತ್ತು ಕರ್ಮ ಎನ್ನುವಂಥವು ವ್ಯಕ್ತಿ ಹಿಂದಣ ಜನ್ಮದಲ್ಲಿ ತಾನು ಏನು ಕೆಲಸ ಮಾಡಿರುತ್ತಾನೆಯೋ ಅದರ ಆಧಾರದ ಮೇಲೆ ನನ್ನಿಂದ ರೂಪಿತವಾಗಿರುತ್ತವೆ ಎಂದು ಭಗವಂತ ಹೇಳುತ್ತಾನೆ. ಮತ್ತೊಂದು ಕಡೆ ಈತನೇ ಹೇಳುತ್ತಾನೆ: ಒಂದು ಪಕ್ಷ ಶೂದ್ರನೇ ಆಗಿದ್ದರೂ ನನ್ನನ್ನು ಪೂಜಿಸುವುದರಿಂದ ಮುಕ್ತಿಯನ್ನು ಪಡೆಯಬಹುದು ಎಂದು. ಆದರೆ ಈ ಪೈಶಾಚಿಕ ವಾದದ ಹಿಂದಿರುವ ಸುಳ್ಳು ಎಷ್ಟು ಗಹನವಾದುದು ಎಂಬುದನ್ನು ನಾವೆಲ್ಲ ಗಮನಿಸಬೇಕು. ವಾಸ್ತವವಾಗಿ ಶೂದ್ರರಾಗಲಿ, ಅಸ್ಪೃಶ್ಯರಾಗಲಿ ಮುಕ್ತಿಯನ್ನು ಪಡೆಯಲು ಸಾಂಪ್ರದಾಯಿಕ ನಿಲುವಿನ ಪ್ರಕಾರ ಸಾಧ್ಯವಿಲ್ಲ. ಹಾಗೆಯೇ ಇದು "ಪಾಪಯೋನಿ"ಯಿಂದ ಜನಿಸಿದ ಹೆಂಗಸರಿಗೂ ಕೂಡ ಅನ್ವಯವಾಗುವುದು. ಈ ಹೆಂಗಸರೇ ಎಲ್ಲ ರೀತಿಯ ಪಾಪಕ್ಕೂ ಕಾರಣರಾಗುತ್ತಾಳೆ. ಒಂದು ಕಡೆ ಮನುಷ್ಯ ತನ್ನ ಭವಿಷ್ಯವನ್ನು ನಿರ್ಮಿಸಿಕೊಳ್ಳಲು ಈಕೆಯಿಂದ ಬಿಡಿಸಿಕೊಳ್ಳಬೇಕು ಎಂದು ಹವಣಿಸಿದರೆ ಮತ್ತೊಂದು ಕಡೆಯಿಂದ ಈ ಮೋಹ ಆತನ ಬೆನ್ನಟ್ಟಿಕೊಂಡು ಹೋಗಿ ಪೀಡಿಸುತ್ತದೆ ಎಂದು ಸಂಪ್ರದಾಯಿಕ ತಿಳುವಳಿಕೆ ಹೇಳುತ್ತದೆ. ಹಾಗೆಯೇ ಈ ರೀತಿ ಹೆಂಗಸರನ್ನು ಸಾಂಪ್ರದಾಯಿಕ ತಿಳುವಳಿಕೆ ಜರಿದಂತೆಯೇ ಎಲ್ಲಾ ಗಂಡಸರೂ ಜರಿಯುತ್ತಾರೆ; ಇದಕ್ಕೆ ಯಾರೂ ಅಪವಾದವಲ್ಲ. ಆದರೆ ಆಶ್ಚರ್ಯದ ಸಂಗತಿಯೆಂದರೆ ಪ್ರತಿಯೊಬ್ಬರ ಹುಟ್ಟಿಗೂ ಮತ್ತು ಬೆಳವಣಿಗೆಗೂ ತಾಯಿಯು ಕಾರಣಳು ಎಂಬುದನ್ನಾಗಲೀ; ಒಂದು ಪಕ್ಷ ಪ್ರಣಾಳ ಶಿಶುವೇ ಆಗಿದ್ದರೂ ಅದು ಸಂಪೂರ್ಣವಾಗಿ ಬೆಳೆದು ಭೂಮಿಗೆ ಬರಲು ಒಬ್ಬ ತಾಯಿಯ ಜೀವಾಣು ಅಗತ್ಯವಾಗಿ ಬೇಕಾಗಿರುತ್ತದೆ ಎಂಬುದನ್ನಾಗಲೀ ನಾವು ಮರೆಯುತ್ತೇವೆ;

ಹಿಂದೂ ಸಾಂಪ್ರದಾಯಿಕ ಸಮಾಜದ ಮತ್ತೊಂದು ವಿಶಿಷ್ಟತೆಯೆಂದರೆ ಇಲ್ಲಿ ವ್ಯಕ್ತಿ ವೈಯಕ್ತಿಕತೆಗೆ ಯಾವ ಬೆಲೆಯೂ ಇಲ್ಲ. ಹೀಗೆ ಸಾಂಪ್ರದಾಯಿಕ ಸಮಾಜದೊಳಗೆ ವ್ಯಕ್ತಿಗೆ ಕೊಟ್ಟಂಥ ಸ್ಥಾನಮಾನಗಳ ಬಗ್ಗೆ ಮಾತಾಡುವುದೆಂದರೆ; ಆಧುನಿಕ ನಾಗರೀಕನಿಗೆ ಇಂಡಿಯಾದ ಸಂವಿಧಾನ ಯಾವ ಹಕ್ಕುಗಳನ್ನು ಯಾವ ನಿರ್ಬಂಧಗಳನ್ನು ವಿಧಿಸಿದೆಯೋ ಅದರ ಬಗ್ಗೆ ಮಾತಾಡುವುದು ಎಂದು ಅರ್ಥವಾಗುತ್ತದೆ. ಇಂಡಿಯಾದ ರಾಜಕೀಯ ನೀತಿಯ ಪ್ರಕಾರ ಒಂದು ಮೂಲಭೂತವಾದ ಯೂನಿಟ್ ಅಂದರೆ ಒಬ್ಬ ವ್ಯಕ್ತಿ ಮಾತ್ರವೇ ಹೊರತು—ಅವನ ಜಾತಿಯಾಗಲಿ, ಧರ್ಮವಾಗಲಿ, ಹಳ್ಳಿ ಅಥವಾ ಪಟ್ಟಣವಾಗಲಿ ಅಲ್ಲವೇ ಅಲ್ಲ. ಆದುದರಿಂದ ಇಂಡಿಯಾದ ರಾಜಕೀಯ ಸಿದ್ಧಾಂತವು ಒಬ್ಬ ನಾಗರೀಕನಿಗೆ ಏನೊಂದು ಹಕ್ಕುಗಳನ್ನು

ಹಾಗೂ ಹೊಣೆಗಾರಿಕೆಯನ್ನು ಕೊಡಲಾಗಿವೆಯೋ ಅದರ ಮೇಲೆ ರೂಪಿತವಾಗಿರುವಂಥಾದ್ದು ಎಂದು ತಿಳಿಯಬೇಕಿರುವುದು. ಆದರೆ ಈ ರೀತಿಯ ವ್ಯಕ್ತಿಯ, ವ್ಯಯುಕ್ತಿಕ ರೀತಿಯ ಅಸ್ತಿತ್ವವು ಸಂಪ್ರದಾಯಬದ್ಧವಾದ ಹಿಂದೂ ಸಮಾಜದಲ್ಲಿ ಇಲ್ಲವಾಗಿದೆ. ಯಾಕೆಂದರೆ ಹಿಂದೂ ಸಮಾಜವೂ ವ್ಯಕ್ತಿ ವ್ಯಕ್ತಿಗಳಿಂದ ನಿರ್ಮಿತವಾಗಿರುವುದಲ್ಲ; ಇದು ವರ್ಣಗಳಿಂದ ನಿರ್ಮಿತವಾಗಿರುವಂಥದ್ದು. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಯಾವ ಜಾತಿ ವರ್ಣದಿಂದ ಬಂದವನಾಗಿದ್ದಾನೆ ಎಂಬುದನ್ನು ಅತ್ಯಂತ ನಿಖರವಾಗಿ ಗಮನಿಸಲಾಗುತ್ತದೆ. ಅಲ್ಲದೆ ಈ ಕಾರಣಗಳಿಗಾಗಿಯೇ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಕೆಲವೊಂದು ನಿರ್ದಿಷ್ಟ ಹಕ್ಕುಗಳನ್ನೂ ಹಾಗೂ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿಯೇ, ಒಬ್ಬ ಬ್ರಾಹ್ಮಣ ಹುಡುಗ ಕೆಲವೊಂದು ಹಕ್ಕುಗಳನ್ನೂ ಮತ್ತು ಹೊಣೆಗಾರಿಕೆಗಳನ್ನೂ ಹೊಂದಿರುವವನಾಗಿರುತ್ತಾನೆ. ಕ್ಷತ್ರಿಯ ವರ್ಣದಲ್ಲಿ ಹುಟ್ಟಿದ ಮಾತ್ರಕ್ಕೇನೆ, ಒಬ್ಬ ಹುಡುಗ ಕೆಲವೊಂದು ಹಕ್ಕುಗಳನ್ನೂ ಮತ್ತು ಹೊಣೆಗಾರಿಕೆಯನ್ನೂ ಹೊಂದಿರುವವನಾಗಿರುತ್ತಾನೆ. ಹಾಗೆಯೇ ಇದು ಇನ್ನಿತರ ವರ್ಣಗಳಿಗೂ ಅನ್ವಯವಾಗುವುದು. ಬ್ರಾಹ್ಮಣನಿಗೆ ವೇದವನ್ನು ಓದುವ ಹಾಗೂ ಅದನ್ನು ಭೋದಿಸುವಂತ ಒಂದು ಹೊಣೆಗಾರಿಕೆಯಿತ್ತು. ಹಾಗೆಯೇ ಬ್ರಾಹ್ಮಣರು ಇತರರು ಕೊಡುವ ದಾನ-ಧರ್ಮ ಭಿಕ್ಷೆಗಳ ಆಧಾರದ ಮೇಲೆ ಜೀವಿಸಬೇಕಿತ್ತು. ಅವರು ಸಂಪತ್ತನ್ನು ಗಳಿಸುವಂತಿರಲಿಲ್ಲ. ಇವರು ಯಾವ ರೀತಿಯ ಹಕ್ಕನ್ನು ಹೊಂದಿದ್ದರು ಎಂಬುದನ್ನು ತಿಳಿದರೆ ಮೇಲಿನ ಸಂಗತಿಗಳು ಗೌಣವಾಗುತ್ತವೆ. ಬ್ರಾಹ್ಮಣರು ಇತರ ವರ್ಣೀಯರನ್ನು ಕೊಲೆ ಮಾಡಿದರೆ, ಇವರಿಗೆ ಗಲ್ಲು ಶಿಕ್ಷೆ ವಿಧಿಸುವಂತಿಲ್ಲ. ಮನುಸ್ಮೃತಿಯನ್ನು ಓದಿದರೆ ಈ ಸಂಗತಿಯು ಗೊತ್ತಾಗುತ್ತದೆ. ಮನುಸ್ಮೃತಿಯು ಭಗವಂತನ ಮುಂದೆ ಎಲ್ಲಾ ಜನರೂ ಒಂದೇ ಎಂದು ಪರಿಗಣಿಸುವುದಿಲ್ಲ. ಅಷ್ಟೇ ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ಒಂದು ವರ್ಣದ ಸದಸ್ಯ ಎಂಬಂತೆ ಮನು ಹೇಳುವನಲ್ಲದೆ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಸಮಾಜದ ವೈಯಕ್ತಿಕ ನಿಲುವುಳ್ಳ ವ್ಯಕ್ತಿ ಎಂದು ಭಾವಿಸುವುದಿಲ್ಲ. ಮನುವಿನ ಪ್ರಕಾರವಾಗಿ ಶೂದ್ರ ವರ್ಗಕ್ಕೆ ಯಾವ ಹಕ್ಕುಗಳೂ ಇಲ್ಲ. ಅವರಿಗೆ ಸಂಪತ್ತನ್ನು ಕೂಡಿಹಾಕುವ ಹಕ್ಕಿರಲಿಲ್ಲ; ಉಪನಿಷತ್ ಅಥವಾ ವೇದವನ್ನಾಗಲೀ ಕೇಳುವ ಹಕ್ಕಿರಲಿಲ್ಲ; ಕೇಳಿದರೆಂದರೆ ಅವರ ಕಿವಿಗೆ ಕಾಯ್ದ ಸೀಸೆಯ ದ್ರವವನ್ನು ಹುಯ್ಯಬೇಕು ಎಂದು ಮನು ತಿಳಿಸುತ್ತಾನೆ. ಆದರೆ ಆ ಕಾಲದಲ್ಲಿ ಈ ರೀತಿಯ ಒಂದು ಶಿಕ್ಷೆ ಚಾಲ್ತಿಯಲ್ಲಿತ್ತೋ ಏನೋ ಹೇಳಲಾರೆ; ಆದರೆ ಈ ಸಂಗತಿಯು ಅಂದಿನ ಸಮಾಜದ ಮನೋಧರ್ಮವನ್ನು ತಿಳಿಸುತ್ತದೆ. ಆದ್ದರಿಂದ, ಜನತೆ ತಿಳಿದು ಕೊಂಡಿರುವ ಪಡಾವಳಿಗಳನ್ನು ಬದಲು ಮಾಡಬೇಕಾಗಿದೆ. ಆ ಮುಖೇನ ಮನುಷ್ಯ ಮನುಷ್ಯರ ನಡುವಿನ ಗೋಡೆಗಳನ್ನು ಇಲ್ಲವಾಗಿಸಬೇಕಾಗಿದೆ. ಇದಕ್ಕಾಗಿ ನೀವು ಸಾಂಧಿ

ಅಂಬೇಡ್ಕರ್‌ರನ್ನು ಹೊಂದಿಸಿಕೊಂಡು ಹೋಗಬೇಕು. ಇವರಿಬ್ಬರಲ್ಲಿ ಅನೇಕ ರೀತಿಯ ದ್ವಂದಗಳಿದ್ದಾಗ್ಯೂ ಅವರು ತಾತ್ವಿಕತೆಯಲ್ಲಿ ಒಂದಾಗಿಯೇ ಇರುತ್ತಾರೆ ಎಂಬುದನ್ನು ತಿಳಿಯಬೇಕು. ಹಲವಾರು ಕಾರಣಗಳಿಂದಾಗಿ ಗಾಂಧೀಜಿಗಿಂತ ಅಂಬೇಡ್ಕರ್ ಬಹು ದೊಡ್ಡವರೆಂದು ತಿಳಿಯುತ್ತೇನೆ. ಯಾಕೆಂದರೆ ಗಾಂಧಿಯವರ ಉದ್ದೇಶಗಳು ಅವರು ಆ ಕಾಲದಲ್ಲಿ ಹಾಕಿಕೊಂಡಂಥ ಕೆಲಸಗಳಿಗೆ ಸುಸಂಬಂಧವಾಗಿದ್ದವು. ಅಂಬೇಡ್ಕರ್‌ರವರು ತಮ್ಮ ವೈಯಕ್ತಿಕವಾದ ನೋವಿಗಾಗಿಯೇ ಅಸ್ಪೃಶ್ಯತೆಯ ಸಮಸ್ಯೆಯನ್ನು ಕೈಗೆತ್ತಿಕೊಂಡರೆಂಬುದೇ—ಈ ಸಮಸ್ಯೆಯ ಹಲವು ಮುಖಗಳ ಅಧ್ಯಯನ ಮಾಡಲೂ ಪರಿಹಾರಗಳನ್ನು ಕಂಡುಕೊಳ್ಳಲು ಕಾರಣವಾಯಿತು, ಆದರಿಂದಲೇ ಇವರು ಹಿಂದೂ ಧರ್ಮದ ನಿಜವಾದ ವಿದ್ವಾಂಸರು; ಬೌದ್ಧ ಧರ್ಮವನ್ನು ಮಾನವತಾವಾದವಿರುವ ಧರ್ಮವೆಂದು ಎತ್ತಿ ತೋರಿಸಿದರು. ಇದೊಂದು ಪೊಳ್ಳು ನಂಬಿಕೆಯ, ನಿಷ್ಪ್ರಯೋಜಕವಾದ ತಿಳುವಳಿಕೆಯಾಗಿರಲಿಲ್ಲ. ಈ ಧರ್ಮ ಅಗತ್ಯವಾಗಿಯೂ ಒಂದು ಕ್ರಾಂತಿಕಾರಕ ಧರ್ಮವೆಂದು ತಿಳಿಯಬೇಕಾಗಿದೆ. ಯಾಕೆಂದರೆ ಬುದ್ಧ ತನ್ನ ಕೊನೆಯ ಅಧ್ಯಾಯದಲ್ಲಿ ತಾನೇ ಹೇಳುತ್ತಾನೆ : ನೋಡಿ ಯಾವುದೇ ವಿಷಯುವನ್ನು ನಾನು ಹೇಳಿದ್ದೇನೆಂಬ ಕಾರಣಕ್ಕಾಗಿ ಒಪ್ಪಿ ಕೊಳ್ಳಬೇಡಿ. ಯಾವುದೇ ವಿಷಯುವಾಗಿರಬಹುದು, ಅದನ್ನು ನಿಮ್ಮ ಅನುಭವದ ಆಧಾರದ ಮೇಲೆ ಹೊರೆಗಚ್ಚಿ ನೋಡಿ. ನಂತರ ಅವುಗಳನ್ನು ಉಪಯೋಗಿಸಿ. ಅವು ನಿಜವಾಗಿಯೂ ಸಮರ್ಥವೆಂದು ಕಂಡು ಬಂದರೆ ಅವುಗಳನ್ನು ಇಟ್ಟುಕೊಳ್ಳಿ. ಕೇವಲ ನಾನು ಹೇಳಿದ್ದೇನೆಂಬ ಕಾರಣಕ್ಕಾಗಿ ಯಾವುದನ್ನೂ ಒಪ್ಪಿಕೊಳ್ಳಬೇಡಿ.'' ನೀವು ಯಾವುದೇ ಧರ್ಮದ ಮುಖಂಡ ಈ ರೀತಿಯಾಗಿ ಹೇಳಿರುವುದನ್ನು ಕಾಣಲಾರಿರಿ. ಯಾವುದೇ ಧರ್ಮದ ಈ ಹೊತ್ತಿನ ಗುರುವಾಗಲೀ, ಅಥವಾ ಧರ್ಮದ ಸಂಸ್ಥಾಪಕನಾಗಲೀ ಜನತೆ ತಮ್ಮ ಮಾತನ್ನು ಒಪ್ಪಿಕೊಳ್ಳಲೇ ಬೇಕು ಎಂದು ತಿಳಿದಂಥವರು. ಯಾಕೆಂದರೆ ಅವರೆಲ್ಲಾ ದೇವನಿಂದ ಅಪೌರುಷೀಯವಾದ ಜ್ಞಾನವನ್ನು ಪಡೆದುಕೊಂಡಿರುತ್ತಾರೆ, ದೇವರೊಂದಿಗೆ ನೇರವಾದ ಸಂಪರ್ಕವನ್ನಿಟ್ಟು ಕೊಂಡಿರುತ್ತಾರೆ ಎಂಬುದನ್ನು ಜನತೆ ನಂಬುವಂತೆ ಮಾಡಿದ್ದಾರೆ. ಆದ್ದರಿಂದ ಈ ಎಲ್ಲಾ ಧಾರ್ಮಿಕ ನಾಯಕರುಗಳಲ್ಲಿ ಬುದ್ಧ ಒಬ್ಬ ಮಾತ್ರ ದೇವರನ್ನೂ ಅವಲಂಬಿಸಲಿಲ್ಲ ಮತ್ತು ಅದನ್ನು ಜನತೆಗೆ ಬೋಧಿಸಲಿಲ್ಲ. ಇದರ ಬದಲಾಗಿ ಸಾಧಾರಣ ಮನುಷ್ಯನ ಒಳ್ಳೆಯದರಲ್ಲೇ ಈತ ಬಹು ದೊಡ್ಡ ನೀತಿಯನ್ನು ಕಂಡುಕೊಂಡಂಥ ಬುದ್ಧನನ್ನು ಅಂಬೇಡ್ಕರ್ ಒಪ್ಪಿದರು.

ಮುಂದೆ ಅಂಬೇಡ್ಕರ್ ಸತ್ಯಾಗ್ರಹ ಚಳುವಳಿಗಳನ್ನು ನಡೆಸಿದರು. ಐತಿಹಾಸಿಕವಾದ ಚೌಡಕೆರೆ ಸತ್ಯಾಗ್ರಹವಾಯ್ತು. ೨೦ನೆಯ ಮಾರ್ಚ್, ೧೯೩೭ರಲ್ಲಿ ಸತ್ಯಾಗ್ರಹಿಗಳೊಡನೆ ಚೌಡ ಕೆರೆಯ ನೀರನ್ನು ಕುಡಿದರಲ್ಲದೆ; ಚೌಡ ಕೆರೆಗೆ ಅಸ್ಪೃಶ್ಯರು ಪ್ರವೇಶಿಸಬಹುದೆಂಬ ಸಾರ್ವಜನಿಕ ತಿಳುವಳಿಕೆಯನ್ನೂ ತಂದುಕೊಟ್ಟರು

ಇದೇ ವರ್ಷ ಡಿಸೆಂಬರ್‌ನಲ್ಲಿ ಬಹಿರಂಗವಾಗಿ ಮನುಸ್ಮೃತಿಯನ್ನು ಸುಟ್ಟರು. ಇದಾದನಂತರ ಹಲವಾರು ಸತ್ಯಾಗ್ರಹಗಳನ್ನು ನಡೆಸಿದರು. ಪೂನಾದಲ್ಲಿ ಒಂದು ಪಾರ್ವತಿ ದೇವಸ್ಥಾನದ ಮುಂದೆ ೧೯೩೦ರಲ್ಲಿ ಸತ್ಯಾಗ್ರಹ ನಡೆಸಿದರು; ಯಾಕೆಂದರೆ ಹಿಂದೂಗಳೇ ಆದರೂ ದಲಿತರಿಗೆ ಅಲ್ಲಿ ಪ್ರವೇಶಿಸುವ ಹಕ್ಕಿರಲಿಲ್ಲ. ಹೀಗೆಯೇ ೧೯೩೦ರಲ್ಲಿ ನಾಸಿಕ್‌ನಲ್ಲಿ ಒಂದು ಸತ್ಯಾಗ್ರಹ ನಡೆಯಿತು, ಈ ರೀತಿಯ ಕೆಲವು ಕ್ರಮಗಳು ಬಹಳ ಅಗತ್ಯವಾಗಿ ಬೇಕಾಗಿತ್ತು.

ಒಂದು ಕಡೆ ದಲಿತರು ವೇದನೆಯನ್ನು ಅನುಭವಿಸುತ್ತಿದ್ದಾರೆ; ತಲತಲಾಂತರ ದಿಂದ ಈ ಸಾಮಾಜಿಕ ಅಸಮಾನತೆಯ ಕಿಚ್ಚಿನಲ್ಲಿ ಬೇಯುತ್ತಿದ್ದಾರೆ, ಮತ್ತೊಂದು ಕಡೆ ಉತ್ಪಾದನ ಮೂಲಗಳಿಂದ ವಂಚಿತರು. ಅನಿವಾರ್ಯವಾಗಿ ದಲಿತರು ಕೆಲಸಕ್ಕಾಗಿ ಮೇಲು ವರ್ಗದವರ ಸಹಾನುಭೂತಿ ಗಿಟ್ಟಿಸುವುದು ಇವರ ಉಳಿವಿಗಾಗಿ ಅಗತ್ಯವಾಗಿದೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಕೃಷಿ ಕಾರ್ಮಿಕರಾಗಿ ದುಡಿ ಯುತ್ತಿದ್ದಾರೆ. ಶೇಕಡಾ ೧.೭೫ರಷ್ಟು ಜನ ಜಾಡಮಾಲಿ, ಮತ್ತು ಭಂಗಿ ವೃತ್ತಿಯ ವರು. ಮಿಕ್ಕವರು ಗೌತಮರು, ಮಾಂಗ್‌ಗಳು, ಚಮ್ಮಾರರು. ಚಮ್ಮಾರರಿಗೆ ಚರ್ಮದ ಉದ್ಯೋಗವಿದ್ದರೂ, ಬಂಡವಾಳ ಹೂಡಿರುವ ದೊಡ್ಡ ಅಂಗಡಿಯವರು ಇಂದು ಈ ವೃತ್ತಿ ನಿರತನಿಗೆ ಪೆಟ್ಟುಕೊಡುತ್ತಿದ್ದಾರೆ. ಹಳ್ಳಿಯಲ್ಲಿ ಗಲಾಟೆಯಾದಾಗ ದಲಿತರಿಗೆ ಮೇಲು ವರ್ಗದ ಜನರ ಕಿರುಕುಳ ತಪ್ಪಿಸಬೇಕು ಎಂದು ಏನಾದರೂ ಪಟ್ಟಣದ ಸುಧಾರಣಾವಾದಿಗಳು ಹೋದರೆ ಅಲ್ಲಿಯ ಹಳ್ಳಿಗರು ಹೇಳುತ್ತಾರೆ— "ದಯವಿಟ್ಟು ನೀವು ಇಲ್ಲಿಗೆ ಬರಬೇಡಿ. ನೀವು ನಮ್ಮೊಂದಿಗೆ ಒಂದು ದಿನವಿರಬಹುದು, ಎರಡು ದಿನವಿರಬಹುದು. ಆದರೆ ನೀವು ಹೋದ ಮೇಲೆ ನಮ್ಮನ್ನು ನೋಡುವವರು ಯಾರು? ಹೇಗೋ ಈ ಜಂಗಲ್‌ನಲ್ಲಿ ನಾವು ಹೊಂದಿ ಕೊಂಡು ಬಾಳುತ್ತೇವೆ

ದಲಿತರ ಮೇಲಾಗುತ್ತಿರುವ ಕಿರುಕುಳವನ್ನು ತಪ್ಪಿಸುವುದಕ್ಕಾಗಿ ಹಲವಾರು ಪರಿಹಾರದ ಮಾತುಗಳಿವೆ—ಅದರಲ್ಲಿ ಒಂದು, ದಲಿತರೆಲ್ಲರೂ ಪಟ್ಟಣಕ್ಕೆ ಬಂದು ನೆಲೆಸುವುದು. ಇದು ಅಸಾಧ್ಯ ಹಾಗೂ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಲ್ಲ. ಇಂದು ಪರಿಸ್ಥಿತಿ ಅತ್ಯಂತ ಉಗ್ರವಾಗಿರುವಂತೆ ಪ್ರದೇಶವನ್ನು ಆಯ್ಕೆ ಮಾಡಿ ಕೊಂಡು ಅಲ್ಲಿ ಸಂಘಟನೆ ಮಾಡಬೇಕು, ಜೊತೆಗೆ ಇವರ ಆರ್ಥಿಕ ಸ್ವಾವಲಂಬನೆಯ ಕಡೆಗೂ ಗಮನಕೊಡಬೇಕು; ಆ ಮುಖೇನ ಜಾತೀಯತೆಯಿಂದಾಗಬಹುದಾದ ಅವಮಾನವನ್ನು ಸಂಪೂರ್ಣವಾಗಿ ಈ ಜನತೆ ಕಳೆದುಕೊಳ್ಳಲು ಸಮರ್ಥರಾಗು ತ್ತಾರೆ. ಹಾಗೂ ಇಂದು ಹಳ್ಳಿಗಳಲ್ಲಿ ಜಮೀನೆಲ್ಲ ಛಿದ್ರ ಛಿದ್ರವಾಗಿದೆ. ಅಲ್ಪ ಸ್ವಲ್ಪ ಜಮೀನಿರುವ ದಲಿತರಿಗೂ ಇಕ್ಕಟ್ಟು. ಎಲ್ಲರ ಸಹಕಾರ ಬೇಸಾಯವನ್ನು ಅರ್ಥ ವಾಗುವಂತೆ ತಿಳಿಸಿ ಒಡಂಬಡಿಸಬೇಕಾಗಿದೆ. ಅಲ್ಲದೆ ವಿಶೇಷ ವಾಣಿಜ್ಯದ ವಿಧಾನ ಗಳನ್ನು ವ್ಯವಸ್ಥೆ ಮಾಡಿ ಆರ್ಥಿಕ ಸ್ವಾವಲಂಬಿತನ ಗಳಿಸುವಂತೆ ಮಾಡಬೇಕಾಗಿದೆ.

(ಅನುವಾದ : ದೇವಯ್ಯಹರವೆ)

ಮಾರ್ಕ್ಸ್‌ವಾದಿಗಳು ನಮ್ಮ ಒಬ್ಬ ಶತ್ರುವನ್ನು ಗುರುತಿಸಿದ್ದಾರೆ. ಅದು: ಬಂಡವಾಳವಾದ. ನಾವು ಇಬ್ಬರು ಶತ್ರುಗಳನ್ನು ಗುರುತಿಸಿದ್ದೇವೆ ಅವು: ಬ್ರಾಹ್ಮಣವಾದ ಮತ್ತು ಬಂಡವಾಳವಾದ. ನಾವು ಕುಷ್ಠ ರೋಗಿಗಳಂತೆ ಔದಾರ್ಯ ಕೇಳುತ್ತಿಲ್ಲ, ಭಿಕ್ಷೆಯು ಕೇಳುತ್ತಿಲ್ಲ. ಪಾಲು ಕೇಳುತ್ತಿದ್ದೇವೆ.

ಭಗವಾನ್ ದಾಸ್

1972 ಅಥವಾ ಅದಕ್ಕೂ ಮೊದಲೆ ನಮ್ಮ ರಾಜಕೀಯ ಪಕ್ಷಗಳ ಪೈಕಿ ಒಂದು, ಒಂದೇ ಒಂದು ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಗಳಲ್ಲಿ ಜಾತಿ ಆಧಾರದ ಮೀಸಲಾತಿ ವಿರುದ್ಧ ಹೋರಾಡುವುದಾಗಿ ಘೋಷಿಸಿಕೊಂಡಿತು. ಅದು ಜನಸಂಘ. ಈ ಪಕ್ಷವು ತನ್ನ ಪಕ್ಷದ ಸಾಹಿತ್ಯ, ಪತ್ರಿಕೆಗಳು ಮತ್ತು ವೇದಿಕೆಗಳ ಮೂಲಕ ಜಾತಿ ಆಧಾರದ ಮೀಸಲಾತಿ ಅವಕಾಶಗಳ ವಿರುದ್ಧ ನಿರಂತರ ಅಪಪ್ರಚಾರ ನಡೆಸಿತು. ಬಲರಾಜ ಮಧೋಕ್ ಮತ್ತು ಇತ್ತೀಚಿಗೆ ಸುಬ್ರಮಣಿಯನ್ ಸ್ವಾಮಿಯವರು ಈ ಭಯಂಕರ ಅಪಪ್ರಚಾರದ ತೀವ್ರವಾದಿಗಳು. ಇವರು ತಮ್ಮ ಈ ನಿಲುವಿಗೆ ಸೈದ್ಧಾಂತಿಕ ಬಲವನ್ನು ಗುರುಗೋಲವಾಲಕರ್‌ರವರ ಪತ್ರಗಳಿಂದ ಪಡೆದುಕೊಂಡರು.

ಜನರನ್ನು ಈ ನಿಲುವಿನ ಆಧಾರದ ಮೇಲೆ ಸಂಘಟಿಸಲಾಯಿತು. ಈಗ ಚುನಾವಣೆಯಲ್ಲಿ ಸೋತಿದ್ದಾರೆ. ಮತ್ತು ಬಿಳಿ ಕಾಲರ್ ಕಾರ್ಮಿಕರ ಸಂಘಟನೆಗಳನ್ನು ಪ್ರವೇಶಿಸಲು ಪ್ರಯತ್ನಿಸಿದ್ದಾರೆ. ಕಾರ್ಮಿಕರ ಸಂಘಗಳ ಪರಿಸ್ಥಿತಿ ಹೇಗಿತ್ತು ಎಂದರೆ ಅವುಗಳು ಕಮ್ಯುನಿಷ್ಟ ಸಂಘಟನೆಗಳಾದ AITUC ಅಥವಾ ಕಾಂಗ್ರೆಸ್ ಸಂಘಟನೆಗಳಾದ INTUC ಅಂಗ ಸಂಸ್ಥೆಗಳ ವಶದಲ್ಲಿದ್ದವು. ಜನಸಂಘದವರು ಇಲ್ಲಿ ನೇರವಾಗಿ ನುಗ್ಗಲು ಸಾಧ್ಯವಾಗಲಿಲ್ಲ. ಏಕೆಂದರೆ ಜನಸಂಘದ ಬೆಂಬಲ ಇದ್ದುದು, ಮಧ್ಯಮ ಜಾತಿ ಮತ್ತು ಮಧ್ಯಮ ವರ್ಗಗಳಲ್ಲಿ. ಈ ರೀತಿಯ ಮಧ್ಯಮ ವರ್ಗವು ಸಂಘಟನೆಗಳನ್ನು ಪ್ರವೇಶಿಸಿ ಅವರು ಈ ವಿಚಾರವನ್ನು ನಿರಂತರವಾಗಿ ಮತ್ತು ಬಹಿರಂಗವಾಗಿ ಪ್ರಚಾರ ಮಾಡಿದರು. ಮೊಟ್ಟ ಮೊದಲ ಕಾರ್ಯಾಚರಣೆ ಚಂಢೀಗಡದ ಮೀಸಲಾತಿ ವಿರೋಧಿ ಸಂಸ್ಥೆಯು ಪ್ರಾರಂಭಿಸಿತು. ನಂತರ ಹರಿಯಾಣದಲ್ಲಿ ಅಧಿವೇಶನ ನಡೆಯಿತು. ಈ ಹೊಸ ಸಂಸ್ಥೆಯ ಸದಸ್ಯರುಗಳಲ್ಲಿ ಸರ್ಕಾರಿ ಕೆಲಸಗಳನ್ನು ಮನಾಪಲಿ ಮಾಡಿಕೊಂಡ ಜಾತಿಗಳ ಜನರೇ ಹೆಚ್ಚಾಗಿ ಇದ್ದರು. ಈ ಜಾತಿಯ ಜನಗಳಿಗೆ ಇದು ಆಕರ್ಷಕವಾಗಿ ಕಂಡು ಬಂದಿತು. ಇದು ಪ್ರಾರಂಭವಾಗಲು ಎರಡನೆಯ ಕಾರಣವೆಂದರೆ ರಾಜಕೀಯ ಪಕ್ಷವೊಂದು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದು. ಮುಸ್ಲಿಮರು ಮತ್ತು ಅಸ್ಪೃಶ್ಯರ ಬೆಂಬಲದಿಂದ ಕಾಂಗ್ರೆಸ್ ಪಕ್ಷ ಚುನಾವಣೆಗಳನ್ನು ಗೆಲ್ಲುತ್ತಿದೆ. ಆದ್ದರಿಂದ ಇವರ ನಡುವೆ

ಭೇದ ಕಲ್ಪಿಸಿ ಒಬ್ಬರೊಡನೊಬ್ಬರು ಜಗಳ ಕಾಯುವಂತೆ ಮಾಡಲು ಯತ್ನಿಸಿದರು. ಆದರೆ ಮುಸ್ಲಿಮರು ಈ ಬೋನಿನಲ್ಲಿ ಸಿಕ್ಕಿಹಾಕಿಕೊಳ್ಳುವಷ್ಟು ಮೂರ್ಖರಲ್ಲ. ಕನಿಷ್ಠ ಗುಜರಾತಿನ ದೊಂಬಿಯಲ್ಲಿ ಮುಸ್ಲಿಮರು ಈ ಕಿಡಿಗೇಡಿಗಳ ಜೊತೆ ಸೇರಲಿಲ್ಲ. ನಮಗೆ ಅಸ್ಪೃಶ್ಯರ ವಿರುದ್ಧ ಯಾವುದೇ ತಕರಾರಿಲ್ಲ ಎಂದು ಹೇಳುವ ಮುಸ್ಲಿಮರು ಅಸ್ಪೃಶ್ಯರೊಡನೆ ಯಾವ ಜಗಳವನ್ನು ಕಾಯಲಿಲ್ಲ. ಆದರೆ ಮುಸ್ಲಿಮರ ಹೆಸರಿನಲ್ಲಿ ಮೀಸಲಾತಿ ವಿರುದ್ಧ ಪತ್ರಗಳನ್ನು ಬರೆದು ಪ್ರಕಟಿಸಲಾಗುತ್ತಿದೆ!

ಭಾರತ ಸರಕಾರದ ಸಂಸ್ಥೆಗಳಲ್ಲಿ ಅತಿ ಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಸಂಸ್ಥೆಗಳೆಂದರೆ ಕ್ರಮವಾಗಿ ರೈಲ್ವೇ ಇಲಾಖೆ, CPW, ರಕ್ಷಣಾ ಸಂಸ್ಥೆಗಳು, ಅಂಚೆ ಮತ್ತು ತಂತಿ ಇಲಾಖೆ ಮತ್ತು ಕೇಂದ್ರ ಸರ್ಕಾರದ ಅಕೌಂಟೆಂಟ್ ಜನರಲ್ ಕಛೇರಿಯ ಬೇರೆ ಬೇರೆ ರಾಜ್ಯಗಳ ಶಾಖೆಗಳು. RSS ಮತ್ತು ಜನಸಂಘದ ಯೋಧರು ಈ ಸಂಸ್ಥೆಗಳು ಮತ್ತು ಅವುಗಳ ಶಾಖೆಗಳಲ್ಲಿ ಪ್ರವೇಶಿಸಿ ಮೀಸಲಾತಿ ವಿರೋಧಿ ಘಟಕಗಳನ್ನು ಸ್ಥಾಪಿಸಿದರು. ಪರಿಶಿಷ್ಟ ಜಾತಿಗಳ ಸಂಘಟನೆಗಳಂತೆಯೇ ಸರ್ಕಾರವು ಈ ಸಂಸ್ಥೆಗಳನ್ನು ಅಧಿಕೃತವಾಗಿ ಪರಿಗಣಿಸಲಿಲ್ಲ. ಆದರೆ ಈ ಮೀಸಲಾತಿ ವಿರೋಧಿ ಸಂಸ್ಥೆಗಳು ಭಿನ್ನವತ್ತಳೆಗಳನ್ನು ಅರ್ಪಿಸಿದವು. ಅಧಿವೇಶನಗಳನ್ನು ನಡೆಸಿದವು. ಕಛೇರಿಗಳ ಆವರಣದಲ್ಲಿ ಮೀಟಿಂಗ್‌ಗಳನ್ನ ನಡೆಸಿ ಪರಿಶಿಷ್ಟ ಜಾತಿಯವರನ್ನು ಬೈದಾಡಿದರು. ಗೋಡೆಗಳ ಮೇಲೆ "ನೀವೇಕೆ ನಿಮ್ಮ ತಾತ ಮುತ್ತಾತಂದಿರ ಗುಡಿಸುವ ಕೆಲಸಕ್ಕೆ ವಾಪಸ್ಸು ಹೋಗುವುದಿಲ್ಲ ?" ಎಂದೆಲ್ಲಾ ಬರೆದಿದ್ದಾರೆ. ಪೋಲಿಸರ ಕುಮ್ಮಕ್ಕು ಇಂಥವರಿಗಿದೆ. ಅಹಮದಾಬಾದ್ ನಗರದಲ್ಲಿ ಇಪ್ಪತ್ತೈದು ಜನ ಪರಿಶಿಷ್ಟ ಜಾತಿಗೆ ಸೇರಿದವರು ಆಟೋರಿಕ್ಷಾ ಓಡಿಸುತ್ತಾರೆ. ಪೋಲಿಸಿನವರು ಲೈಸನ್ಸ್ ನೀಡಲಾದ ಈ ೨೫ ಜನ ಚಾಲಕರ ಪಟ್ಟಿಯನ್ನು ನೀಡಿ, ಗೋಡೆಗಳ ಮೇಲೆ ಬರೆಯುವುದರ ಮೂಲಕ, ಕರಪತ್ರಗಳ ಮೂಲಕ ಇವರ ಆಟೋರಿಕ್ಷಾ ನಂಬರ್‌ಗಳನ್ನು ಜನಕ್ಕೆ ತಿಳಿಸಿ ಈ ಆಟೋಗಳನ್ನು ಯಾರೂ ಹತ್ತಬಾರದು ಎಂದು ಘೋಷಿಸಿದ್ದಾರೆ. ಒಂದು ರೀತಿ ಅವರನ್ನು ಬಹಿಷ್ಕರಿಸಿದ್ದಾರೆ. ಮೀಸಲಾತಿ ವಿರೋಧಿ ಸಂಸ್ಥೆಗಳು ದೆಹಲಿ, ಸಿಮ್ಲಾ, ಚಂಡೀಘಡ, ಮುರಾದಾಬಾದ್ ಮುಂತಾದ ಉತ್ತರದ ಪ್ರಮುಖ ನಗರಗಳಲ್ಲಿ ಇಂಥ ಕೆಲಸಗಳಲ್ಲಿ ತೊಡಗಿವೆ. ಈ ಸಂಸ್ಥೆಗಳು ಅಸ್ಪೃಶ್ಯರು ಗುಡಿಸುವ ಕೆಲಸ, ಚಪ್ಪಲಿ ಹೊಲೆಯುವುದು, ಬುಟ್ಟಿ ಹೆಣೆಯುವುದು ಮುಂತಾದ ಕೆಲಸಗಳಿಗೆ ವಾಪಸ್ಸು ಹೋಗಬೇಕು ಎಂದು ಬಹಿರಂಗವಾಗಿ ಹೇಳುತ್ತಿವೆ. ಆದರೂ ಯಾರ ಮೇಲೂ ಯಾವ ಕ್ರಮವನ್ನು ಕೈಗೊಂಡಿಲ್ಲ. ಪರಿಶಿಷ್ಟ ಜಾತಿಗಳ ಕಮೀಷನರ್ ಸಹ ಈ ಕರಪತ್ರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದರೂ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಏಕೆಂದರೆ ಉಚ್ಚ ಅಧಿಕಾರಿಗಳೂ ಕೂಡ ಈ ಮೀಸಲಾತಿ ವಿರೋಧಿಗಳ ಜೊತೆ ಶಾಮೀಲಾಗಿದ್ದಾರೆ. ಕ್ರಮ ಕೈಗೊಳ್ಳಬೇಕಾದವರು ಯಾರು?

ಅವರಿಗೂ ತಿಳಿದಿದೆ ಇಂದಿನ ಇಂಡಿಯಾದಲ್ಲಿ "ಮನುಸ್ಮೃತಿ" ಮತ್ತು "ಮಾಡರ್ನ್ ಸ್ಮೃತಿ" ಗಳ ನಡುವೆ ಘರ್ಷಣೆ ಇದೆ ಎಂದು. ಒಂದು ಸಣ್ಣ ಗುಂಪು "ಮಾಡರ್ನ್ ಸ್ಮೃತಿ"ಯ ಪರವಾಗಿದೆ. ನಮಗೆ ತಿಳಿದಿದೆ "ಮನುಸ್ಮೃತಿ"ಯ ಪರವಾದವರ ಹೋರಾಟ ಸೋಲಿನಲ್ಲಿ ಕೊನೆಯಾಗುತ್ತದೆ ಎಂದು. ಆದರೂ ಈ ಜನಗಳಿಂದ ಸಾಕಷ್ಟು ಜಖಂ ಆಗುತ್ತದೆ. ಮೊದಲು ಕಛೇರಿಗಳಲ್ಲೂ ವಿರೋಧವನ್ನು ಹೆಪ್ಪುಗಟ್ಟಿಸಿದರು, ಎರಡನೆ ಹೆಜ್ಜೆ ಕೋರ್ಟಿಗೆ ಹೋಗುವುದು, ಮೂರನೆಯದು ಮೀಸಲಾತಿ ವಿರೋಧಿ ಸಂಸ್ಥೆಗಳನ್ನು ಹುಟ್ಟುಹಾಕುವುದು. ನಾಲ್ಕನೆಯ ಹೆಜ್ಜೆ ಬಗ್ಗೆ ನಮಗೆ 1980ರ ನವೆಂಬರ್ 14 ರಂದು ವಾಸನೆ ಬಂತು. ಅಂದು ಜಸ್ಟೀಸ್ ಕೃಷ್ಣ ಅಯ್ಯರ್ ರೈಲ್ವೇ ಗಾರ್ಡ್‌ಗಳ ಕೇಸಿನಲ್ಲಿ ತೀರ್ಪು ನೀಡುತ್ತಿದ್ದರು. ನವದೆಹಲಿ ಬಾರ್‌ನ ವಕೀಲರಾದ ಶ್ರೀ ಶಾಂತಿಭೂಷಣ್, ಶ್ರೀ ಶಿರವಾರ್‍ಯ, ಶಿಂಘವಿಯವರುಗಳು ಅಂದಿನ ತೀರ್ಪೇನಾದರೂ ಪರಿಶಿಷ್ಟ ಜಾತಿಗಳ ಪರವಾಗಿ ಇದ್ದಲ್ಲಿ ಬಹಳ ಬೇಗ ದೇಶದ ಬೀದಿಗಳಲ್ಲಿ ರಕ್ತಪಾತವಾಗುವುದು ಖಂಡಿತ ಎಂದು ಹೇಳಿದರು. ಒಟ್ಟಿನಲ್ಲಿ ಈ ವಿಧಾನಗಳಿಂದ ಪಿತೂರಿ ನಡೆಸುತ್ತಿದ್ದಾರೆ.

ಈಗ ದುರದೃಷ್ಟವಶಾತ್ ರಾಷ್ಟ್ರೀಯ ಪತ್ರಿಕೆಗಳಲ್ಲಿ ಒಂದು ಚರ್ಚೆಯನ್ನೇ ಪ್ರಾರಂಭಿಸಲಾಗಿದೆ. ಇದೊಂದು ದೂರಾಲೋಚನೆಯಿಲ್ಲದ ಕೆಲಸ. ಇವರು ಹೊಸದಾಗಿ ಈ ಬಗ್ಗೆ ವಿಚಾರ ಮಾಡಬೇಕು ಎನ್ನುತ್ತಾರೆ. ಕೆಲವರು ಮೀಸಲಾತಿಯಿಂದ ಏನೂ ಒಳ್ಳೆಯದಾಗಿಲ್ಲ ಎಂದು ಹೇಳುತ್ತಾರೆ. ಯಾವ ಆಧಾರದ ಮೇಲೆ ಈ ನಿರ್ಣಯಕ್ಕೆ ಬಂದಿದ್ದಾರೆ ನನಗಂತೂ ತಿಳಿಯುವುದಿಲ್ಲ. ಯಾರಿಗೆ ಒಳ್ಳೆಯದಾಗಿಲ್ಲ? ಶಾಸಕನಿರಲಿ, ಬುದ್ಧಿಜೀವಿಯಿರಲಿ, ವಕೀಲನಿರಲಿ, ಉಪಾಧ್ಯಾಯನಾಗಿರಲಿ, ಸಾಮಾನ್ಯ ಗುಮಾಸ್ತನಾಗಿರಲಿ ಅಥವಾ ನಾಲ್ಕನೆ ದರ್ಜೆಗೆ ಸೇರಿದ ಚೌಕಿದಾರನೇ ತೋಟಿಯೋ ಆಗಿರಲಿ ಒಬ್ಬ ಅಸ್ಪೃಶ್ಯನು ಮೀಸಲಾತಿಯಿಂದ ತನಗೆ ಉಪಯೋಗವಾಗಲಿಲ್ಲ ಎಂದು ಹೇಳಲಾರ. ಸಂಖ್ಯೆಯ ಮಟ್ಟಿಗೇ ಹೇಳುವುದಾದರೂ ಇದು ನಿಜ. ಪರಿಶಿಷ್ಟಜಾತಿಗಳ ಕಮಿಷನ್ನಿನ ವರದಿಯಂತೆ ಪರಿಶಿಷ್ಟ ಜಾತಿ ಉದ್ಯೋಗಸ್ಥರ ಸಂಖ್ಯೆ ಕೆಲವು ಲಕ್ಷ ಆಗಬಹುದು. ಅವರನ್ನು ಅವಲಂಬಿಸಿರುವವರನ್ನು ಗಮನಿಸಿದರೆ ಇದರಿಂದ ಉಪಯೋಗವಾಗಿದೆಯೋ ಇಲ್ಲವೋ ಎಂದು ತಿಳಿದು ಬರುತ್ತದೆ. 1975–76 ಮತ್ತೆ 76–77ರ ಪರಿಶಿಷ್ಟ ಜಾತಿಗಳ ಕಮಿಷನರ್‌ರವರ ವರದಿಯಲ್ಲಿ ಖಾಸಗಿ ಸಂಸ್ಥೆಗಳು ಪರಿಶಿಷ್ಟ ಜಾತಿಯ ಜನರನ್ನು ನೇಮಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಕಮಿಷನರ್‌ರವರೇನೂ ಪರಿಶಿಷ್ಟ ಜಾತಿಗೆ ಸೇರಿದವರಲ್ಲ, ಇವರಿಗೆ ಕೆಲಸ ಕೊಡುತ್ತಿರುವ ಒಂದೇ ಸಂಸ್ಥೆಯಾದ ಸರ್ಕಾರವು ಮೀಸಲಾತಿಯನ್ನು ನಿಲ್ಲಿಸಿದರೆ ಇಷ್ಟೊಂದು ಜನರ ಗತಿ ಏನು ಎಂಬುದನ್ನು ಯೋಚಿಸಿ.

ನಿಮ್ಮ ಗಮನವನ್ನು ಇಂಡಿಯಾದ ಚರಿತ್ರೆಯತ್ತ ಸೆಳೆಯಬಯಸುತ್ತೇನೆ. ಇಂಡಿಯಾದಲ್ಲಿ ಇಂಗ್ಲಿಷರ ಸಾಮ್ರಾಜ್ಯವನ್ನು ನೆಲೆಗೊಳಿಸಿದ್ದ ಪ್ಲಾಸಿಕದನದಲ್ಲಿ

ಸಿರಾಜುದ್ದೌಲನ ವಿರುದ್ಧ ಇಂಗ್ಲಿಷರ ಪರವಾಗಿ ಹೋರಾಡಿದವರು ಅಸ್ಪೃಶ್ಯರು. ನಿಜವಾಗಿ ಗೆದ್ದವರು ಅಸ್ಪೃಶ್ಯರೇ. ಆದರೆ ಮುಂದೆ ಉಚ್ಚ ಜಾತಿಯ ಜನ ಅಪಾರ ಸಂಖ್ಯೆಯು ಸೈನ್ಯವನ್ನು ಸೇರಲಾರಂಭಿಸಿದರು. ಆ ದಿನಗಳಲ್ಲಿ "ಸೈನ್ಯದ ಬ್ರಾಹ್ಮಣೀಕರಣ'' ಎನ್ನಿಸಿಕೊಂಡ ಪ್ರಕ್ರಿಯೆ ಆರಂಭವಾಗಿಬಿಟ್ಟಿತು. ಪರಿಣಾಮವಾಗಿ ಅಸ್ಪೃಶ್ಯರು ಬಂಗಾಲದ ಸೇನೆಯಿಂದ ಹೊರದೂಡಲ್ಪಟ್ಟರು. ಈ ರೀತಿ ಸೈನ್ಯದಿಂದ ಹೊರದೂಡಲ್ಪಟ್ಟ ಅಸ್ಪೃಶ್ಯರು ಮುಕ್ತ ಮಾರುಕಟ್ಟೆಗೆ ಎಸೆಯಲ್ಪಟ್ಟರು. ಈಗ ಮೀಸಲಾತಿಯನ್ನು ನಿರಾಕರಿಸಿದರೆ ಎರಡು ರೀತಿಯ ನಷ್ಟ ಪರಿಶಿಷ್ಟ ಜಾತಿ ಮತ್ತು ಜನಾಂಗಗಳವರಿಗೆ ಆಗುತ್ತದೆ. ಇವರಿಗೆ ಉದ್ಯೋಗ ದೊರೆಯುವುದಿಲ್ಲ ಮತ್ತು ಮುಸ್ಲಿಮರಂತೆ ಶಿಕ್ಷಣದಲ್ಲಿ ಇವರು ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಶಿಕ್ಷಣಕ್ಕೆ ತಕ್ಕ ಪ್ರತಿಫಲ ದೊರೆಯದಂತಹ ಭ್ರಷ್ಟತೆ ನಮ್ಮ ದೇಶದಲ್ಲಿರುವುದರಿಂದ, ಪುನಃ ಇತಿಹಾಸದ ಪುನರಾವೃತ್ತಿಯಾಗುತ್ತದೆ.

ಈಗ ಮೀಸಲಾತಿ ತೆಗೆದಲ್ಲಿ ಇನ್ನೂ ಹತ್ತು ವರ್ಷಗಳಲ್ಲಿ ಚೌಕಿದಾರರು, ಗುಡಿಸುವವರು, ತೋಟಿಗಳು ಮುಂತಾದ ಕೆಲಸಗಳೇ ನಮಗೆ ನಿರ್ಧರಿಸಲ್ಪಡುತ್ತವೆ. ಏಕೆಂದರೆ ಆಳವಾಗಿ ಬೇರುಬಿಟ್ಟಿರುವ ಪೂರ್ವಾಗ್ರಹಗಳು, ಭೂತಕಾಲದ ಪೂರ್ವಾಗ್ರಹಗಳು ಜನಗಳ ತೀರ್ಮಾನದ ಮೇಲೆ ಮತ್ತು ಅವರ ಧೋರಣೆಗಳ ಮೇಲೆ ಖಂಡಿತ ಪ್ರಭಾವ ಬೀರುತ್ತವೆ. ಕೆಲಸಕ್ಕೆ ಸೇರಬಯಸುವ ಜನರ ಯೋಗ್ಯತೆಯು ಅವರಲ್ಲಿ ಪುಟಿಯುವ ಶಕ್ತಿಗಿಂತ ಅವರುಗಳ ಜಾತಿ ಆಧಾರಗಳೇ ಉದ್ಯೋಗ ದೊರಕಿಸುವಲ್ಲಿ ಮುಖ್ಯವಾಗುತ್ತವೆ. ನಿಮಗೆ ಆಶ್ಚರ್ಯವಾಗಬಹುದು. ಶೇಕಡ 97.8 ಜನ ಶೈಕ್ಷಣಿಕ ಅಕ್ಷರಸ್ಥರಿರುವಂಥ ಜಪಾನ್ ದೇಶದಲ್ಲಿ ಈ ಬುರಾಕುಮಿನ್ ಜನಾಂಗದ ಜನರಿಗೆ ತಮ್ಮ ಸಹಿ ಹಾಕಲು ಬರುವುದಿಲ್ಲ. ಅವರಿಗೆ ಸರ್ಕಾರದಲ್ಲಿ ಕೆಲಸಕೊಟ್ಟರೆ ನಮ್ಮಲ್ಲಿ ಅಸ್ಪೃಶ್ಯರನ್ನು ನಡೆಸಿಕೊಳ್ಳುವಂತೆಯೇ ಅಲ್ಲಿಯೂ ನಡೆಸಿಕೊಳ್ಳುತ್ತಾರೆ. ಅಲ್ಲಿ ಕೈಗಾರಿಕೋದ್ಯಮ ಹೆಚ್ಚಿರುವುದರಿಂದ ಖಾಸಗಿ ಕೈಗಾರಿಕೆಗಳಲ್ಲಿ ಅವರಿಗೆ ಕೆಲಸ ಸಿಗುವ ಸಾಧ್ಯತೆ ಇದೆ. ಹಾಗೆ ಸಿಕ್ಕಾಗ ಅಲ್ಲಿ ವೇತನದ ಮೂಲಕ ಅವರನ್ನ ಕಡೆಗಣಿಸಲಾಗುತ್ತದೆ. ಒಬ್ಬ ಸಾಮಾನ್ಯನಿಗೆ 10,000 ಯೆನ್ ನೀಡುವ ಸ್ಥಳದಲ್ಲಿ ಬುರಾಕುಮಿನ್‌ಗೆ 3,000 ಯೆನ್ ಮಾತ್ರ ಕೊಡಲಾಗುತ್ತದೆ. ಆದ್ದರಿಂದ ಮೀಸಲಾತಿ ನಿಲ್ಲಿಸಿದರೆ ಈ ನೂರು ವರ್ಷಗಳಿಂದ ಕಡೇ ಪಕ್ಷ 50 ವರ್ಷಗಳಿಂದ ಸಾಧಿಸಿರುವುದನ್ನ ಹಾಳುಮಾಡಿದಂತಾಗುತ್ತದೆ. ಮೀಸಲಾತಿ ವಿರೋಧಿಗಳಿಗೆ ಬೇಕಾಗಿರುವುದೂ ಅದೇ ಆಗಿದೆ.

ಈಗ ಮೀಸಲಾತಿಯನ್ನ ಅವರು ಏಕೆ ವಿರೋಧಿಸುತ್ತಾರೆ ಎಂಬ ವಿಷಯಕ್ಕೆ ಬರುತ್ತೇನೆ. ಅವರು ಉದ್ಯೋಗ ಅವಕಾಶಗಳನ್ನು ಸಂಪೂರ್ಣ ಸ್ವಮೀಸಲು ಮಾಡಿಕೊಂಡು ಗುತ್ತೆ ಹಿಡಿದ ಜಾತಿ ಮತ್ತು ವರ್ಗದವರು. ತಮ್ಮ ಗುತ್ತೆ ಹಾದಿಯಲ್ಲಿ ಅಸ್ಪೃಶ್ಯರಿಗೆ ಹಿಸ್ಸೆ ಕೊಡುವುದಕ್ಕೆ ಅವರಿಗೆ ಸುತಾರಾಂ ಇಷ್ಟವಿಲ್ಲ. ಮೀಸ

ಲಾತಿ ಇದ್ದೂ ಅದು ದೊರಕದಂತೆ ಮಾಡುತ್ತಿದ್ದಾರೆ. ಇದರ ಹಿಂದೆ ಎರಡು ಉದ್ದೇಶ ಗಳಿವೆ. ಒಂದು, ಕೆಲಸಗಳನ್ನು ಕಿತ್ತುಕೊಳ್ಳುವುದು. ಎರಡು, ಪರಿಶಿಷ್ಟ ಜಾತಿಯ ಜನರನ್ನು ಬೆದರಿಸಿ ಧೈರ್ಯಗುಂದುವಂತೆ ಮಾಡುವುದು. ಇಂಥ ಪರಿಸ್ಥಿತಿಯಲ್ಲಿ ನಾವು ಏನು ಮಾಡಬಹುದು ಮತ್ತು ಏನನ್ನು ಮಾಡಲೇಬೇಕು ?

ಬಾಬಾ ಸಾಹೇಬ್ ಅಂಬೇಡ್ಕರ್‌ರವರ ನಮ್ಮ ಕಾಲಮೇಲೆ ನಾವೇ ನಿಲ್ಲಬೇಕೆನ್ನುವ ಬುದ್ಧಿವಾದವನ್ನು ನಾವು ಅನುಸರಿಸಲಿಲ್ಲ. ನಾವು ಸ್ವಾವಲಂಬಿಗಳಾಗದೆ ಪರಾವಲಂಬಿಗಳಾದೆವು. ಇತರರ ಸಹಾಯದಿಂದ ನಿಂತುಕೊಳ್ಳಲು ಯತ್ನಿಸಿದೆವು. ಇತರರ ಕರುಣೆ ಮತ್ತು ಔದಾರ್ಯದಿಂದ ನಿಂತುಕೊಳ್ಳಲು ಪ್ರಯತ್ನಿಸಿದೆವು. ಶತ್ರುಗಳ ಕೈಗೊಂಬೆಗಳಾದೆವು. ಪ್ರಬಲವಾದ ಬಂಡವಾಳಶಾಹಿಗಳ ವಿರುದ್ಧ ಹೋರಾಟ ನಡೆಸಿದವರ ಜೊತೆ ಸಖ್ಯ ಬೆಳೆಸಲಿಲ್ಲ. ಈ ರೀತಿ ನಾವು ತಪ್ಪುಗಳನ್ನು ಮಾಡಿದ್ದೇವೆ. ನಮ್ಮದೇ ಆದ ದೌರ್ಬಲ್ಯಗಳಿವೆ. ನಾವು 937 ಉಪಜಾತಿಗಳಾಗಿ ಒಡೆನುಕೊಂಡಿದ್ದೇವೆ. ಪರಿಶಿಷ್ಟಯಾದಿಯನ್ನು ತೆಗೆದುಹಾಕಿದ ತಕ್ಷಣ ನಾವು ಛಿದ್ರವಾಗುತ್ತೇವೆ ನಮ್ಮನ್ನ ಒಟ್ಟಿಗೆ ತರಬಲ್ಲದ್ದು ಯಾವುದು? ರಾಜಕೀಯ ಪಕ್ಷವೆ? ಸಿದ್ಧಾಂತವೆ? ಅಥವಾ ಧರ್ಮವೆ? ಸಂಘರ್ಷ ಸಮಿತಿ ಎಲ್ಲರನ್ನೂ ಒಟ್ಟು ಮಾಡುವ ಯತ್ನ ನಡೆಸಿದೆ. ಒಗ್ಗಟ್ಟಿನ ಬಗ್ಗೆ ಮಾತುಕತೆ ನಡೆಯುತ್ತಿದೆ. ಆದರೆ ಈ ಒತ್ತಡ ಕತ್ತಿ ಮತ್ತು ಬಲಿ ಪೀಠದ ನಡುವೆ ಇರುವ ತಲೆಯ ಪರಿಸ್ಥಿತಿಯಿಂದಾಗಿ ಉಂಟಾದದ್ದಾಗಿದೆ. ಈ ಭಯ ಮಾಯವಾದ ತಕ್ಷಣ ಈ ಒತ್ತಡ ಕೂಡ ಕಣ್ಮರೆಯಾಗುತ್ತದೆ.

ಇಡೀ ದೇಶದಲ್ಲಿ ನಾವು ಒಡೆದುಕೊಂಡಿದ್ದೇವೆ. ಪ್ರಗತಿಗಾಮಿ ದಲಿತ ಸಂಘಟನೆ ಇರುವ ಮಹಾರಾಷ್ಟ್ರದಲ್ಲಿ ಕೂಡ ನಮ್ಮಲ್ಲೇ ಭೇದಗಳಿವೆ. ಹಿಂದುಗಳಾಗಿರುವವರೆಗೂ ನಾವು ಜಾತಿ ಮತ್ತು ಉಪಜಾತಿಗಳಲ್ಲಿ ಒಡೆದುಕೊಂಡೇ ಇರಬೇಕು.

ಈ ದೇಶದಲ್ಲಿ ಮಾರ್ಕ್ಸವಾದ, ಕ್ರಿಶ್ಚಿಯನ್ ಧರ್ಮ, ಮಹಮ್ಮದ್ ಧರ್ಮ ಎಲ್ಲವೂ ಒಳಪಂಗಡಗಳಾಗಿ ಒಡೆದುಕೊಂಡಿವೆ, 1965ರಲ್ಲಿ ಶ್ರೀ ಲೋಕೂರಿಯವರು ತಮ್ಮ ವಿಶೇಷ ನಿರ್ದೇಶನದ ತಿದ್ದುಪಡಿ ಮಸೂದೆಯನ್ನು ಜಾರಿಗೆ ತರಲು ಪ್ರಯತ್ನಿಸಿದಾಗ ಈ ರೀತಿಯ ಉಪಜಾತಿಗಳ ವೈರುಧ್ಯದ ಸಹಾಯದಿಂದ ಬಹಳಷ್ಟು ಜಾತಿಗಳ ಮೀಸಲಾತಿಯನ್ನು ತೆಗೆದುಹಾಕಲು ಪ್ರಯತ್ನಿಸಿದರು. ಗುಜರಾತಿನಲ್ಲಿ ನಡೆಯುತ್ತಿರುವ ಮೀಸಲಾತಿ ವಿರೋಧಿ ಚಳುವಳಿಯು ಪುನಃ ಇಂಥದಕ್ಕೆ ಜೀವ ತರಬಹುದು. ಹಲವಾರು ಗುಂಪುಗಳು ಮತ್ತು ಲಾಬಿಗಳು ಸರ್ಕಾರದ ಮೇಲೆ ಒತ್ತಡ ತಂದು ಕೆಲವು ಜಾತಿಗಳನ್ನು ಮೀಸಲಾತಿ ಪಟ್ಟಿಯಿಂದ ಕಿತ್ತುಹಾಕಿಸಬಹುದು. ಆದ್ದರಿಂದ ನಮ್ಮನ್ನು ಒಟ್ಟು ಮಾಡುವ ಒಂದು ಪ್ರಬಲ ನಂಟನ್ನು ಹುಡುಕಿಕೊಳ್ಳಬೇಕಾಗಿದೆ. ಡಾ॥ ಬಾಬಾ ಸಾಹೇಬ ಅಂಬೇಡ್ಕರ್‌ರವರು ಇದಕ್ಕೆ ಬೇಕಾದ ಸಿದ್ಧಾಂತವನ್ನು ನೀಡಿದ್ದಾರೆ. ನಮ್ಮನ್ನು ನಾವು ಬೌದ್ಧರೆಂದು ಘೋಷಿಸಿಕೊಂಡರೆ ಕಡೇ ಪಕ್ಷ ಬೌದ್ಧ

ುತದ ಪದ್ಧತಿ ಮತ್ತು ವಿಧಿಕ್ರಿಯೆಗಳನ್ನು ಆಚರಿಸಿಕೊಂಡು ಹಿಂದೂಧರ್ಮದ ಅರ್ಥ ೀನ ಪದ್ಧತಿಗಳು, ವಿಧಿಕ್ರಿಯೆಗಳು ಮತ್ತು ಮೂಢನಂಬಿಕೆಗಳಿಂದ ನಮ್ಮನ್ನು ವಿಮೋಚಿಸಿಕೊಂಡರೆ ಒಳಿತು.

ನನ್ನ ಸಲಹೆ ಎಂದರೆ—ಉತ್ಸಾಹದ ಮೊದಲ ಹೆಜ್ಜೆ ಇಡುವುದನ್ನು ಕಲಿತು ೊಳ್ಳಿ, ನಾವು ಕೇವಲ ಅವಲಂಬನೆಯನ್ನು ಮಾತ್ರ ಕಲಿತಿದ್ದೇವೆ. ನಮ್ಮನ್ನು ಬೆಂಬಲಿಸುವ ಗೆಳೆಯರನ್ನು ಪಡೆಯಬೇಕು. ಮಾರ್ಕ್ಸ್‌ವಾದಿಗಳು ನಮ್ಮ ಒಬ್ಬ ತ್ರುವನ್ನು ಗುರುತಿಸಿದ್ದಾರೆ. ನಾವು ಇಬ್ಬರು ಶತ್ರುಗಳನ್ನು ಗುರ್ತಿಸಿದ್ದೇವೆ. ಬ್ರಾಹ್ಮಣವಾದ ಮತ್ತು ಬಂಡವಾಳವಾದ. ಅವರು ಬಂಡವಾಳವಾದ ಮಾತ್ರ ಎಂದು ಹೇಳುತ್ತಾರೆ. ಅವರ ಜೊತೆ 50 ಗಜ ನಡೆಯಲು ನಾನು ತಯಾರು; ಏಕೆಂ ದರೆ ಅವರು ಕನಿಷ್ಟ ಒಬ್ಬ ಶತ್ರುವಿನೊಡನೆ ಹೋರಾಡುತ್ತಿದ್ದಾರೆ. ಎರಡನೆಯದಾಗಿ ನಾವು ಈ ದೇಶವನ್ನು ಪ್ರೀತಿಸುವ, ಪ್ರಗತಿಯ ದಿಕ್ಕಿನಲ್ಲಿ ಯೋಚಿಸುವ ನ್ಯಾಯ ದೃಷ್ಟಿಕೋನವನ್ನು ಹೊಂದಿರುವಂಥ ಯಾವುದೇ ಜನರೊಂದಿಗೆ ಸ್ನೇಹ ಬೆಳೆಸ ಬಹುದು. ಇವರಲ್ಲಿ ಅನಾಯಕತ್ವದ ಚಿಹ್ನೆಯನ್ನು ಕಾಣಬಹುದು. ಆದರೆ ನಾವು ಅವರ ಜೊತೆ ಸ್ನೇಹ ಬೆಳೆಸಬೇಕು. ಮೂರನೆಯದಾಗಿ ನಮ್ಮ ವಿರೋಧಿಗಳ ಚಿಂತನೆ ಯನ್ನು ಅರ್ಥಮಾಡಿಕೊಳ್ಳೋಣ. ಪ್ರಪಂಚದಲ್ಲಿ ಎರಡು ತಪ್ಪುಗಳ ನಡುವೆ ಎಂದೂ ಯುದ್ಧ ನಡೆದಿಲ್ಲ. ಮತ್ತು ಘರ್ಷಣೆಗಳು ಎರಡುಸರಿಗಳ ನಡುವೆ ನಡೆದಿವೆ. ನಾವು ನಮ್ಮದು ಸರಿ ಎನ್ನುತ್ತೇವೆ, ಅವರು ಅವರದು ಸರಿ ಎನ್ನುತ್ತಾರೆ. ನಮ್ಮ ನಡುವೆ ಂದು ಅರ್ಥಪೂರ್ಣ ಚರ್ಚೆ ನಡೆಯಲು ಒಬ್ಬರು ಇನ್ನೊಬ್ಬರ ದೃಷ್ಟಿಕೋನಗಳನ್ನು ಅರಿತುಕೊಳ್ಳೋಣ. ಏಕೆಂದರೆ ಶಾಂತಿಯುತ ಮಾರ್ಗದಿಂದ ಪಡೆದದ್ದು ಮಾತ್ರ ದಕ್ಕುತ್ತದೆ.

ಮೀಸಲಾತಿಯು ದಾನವಲ್ಲ. ನಾವು ಕುಷ್ಠ ರೋಗಿಗಳಂತೆ ಔದಾರ್ಯವನ್ನು ಬಯಸುತ್ತಿಲ್ಲ. ನಾವು ಭಿಕ್ಷೆ ಕೇಳುತ್ತಿಲ್ಲ. ಪಾಲು ಕೇಳುತ್ತಿದ್ದೇವೆ. ಮೀಸ ಲಾತಿಯನ್ನು ನಮ್ಮ ವಿಮೋಚನೆಗೆ ನೀಡಲಾಗಿದೆಎನ್ನುವವರು ಕೆಲವು ನೂರು ಸಾವಿರ ಕೆಲಸಗಳನ್ನು ಕೊಡುವುದರ ಮೂಲಕ ದಶಲಕ್ಷಗಟ್ಟಳೆ ಜನವನ್ನು ವಿಮೋಚಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿಯಬೇಕು. ಇದು ನ್ಯಾಯಬದ್ಧವಾದ ನಮ್ಮ ಪಾಲು. ನಮಗೆ ಇದರ ಅಗತ್ಯವಿದೆ. ಇದಕ್ಕಾಗಿ ನಾವು ಹೋರಾಡುತ್ತೇವೆ. ಬಲಿದಾನ ಮಾಡುತ್ತೇವೆ. ಯಾರಾದರೂ ನಮ್ಮನ್ನು ನಾಶಗೊಳಿಸಲು ಪ್ರಯತ್ನಿಸುವುದಾದರೆ ಅವರಿಗೆ ನಾನು ಹೇಳುತ್ತೇನೆ—ನಾವು ಅವರನ್ನು ನಾಶ ಮಾಡುತ್ತೇವೆ ಮತ್ತು ಇಡೀ ಇಂಡಿಯಾವನ್ನೆ ನಾಶಪಡಿಸುತ್ತೇವೆ. ನಮ್ಮನ್ನು ನಾಶ ಮಾಡಿಬಿಡಬಹುದು ಎಂದು ಯಾರಾದರೂ ತಿಳಿದಲ್ಲಿ ಅದೊಂದು ಹುಚ್ಚು ಸಂಗತಿಯಾಗುತ್ತದೆ. ಏಕೆಂದರೆ ಇಂದು ಇಂಡಿಯಾ ಶತ್ರುಗಳಿಂದ ಸುತ್ತುವರೆದಿದೆ. ನಾವು ಈ ಶತ್ರುಗಳತ್ತ ಸ್ನೇಹ ಹಸ್ತ ವನ್ನು ಚಾಚಬಹುದು. ತಮ್ಮ ಅಸ್ತಿತ್ವಕ್ಕಾಗಿ ಜಗತ್ತಿನ ಎಲ್ಲ ನಿರಾಸೆಗೊಂಡ,

ಪ್ರತ್ಯೇಕಿಸಲ್ಪಟ್ಟ ಗುಂಪುಗಳೂ ಹೀಗೇ ಮಾಡಿವೆ. ನನ್ನದೊಂದು ಸಲಹೆ ಇದೆ. ನಮ್ಮಲ್ಲಿ ಪ್ರಾತಿನಿಧಿಕ ಆಡಳಿತಶಾಹಿಯನ್ನು ವ್ಯವಸ್ಥೆಗೊಳಿಸಬೇಕು. ಏಕೆಂದರೆ ಇಂದಿನ ಗುತ್ತೇದಾರಿ ಅಧಿಕಾರಿಶಾಹಿಯಿಂದ ಏನೂ ಒಳ್ಳೆಯದಾಗದು. ನ್ಯಾಯ ದೊರಕದು. ಹಿಂದುಳಿದ ಜನಗಳ ಸಹಾಯಕ್ಕೆ ಸರ್ಕಾರ ಯೋಜಿಸಿದ ಯಾವುದೇ ನೀತಿ ಮತ್ತು ಕಾರ್ಯಕ್ರಮಗಳು ವಿಫಲವಾಗುತ್ತಿವೆ. ಈ ಗುತ್ತೆದಾರಿ ಅಧಿಕಾರ ಶಾಹಿಯ ದ್ವೇಷಧೋರಣೆಯಿಂದಾಗಿ. ಅಧಿಕಾರಶಾಹಿಯು ಈ ದೇಶದ ಮುಖವನ್ನು ಪ್ರತಿನಿಧಿಸಲಿ. ಎಲ್ಲರೀತಿಯ ಅನಾನುಕೂಲತೆಗಳಿಗೆ ಒಳಗಾದ ಗುಂಪುಗಳಿಗೂ ಹೊಸ ಲಾತಿ ಇರಲಿ. ಅವುಗಳನ್ನು ಗುರ್ತಿಸುವುದು ಸುಲಭ. ಪರಿಶಿಷ್ಟಜಾತಿ ಒಂದು ಗುಂಪು, ಪರಿಶಿಷ್ಟ ಬುಡಕಟ್ಟು ಮತ್ತೊಂದು ಗುಂಪು, ಹಿಂದುಳಿದ ಜಾತಿಗಳು ಹಿಂದೂ ಧರ್ಮದಲ್ಲಿ ಬಹಳ ದಿನಗಳಿಂದ ವಂಚಿತರಾಗೇ ಬಂದಿರುವ ಗುಂಪು, ಮುಸ್ಲಿಮರ ಗುಂಪಿದೆ, ಅನಂತರ ಕ್ರಿಶ್ಚಿಯನ್ನರ ಗುಂಪಿದೆ. ಅವರಲ್ಲಿ ಬಹುಪಾಲು ಬಡವರೆ. ಮತ್ತೆ ಹಿಂದುಗಳಲ್ಲಿ ಕೆಲವರು ಅನಾನುಕೂಲತೆ ಮತ್ತು ಬೇಧಕ್ಕೆ ಒಳಗಾದವರು ಇದ್ದಾರೆ. ಈ ಜನಗಳಿಗೆ ಅವರ ಜನಸಂಖ್ಯೆಗೆ ಸರಿಯಾಗಿ ಅಧಿಕಾರಶಾಹಿಯಲ್ಲಿ ಪ್ರಾತಿನಿಧ್ಯ ಸಿಗಲಿ. ಯುಗೋಸ್ಲಾವಿಯ, ಕೆನಡ ಮತ್ತು ಬೆಲ್ಜಿಯಂಗಳಲ್ಲಿ ಈ ರೀತಿ ಭಾಷೆ ಮತ್ತು ಗುಂಪುಗಳ ಆಧಾರದ ಮೇಲೆ ಪ್ರಾತಿನಿಧ್ಯವನ್ನು ಸ್ವಪ್ರೇರಣೆಯಿಂದ ನೀಡಲಾಗಿದೆ. ಆದ್ದರಿಂದ ನಮ್ಮ ದೇಶದಂಥ ಗ್ರಾಮಾಂತರ ಸಮಾಜದಲ್ಲಿ ಇದೇ ಸರಿ ಎಂದು ನನಗನ್ನಿಸುತ್ತದೆ.

ಕೊನೆಯದಾಗಿ ನಾನು 'ಸಮತಾ ಸೈನಿಕದಳ'ದ ಚೇರ್‌ಮನ್ ಆಗಿ ಹೇಳುತ್ತೇನೆ: ನಾವು, ಜನರು ಸಂಘಟಿತರಾಗಲು, ದೇಹದಾರ್ಢ್ಯ ಬೆಳೆಸಿಕೊಳ್ಳಲು ಹೇಳುತ್ತಿದ್ದೇವೆ. ಗಲಭೆಗಳನ್ನ ಆಕ್ರಮಣಗಳನ್ನ ಮತ್ತು ದೌರ್ಜನ್ಯಗಳನ್ನ ಎದುರಿಸುವಂಥ ತರಬೇತಿಗಳನ್ನ ಹೊಂದಲು ಸಹಾಯ ಮಾಡುತ್ತಿದ್ದೇವೆ. ಗುಜರಾತಿನ ನಗರಗಳಲ್ಲಿ ನಡೆದಂತೆ ದೇಶದ ಇತರ ಪ್ರದೇಶಗಳಲ್ಲಿಯೂ ವ್ಯವಸ್ಥಿತವಾಗಿ ತರಬೇತಿ ಹೊಂದಿದ ಗೂಂಡಗಳು ಪೋಲೀಸರು ಮತ್ತು ರೌಡಿಗಳಿಂದ ಆಕ್ರಮಣ ನಡೆಯಬಹುದು. ಏಕೆಂದರೆ ಇವರುಗಳು ಕೆಲವು ಆಸಕ್ತ ಗುಂಪುಗಳ ಆಶೀರ್ವಾದ, ಹಣ ಬೆಂಬಲ, ಯೋಜನೆ ಮತ್ತು ತಯ್ಯಾರಿಗಳನ್ನ ಹೊಂದಿದ್ದಾರೆ. ಈ ಸಮರ ಮುಗಿದಿಲ್ಲ. ಈಗತಾನೇ ಪ್ರಾರಂಭವಾಗಿದೆ. ಆರಂಭವಾದದಕ್ಕೆ ಒಂದು ಮುಕ್ತಾಯ ಇರಲೇಬೇಕಲ್ಲ? ಆದ್ದರಿಂದ ನಾವು "ಸಮತಾ ಸೈನಿಕದಳ"ದ ಆಶ್ರಯದಲ್ಲಿ ತಯಾರಿ ನಡೆಸಬೇಕು. ಧಾರ್ಮಿಕ ಹಾಗೂ ರಾಜಕೀಯ ಗುಂಪುಗಳನ್ನು ನಮ್ಮೊಡನೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ಏಕೆಂದರೆ ಯಾವುದೇ ರೀತಿಯ ಜಾತಿ ಕಲಹಗಳು ಮತ್ತು ಜಾತಿ ಸಮರಗಳು ನಮಗೆ ಬೇಕಿಲ್ಲ. ನಮಗೆ ಬೇಕಿರುವುದು ಶಾಂತಿ ಮತ್ತು ಸಮಾನತೆ.

(ಅನುವಾದ : ಕೆ. ಪಿ. ವಾಸುದೇವನ್, ಗು. ಪರಮೇಶ್ವರ)

129

ಸವರ್ಣೀಯರಿಗೇ ಮೀಸಲಾತಿ ಪೂರ್ಣ ಇರಲಿ
ಸವರ್ಣೀಯರ ಹೆಣ್ಣು ಅಸ್ಪೃಶ್ಯರಿಗಾಗಲಿ

ಅಂದರೆ ಜಾತೀಯತೆ ಹೋಗಲಿ

ಶುಭಾಶಯಗಳೊಡನೆ
ಎಸ್. ಜಯಣ್ಣ, ಕೊಳ್ಳೇಗಾಲ

ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ
ಮನೆ ಮನೆ ಮಾತಾದ ಬೆಳಗಿನ ಪತ್ರಿಕೆ

ಆಂದೋಲನ

ಇಂದೇ ನಿಮ್ಮ ಮನೆಗೆ ಬರಲಿ

ಏಜೆಂಟರು ಇಲ್ಲದೆಡೆ ಏಜೆಂಟರು ಬೇಕು.

ವ್ಯವಸ್ಥಾಪಕ ಸಂಪಾದಕರು
೮೦ನೆ ಮೇಯಿನ್, ವಿ.ವಿ. ಮೊಹಲ್ಲಾ
ಮೈಸೂರು–೨.



ದಲಿತ ಸಂಘರ್ಷ ಸಮಿತಿ ಕರೆ

1. ಈ ಚುನಾವಣಾ ವ್ಯವಸ್ಥೆಯಲ್ಲಿ ದಲಿತ ಶಾಸಕರೇ ದಲಿತರನು ಪ್ರತಿನಿಧಿಸಲಾಗದಂಥ, ಇದ್ದೂ ಸತ್ತಂಥ ಅಸಹಾಯಕ ಪಂಡ ಸ್ಥಿತಿ ಇರುವುದರಿಂದ, ದಲಿತರೇ ದಲಿತರನ್ನು ಆಯ್ಕೆ ಮಾಡುವಂಥ ಪ್ರತ್ಯೇಕ ಚುನಾವಣಾ ವ್ಯವಸ್ಥೆಗಾಗಿ ಒತ್ತಾಯಿಸಿ ದಲಿತ ಶಾಸಕರು ಸಾಮೂಹಿಕ ರಾಜೀನಾಮೆ ನೀಡಬೇಕು.

2. ಅಸ್ಪೃಶ್ಯರು ಹಾಗೂ ಜಾತಿಯಿಂದ ಸಂಕುಚಿತಗೊಂಡ ಸಾರ್ವಜನಿಕ ಕೆಲಸದಲ್ಲಿದ್ದು ಒಡನಾಡಿದಾಗಲೇ ಕ್ರೂರ ... ಯತೆಯು ಸಡಿಲವಾಗಿ ಆರೋಗ್ಯಕರ ಸಮಾಜ ಏರ್ಪಡಲು ಸಾಧ್ಯವಾಗುತ್ತದೆ ಎಂಬ ನಿಜವ ಅರಿತು ನಡೆಯಬೇಕೆಂದು ಜನತೆಗೆ ದಲಿತ ಸಂಘರ್ಷ ಸಮಿತಿ ಕರೆ ನೀಡುತ್ತದೆ.

3. ಎಲ್ಲಿಯವರೆಗೆ ಹಳ್ಳಿಯ ಎಲ್ಲಾ ಜಾತಿಯ ಜನರೂ ಸೇರಿ ಅಂತರ್ ಜಾತಿ ಮದುವೆ ಮಾಡುವುದಿಲ್ಲವೋ ಮತ್ತು ಎಲ್ಲಾ ಉಪಹಾರಗೃಹಗಳಲ್ಲೂ ಕನಿಷ್ಠ ಒಬ್ಬ ಅಸ್ಪೃಶ್ಯ ಅಡಿಗೆಯಾ ಇರುವುದಿಲ್ಲವೋ ಅಲ್ಲಿಯವರೆಗೂ ಮೀಸಲಾತಿ ಮುಂದುವರಿಯಲ

4. ಕೊಡುತ್ತಿರುವ ಮೀಸಲಾತಿ ಮೇಲುವರ್ಗದ ಅಸ್ಪೃಶ್ಯರಿ ಸಿಕ್ಕುತ್ತಿದೆ ಎನ್ನುವ ಕಾರಣಕ್ಕಾಗಿಯೇ ಮೀಸಲಾತಿ ವಿರೋ ಧೋರಣೆ ಹುಟ್ಟುವುದಾದರೆ, ಈವರೆಗೆ ಮೀಸಲಾತಿ ಪಡೆಯ ಮೊದಲ ಅಸ್ಪೃಶ್ಯ ತಲೆಮಾರಿಗೆ ಪ್ರಾತಿನಿಧ್ಯ ಕೊಟ್ಟು, ಇನ್ನಾದರೂ ಕಡ್ಡಾಯವಾಗಿ ಮೀಸಲಾತಿ ತುಂಬಲಿ.

5. ನಿರುದ್ಯೋಗಿಗಳೇ ಇಲ್ಲದಂಥ ಯೋಜನೆ ರೂಪಿಸಲಾಗ ಅಸಮರ್ಥ ಸರ್ಕಾರ ಇರುವವರೆಗೂ, ಜೀವನಕ್ಕೆ ನಿರುದ್ಯೋಗವೇತ ಪಡೆಯುವುದು ಪ್ರಜೆಯ ಹಕ್ಕಾಗಲಿ.